ಕಸ್ತೂರಿ




ಅಗಸ್ಟ್, ೧೯೬೧
ಬೆಲೆ : ೭೫ ನ.ಪೈ.

ಜ್ಞಾನ ಮತ್ತು ಮನೋರಂಜನೆ

ಪ್ರತಿವಾರವೂ ಹೊಸದರಲ್ಲಿ ಹೊಸದು!

This Magazine owned by The Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.

ಬರುತ್ತಿದೆ!



ವಿಜಯಾ ರವರ


ಜಗದೇಕವೀರನ ಕಥೆ

..ಕನ್ನಡ & ತೆಲುಗು.

ನಿರ್ದೇಶಕ.... **ಕೆ. ವಿ. ರೆಡ್ಡಿ, B.Sc (HONS)**

N44

ವಿಜಯಾ ಪಿಕ್ಚರ್ಸ್ ಸರ್ಕ್ಯೂಟ್ ರಿಲೀಸ್



ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೆ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಕುತೂಹಲಿ
ವಸಂತ ಕೆ. ಅವರಾದಿ

ಚಂದಾ ದರ :

ವಾರ್ಷಿಕ (ಅಂಚೆಸೇರಿ).	ರೂ.೮.೦೦
ಅರ್ಧ ವರ್ಷ —	ರೂ.೪.೫೦
ಬಿಡಿಸಂಚಿಕೆ —	ರೂ.೦.೭೫

Kasturi, August 1961

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಕಸ್ತೂರಿ

ಸಂಚಿಕೆ ೧೨ ಆಗಸ್ಟ್, ೧೯೬೧ ವರ್ಷ ೫

ಈಶ್ವರ ಸಾಕ್ಷಾತ್ಕಾರ

ಪದವೀಧರನಾದ ಒಬ್ಬ ಹರಿಜನ ಯುವಕ ಗಾಂಧೀಜಿಯವರ ಭೆಟ್ಟಿಗೆ ಬಂದಿದ್ದ. ಗ್ರಾಮ ಸುಧಾರಣೆಯ ಸಂಬಂಧದಲ್ಲಿ ಅವನಿಗೆ ಮಹಾ-ತ್ಮಾಜಿಯವರಿಂದ ಒಂದಿಷ್ಟು ಸಹಾಯ ಬೇಕಾಗಿತ್ತು. ಆತ ಗಾಂಧೀಜಿಯವರೊಡನೆ "ಬಾಪೂ, ನನ್ನದು ಮಾನವತಾವಾದಿ ದೃಷ್ಟಿಕೋಣ. ಹಾಗಿದ್ದರೂ ಈಶ್ವರನ ಮೇಲೆ ನನಗೆ ಶ್ರದ್ಧೆ ಇಲ್ಲವೇ ಇಲ್ಲ" ಎಂದ.

ಗಾಂಧೀಜಿ ಉತ್ತರವಾಗಿ ಹೇಳಿದರು, "ಸರಿ. ಮಾನವತಾವಾದಿ ದೃಷ್ಟಿಕೋಣವಿರುವುದು ಅವಶ್ಯವಾಗಿದೆ. ಆದರೆ ಅದು ಈಶ್ವರನ ಸ್ಥಾನವನ್ನು ಪಡೆಯಲಾರದು ನಿಜ ಎಂದರೆ, ಆ ದೃಷ್ಟಿಕೋಣದ ಹಿಂದೆ ಈಶ್ವರನಿದ್ದೇ ಇದ್ದಾನೆ. ಆದರೆ ನಮ್ಮ ಮೂರ್ಖತನ ಮತ್ತು ಭೌತಿಕ ಪರಿಸ್ಥಿತಿಗಳಿಂದಾಗಿ ಈಶ್ವರನ ವಿಷಯಕವಾದ ನಮ್ಮ ಕಲ್ಪನೆಗಳು ಅತ್ಯಂತ ಸಂಕುಚಿತವಾಗಿ ಬಿಟ್ಟಿವೆ. ಅದರಿಂದ ನಿಮ್ಮ ಮನದಲ್ಲಿ ಅಸಂತೋಷ ಹುಟ್ಟಿಕೊಂಡಿದೆಯೆಂದು ನನಗನಿಸುತ್ತದೆ. ಅದಕ್ಕಿರುವ ಕಾರಣಗಳಲ್ಲಿ ಒಂದು ಸರಳ ಕಾರಣವೂ ಇದೆ. ಅದೆಂದರೆ ಯಾವ ಜನರು ದೇವಭಕ್ತಿಯ ಆಡಂಬರವನ್ನು ಪ್ರದರ್ಶಿಸುತ್ತಾರೊ ಅವರ ನಿತ್ಯಜೀವನದಲ್ಲಿ ಮಾತ್ರ ಈಶ್ವರನು ನೂರು ಮೈಲು ಆಚೆಯೆ ಇರುತ್ತಾನೆ."

ತಮ್ಮ ಮಾತನ್ನು ಇನ್ನಿಷ್ಟು ಸ್ಪಷ್ಟೀಕರಿಸುತ್ತ ಗಾಂಧೀಜಿ ಹೇಳಿದರು, "ನಿಮ್ಮ ಸ್ವಂತ ವಿಚಾರವನ್ನೆ ತೆಗೆದುಕೊಳ್ಳಿ. ನೀವು ಒಂದು ವೇಳೆ ನಿಮ್ಮ ಸ್ವಂತದ ಯೋಗ್ಯತೆ ಮತ್ತು ಉತ್ಸಾಹ ಇವುಗಳ ಹೊರತಾಗಿ ಎಂದಾದರೂ ಯಾವುದೊಂದು ಶಕ್ತಿಯ—ಈಶ್ವರನ ಬಗ್ಗೆ ಆಸ್ಥೆಯನ್ನು ನಿಮ್ಮ ಜೀವನದಲ್ಲಿ ನಿರ್ಮಿಸಿಕೊಂಡರೆ ನಿಮ್ಮ ಮನೋಭಿಲಾಷೆ ಪೂರ್ಣವಾದೀತು. ಆಮೇಲೆ ನಿಮ್ಮ ಸಕಲ ಔದಾಸೀನ್ಯವೂ ಇಲ್ಲದಂತಾದೀತು. ಅದರಂತೆಯೆ ಸಂಕಟಗಳನ್ನೆದುರಿಸುವಷ್ಟು ಸ್ಥೈರ್ಯವನ್ನು ನಿಮ್ಮಲ್ಲಿ ಉಂಟುಮಾಡುವಷ್ಟು

ಶ್ರದ್ಧೆಯನ್ನು ನೀವು ಈಶ್ವರನಲ್ಲಿ ಎಲ್ಲಿಯ ವರೆಗೆ ಇಡುವುದಿಲ್ಲವೊ ಅಲ್ಲಿಯ ವರೆಗೆ ನಿಮಗೆ ನಾಲ್ಕೂ ದಿಕ್ಕುಗಳಲ್ಲಿ ನಿರಾಶೆಯೇ ನಿರಾಶೆ ಕಾಣಿಸೀತು.

"ಅದಕ್ಕಾಗಿ ನಿಮಗೊಂದು ಸಲಹೆ ನೀಡುವೆ. ಎಲ್ಲಿಯ ವರೆಗೆ ನಿಮಗೆ ಈಶ್ವರನ ಸಾಕ್ಷಾತ್ಕಾರ ವಾಗುವುದಿಲ್ಲವೋ ಅಲ್ಲಿಯ ವರೆಗೆ ನೀವು ಇಲ್ಲಿ ಆಶ್ರಮದಲ್ಲಿಯೆ ಇದ್ದು ಬಿಡಿ. ಇಲ್ಲಿ ಕೆಲವೊಂದು ನಿಶ್ಚಿತ ನಿಯಮ-ಆದರ್ಶಗಳಿವೆ. ಅವುಗಳ ಪ್ರತಿಷ್ಠೆಯನ್ನು ಕಾಪಾಡಲೆಂದೇ ಈ ಆಶ್ರಮ ಸ್ಥಾಪಿತ ವಾಗಿದೆ. ಆ ಆದರ್ಶದ ಮೂಲಕವೇ ಇಲ್ಲಿ ಸಾಮೂಹಿಕ ಶಕ್ತಿ ನಿರ್ಮಾಣವಾಗುತ್ತಿದೆ. ನಿಮಗೂ ಇಲ್ಲಿ ಆ ಈಶ್ವರನ ಸಾಕ್ಷಾತ್ಕಾರವಾದೀತು. ಮತ್ತು ನೀವು 'ಸತ್ಯವೆಂದರೆ ಇದೇ' ಎಂದು ಹೇಗೆ ಹೇಳಬಲ್ಲಿರೊ ಹಾಗೆಯೆ 'ಈಶ್ವರನೆಂದರೆ ಇವನೇ' ಎಂದು ನೀವು ಹೇಳಲು ಬಂದೀತು."

ಆ ತರುಣ ಗಾಂಧೀಜಿಯವರ ಮಾತುಗಳನ್ನು ಲಕ್ಷ್ಯಗೊಟ್ಟು ಕೇಳುತ್ತಲಿದ್ದ. "ಬಾಪೂಜಿ, ಅಂದರೆ ಸುಳ್ಳಿನ ವಿರುದ್ಧ ರೂಪ ಎಂದರೆ ಸತ್ಯ ಎಂದೇ ಇದರ ಅರ್ಥವಲ್ಲವೇ?" ಎಂದಾತ ಕೇಳಿದ.

"ಹೌದು. ಹಾಗೆ ಹೇಳಲಡ್ಡಿಯಿಲ್ಲ. ಪ್ರಾಚೀನ ಋಷಿಮುನಿಗಳೂ ಈಶ್ವರನ ವರ್ಣನೆಯನ್ನು 'ನೇತಿ ನೇತಿ' ಎಂದೇ ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸತ್ಯವೊಂದೇ ಈ ಕಠಿನ ಪ್ರಶ್ನೆಗೆ ಉತ್ತರವನ್ನು ಕೊಡಬಲ್ಲುದು. ಯಾವುದು ಶುದ್ಧ ಮತ್ತು ವಾಸ್ತವವೋ ಅದೇ ಸತ್ಯ. ಮಿದುಳಿನ ವಿಶ್ಲೇಷಣವನ್ನು ಮಾಡಬಹುದು. ಆದರೆ ಯಾವುದರ ವ್ಯಾಖ್ಯೆಯನ್ನು ಮಾಡಲಾಗುವುದಿಲ್ಲವೊ, ಯಾವುದರ ವಿಶ್ಲೇಷಣವು ಸಾಧ್ಯವಿಲ್ಲವೊ ಅಂಥ ಕೆಲ ವಿಷಯಗಳಿವೆ. ನನ್ನ ಅಲ್ಪ ಬುದ್ಧಿ ಮಾಡಬಹುದಾದ ಈಶ್ವರನ ವಿಶ್ಲೇಷಣೆಯಿಂದ ನನಗೆ ಸಮಾಧಾನವಾಗದು. ಅಂದ ಮೇಲೆ ನಾನು ಈಶ್ವರನ ವ್ಯಾಖ್ಯೆಯನ್ನು ಮಾಡುವ ಸಾಹಸಕ್ಕೇಕೆ ತೊಡಗಲಿ? ಇಂಥ ಅವಸ್ಥೆಯಲ್ಲಿರುವ ನಾನು ಪರಮೇಶ್ವರನ ಭಕ್ತರ ಅನುಕರಣ ಮಾಡಿ ಮನಸ್ಸಿಗೆ ಶಾಂತಿಯನ್ನು ದೊರಕಿಸಿಕೊಳ್ಳುತ್ತೇನೆ."

"ಬಾಪೂಜಿ, ಈಶ್ವರ ಮತ್ತು ವ್ಯಕ್ತಿ, ಸತ್ಯ ಮತ್ತು ಈಶ್ವರರಲ್ಲಿಯ ಸಂಬಂಧ ಯಾವುದು?"

"ನಾನಿದೇ ಈಗ ಹೇಳಿಲ್ಲವೇ, ಸತ್ಯವೆಂದರೇನೇ ಈಶ್ವರ. ಈಶ್ವರನ ಗುರುತು ಹಿಡಿಯುವುದಾದಲ್ಲಿ ಮನುಷ್ಯ ಏಕಾಗ್ರಚಿತ್ತದಿಂದ ಧ್ಯಾನ ಅಥವಾ ಪ್ರಾರ್ಥನೆಯನ್ನು ಮಾಡಬೇಕು. ಜೊತೆಯಲ್ಲಿ ಈಶ್ವರನಲ್ಲಿ ತನ್ನನ್ನು ವಿಲೀನಗೊಳಿಸಿಕೊಳ್ಳಬೇಕು. ಹೀಗೆ ಪ್ರತಿಯೊಬ್ಬರೂ ತಂತಮ್ಮ ಪದ್ಧತಿಯಿಂದ ಈಶ್ವರನ ವ್ಯಾಖ್ಯೆ ಮಾಡುತ್ತಾರೆ. ಈಶ್ವರ ಮತ್ತು ಮನುಷ್ಯನ ಪರಸ್ಪರ ಸಂಬಂಧದ ವಿಚಾರ ಮಾತನಾಡುವುದಾದರೆ ಮನುಷ್ಯನಿಗೆ ಮನುಷ್ಯನೆನ್ನುವುದು ಅವನಿಗೆ ಎರಡು ಕಾಲು ಎರಡು ಕೈಗಳಿವೆ ಎಂಬುದಕ್ಕಾಗಿ ಮಾತ್ರವೇ ಅಲ್ಲ. ಆತನಲ್ಲಿ ಈಶ್ವರನ ಅಧಿಷ್ಠಾನವಿದೆ. ಆದ್ದರಿಂದಲೇ ಆತ ಮನುಷ್ಯನಾಗಿದ್ದಾನೆ ಎಂದು ನನ್ನ ಅಭಿಪ್ರಾಯವಿದೆ."

"ಆದರೆ ಬಾಪೂಜಿ, ಈಶ್ವರನ ವಿಷಯದಲ್ಲಿ ನನ್ನ ದೃಷ್ಟಿಕೋಣವಿನ್ನೂ ಸುಸ್ಪಷ್ಟವಾಗಿರುವುದಿಲ್ಲವಾದ್ದರಿಂದ ಮನುಷ್ಯ ಈಶ್ವರನ ನಿವಾಸ ಸ್ಥಾನ ಎನ್ನುವುದು ನನ್ನ ವಿಚಾರದಲ್ಲಿ ಎಷ್ಟು ಮಟ್ಟಿಗೆ ಯೋಗ್ಯವಾದೀತು? ಅದರಿಂದ ಭ್ರಮೆ ಹುಟ್ಟಿಕೊಂಡೀತು, ಅಷ್ಟೇ."

ಗಾಂಧೀಜಿ ಹೇಳಿದರು, "ಹಾಗಿದ್ದರೂ ನಾನು ಹೇಳಿರುವ ಸಿದ್ಧಾಂತ ಯೋಗ್ಯವಾಗಿದೆ. ನಮ್ಮ ಶರೀರ ಈಶ್ವರನ ನಿವಾಸ ಎಂಬ ಅನುಭೂತಿ ಎಲ್ಲಿಯ ವರೆಗೆ ನಮಗಾಗುವುದಿಲ್ಲವೊ ಅಲ್ಲಿಯ ವರೆಗೆ ನಮ್ಮನ್ನು ಮನುಷ್ಯ ಶ್ರೇಣಿಯಲ್ಲಿ ಎಣಿಸಲು ಬಾರದು. ಇನ್ನೊಂದು ಮಾತೆಂದರೆ, ಸತ್ಯವೆಂದರೇನೇ ಈಶ್ವರ ಎಂದು ತಿಳಿಯುವುದರಲ್ಲಿ ಅಡ್ಡಿ ಆತಂಕವೇನಿದೆ? ಮನುಷ್ಯ ಪ್ರಾಣಿ

ಅಸತ್ಯ ಮತ್ತು ಕೆಟ್ಟವುಗಳ ಗಣಿಯಾಗಿರದೆ ಸತ್ಯ ಮತ್ತು ಶಿವ ಇವುಗಳ ಗಣಿ ಎಂಬುದನ್ನು ನೀವೂ ಮನ್ನಿಸಬಹುದು."

ಕ್ಷಣಕಾಲ ತಡೆದು ಗಾಂಧೀಜಿ ಮತ್ತೆ ಹೇಳಿದರು, "ಪವಿತ್ರ ಜೀವನವನ್ನು ಬಾಳುವ ಇಚ್ಛೆಯಿರುವವನು ಆಪತ್ತುಗಳನ್ನು ಎದುರಿಸಲೇ ಬೇಕಾಗುವುದು. ಕೆಲ ಸಲವಂತೂ ಈ ಆಪತ್ತುಗಳು ಮಹಾ ಭಯಂಕರವಾಗಿರುತ್ತವೆ. ಇಂಥ ಪ್ರಸಂಗಗಳಲ್ಲಿ ಈಶ್ವರನ ಮೇಲಿನ ಶ್ರದ್ಧೆ ಮತ್ತು ಅವನ ಪ್ರಾರ್ಥನೆಗಳೇ ನಿಮ್ಮನ್ನು ಸಮಾಧಾನಗೊಳಿಸಬಲ್ಲವು, ನಿಮಗೆ ಧೈರ್ಯವನ್ನೀಯಬಲ್ಲವು."

"ಬಾಪೂಜಿ, ನಾನು ನನ್ನನ್ನೇ ನಿರೀಕ್ಷಿಸಿಕೊಂಡಾಗ, ನಾನು ಯಾರ ಪ್ರಾರ್ಥನೆಯನ್ನು ಮಾಡಬೇಕೋ ಅಂಥ ಯಾವನಾದರೂ ಸೃಷ್ಟಿಕರ್ತ ಅಥವಾ ಈಶ್ವರ ನಿಜವಾಗಿಯೂ ಇದ್ದಾನೆಯೆ ಎಂದು ಮನದಲ್ಲಿ ವಿಚಾರ ಮೂಡುತ್ತದೆ" ಆ ತರುಣ ಹೇಳಿದ.

"ನೋಡಿ, ನೀವೀಗ ಪುನಃ ಬರೇ ತರ್ಕ ಮಾಡಲು ತೊಡಗಿದ್ದೀರಿ! ನಿಜವೆಂದರೆ ಈಶ್ವರ ತರ್ಕ ಮತ್ತು ವಿವೇಚನಗಳ ಆಚೆ ಇದ್ದಾನೆ. ಆದರೆ ಇಂಥ ವಿವೇಚನೆಯಿಂದ ನಿಮಗೆ ಸಾಂತ್ವನ ದೊರೆಯುತ್ತಿದ್ದರೆ ಅದರಿಂದ ಬಾಧಕವೇನೂ ಇಲ್ಲ. ನಾನು ಇನ್ನು ಹೇಳಲಿಯಾದರೂ ಏನು?"

ಆ ತರುಣ ನಿಧಾನವಾಗಿ ವಿಚಾರದಲ್ಲಿ ಮಗ್ನನಾಗಿ ಹೋದ.

ಗಾಂಧೀಜಿ ಹೇಳುತ್ತಲೇ ಹೋದರು.


"ಬಂಧು, ನಮ್ಮ ಬಾಂಧವರ ದುಃಖವನ್ನು ಕಂಡು ಕೇಳಿ ಮನಸ್ಸಿನಲ್ಲಿ ಉಂಟಾಗುವ ವೇದನೆ ಮತ್ತು ಸಹಾನುಭೂತಿ ಎಂದರೆ ಏನು? ಅದೆಲ್ಲವೂ ಈಶ್ವರತ್ವವೇ ಆಗಿದೆ. ನೀವು ನಿಮ್ಮನ್ನು ಕಟ್ಟಾ ನಾಸ್ತಿಕನೆಂದೇ ಅಂದುಕೊಳ್ಳಿರೊಲ್ಲಿರೇಕೆ? ಎಲ್ಲಿಯ ವರೆಗೆ ನಿಮ್ಮ ಮನಸ್ಸು ಅಖಿಲ ಮಾನವ ಜಾತಿಯ ದುಃಖವನ್ನು ಕಂಡು ದ್ರವಿಸುವುದೋ ಅಲ್ಲಿಯ ವರೆಗೆ ನಿಮಗೆ ಕಲ್ಪನೆಯಿಲ್ಲದೆಯೆ ಆದರೂ ಈಶ್ವರನ ಮೇಲೆ ನಿಮ್ಮ ಶ್ರದ್ಧೆಯಿದ್ದೇ ಇರುತ್ತದೆ. ಮಹಾ ನಾಸ್ತಿಕ ಬ್ರಾಡ್‌ಲಾರ ಉದಾಹರಣೆಯನ್ನೆ ತೆಗೆದುಕೊಳ್ಳಿ. ಆತನ ಅಂತ್ಯಸಂಸ್ಕಾರ ಸಮಯದಲ್ಲಿ ಪಾದ್ರಿಗಳು ಹಾಜರಿದ್ದರು. ಆತ ಮಹಾ ಪುಣ್ಯಾತ್ಮನಾಗಿದ್ದ, ಎಂದೇ ನಾವೆಲ್ಲ ಆತನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು ಬಂದಿದ್ದೇವೆ ಎಂದು ಆ ಪಾದ್ರಿಗಳು ಹೇಳಿದರು."

ಕೊನೆಗೆ ಈ ಚರ್ಚೆಯನ್ನು ಮುಗಿಸುತ್ತ ಗಾಂಧೀಜಿ ಹೇಳಿದರು. "ಬಂಧುವೇ, ಈ ಆಶ್ರಮದಿಂದ ಹೋಗುವಾಗ ಈಶ್ವರನಲ್ಲಿ, ಸತ್ಯದಲ್ಲಿ ಶ್ರದ್ಧೆಯನ್ನು ಪಡೆದು ಹೋದಿರಾದರೆ ನಿಮ್ಮ ಕಾರ್ಯ ನಿಶ್ಚಯಕ್ಕೂ ಸಫಲವಾಗುವುದು. ಎಲ್ಲಿಯ ವರೆಗೆ ನಿಮಗೆ ಈಶ್ವರಪ್ರಾಪ್ತಿಯಾಗುವುದಿಲ್ಲವೊ ಅಲ್ಲಿಯ ವರೆಗೆ ನಿಮ್ಮ ಮನಸ್ಸಿನಲ್ಲಿ ಒಂದು ವಿಧವಾದ ಅಸ್ವಸ್ಥತೆ ಉಂಟಾಗಬೇಕು, ಒಂದು ವಿಧವಾದ ಹಳಹಳಿ ಅನಿಸಬೇಕು. ಅಂದರೆ ನಿಮಗೆ ಈಶ್ವರನ ನಿಜ ಸಾಕ್ಷಾತ್ಕಾರವಾದೀತು." ★

ಪ್ಯಾರೆಲಾಲರ 'ದಿ ಲಾಸ್ಟ್ ಫೇಜ್' ನಿಂದ—ನವಜೀವನ ಟ್ರಸ್ಟಿನವರಿಂದ ಸಾಭಾರ

ಒಂದು ರಾಷ್ಟ್ರ ಯಾವುದನ್ನಾದರೂ ಸ್ವಾತಂತ್ರ್ಯಕ್ಕಿಂತ ಅಮೂಲ್ಯವಾದದ್ದು ಎಂದೆಣಿಸಿದರೆ ಅದು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು; ಅದಕ್ಕೂ ಹೆಚ್ಚೆಂದರೆ, ಆ ರಾಷ್ಟ್ರ ಸ್ವಾತಂತ್ರ್ಯಕ್ಕಿಂತ ಸುಖ ಸೌಕರ್ಯಗಳು ಅಮೂಲ್ಯ ಎಂದೆಣಿಸಿದರೆ ಅವುಗಳನ್ನು ಕೂಡ ಕಳೆದುಕೊಳ್ಳುವುದು.

—ಸೋಮರ್‌ಸೆಟ್ ಮಾಮ್


T K RA

ಬಂಗಾರದ ದನಿಯ ಕನ್ನಡ ಸಂಗೀತ ಪಟು

ಶ್ರೀ ಮಲ್ಲಿಕಾರ್ಜುನ ಮನ್ಸೂರರು

ಕಸ್ತೂರಿ ಪ್ರತಿನಿಧಿಯಿಂದ

ಪ್ರೊಫೆಸರ್ ಮಲ್ಲಿಕಾರ್ಜುನ ಮನ್ಸೂರರು ಭಾರತೀಯ ಸಂಗೀತ ಸರಸ್ವತಿಗೆ ಕರ್ನಾಟಕ ಸಮರ್ಪಿಸಿದ ಅತಿ ಮಧುರವಾದ ಪುಷ್ಪ ಎನ್ನಬಹುದು. ಇಂದು ಮನ್ಸೂರರು ದೇಶದ ಪ್ರಥಮಶ್ರೇಣಿಯ ಸಂಗೀತಗಾರರಲ್ಲಿ ಗಣಿಸಲ್ಪಡುತ್ತಿದ್ದಾರೆ. ಮುಂಬಯಿ, ಪುಣೆ, ದಿಲ್ಲಿ, ಕಲಕತ್ತ, ನಾಗಪುರ ಮೊದಲಾದ ಹಿಂದುಸ್ತಾನಿ ಸಂಗೀತದ ಕೇಂದ್ರಗಳಲ್ಲಿ ಅವರನ್ನು ಕೇಳಲು ಜನ ಆತುರರಾಗಿರುತ್ತಾರೆ. ವಿಮರ್ಶಕರನ್ನೂ ಸಂಗೀತ ವಿದ್ವಾಂಸರನ್ನೂ ಜನಸಾಮಾನ್ಯರನ್ನೂ ಏಕಕಾಲದಲ್ಲಿ ರಂಜಿಸಬಲ್ಲ ಕಲಾವಿದರು ಬೆರಳಲ್ಲೆಣಿಸುವಷ್ಟು ಅಪರೂಪಕೋಟಿಗೆ ಸೇರಿದವರು. ಮಲ್ಲಿಕಾರ್ಜುನ ಮನ್ಸೂರರು ಅಂಥವರಲ್ಲೊಬ್ಬರು. ಹಿಂದುಸ್ತಾನಿ ಸಂಗೀತದ ರಾಜಧಾನಿಗಳಲ್ಲಿ ಹೇಗೋ ಹಾಗೆ ಬೆಂಗಳೂರು, ಮೈಸೂರುಗಳಂಥ ಕರ್ನಾಟಕ ಸಂಗೀತದ ಗಂಡು ಮೆಟ್ಟುಗಳಲ್ಲಿಯೂ ತಲೆಗಳನ್ನು ತೂಗಿಸುವಷ್ಟು ಸಾರ್ವದೇಶಿಕತೆ ಅವರ ಕಲೆಗಿದೆ.

ಮಲ್ಲಿಕಾರ್ಜುನ ,ಮನ್ಸೂರರಿಗೆ ಈಗ ೫೦ ತುಂಬುತ್ತಿದೆ. ಅವರ ಸಂಗೀತ ಸಾಧನೆ ಈಗ ೩೮ ವರ್ಷಗಳಿಂದ ನಡೆದುಬಂದಿದೆ. ೩೨ ವರ್ಷಗಳಿಂದ ಅವರು ಜನರ ಮುಂದೆ ಸಂಗೀತಗಾರರೆಂದು ಹೆಸರುಗೊಂಡಿದ್ದಾರೆ. ಆ ಹೆಸರು ದಿನದಿನಕ್ಕೆ ಹೆಚ್ಚುತ್ತಿದೆ.

ಮಲ್ಲಿಕಾರ್ಜುನ ಮನ್ಸೂರರು ಇತರ ಮಹಾ ಕಲಾವಿದರಲ್ಲಿ ಕೆಲವರ ಹಾಗೆ ವಿಕ್ಷಿಪ್ತ ಜೀವಿಗಳೇನೂ ಅಲ್ಲ. ಆದರೆ ಅವರ ಕಲಾನ್ವೇಷಣೆಯ ಕಥೆಯೂ ಇತರ ಅನೇಕರದರ ಹಾಗೆಯೆ ಪ್ರಾರಂಭವಾಯಿತು. ಧಾರವಾಡದ ಸಮೀಪದಲ್ಲಿರುವ ಮನ್ಸೂರು ಗ್ರಾಮದಲ್ಲಿ ಒಕ್ಕಲುತನದ ಹಿನ್ನೆಲೆಯ ಕುಟುಂಬದಲ್ಲಿ ಹುಟ್ಟಿದ ಅವರನ್ನು ಸರಸ್ವತಿ ಎಳೆವರೆಯದಲ್ಲೆ ಕಿತ್ತುಕೊಂಡಳು. ಐವರು ಗಂಡು ಮಕ್ಕಳಲ್ಲಿ ಎರಡನೆಯವರಾದ ಮಲ್ಲಿಕಾರ್ಜುನರು ಒಂಭತ್ತನೇ ವಯಸ್ಸಿನಲ್ಲಿ ಸಾಲೆ ಬಿಟ್ಟು ಓಡಿಹೋದರು. ಅವರ ಶಾಲಾಜೀವನ ಅಲ್ಲಿಗೇ ಸಮಾಪ್ತಿ ಹೊಂದಿತು. ಅವರ ಅಣ್ಣ ಬಸವರಾಜ ಮನ್ಸೂರರು ಆಗ ಪ್ರಸಿದ್ಧ ವಾಮನರಾವ್ ಮಾಸ್ತರರ ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಲಿಯಲ್ಲಿದ್ದರು. ಮಲ್ಲಿಕಾರ್ಜುನರು ಅವರಿದ್ದಲ್ಲಿಗೆ ಹೋದರು. ಅಲ್ಲಿಯೇ ಪ್ರಥಮತಃ ಈ ಬಾಲಕನಿಗೆ ಸಂಗೀತ ರುಚಿ ಹತ್ತಿದ್ದು.

ತಮ್ಮನ ಸಂಗೀತಾಭಿರುಚಿಯನ್ನು ನೋಡಿ ಬಸವರಾಜರು ಅವರ ಇಷ್ಟವನ್ನು ಪೂರೈಸಲು ಸಿದ್ಧರಾದರು. ಹೀಗೆ ೧೨ ನೇ ವಯಸ್ಸಿನಲ್ಲಿ ಮಿರಜಿನ ಸುಪ್ರಸಿದ್ಧ ನೀಲಕಂಠಬುವಾ ಆಲೂರಮಠರಲ್ಲಿ ಮಲ್ಲಿಕಾರ್ಜುನರಿಗೆ ಶಾಸ್ತ್ರೀಯ ಸಂಗೀತದ ಶಿಕ್ಷಣ ಪ್ರಾರಂಭವಾಯಿತು. ೧೪

ನೇ ವಯಸ್ಸಿಗೆ ಮದುವೆಯಾಗಿದ್ದರೂ ಅವರ ವಿದ್ಯೆಗೆ ಅದು ಅಡೆತಡೆಯೊಡ್ಡಲಿಲ್ಲ. ೧೮ ನೇ ವಯಸ್ಸಿಗಾಗಲೇ ಅವರಿಗೆ ಸಾಕಷ್ಟು ಕೀರ್ತಿ ಲಭಿಸಿತ್ತು. ಹೀಸ್ ಮಾಸ್ಟರ್ಸ್ ವಾಯ್ಸಿನವರು ಅವರ ಹಾಡುಗಳ ಧ್ವನಿಮುದ್ರಿಕೆಗಳನ್ನು ಆಗಲೇ ಪ್ರಸಾರಕ್ಕೆ ತಂದರು.

ಗುರುಗಳ ವಿಷಯದಲ್ಲಿ ಅವರು ತುಂಬ ಭಾಗ್ಯಶಾಲಿಗಳಾಗಿದ್ದರು. ಅನೇಕ ಸಂಗೀತಗಾರರು ತಮ್ಮ ಗುರುಗಳ ಕಠೋರ ಪರೀಕ್ಷೆಗಳಿಗೊಳಗಾಗಿ ಪಟ್ಟ ಪಾಡನ್ನೂ ಗುರುಗಳ ಮತ್ಸರಕ್ಕೆ ಈಡಾದುದನ್ನೂ ನೆನೆದುಕೊಂಡ ನಾನು ಗುರುಗಳ ವಿಷಯದಲ್ಲಿ ಮಲ್ಲಿಕಾರ್ಜುನರ ಅನುಭವಗಳನ್ನು ಕೇಳಿದೆ. "ಓ, ನನಗೆ ದೊರಕಿದ ಗುರುಗಳೆಲ್ಲ ನನ್ನನ್ನು ಬಲು ಪ್ರೀತಿಯಿಂದಲೇ ನಡೆಸಿಕೊಂಡರು" ಎಂದರವರು. ನೀಲಕಂಠ ಬುವಾ ಸ್ವತಃ ಮಕ್ಕಳಿಲ್ಲದವರು. ಅವರೂ ಅವರ ಪತ್ನಿಯೂ ಈ ಬಾಲಕನನ್ನು ತಮ್ಮ ಮಗನಂತೆಯೆ ನೋಡಿಕೊಂಡರು. ಅನಂತರದ ಗುರುಗಳಾದ ಮಂಜೀಖಾನರೂ ಬುರ್ಜಿಖಾನರೂ ಹಾಗೆಯೆ.

ನನಗೆ ಆಶ್ಚರ್ಯವಾಗಲಿಲ್ಲ. ಮಲ್ಲಿಕಾರ್ಜುನರ ಕಂಠ ಮಧುರವಾಗಿತ್ತು ಮತ್ತು ಅವರ ಸ್ವಭಾವವೂ ಮಧುರವಾಗಿತ್ತು. ಅವರೊಡನೆ ತಾಸೆರಡು ತಾಸು ಕಳೆದ ಮೇಲೆ ಈ ಮನುಷ್ಯನನ್ನು ಪ್ರೀತಿಸದಿರುವುದು ಕಷ್ಟ ಎಂದು ಯಾರಿಗೂ ಅನಿಸುತ್ತದೆ. ಅವರ ಗುರುಗಳಿಗೂ ಹಾಗೆಯೆ ಅನಿಸಿರಬೇಕು. ಅವರ ಮಧುರ ಸ್ವಭಾವದ ದೆಸೆಯಿಂದಲೇ ಅವರಿಗೆ ಮುಂಬಯಿಯ ಮಂಜೀಖಾನರು ಗುರುಗಳಾಗಿ ದೊರೆತದ್ದು. ಪುಣೆಯಲ್ಲಿದ್ದಾಗ ಮಲ್ಲಿಕಾರ್ಜುನರು "ತುಕಾರಾಮ" ಕೀರ್ತಿಯ ವಿಷ್ಣುಪಂತ ಪಾಗನೀಸರಿಗೆ ಸ್ನೇಹಪಾತ್ರರಾದರು. ಈ ಅಪ್ರತಿಮ ಭಕ್ತ ನಟನ ಸರಾಫಿ ಅಂಗಡಿಯಲ್ಲಿ ಹೋಗಿ ಮನ್ಸೂರರು ಕೂಡ್ರುವುದಿತ್ತು. ವಿದ್ಯೆಗಾಗಿ ಹಾತೊರೆಯುತ್ತಿರುವ ಮನ್ಸೂರರನ್ನು ಪಾಗನೀಸರು ಒಂದು ದಿನ ತಮ್ಮಲ್ಲಿಗೆ ಬಂದ ಮಂಜೀಖಾನರು ಒಳ್ಳೇ ಲಹರಿಯಲ್ಲಿರುವಾಗ ಅವರಿಗೆ ಪರಿಚಯ ಮಾಡಿಕೊಟ್ಟು ಇವರು ನಿಮ್ಮ ಶಿಷ್ಯರಾಗಬೇಕೆನ್ನುತ್ತಾರೆ ಎಂದರು. ಕೂಡಲೇ ಖಾನರು ಮನ್ಸೂರರ ಕೆಲ ಧ್ವನಿಮುದ್ರಿಕೆಗಳನ್ನು ಹಾಡಿಸಿ ಆಲಿಸಿದರು. "ಇವರಿಗೆ ನಮ್ಮ ಘರಾಣೆ ಚೆನ್ನಾಗಿ ಒಗ್ಗೀತು" ಎಂದು ಮಂಜೀಖಾನರು ತತ್‌ಕ್ಷಣ ಒಪ್ಪಿದರು. ಆಗ ಮನ್ಸೂರರಿಗೆ ೨೨.

ಜಯಪುರ ಘರಾಣೆಯ ಪ್ರವರ್ತಕರಾದ ಅಲ್ಲಾದಿಯಾಖಾನರ ಮಗನೂ ತಮ್ಮ ಮಂಜುಲ ಕಂಠದಿಂದ ಮಂಜೀಖಾನ್ ಎಂಬ ಅಡ್ಡ ಹೆಸರಿಂದಲೇ ಖ್ಯಾತರೂ ಆಗಿದ್ದ ಬದ್ರುದ್ದೀನ್ ಖಾನರು ಆಗಿನ ಸಂಗೀತ ದಿಗ್ಗಜರಲ್ಲಿ ಒಬ್ಬರಾಗಿದ್ದರು. ರಾಜಸಭೆಗಳಲ್ಲಿ ತಲೆಯೆತ್ತಿ ಮೆರೆದಾಡುವ ಈ ಸಂಗೀತಗಾರನು ಭೀಮಪಲಾಸ ರಾಗದಿಂದ ತಮ್ಮ ಶಿಕ್ಷಣವನ್ನು ಪ್ರಾರಂಭಿಸಿದಾಗಲೇ ಅವರ ಅಪರಂಪಾರ ಪ್ರತಿಭೆಯ ಪರಿಚಯ ತಮಗಾಯಿತು ಎನ್ನುತ್ತಾರೆ ಮಲ್ಲಿಕಾರ್ಜುನರು. ದಾನಾತುರ ಗುರುವಿಗೆ ಪ್ರತಿಗ್ರಹಾತುರ ಶಿಷ್ಯ ಲಭಿಸಿದ. ಚೀಜುಗಳನ್ನು ಕಲಿಸಿ ಕಛೇರಿಗಳಲ್ಲಿ ತಮ್ಮೊಡನೆ ಹಾಡಲು ಮಂಜೀಖಾನರು ಶಿಷ್ಯನನ್ನು ಕರೆದೊಯ್ಯುತ್ತಿದ್ದರು. ಮನೆಯವರಿಗೆ ಕಲಿಸುವ ಹಾಗೆ ಕಲಿಸುತ್ತೇವೆ ಎಂದ ರಾಜಮರ್ಜಿಯ ಗುರು ಮಾತಿನಂತೆಯೆ ನಡೆದರು. "ಭಂಗಾರದ ಪರ್ವತ, ಒಬ್ಬ ಎಷ್ಟು ಕಡಿದುಕೊಳ್ಳಬಹುದು ಎನಿಸುತ್ತಿತ್ತು" ಎಂದು ಮನ್ಸೂರರು ತಮ್ಮೀ ಗುರುವನ್ನು ಕುರಿತು ಹೇಳುತ್ತಾರೆ.

ಕಡಿದುಕೊಳ್ಳಲು ಬಹಳ ಕಾಲವೂ ಇರಲಿಲ್ಲ. ಮಂಜೀಖಾನರು ೪೨ನೇ ವಯಸ್ಸಿನಲ್ಲೇ ಮೃತರಾದರು. ಆದರೆ ಅಣ್ಣನಿಗಿಂತ ಕಡಿಮೆಯಲ್ಲದ ಕೊಲ್ಲಾಪುರದ ಆಸ್ಥಾನ ವಿದ್ವಾಂಸರಾದ ತಮ್ಮ ಬುರ್ಜಿಖಾನರು ಮಲ್ಲಿಕಾರ್ಜುನರಿಗೆ ಗುರುಗ

ಳಾಗಲೊಪ್ಪಿದರು. ಸ್ವರಕಲ್ಪನೆಯಲ್ಲಿ ಮಂಜೀಖಾನರು ಅದ್ವಿತೀಯರಾಗಿದ್ದರೆ ವ್ಯವಸ್ಥೆಯಲ್ಲಿ ಬುರ್ಜೀಖಾನರು ಎತ್ತಿದ ಕೈಯಾಗಿದ್ದರು. ಹೀಗೆ ಜಯಪುರ ಘರಾಣೆಯ ಪರಿಪೂರ್ಣ ಅಭ್ಯಾಸ ಮನ್ಸೂರರಿಗಾಯಿತು. ಇಂದವರು ಆ ಘರಾಣೆಯ ಶ್ರೇಷ್ಠ ಪ್ರತಿನಿಧಿಯಾಗಿದ್ದಾರೆ.

ಮಲ್ಲಿಕಾರ್ಜುನ ಮನ್ಸೂರರು ಸಂಗೀತವನ್ನು ಹಾಡುವವರಷ್ಟೇ ಅಲ್ಲ, ಬಾಳುವವರು. "ಸಂಗೀತ ಸಮಾಧಿ" ಎಂಬೊಂದು ಪದಾರ್ಥವಿದೆಯೆಂದು ಅವರು ಹೇಳುತ್ತಾರೆ. ಇದಕ್ಕೆ ಅವರಿಗಿಂತ ಬೇರೆ ಪ್ರಮಾಣ ಬೇಕಾಗಿಲ್ಲ. ಶೆಲ್ಲಿ ಕವಿಗೆ ಕಾವ್ಯ ಸ್ಫೂರ್ತಿ ಬಂದಾಗ ಹೊತ್ತು ಗೊತ್ತು ಯಾವುದರ ಧ್ಯಾಸವೂ ಉಳಿಯುತ್ತಿದ್ದಿಲ್ಲವಂತೆ. ವರದಾಚಾರ್ಯರು ತೀವ್ರ ಕಾಲು ನೋವಿನಿಂದ ಕುಂಟುತ್ತಿದ್ದಾಗೊಮ್ಮೆ ದುಷ್ಯಂತ ಪಾತ್ರ ವಹಿಸಿ ರಂಗಕ್ಕೆ ಬಂದ ಕೂಡಲೆ ಕಾಲು ನೋವನ್ನೆ ಮರೆತು ರವಷ್ಟು ಕುಂಟದೆ "ಥೇಟ್" ದುಷ್ಯಂತನಾಗಿಯೆ ಅಭಿನಯಿಸಿದರಂತೆ. ಮಲ್ಲಿಕಾರ್ಜುನರೂ ಹಾಗೆಯೆ. ದಿಲ್ಲಿಯಲ್ಲೊಂದು ಕಛೇರಿ ಮಾಡಲೊಪ್ಪಿದ್ದ ಅವರಿಗೆ ದಾರಿಯಲ್ಲಿ ನೆಗಡಿಯಾಗಿ ದಿಲ್ಲಿ ಸೇರುವುದರೊಳಗೆ ವಿಕೋಪಕ್ಕೇ ಹೋಯಿತು. ಹೇಗೆ ಹಾಡುವೆನೋ ಎಂಬ ಕಾಷ್ಠಚಿಂತೆಗೊಳಗಾದರು. ಆದರೆ ತಂಬೂರಿ ಶ್ರುತಿಯಾಗಿ ಬಾಯಿ ತೆರೆಯುವ ವರೆಗೆ ಮಾತ್ರ. ಅನಂತರ ಅವರಿಗಾಗಲಿ ಶ್ರೋತೃಗಳಿಗಾಗಲಿ ನೆಗಡಿಯ ಪತ್ತೆ ಉಳಿಯಲಿಲ್ಲ. ಇನ್ನೊಮ್ಮೆ ತಡೆಯಲಾರದ ಮೂಲ ವ್ಯಾಧಿಯಿಂದ ಬಳಲುತ್ತಿರುವಾಗಲೆ ಬೆಂಗಳೂರಲ್ಲಿ ಅವರು ಅಪ್ರತಿಮವಾಗಿ ಹಾಡಿದರು. ಕಛೇರಿ ಮುಗಿಸಿ ಹುಬ್ಬಳ್ಳಿ ತಲುಪುವಷ್ಟರಲ್ಲಿ ಅವರ ಸ್ಥಿತಿ ಎಷ್ಟು ಉಲ್ಬಣಿಸಿತೆಂದರೆ ಧಾರವಾಡದ ವರೆಗೂ ಮುಂಬರಿಯಲಾರದ ಅವರನ್ನು ಮಿತ್ರರು ಇಳಿಸಿ ವೈದ್ಯಕೀಯ ಸಹಾಯಕ್ಕಾಗಿ ಸಾಗಿಸಬೇಕಾಯಿತು.

ಇಂಥ ಪ್ರತಿಭಾಶಾಲಿಗೆ ಬೇಗನೆ ಮನ್ನಣೆ ದೊರೆಯದಿರಲಿಲ್ಲ. ಎಲ್ಲೆಲ್ಲಿಯೂ ಅವರ ಕಛೇರಿಗಳಿಗಾಗಿ ಕರೆಗಳು ಬರತೊಡಗಿದವು. ೧೯೩೮-೩೯ ರಲ್ಲಿ ಪುಣೆಯ ಗಾಂಧರ್ವ ವಿದ್ಯಾಲಯದ ಸಂಗೀತ ಸಮ್ಮೇಳನಕ್ಕೆ ಅವರನ್ನು ಅಧ್ಯಕ್ಷರಾಗಿ ಆರಿಸಲಾಯಿತು. ಅಲ್ಲಿ ಅವರು ತಮ್ಮ ಶ್ರೇಷ್ಠತಮ ಕಲೆಯನ್ನು ಪ್ರದರ್ಶಿಸಿದರು. ಅವರು ಅಂದಿನ ದಿನ ಮರಾಠಿಯಲ್ಲಿ ಮಾಡಿದ ಭಾಷಣವು ಸಭಿಕರನ್ನು ಆಶ್ಚರ್ಯಗೊಳಿಸಿತು. ಏಕೆಂದರೆ ಕಡಿಮೆ ಮಾತಿನ ಈ ಕಲಾವಿದ ಹೀಗೆ ಚೆನ್ನಾಗಿ ಭಾಷಣ ಮಾಡಬಲ್ಲ ಎಂದು ಯಾರೂ—ಸ್ವತಃ ಅವರೆ—ಎಣಿಸಿರಲಿಲ್ಲ. ಆಗ ಅವರಿಗೆ ೩೦ ಕೂಡ ತುಂಬಿರಲಿಲ್ಲ.

ಮಲ್ಲಿಕಾರ್ಜುನ ಮನ್ಸೂರರ ಪ್ರತಿಭೆ ಸಂಗೀತಕ್ಕಷ್ಟೇ ಸೀಮಿತವಾಗಿಲ್ಲೆಂದು ಅನೇಕರು ಅರಿಯರು. ಅಣ್ಣ ಬಸವರಾಜರಂತೆ—ಅವರು ವಾಮನರಾಯರ ನಂತರ ವಿಶ್ವಗುಣಾದರ್ಶದಲ್ಲಿ ಅತ್ಯುತ್ತಮ ನಟರೆಂದು ಪರಿಗಣಿತರಾಗಿದ್ದರು—ಮಲ್ಲಿಕಾರ್ಜುನರೂ ಒಳ್ಳೇ ನಟರು. ವಿಶ್ವಗುಣಾದರ್ಶದಲ್ಲೂ ಅನಂತರ ಶ್ರೀ ಭರಮಪ್ಪನವರ ವಾಣೀವಿಲಾಸ ಕಂಪೆನಿಯಲ್ಲೂ ಅವರು ಹಲ ಕಾಲ ನಟರಾಗಿದ್ದರು. ಅವರ ನಟನಾಕೌಶಲವನ್ನು ನೋಡಿದವರು, ಮನ್ಸೂರರು ಅದೇ ವ್ಯವಸಾಯ ಮುಂದುವರೆಸಿದ್ದರೆ ಅಲ್ಲಿಯೂ ಮಹೋನ್ನತಿಯನ್ನೂ ಮುಟ್ಟುತ್ತಿದ್ದರೆಂದು ಹೇಳುತ್ತಾರೆ.

ಮಲ್ಲಿಕಾರ್ಜುನರಂಥ ಉಚ್ಚ ಕೋಟಿಯ ಕಲಾವಿದರ, ಅಖಿಲ ಭಾರತ ಪ್ರಸಿದ್ಧಿಯ, ಸದಾ ಪ್ರಶಂಸಕರಿಂದಲೂ ಅಭಿಮಾನಿಗಳಿಂದಲೂ ಶಿಷ್ಯರಿಂದಲೂ ಪರಿವೃತರಾಗಿರುವ ವ್ಯಕ್ತಿಯಲ್ಲಿ ವಿನಯ ಭಾವವನ್ನು ನೋಡಿ ಯಾರಾದರೂ ಮೆಚ್ಚಬೇಕು. ಅವರು ತೀರ ಸರಳ ಸ್ವಭಾವದ ಧರ್ಮಪರಾಯಣ ವ್ಯಕ್ತಿ. ಸಂಗೀತಗಾರರಲ್ಲಿ ವೃತ್ತಿಮಾತ್ಸರ್ಯ ಹೇರಳ. ಪರ ಕಲಾನಿಂದೆ

ಧಾರಾಳ. ಆದರೆ ಮಲ್ಲಿಕಾರ್ಜುನ ಮನ್ಸೂರರಿಂದ ಇತರ ಸಂಗೀತಗಾರರ ವಿಷಯದಲ್ಲಿ, ಇತರ ಸಂಗೀತ ಶೈಲಿಗಳ ವಿಷಯದಲ್ಲಿ ಒಂದು ಅವಹೇಳನದ ಮಾತನ್ನು ಆಡಿಸುವುದು ಅಸಾಧ್ಯ ಪ್ರಾಯವೇ ಆಗಿದೆ. ಪ್ರತಿಯೊಬ್ಬರ ಬಗ್ಗೆಯೂ ಒಳ್ಳೆಯ ಮಾತನ್ನೇ ಆಡಿಯಾರು ಅವರು.

ಅವರ ಸ್ಥಾನಮಾನದ ಕಲಾವಿದರು ಅವರಷ್ಟು ಸರಳ ಜೀವನ ಮಾಡುವುದೂ ವಿರಳವೇ. ಧಾರವಾಡದಲ್ಲಿ ಇಂದಿಗೂ ಅವರು ವಿದ್ಯುದ್ದೀಪವಿಲ್ಲದ ಸಾಧಾರಣ ಮನೆಯಲ್ಲಿ ತಮ್ಮ ಪತ್ನಿ, ಒಬ್ಬ ಮಗ ಮತ್ತು ಏಳು ಹೆಣ್ಣು ಮಕ್ಕಳ ದೊಡ್ಡ ಕುಟುಂಬದೊಡನೆ ವಾಸಿಸುತ್ತಾರೆ. ಬೀಡಿ ಸೇದುತ್ತಾರೆ. ನೀಳ ಮೈಕಟ್ಟಿನ ಅವರ ಮುಖದಲ್ಲಿ ಬೆಳಗುವ ವಿದ್ಯಾಶ್ರೀಯಿಂದಲೇ ನಾವು ಅವರ ಮೇಲ್ಮೆಯನ್ನರಿಯಬೇಕಷ್ಟೇ.

ಆಡಂಬರ ಅವರಿಗೆ ಸೇರುವುದಿಲ್ಲ ಬಡತನದಲ್ಲಿ ಗಳಿಸುತ್ತಲೇ ಕಷ್ಟಪಟ್ಟು ಕಲಿತ ಅವರು ಹಣಕಾಸಿನ ವಿಷಯದಲ್ಲಿ ಹಾಸಿಗೆ ಮೀರಿ ಕಾಲು ನೀಡುವವರಲ್ಲ. ಅವರು ಆರ್ಥಿಕವಾಗಿ ಅಷ್ಟು ಸಮೃದ್ಧರೆಂದೂ ಅಲ್ಲ ವಾಸ್ತವವೆಂದರೆ, ಅವರು ಕಲಾಜೀವಿ. "ಹಣ ಮಾಡುವ" ಕೌಶಲ ಅವರಿಗಿಲ್ಲ. ಸ್ವಪ್ರಚಾರ, ಕಛೇರಿಗಳಿಗಾಗಿ ಸೂತ್ರಚಾಲನೆ ಇದಾವುದೂ ಅವರಿಂದಾಗದು. ಅವರ ಒಬ್ಬ ಮಿತ್ರರು ಹೇಳಿದ ಹಾಗೆ ಅವರು "ಒಳ್ಳೇ ವ್ಯವಹಾರ ಕುಶಲರಲ್ಲ."

ಮಲ್ಲಿಕಾರ್ಜುನ ಮನ್ಸೂರರ ಕಲಾವೈಶಿಷ್ಟ್ಯವೆಂದರೆ ಅಸಾಧಾರಣ ಪಾಂಡಿತ್ಯದ ಪ್ರಗಲ್ಭತೆಯೊಡನೆ ಅಸಾಧಾರಣ ಮಾಧುರ್ಯದ ಸಂಗಮ. ಈಚೆಗೆ ದಿಲ್ಲಿಯ ಒಂದು ಸಾಂಸ್ಕೃತಿಕ ಪತ್ರಿಕೆಯ ವಿಮರ್ಶಕ ಅವರ ಬಗ್ಗೆ ಹೀಗೆ ಹೇಳಿದ್ದಾನೆ: ಮನ್ಸೂರರಲ್ಲಿ "ಪಳಗಿದ ಕಂಠದೊಡನೆ ಸಂಗೀತದ ಸರ್ವಾಂಗ ಸಂಪೂರ್ಣಜ್ಞಾನದ ಅಪೂರ್ವ ಸಂಗಮವಾಗಿದೆ. ಅವರು ಖಟ ತೋಡಿಯೆಂಬ ಬಲು ಕಠಿನವಾದ ರಾಗವನ್ನು ಹಾಡಿದರು. ಅದರಲ್ಲಿ ರಾಗಗಳ ಐದಾರು ವಿವಿಧ ಛಾಯೆಗಳ ಸಮ್ಮಿಲನವಿರುತ್ತದೆ. ಅದೊಂದು ಕಾಮನಬಿಲ್ಲಿನಂತಿರುತ್ತದೆ; ಯಾವ ಬಣ್ಣ ಎಲ್ಲಿ ತೊಡಗುತ್ತದೆ, ಎಲ್ಲಿ ಮುಗಿಯುತ್ತದೆ ಎಂದು ಹೇಳುವುದೇ ಕಷ್ಟ. ಮನ್ಸೂರರ ವೈಶಿಷ್ಟ್ಯವೆಂದರೆ ರಾಗ ಸಮ್ಮಿಶ್ರಣದೊಡನೆ ನಿರ್ದುಷ್ಟವಾದ ಲಯಕಲಾಪಗಳನ್ನು ಸೃಷ್ಟಿಸುವುದು."

ಪ್ರಸಿದ್ಧ ಹಿಂದುಸ್ತಾನಿ ಶೈಲಿಯೊಂದರ ವರಿಷ್ಠ ಪ್ರತಿಪಾದಕರಾದ ಮನ್ಸೂರರಿಗೆ ಉತ್ತರದಿಂದ ದೊರತ ಈ ಪ್ರಶಂಸೆ ಸ್ವಾಭಾವಿಕವೇ. ಆದರೆ ಮೈಸೂರು ಬೆಂಗಳೂರುಗಳಲ್ಲಿ ಅವರ ಕಛೇರಿಗಳು ವಿದ್ವಾಂಸರಿಂದ ಪ್ರಶಂಸೆ ಪಡೆಯುತ್ತಿರುವುದು ಅಸಾಮಾನ್ಯ ಸಂಗತಿ. ಮೊಟ್ಟಮೊದಲು ಮೈಸೂರಲ್ಲಿ ಶ್ರೀ ದೇವೇಂದ್ರಪ್ಪನವರ ಮನೆಯಲ್ಲಿ ಮನ್ಸೂರರ ಕಛೇರಿ ವಿದ್ವಜ್ಜನರ ಸಮ್ಮುಖದಲ್ಲಿ ಆದ ಮೇಲೆ ಕರ್ನಾಟಕ ಸಂಗೀತದ ಸೀಮಾ ಪುರುಷರಲ್ಲೊಬ್ಬರಾದ ದಿವಂಗತ ಮೈಸೂರು ವಾಸುದೇವಾಚಾರ್ಯರು, "ಮನ್ಸೂರರ ಹಾಡುಗಾರಿಕೆಯನ್ನು ಇತರರೊಡನೆ ಹೋಲಿಸಲು ಸಾಧ್ಯವೇ ಇಲ್ಲ. ರಾಮಬಾಣ ರಾಮಬಾಣದಂತೆಯೆ ಎಂದ ಹಾಗೆ ಮನ್ಸೂರರ ಸಂಗೀತವೆಂದರೆ ಮನ್ಸೂರರ ಸಂಗೀತವೇ" ಎಂದು ಉದ್ಗರಿಸಿದರು. ವಾಸುದೇವಾಚಾರ್ಯರು ಮುಖಸ್ತುತಿ ಮಾಡುವವರಲ್ಲವೆಂದು ಎಲ್ಲರೂ ಬಲ್ಲರು.

ಕರ್ನಾಟಕದ ಸಂಸ್ಕೃತಿಯ ದೃಷ್ಟಿಯಿಂದ ಮನ್ಸೂರರು ಮಾಡಿದ ಸೇವೆಯೊಂದನ್ನು ಇಲ್ಲಿ ಹೇಳದೆ ಇರಲು ಸಾಧ್ಯವಿಲ್ಲ. ಬಹುಶಃ ಪ್ರಥಮತಃ ಶಿವಶರಣರ ವಚನಗಳನ್ನು ಹಾಡಿದವರು ದೇವೇಂದ್ರಪ್ಪನವರು. ಆದರೆ ವಚನಗಳಿಗೆ ಸಂಗೀತ ಪ್ರಪಂಚದಲ್ಲಿ ಸ್ಥಿರವಾದ ಸ್ಥಾನವನ್ನು ಗಳಿಸಿಕೊಟ್ಟವರು ಮನ್ಸೂರರೇ. ಅವರ ವಚನ ಸಂಗೀತವನ್ನು ಕೇಳಿ ರೋಮಾಂಚಿತರಾಗದಿರುವವರಿಲ್ಲ. ಸಾಹಿತ್ಯ - ಸಂಗೀತಗಳ

ಅಷ್ಟು ಹಿತವಾದ ಏರಕವಿದೆ ಅಲ್ಲಿ. ಅಖಿಲ ಭಾರತ ಕಛೇರಿಗಳಲ್ಲೂ ಕನ್ನಡ ಹಾಡುಗಳನ್ನು ವಚನಗಳನ್ನು ಅವರು ಹಾಡಿದ್ದಾರೆ. ಮುಂಬಯಿಯ ಮಾಟುಂಗಾ ಕಲಾ ಮಂಡಲಿಯಲ್ಲಿ ಅವರೊಂದು ಕಛೇರಿಯ ಕೊನೆಯಲ್ಲಿ ಹರಿಹರನ "ಪಂಪಾನಗರಿ ನಿವಾಸ ಜಯ" ರಗಳೆಯನ್ನು ಹಾಡಿದಾಗ ಮುಗ್ಧರಾದ ಜನ ಇದಾವ ಭಾಷೆ, ಇದೇನು ಹಾಡುಗಾರಿಕೆ ಎಂದು ಸಾನಂದ ಕೌತುಕವನ್ನು ಪ್ರದರ್ಶಿಸಿದರು. ಹಿಂದುಸ್ತಾನಿ ಸಂಗೀತದಲ್ಲಿ ಕನ್ನಡ ಸಾಹಿತ್ಯಕ್ಕೆ ಗೌರವದ ಸ್ಥಾನ ಖಚಿತವಾದಂತಾಯಿತು

ಎಲ್ಲ ನಿಜವಾದ ಕಲಾವಿದರ ಹಾಗೆ ಮನ್ಸೂರರು ಪರಿಪೂರ್ಣ ಸ್ಥಿತಿಯನ್ನು ಮುಟ್ಟಿದರೂ ಇನ್ನೂ ಪೂರ್ಣತೆಯನ್ನು ವಿಕಾಸಗೊಳಿಸಿಕೊಳ್ಳುತ್ತಲೇ ಇದ್ದಾರೆ. ಅವರನ್ನು ನಿರಂತರವಾಗಿ ಆಲಿಸುತ್ತಿರುವವರು ಈಗ ಅವರು ಹೊಸ ಹೊಸ ರಾಗಗಳ ಮೇಲೆ ಪ್ರಭುತ್ವ ಸ್ಥಾಪಿಸುತ್ತಿದ್ದಾರೆಂದು ಹೇಳುತ್ತಾರೆ. ಮನ್ಸೂರರದು ಜೀವಂತ ಕಲೆ. ಬೆಳವಣಿಗೆ ಜೀವಂತತೆಯ ಅಸಂದಿಗ್ಧ ಲಕ್ಷಣ. *

ವಿಚಿತ್ರ ರೀತಿಯ ಮನೆಗಳು !

ನೀವು ಇಂಥಹುದೇ ಮನೆಯಲ್ಲಿರಬೇಕೆಂದು ಯಾವಾಗಲಾದರೂ ಯೋಚಿಸಿದ್ದೀರಾ? ಹಾಗೆ ಯೋಚಿಸಿದ್ದರೂ ವಿಚಿತ್ರ ರೀತಿಯಲ್ಲಿ ಮನೆಗಳನ್ನು ನಿರ್ಮಿಸಿಕೊಂಡವರ ಬಗ್ಗೆ ವಿವರಗಳು ಗೊತ್ತಿರಲಿಕ್ಕಿಲ್ಲ. ಈ ಕೆಳಗೆ ಅಂಥ ಕೆಲವು ವಿವರಗಳನ್ನು ಕೊಡಲಾಗಿದೆ.


ಈಚೆಗೆ ನಾಲ್ಕು ಸಂಸಾರದವರು ಒಂದು ದೊಡ್ಡ ನೀರಿನ ಟ್ಯಾಂಕು ಕೊಂಡು ಅದನ್ನು ಛಾವಣಿಯುನ್ನಾಗುಳ್ಳ ನಾಲ್ಕು ಮನೆಗಳನ್ನು ಕಟ್ಟಿಕೊಂಡು ವಾಸಿಸಲಾರಂಭಿಸಿದರು. ಮೇಲಿನ ಟಾಂಕ್‌ನಲ್ಲಿ ೧೦ ಸಹಸ್ರ ಗಾಲನ್ ನೀರು ಹಿಡಿಯುತ್ತಿತ್ತು.

ಇನ್ನೊಬ್ಬ ಶ್ರೀಮಂತ ನದಿಯ ಮೇಲೆ ವಾಸಿಸುವ ಸಲುವಾಗಿ ಒಂದು ನೌಕೆಯನ್ನು ಕೊಂಡು ಅದನ್ನು ಮನೆಯಾಗಿ ಪರಿವರ್ತಿಸಿಕೊಂಡು ಅದರಲ್ಲಿ ನದಿಯ ಮೇಲೆ ವಾಸವಾಗಿದ್ದ! ಇಂದು ಅರಮನೆಯಂತಿರುವ ಆ ಮನೆ ಒಂದು ಕಾಲದಲ್ಲಿ ಕಲ್ಲಿದ್ದಲು ಹೊತ್ತು ಹೋಗುತ್ತಿದ್ದ ನೌಕೆಯಿಂದ ಆದುದು ಎಂದರೆ ಯಾರೂ ನಂಬುವ ಹಾಗಿಲ್ಲ.

ಇದಕ್ಕೂ ವಿಚಿತ್ರವಾದದ್ದೆಂದರೆ ವಿಲಿಯಂ ಪೀಕ್ ಎಂಬಾತ [illegible] ಸಹಸ್ರ ಖಾಲಿ ಬೀರ್ (ಒಂದು ರೀತಿಯ ಪೇಯ) ಬಾಟಲಿಯಿಂದ ಮನೆ ಕಟ್ಟಿದ್ದ! ಆತ ಈ ಖಾಲಿ ಬಾಟಲಿಗಳನ್ನು ಇಟ್ಟಿಗೆಯಂತೆ ಬಳಸಿದ್ದ!

ಮತ್ತೊಬ್ಬ ಅಮೇರಿಕಾದ ಕಲಾವಿದ ೨೧ ಸಹಸ್ರ ಗ್ಯಾಲನ್ ದ್ರಾಕ್ಷಾರಸ ಹಿಡಿಸುವಂಥ ಪೀಪಾಯಿಯಲ್ಲಿ ಮನೆ ನಿರ್ಮಿಸಿಕೊಂಡ ದಾಖಲೆ ಇದೆ.

—ಇಂದಿರಾಪ್ರಿಯ



ಹಿಂದೂಸಾಗರದ
ನೈಋತ್ಯಕ್ಕಿರುವ
ಮಾಲದೀವು ಪರಿಚಯ

೨೦೦೦ ದ್ವೀಪಗಳ ಸಾಮ್ರಾಜ್ಯ

ರಾಧಾಕೃಷ್ಣ

ವರ್ಷಕ್ಕೊಂದು ಬಾರಿ ಸಿಂಹಳದ ರಾಜಧಾನಿ ಕೊಲಂಬೋನಲ್ಲಿ ಒಂದು ಉತ್ತೇಜಕ ಸಂಗತಿ ಜರುಗುತ್ತದೆ. ಹಾಯಿ ಕಟ್ಟಿದ ದೊಡ್ಡ ದೋಣಿಗಳಲ್ಲಿ ಎತ್ತಣಿಂದಲೋ ಜನ ಬಂದಿಳಿಯುತ್ತಾರೆ. ಅವರ ಭಾಷೆ ವಿಚಿತ್ರವೆನಿಸುತ್ತದೆ. ಆದರೆ ಸಿಂಹಳೀಯರಿಗೆ ಅದರಲ್ಲಿ ತಮ್ಮ ಭಾಷೆಯ ಅನೇಕ ಶಬ್ದಗಳು ಕಾಣಸಿಗುತ್ತವೆ. ಪೇಟೆಯಲ್ಲಿ ಸಿಂಹಳೀಯರು ಉತ್ಸಾಹದಿಂದ ಈ ಆಗಂತುಕರ ಸುತ್ತ ನೆರೆಯುತ್ತಾರೆ. ಅವರು ತಂದ ಒಣ ಮೀನೆಂದರೆ ಸಿಂಹಳೀಯರಿಗೆ ಬಲು ಪ್ರೀತಿ. ಅದಕ್ಕೂ ಪ್ರೀತಿ ಅವರು ತಂದಿರುವ ಬೊಂದಿ-ಹಲುವಾ–ಒಂದು ತರದ ದುಂಡಾದ ಸಿಹಿ ತಿಂಡಿ. ರಿಹ-ಕುರು ಎಂಬ ಖಾರ ಮೀನನ್ನು ಕೂಡ ಅವರು ಸಿಂಹಳೀಯರಿಗೆ ಮಾರುತ್ತಾರೆ.

ಸಿಂಹಳಕ್ಕೆ ಬರುವ ವಿದೇಶೀಯರ ಮೇಲೆಲ್ಲ ಸಿಂಹಳೀಯರಿಗೆ ಅಷ್ಟಕಷ್ಟೇ. ಆದರೆ ಈ ಜನರ ಮಾತು ಬೇರೆ. ಇವರನ್ನು ಕಂಡು ಸಿಂಹಳೀಯರು ಸಂತೋಷಪಡುತ್ತಾರೆ. ಅವರು ಇತರ ವಿದೇಶೀಯರಂತೆ ತಮ್ಮನ್ನು ಶೋಷಿಸಲು ಬರುವ ವ್ಯಾಪಾರಿಗಳಲ್ಲ, ಅವರಿಗೆ ಧನಪಿಶಾಚಿ ಹಿಡಿದಿಲ್ಲ ಎಂಬುದು ಒಂದು; ಸುದೂರ ಗತಕಾಲದಲ್ಲಿ ಅವರಿಗೂ ತಮಗೂ ಬಾಂಧವ್ಯವಿತ್ತು, ಸಾಂಸ್ಕೃತಿಕ ಸಂಬಂಧವಿತ್ತು ಎಂಬುದು ಇನ್ನೊಂದು.

ಈ ಜನ ಮಾಲದೀವು ನಿವಾಸಿಗಳು. ಮಾಲದೀವು ಸಿಂಹಳದಿಂದ ೪೨೦ ಮೈಲು ನೈಋತ್ಯಕ್ಕಿರುವ ೨,೦೦೦ ಹವಳದ ದ್ವೀಪಗಳ ಒಂದು ಸ್ತೋಮ. ಎಲ್ಲ ದ್ವೀಪಗಳು ಸೇರಿ ಒಟ್ಟು ೧೧೫ ಚದರ ಮೈಲು ವಿಸ್ತೀರ್ಣ. ಅವುಗಳಲ್ಲಿ ಮುನ್ನೂರಕ್ಕಿಂತಲೂ ಕಡಮೆ ದ್ವೀಪಗಳಲ್ಲಿ ಜನವಸತಿ ಇರುವುದು. ೧೯೫೬ ರ ಜನಗಣತಿಯಂತೆ ಒಟ್ಟು ೮೧,೯೫೦ ಅಲ್ಲಿಯ ಜನಸಂಖ್ಯೆ. ಆದರೆ ಅದಕ್ಕೆ ಬೇರಾವ ದೇಶಕ್ಕಿರುವಂತೆಯೆ ರಸವತ್ತಾದ ಇತಿಹಾಸವಿದೆ. ಅಪರೂಪವಾಗಿ ಅದು ಅಂತರ್‌-ರಾಷ್ಟ್ರೀಯ ರಾಜಕಾರಣದ ಚಹಾಕಪ್ಪಿನಲ್ಲಿ ಚಿಕ್ಕ ಬಿರುಗಾಳಿಗಳನ್ನೂ ಎಬ್ಬಿಸಿದೆ.

ಮಾಲದೀವುವಿನಲ್ಲಿ ಎಲ್ಲೆಲ್ಲಿಯೂ ನಾವು ಬೌದ್ಧಧರ್ಮದ ಅವಶೇಷಗಳನ್ನು ಕಾಣುತ್ತೇವೆ. ಅನಂತರದ ಇಸ್ಲಾಮಿ ಬಿರುಗಾಳಿಯ ಹೊಡೆತವನ್ನು ತಾಳಿಕೊಂಡೂ ಅಲ್ಲಿ ದಾಗೋಬಾಗಳು ವಿಹಾರಗಳು ಮತ್ತು ಇತರ ಬೌದ್ಧಮಂದಿರಗಳು ಭಗ್ನ ರೂಪದಲ್ಲಾದರೂ ಉಳಿದಿವೆ. ಸಿಂಹಳೀ ಪ್ರಭಾವದ ವಿಷಯದಲ್ಲಿ ಸಂಶಯವೇ ಇಲ್ಲ. ಈ ಅವಶೇಷಗಳೆಲ್ಲ ಸಿಂಹಳೀ ಬೌದ್ಧ ಶಿಲ್ಪದ ಮಾದರಿಯಲ್ಲಿ ಇವೆ. ಇಸ್ಲಾಮಿ ಸಲ್ತನತ್

ಆದ ಮೇಲೂ ಮಾಲದೀವುವಿನಲ್ಲಿ ಹಲವು ಕಾಲ ಸಿಂಹಳೀ ಲಿಪಿಯಿಂದಲೇ ಉದ್ಭವಿಸಿದ ದೀವು-ಅಕರು (ದ್ವೀಪಾಕ್ಷರ) ಲಿಪಿಯು ಬಳಕೆಯಲ್ಲಿತ್ತು. ಜನರ ಮೈಕಟ್ಟೂ ಸಿಂಹಳೀ ಹೋಲಿಕೆಯನ್ನು ತೋರಿಸುತ್ತದೆ. ಆದಿಯಲ್ಲಿ ಈ ದ್ವೀಪಗಳಲ್ಲಿ ವಿರಳವಾಗಿ ಜನವಸತಿಯಿದ್ದಿರಬೇಕು ಮತ್ತು ಅನಂತರ ಸಿಂಹಳೀಯರು ತಮ್ಮ ಬೌದ್ಧ ಧರ್ಮದೊಡನೆ ಅಲ್ಲಿ ಹೋಗಿ ನೆಲಸಿ ರಾಜ್ಯ ಕಟ್ಟಿರಬೇಕು ಎಂದು ತೋರುತ್ತದೆ.

ಬೌದ್ಧಧರ್ಮ ಅಲ್ಲೆಷ್ಟು ಕಾಲ ಮೆರೆಯಿತೋ ಗೊತ್ತಿಲ್ಲ. ಆದರೆ ಸುಮಾರು ಹನ್ನೆರಡನೇ ಶತಮಾನದಲ್ಲಿ ಮಾಲದೀವು ಇಸ್ಲಾಮ್ ಧರ್ಮ ಸ್ವೀಕರಿಸಿದ ಮೇಲಿನ ಇತಿಹಾಸ ಮಾತ್ರ "ತಾರೀಖ್" ಮತ್ತು "ರಾದಾವಲಿ" (ರಾಜಾವಲಿ) ಎಂಬ ಇತಿಹಾಸ ಗ್ರಂಥಗಳಲ್ಲಿ ವಿವರವಾಗಿ ದೊರೆಯುತ್ತದೆ. ತಾರೀಖಿನ ಹೇಳಿಕೆಯಂತೆ ಹನ್ನೆರಡನೇ ಶತಮಾನದ ವರೆಗೂ ದ್ವೀಪಗಳಲ್ಲಿ ಜನವಸತಿ ತೀರ ವಿರಳವಾಗಿತ್ತು. ಆಗ ರಾಜವಂಶಕ್ಕೆ ಸೇರಿದ ಕೊಯ್ಮಾಲ ಕಾಲ ಎಂಬೊಬ್ಬ ವೀರ ಸಿಂಹಳದ ರಾಜನ ಮಗಳನ್ನು ಮದುವೆಯಾಗಿ ಸಪರಿವಾರನಾಗಿ ಎರಡು ನೌಕೆಗಳಲ್ಲಿ ಹೊರಟಾಗ ಮಾಲದೀವು ಸ್ತೋಮದ ರಾಸಗೆತಿಮು (ರಾಜದ್ವೀಪ) ದ್ವೀಪದಲ್ಲಿ ಕೆಲ ಕಾಲ ವಿಶ್ರಮಿಸಿದನು. ಜನ ಅವನ ಹಿನ್ನೆಲೆಯರಿತು ಕೊಯ್ಮಾಲ ಕಾಲನಿಗೆ ಪಟ್ಟಕಟ್ಟಿದರು. ಅನಂತರ ಆತ ಗಿರವರು ದ್ವೀಪದಲ್ಲಿರುವ ಮಾಲೆ ಎಂಬಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನು. ಆತನ ಮಗ ಕಲಮಿಂಜ ಹನ್ನೆರಡು ವರ್ಷ ಬೌದ್ಧನಾಗಿ ಆಳಿದ ನಂತರ "ಅಲ್ಲಾನು ಅಪಾರ ಕರುಣೆಯಿಂದ ಈ ಮೂರ್ತಿಪೂಜಕನನ್ನುದ್ಧರಿ-ಸಲು ಶೇಖ್ ಯುಸುಫ್ ಶಂಸುದ್ದೀನ್ ಎಂಬ ಸಂತನನ್ನು ಕಳಿಸಿದನು. ಆತ ತನ್ನ ಮಾಯೆಯಿಂದ ಮುಗಿಲು ಮುಟ್ಟುವ ಒಂದು ಭೂತವನ್ನು ಸೃಷ್ಟಿಸಿ ತೋರಿಸಿದ ಮೇಲೆ ಇವನು ನಿಜವಾಗಿ ದೇವದೂತನೆಂದು ನಂಬಿ ಇಸ್ಲಾಂ ಧರ್ಮವನ್ನು ಮಾಲದೀವುವಿನ ಜನ ಮತ್ತು ಅರಸ ಅಂಗೀಕರಿಸಿದರು." ಅರಸನ ಹೆಸರು ಸಿರಿ ಬವನಾದಿತ್ತ (ಭುವನಾದಿತ್ಯ)ದ ಬದಲು ಸುಲ್ತಾನ್ ಮಹಮ್ಮದ್ ಎಂದಾಯಿತು. ಈ ಸಂತನನ್ನು "ತಬ್ರಿಜುಗೆಫನು" ಎಂದು ಇಂದಿಗೂ ಮಾಲದೀವು ಜನ ಗೌರವಿಸುತ್ತಾರೆ.

ಅಂದಿನಿಂದ (೧೧೫೩) ೧೮೩೫ ರ ವರೆಗಿನ ೮೩ ಸುಲ್ತಾನ ಸುಲ್ತಾನೆಯರ ವಂಶಾವಳಿಯನ್ನು ತಾರೀಖ್ ಬಣ್ಣಿಸುತ್ತದೆ. (ಅನೇಕ ಸುಲ್ತಾನೆಯರೂ ಆದರು; ಸುಲ್ತಾನ್ ಮೊದಲನೇ ಮಹಮ್ಮದನ ಮಗಳೇ ಪ್ರಥಮ ಸುಲ್ತಾನೆಯಾಗಿದ್ದಳು.) ಮಾಲದೀವು ಜನ ಉಗ್ರರೂ ಅಲ್ಲ, ಕ್ರೂರರೂ ಅಲ್ಲವಾದರೂ ಅವರ ರಾಜವಂಶಗಳ ಕಥೆ ಮತ್ತಾವ ಇಸ್ಲಾಮಿ ರಾಜ್ಯದ ಕಥೆಯಂತೆ ಒಳಸಂಚು, ಕೊಲೆ, ಕ್ರಾಂತಿಗಳ ರೋಮಾಂಚಕ ಸನ್ನಿವೇಶಗಳಿಂದ ತುಂಬಿದೆ. ಪ್ರಥಮ ಸುಲ್ತಾನನೇ ಮಕ್ಕಾಯಾತ್ರೆಗೆ ಹೊರಟಾಗ ಅವನ ನೌಕೆ "ಮಿಂಚಿನಂತೆ ಮಾಯವಾಯಿತು." ಅನಂತರವೂ ಅನೇಕ ಅರಸರು ಮಕ್ಕಾಯಾತ್ರೆಗೆ ಹೊರಟಾಗಲೇ ಅವರ ಆಳಿಕೆಯೂ ಸಮಾಪ್ತಿ ಹೊಂದಿತು. ಹಿಲಾಲ್ ವಂಶದವರ ಕಾಲದಲ್ಲಂತೂ ಕೊಲೆ ಮತ್ತು ಮೃತ್ಯು ತಾನೇತಾನಾಗಿತ್ತು. "ಈ ಮನುಷ್ಯ ಮರುದಿನ ಮಧ್ಯರಾತ್ರಿಯ ವರೆಗೆ ಆಳಿದ. ಹೀಗೆ ಹತ್ತು ದಿನಗಳ ವರೆಗೆ ಒಬ್ಬನ ನಂತರ ಒಬ್ಬ ರಾಜನ ಕೊಲೆಯಾಗಿ ಬೇರೊಬ್ಬ ಅಧಿಕಾರ ಕಸಿದುಕೊಂಡ" ಎಂಬ ಮಾತನ್ನು ಇಂದಿಗೂ ಮಾಲದೀವು ಜನ ಹೇಳುತ್ತಾರೆ.

ತಮ್ಮೊಳಗಿನ ಜಗಳಗಳಂತೆ ವಿದೇಶೀಯರ ದಾಳಿ, ಕೈವಾಡಗಳಿಂದಲೂ ಮಾಲದೀವು ಪೆಟ್ಟು ತಿಂದಿದೆ. ಕನ್ನಾನೂರಿನ ಅರಸ ಮೊದಲು ಮಾಲದೀವುವಿನ ಭಾಗವಾಗಿದ್ದ ಲಕ್ಕದೀವುಗಳನ್ನು ಗೆದ್ದುಕೊಂಡನು. ಅವಿಂದೂ ಭಾರತದ

ಭಾಗವಾಗಿ ಉಳಿದಿವೆ. ಕನ್ನಾನೂರಿನವರೊಡನೆ ಸೇರಿ ಪೋರ್ತುಗೀಸರು ಮಾಲದೀವು ಮೇಲೆ ದಾಳಿಮಾಡಿ ತಮ್ಮ ಕೈಗೊಂಬೆಯೊಬ್ಬನನ್ನು ಸುಲ್ತಾನನನ್ನಾಗಿ ಮಾಡಿ ಅಲ್ಲಿ ತಮ್ಮದೊಂದು ಕೋಟೆ ಕಟ್ಟಿಕೊಂಡು ಕ್ರೂರವಾಗಿ ಕಪ್ಪ ವಸೂಲು ಮಾಡತೊಡಗಿದರು. ಅನಂತರ ಮಾಲದೀವು ರಾಜ್ಯಕ್ಕೆ ಕೆಲ ವರ್ಷ ಕ್ರೈಸ್ತ ರಾಜನನ್ನು ಪಡೆಯುವ ಭಾಗ್ಯವೂ ಬಂತು. ತಮ್ಮ ಕೈಗೊಂಬೆಯ ಮೊಮ್ಮಗ ಸುಲ್ತಾನ್ ಹಸನನನ್ನು ಕೊಚ್ಚಿಗೆ ಒಯ್ದು ಅಲ್ಲಿ ಕ್ರೈಸ್ತಧರ್ಮದ ದೀಕ್ಷೆ ಕೊಡಿಸಿದರು. ಆದರೆ ಅವನ ಆಳಿಕೆ ಅಲ್ಪಾಯು ವಾಗಿತ್ತು. ಪೋರ್ತುಗೀಸರ ಕಾಲದಲ್ಲಿ (೧೬ ನೇ ಶತಮಾನ) ಮಾಲದೀವು ಬಳಿಯ ಸಮುದ್ರ ಮುಸ್ಲಿಂ ರಕ್ತದಿಂದ ಕೆಂಪಾಗಿತ್ತು ಎಂದು "ತಾರೀಖ್" ಹೇಳುತ್ತದೆ.

ಎರಡು ವರ್ಷಗಳ ಕೆಳಗೆ ಶಾಂತ ಮಾಲದೀವು ಹೆಸರು ಅಂತರ್— ರಾಷ್ಟ್ರೀಯ ಸುದ್ದಿಗಳಲ್ಲಿ ಒಮ್ಮಿಂದೊಮ್ಮೆ ಪ್ರವೇಶ ಮಾಡಿತು. ೧೮೮೭ ರಿಂದ ಬ್ರಿಟಿಶ್ "ರಕ್ಷಣೆ" ಯಲ್ಲಿರುವ ಈ ದ್ವೀಪ ರಾಜ್ಯದ ಸರಕಾರವು ಈ ಸಂಧಿಯಲ್ಲಿ ತನ್ನ ಸಾರ್ವಭೌಮತ್ವವನ್ನು ಬ್ರಿಟನ್ ಒಪ್ಪಬೇಕೆಂದು ಬೇಡಿಕೆ ಮುಂದೊಡ್ಡಿತು. ಆಗ ದಕ್ಷಿಣ ದ್ವೀಪಗಳಲ್ಲೊಂದಾದ "ಅಡ್ಡು" ಹವಳ ದ್ವೀಪದಲ್ಲಿ ಬ್ರಿಟಿಷರು ಒಂದು ಮಿಲಿಟರಿ ವಿಮಾನ ನೆಲೆ ಕಟ್ಟುತ್ತಿದ್ದರು. ಈ ಬೇಡಿಕೆಮುಂದಿಟ್ಟೊಡನೆ ಒಮ್ಮಿಂದೊಮ್ಮೆ ಅಡ್ಡು ಮತ್ತು ಸುತ್ತಮುತ್ತಲ ದ್ವೀಪಗಳಲ್ಲಿ ಮಾಲದೀವು ಸರಕಾರದ ವಿರುದ್ಧ"ಬಂಡಾಯ" ವೆದ್ದು ಪ್ರತ್ಯೇಕ "ಸರಕಾರ" ವೊಂದು ಆಸ್ತಿತ್ವಕ್ಕೆ ಬಂತು. ಈ ಬಂಡಾಯಕ್ಕೂ ತಮಗೂ ಸಂಬಂಧವಿಲ್ಲೆಂದು ಬ್ರಿಟಿಶರು ಹೇಳಿದರೂ ಮಾಲದೀವು ಸರಕಾರ ಬಂಡಾಯಗಾರರನ್ನು ಹತ್ತಿಕ್ಕಲು ಸೈನ್ಯ ಕಳಿಸಬೇಕೆಂದಾಗ ಸಿಂಗಾಪುರದಿಂದ ದೊಡ್ಡ ಬ್ರಿಟಿಶ್ ಪಡೆಯೊಂದು ಬಂದಿಳಿದು ಬಂಡಾಯಗಾರರಿಗೆ ರಕ್ಷಣೆ ಕೊಟ್ಟಿತು. ಮಾಲದೀವು ಸರಕಾರ ಬೇರೆ ಬೇರೆ ದೇಶಗಳಿಗೆ ದೂರು ಕೊಟ್ಟಿತು. ಪ್ರಯೋಜನವಾಗಲಿಲ್ಲ. ಕಡೆಗೆ ಮಾಲದೀವು ಸರಕಾರ ೧೯೬೦ ಫೆಬ್ರುವರಿಯಲ್ಲಿ ಬ್ರಿಟಿಶರಿಗೆ ೩೦ ವರ್ಷಗಳ ವರೆಗೆ ವಿಮಾನ ನೆಲೆ ಉಪಯೋಗಿಸಲು ಒಪ್ಪಿಗೆ ಕೊಟ್ಟು ತನ್ನ ಬೇಡಿಕೆಯನ್ನು ನುಂಗಿಕೊಂಡಿತು.

ಈಗ ೭೦೦ ವರ್ಷಗಳಿಂದಲೂ ಮಾಲದೀವು ಇಸ್ಲಾಂ ಪ್ರಭುತ್ವಕ್ಕೊಳಪಟ್ಟಿದ್ದರೂ ಸಿಂಹಳದ ಮತ್ತು ತನ್ಮೂಲಕ ಭಾರತದ ಪ್ರಭಾವ ಅದರ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಅಚ್ಚಳಿಯದೆ ಉಳಿದಿದೆ. ಮಾಲದೀವು ಜನ ತಮ್ಮ ದ್ವೀಪಗಳನ್ನು "ದಿವೇಹಿ ರಾಜ್ಜೆ" (ದ್ವೀಪ ರಾಜ್ಯ) ಎಂದೂ ತಮ್ಮ ಭಾಷೆಯನ್ನು "ದಿವೇಹಿ ಬಾಸ್" (ದ್ವೀಪ ಭಾಷೆ) ಯೆಂದೂ ಹೇಳಿಕೊಳ್ಳುತ್ತಾರೆ. ಸುಲ್ತಾನರ ಬಿರುದುಗಳು "ಬಿರುದು" ಗಳೇ ಎನಿಸುತ್ತವೆ. ಲೋಕವೀರ, ಸಿಂಹಬಾವನ, ಲೋಕ ಆಬರಣ ಎಂಬ ಬಿರುದುಗಳು ನಾಣ್ಯ, ತಾಮ್ರಪಟಗಳಲ್ಲಿ ಸಿಗುತ್ತವೆ.

೧೮೮೩ ರಲ್ಲಿ ಹೊರಟ ಒಂದು ರಾಜಾಜ್ಞೆಯ ಒಕ್ಕಣೆಯ ಒಂದಂಶ ಹೀಗಿದೆ: "ಸುವಸ್ತಿ ಸಿರಿಮತ ಮಹಾ ಸಿರಿ ಬರಿ ಕುಶ ಪುರದನ ಸಿರಿ ಕುಲ ಸದ ಇರ ಸಿಯಕ ಸಾಸ್ತುರ ಔದ ಕೀರಿತಿ ಅಸ್ಸುಲ್ತಾನ ಇಬ್ರಾಹಿಮ ನೂರುದ್ದೀನ ಇಸ್ಕಂದರ ಇಬ್ನ ಅಸ್ಸುಲ್ತಾನ ಮಹಮ್ಮದ ಇಮ್ಮುದ್ದೀನ ಇಸ್ಕಂದರ ಕತಿರಿ ಬೊವನ ಮಹಾರಾದುಂಗೆ...." ಅರ್ಥಾತ್ "ಸ್ವಸ್ತಿ ಶ್ರೀಮತ್ ಮಹಾ ಶ್ರೀವರ ಕುಶಲಮತಿ (ಕುಶಪುರದನ) ಶ್ರೀಕುಲ ಸೂರ್ಯಚಂದ್ರ ಸನ್ನಿಭ (ಸದ ಇರ) ಸಕಲ ಶಾಸ್ತ್ರ ಪಾರಂಗತ (ಸಿಯಕ ಸಾಸ್ತುರ) ಅಪ್ರತಿಮ ಕೀರ್ತಿ ಅಸ್ಸುಲ್ತಾನ್ ಇಬ್ರಾಹಿಮ ನೂರುದ್ದೀನ ಇಸ್ಕಂದರ.... ಭುವನ ಮಹಾರಾಜ ಕ್ಷತ್ರಿಯ" ಇತ್ಯಾದಿ. ಇದರಲ್ಲಿ ಸಂಸ್ಕೃತ ತದ್ಭವಗಳ ಸಂಖ್ಯೆ ಎಷ್ಟಿದೆ!

ಬೌದ್ಧ ಧರ್ಮವನ್ನು ತೊರೆದಿದ್ದರೂ ಮಾಲದೀವು ಜನತೆ ಅದರ ಅವಶೇಷಗಳನ್ನು ಪೂರ್ತಿ ನಾಶ ಮಾಡದಿರುವುದನ್ನು ನೋಡಿದರೆ ಈ ಹವಳ ದ್ವೀಪಗಳ ಮೇಲೆ ಮಧ್ಯಯುಗೀನ ಇಸ್ಲಾಂ ಕೂಡ ಮೃದುವಾಗಿಯೆ ಹೆಜ್ಜೆಯಿಟ್ಟಿತೆಂದು ತಿಳಿಯುತ್ತದೆ. ಈ ಅವಶೇಷಗಳು ಹೆಚ್ಚಾಗಿ ದಕ್ಷಿಣದ ದ್ವೀಪಗಳಲ್ಲಿ ಕಾಣಿಸುತ್ತವೆ.

ಮಾಲದೀವು ಜನರಲ್ಲಿ ಹಲವು ರಕ್ತಗಳ ಸಮ್ಮಿಳನ ಕಾಣಿಸುತ್ತದೆ. ಸಿಂಹಳಕ್ಕೆ ಸಮೀಪವಾದ ದ್ವೀಪಗಳಲ್ಲಿ ಸಿಂಹಳೀ ರಕ್ತ ಧಾರಾಳವಾಗಿದೆ. ಉಳಿದ ದ್ವೀಪಗಳಲ್ಲಿ ಅರಬ ರಕ್ತದ ಮಿಶ್ರಣವುಂಟು. ಉತ್ತರದ ಸಾಹಸಿ ಜನ ಭಾರತಕ್ಕೆ ಹೋಗಿ ಅಲ್ಲಿನ ಕನ್ಯೆಯರನ್ನು ಮದುವೆಯಾಗಿ ಬಂದು ದ್ರಾವಿಡ ರಕ್ತದ ಬೆರಕೆಯನ್ನೂ ಮಾಡಿಕೊಂಡಿದ್ದಾರೆ. ಯಾವ ರಕ್ತವೇ ಇರಲಿ, ಈ ಜನ ಬಲು ಚತುರ ನಾವಿಕರು ಮತ್ತು ಮೀನುಗಾರರು. ಆದರೆ ಅನೇಕ ನಾವಿಕ ಜನಾಂಗಗಳಂತೆ ಇವರಲ್ಲಿ ದುರಾಶೆಯಿಲ್ಲ. ನಿಜವಾಗಿ ಇಲ್ಲಿನ ವ್ಯಾಪಾರ ವ್ಯವಹಾರ ಭಾರತದಿಂದ ಬಂದ ಬೋರಾ ವ್ಯಾಪಾರಿಗಳ ಹತ್ತಿರವೇ ಇದೆ.

ಇಲ್ಲಿ ಶಿಕ್ಷಣ ಸಾಕಷ್ಟು ವಿಸ್ತರಿಸಿದೆ. ಪ್ರತಿಯೊಬ್ಬ ಸುಶಿಕ್ಷಿತನೂ ಅರಬೀ ಭಾಷೆ ಬಲ್ಲನಾದರೂ ತನ್ನ ದ್ವೀಪ ಭಾಷೆಯನ್ನು ಮರೆತಿಲ್ಲ. ಅವರ ಅನೇಕ ತರುಣ ತರುಣಿಯರು ಸಿಂಹಳ ಮತ್ತು ಭಾರತದಲ್ಲಿ ಶಿಕ್ಷಣ ಪಡೆದವರು. ಕೆಲ ವರ್ಷಗಳ ಹಿಂದೆ ಮಾಲದೀವುವಿನಲ್ಲೊಂದು ರಾಜ್ಯಕ್ರಾಂತಿಯಾಯಿತು. ಸುಲ್ತಾನನನ್ನು ಪದಚ್ಯುತಿಗೊಳಿಸಿ ಅಮೀನ್ ದೀದಿ ಎಂಬವರನ್ನು ಅಧ್ಯಕ್ಷನಾಗಿ ಮಾಡಿ ಪ್ರಜಾರಾಜ್ಯ ಸ್ಥಾಪಿಸಲಾಯಿತು. ಭಾರತದ ಅಲೀಗಡ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಹೊಂದಿದ ಈ ರಾಜಕಾರಣಿ ತನ್ನ ಆಳಿಕೆಯಲ್ಲಿ ಅನೇಕ ತರುಣ ತರುಣಿಯರನ್ನು ಸಿಂಹಳಕ್ಕೆ ಶಿಕ್ಷಣಕ್ಕಾಗಿ ಕಳಿಸಿದ. ಸುಧಾರಕ ಮನೋವೃತ್ತಿಯವನಾದ ಆತ ಹೆಂಗಸರ ಗೋಷಾ ಪದ್ಧತಿಯನ್ನು ರದ್ದುಗೊಳಿಸಿದ. ಆದರೆ ದುರ್ದೈವದಿಂದ ಕೆಲ ಕಾಲದಲ್ಲೇ ಆತನ ಕೊಲೆಯಾಗಿ ಮತ್ತೆ ಸುಲ್ತಾನ ಆಳಿಕೆಯ ಪ್ರಾರಂಭವಾಯಿತು.

ಮಾಲದೀವು ಜನ ವೃತ್ತಿಯಿಂದ ಬೆಸ್ತರಾದರೂ ಒಳ್ಳೇ ರೈತರೂ ಹೌದು. ತೆಂಗು ಅಲ್ಲಿ ಸಮೃದ್ಧಿಯಾಗಿದೆ. ಅಲ್ಲಿನ "ತೆಂಬಿಲಿ" ತೆಂಗಿನ ಕಾಯಿಯ ತಿರುಳು ಮಾತ್ರವಲ್ಲ ತೊಗಟೆ ಕೂಡ ಸವಿಯಾಗಿದೆ. ಬಾಳೆಹಣ್ಣು, ಕಿತ್ತಳೆಹಣ್ಣು, ಪಪಾಯಿ, ಪರಂಗಿಹಣ್ಣು ಧಾರಾಳವಾಗಿ ಬೆಳೆಯುತ್ತವೆ. ಜೋಳ ಕಾಳುಗಳನ್ನೂ, ಬೆಳೆಯುತ್ತಾರೆ. ಜನ ತುಂಬ ಶ್ರಮಜೀವಿಗಳು.

ಮಾಲದೀವು ದ್ವೀಪಗಳು ಸೃಷ್ಟಿ ಸೌಂದರ್ಯದಲ್ಲಿ ಅಸಾಧಾರಣವಾದವು. ಅದರ ದಕ್ಷಿಣಕ್ಕಿರುವ ದ್ವೀಪಗಳಲ್ಲೊಂದಾದ ಫುವಾಮುಲಕುವಿನ ಬಗ್ಗೆ ೧೩೪೪ ರಲ್ಲಿ ಇಬ್ನ ಬತೂತಾ ಬರೆದ ಮಾತುಗಳಿಂದ ಈ ಲೇಖವನ್ನು ಮುಗಿಸಬಹುದು.

"ಇದು ದ್ವೀಪಗಳಲ್ಲಿ ಪರಮ ಮೋಹಕವಾದದ್ದು. ಒಂದು ಆಶ್ಚರ್ಯವೆಂದರೆ ಇಲ್ಲಿನ ಒಂದು ಮರದ ಟೊಂಗೆಗಳನ್ನು ಕಡಿದು ನೆಲದಲ್ಲಿಯೋ ಗೋಡೆಯಲ್ಲೊ ನಟ್ಟರೆ ಚಿಗಿತು ತಾನೇ ಮರವಾಗುತ್ತದೆ. ದಾಳಿಂಬ ಇಲ್ಲಿ ಇಡೀ ವರ್ಷ ಹಣ್ಣು ಬಿಡುತ್ತದೆಂಬುದು ನಾನು ಕಂಡ ಇನ್ನೊಂದು ವಿಶೇಷ."

*

ಯಾವನಿಗೆ ಅವನು ಮೂರ್ಖನಿದ್ದರೂ ತಾನು ಮೂರ್ಖನೆಂಬ ಅರಿವು ಇರುವುದೋ ಅವನೇ ಜಗತ್ತಿನಲ್ಲಿಯ ಅತಿ ಬುದ್ಧಿವಂತ. ಯಾವ ಮೂರ್ಖನಿಗೆ ತನ್ನ ಮೂರ್ಖತನದ ಅರಿವು ಇರುವುದಿಲ್ಲವೊ ಅವನೇ ಅತ್ಯಧಿಕ ಮೂರ್ಖ. —ಸಾಕ್ರೆಟಿಸ್

ಅಂತರ್‌ರಾಷ್ಟ್ರೀಯ ಸಹಕಾರದಲ್ಲಿ ಹೊಸದೊಂದು ಪ್ರಯೋಗ

ಪೆಸ್ಟಲೋಜಿ: ಮಕ್ಕಳ ಹಳ್ಳಿ

ವಿವಿಧ ಮೂಲಗಳಿಂದ

ಸ್ವಿಜರ್ಲಂಡಿನ ಈಶಾನ್ಯದ ಪರ್ವತಗಳ ಮರೆಯಲ್ಲಿ ಹುದುಗಿರುವ ಒಂದು ಪುಟ್ಟ ಹಳ್ಳಿಯಲ್ಲಿ ಕೆಂಪು ಮಾಡಿನ ಮನೆಗಳಿಂದ ನಗುವಿನ ಅಟ್ಟಹಾಸದೊಡನೆ ಮಕ್ಕಳು ಹೊರಗೂ ಒಳಗೂ ಪುಟಿದಾಡುವುದನ್ನು ನೋಡಬಹುದು. ಈ ಒಂದೇ ಹಳ್ಳಿಯಲ್ಲಿ ಬಗೆಬಗೆಯ ಭಾಷೆಗಳಲ್ಲಿ ಮಕ್ಕಳ ಕಲಿತ ಕೇಳಿಸುತ್ತದೆ. ಮತ್ತು ಪ್ರತಿ ವರ್ಷ ಸಾವಿರಗಟ್ಟಳೆ ಪ್ರವಾಸಿಗಳು ಈ ಹಳ್ಳಿಗೆ ಭೆಟ್ಟಿಕೊಡುತ್ತಾರೆ.

ಈ ಹಳ್ಳಿ ಭೂತದಯೆ ಮತ್ತು ಅಂತರ್‌ರಾಷ್ಟ್ರೀಯ ಸಹಕಾರದ ಒಂದು ಅಪೂರ್ವ ಪ್ರಯೋಗವಾಗಿದೆ. ಇಲ್ಲಿ ಪೋಲಂಡ್, ಗ್ರೀಸ್, ಇಟಲಿ, ಹಂಗೇರಿ, ಫ್ರಾನ್ಸ್, ಫಿನಂಡ್, ಆಸ್ಟ್ರಿಯ, ಜರ್ಮನಿ, ಸ್ವಿಜರ್ಲಂಡ್‌ಗಳಿಂದ ಬಂದ ಸುಮಾರು ೨೨೦ ಮಕ್ಕಳು ವಾಸಿಸುತ್ತಾರೆ. ವಿವಿಧ ರಾಷ್ಟ್ರೀಯರು ಜೊತೆಯಾಗಿ ಬಾಳಲು ಅವಶ್ಯವಾದ ಸಹನೆಯಲ್ಲೂ, ಸಂಗಡವೇ ಬಾಳುವೆಗೆ ಬೇಕಾದ ಉದ್ಯೋಗಗಳಲ್ಲೂ ಇಲ್ಲಿ [illegible] ರಿಂದ ೧೮ ವರ್ಷಗಳ ವರೆಗಿನ ಮಕ್ಕಳನ್ನು ತರಬೇತುಗೊಳಿಸಲಾಗುತ್ತದೆ.

ಅದು ೧೯೪೬ ರಲ್ಲಿ ಪ್ರಾರಂಭವಾಯಿತು. ಯುದ್ಧೋದ್ಧ್ವಸ್ತ ಯುರೋಪಿನಲ್ಲೆಲ್ಲ ತಂದೆ ತಾಯಿಗಳನ್ನು ಕಳೆದುಕೊಂಡು ನಿರ್ಗತಿಕರಾದ ಮಕ್ಕಳು ಬೀದಿಗಳಲ್ಲಿ ಅಲೆಯುತ್ತಿದ್ದಾಗ ಆ ಮಕ್ಕಳಿಗೆ ಆಶ್ರಯ ಕೊಡಲೆಂದು ಈ ಹಳ್ಳಿಯ ಸ್ಥಾಪನೆಯಾಯಿತು. ೧೯೪೬ ರಲ್ಲಿ ೨೦೦ ವಿವಿಧ ದೇಶಗಳ ತಬ್ಬಲಿ ಮಕ್ಕಳನ್ನು ತಂದು ದುಃಖ ನಿರಾಶೆಗಳ ಆಳದಿಂದ ಅವರನ್ನು ಪಾರುಮಾಡಿ ಸುಖಮಯ ಗೃಹಜೀವನಕ್ಕೆ ಮರಳಿಸುವ ಉಪಕ್ರಮ ಪ್ರಾರಂಭವಾಯತು. ಅಂದಿನಿಂದ ಇಲ್ಲಿ ಸಾವಿರಕ್ಕೂ ಹೆಚ್ಚು ಮಕ್ಕಳು ಬೆಳೆದು ತಂತಮ್ಮ ದೇಶಗಳಿಗೆ ಸಾರ್ಥಕ ನಾಗರಿಕ ಜೀವನವನ್ನು ಬಾಳಲು ಮರಳಿದ್ದಾರೆ. ಒಂದೊಂದೇ ತಂಡ ಹೊರಟು ಹೋದಂತೆ ಹೊಸ ಮಕ್ಕಳು ಅವರ ಸ್ಥಳಕ್ಕೆ ಬಂದಿದ್ದಾರೆ. ಇಂದು ಯುದ್ಧದಿಂದ ತಬ್ಬಲಿಯಾದ ಮಕ್ಕಳಿಲ್ಲದಿದ್ದರೂ ದೇಶಾಂತರಗಳ ಸುಮಾರು ೨೨೦ ಮಕ್ಕಳು ಅಂತರ್‌ರಾಷ್ಟ್ರೀಯ ಸಹಜೀವನಕ್ಕೆ ತರಬೇತಿಯಾಗಲು ಇಲ್ಲಿದ್ದಾರೆ.

ಅವರು ಈ ಹಳ್ಳಿಗೆ "ಪೆಸ್ಟಲೋಜಿ" ಎಂದು ಹೆಸರಿಟ್ಟಿದ್ದಾರೆ. ೧೮ ನೇ ಶತಮಾನದಲ್ಲಿ ಸ್ವಿಜರ್ಲಂಡಿನಲ್ಲಾದ ಯುದ್ಧದಲ್ಲಿ ನಿರ್ಗತಿಕರಾದ ಮಕ್ಕಳನ್ನು ಕರೆತಂದು, ಸಲಹಿ ಅವರಿಗೆ ಶಿಕ್ಷಣವಿತ್ತ ದಯಾಳು ಶಿಕ್ಷಣಜ್ಞ ಜಾನ್ ಹೈನ್‌ರಿಕ್ ಪೆಸ್ಟಲೋಜಿಯ ಜ್ಞಾಪಕಾರ್ಥವಾಗಿ ಈ ಹೆಸರ

ನ್ನಿಡಲಾಗಿದೆ.

ಪೆಸ್ಟಲೋಜಿಯ ವೈಶಿಷ್ಟ್ಯವೆಂದರೆ ಅದು ಬಾರ್ಸ್ಟಲ್ ಸ್ಕೂಲಿನ ಹಾಗೆ ಉಡಾಳ ಮಕ್ಕಳ ಸಂಸ್ಥೆಯಲ್ಲ. ಅಣ್ಣತಮ್ಮ ಅಕ್ಕತಂಗಿ ತಂದೆ-ತಾಯಿಗಳಿಂದೊಡಗೂಡಿದ ಗೃಹ್ಯವಾತಾವರಣದಲ್ಲೇ ಮಕ್ಕಳು ಬೆಳೆಯಬೇಕೆಂಬುದು ಅದರ ಧ್ಯೇಯ. ಅದಕ್ಕಾಗಿ ಅವರನ್ನು ರಾಷ್ಟ್ರವಾರು ವಿಂಗಡಿಸಿ ಆಯಾ ರಾಷ್ಟ್ರದವರೇ ಆದ "ಗೃಹಪಿತ" ಮತ್ತು "ಗೃಹ ಮಾತೆ" ಯರ ಸಂಗಡ ಬೇರೆಬೇರೆ ಮನೆಗಳಲ್ಲಿ ಸಾಕುತ್ತಾರೆ. ಈ "ಮಾತಾಪಿತೃ" ಗಳು ಹೆಚ್ಚಾಗಿ ಮದುವೆಯಾಗಿ ಸ್ವಂತ ಮಕ್ಕಳಿರುವ ದಂಪತಿಗಳೇ ಇರುತ್ತಾರೆ. ಪೆಸ್ಟಲೋಜಿ ಮಕ್ಕಳಿಗೆ ಅವರ ಭಾಷೆಯಲ್ಲೇ— ಹೆಚ್ಚಾಗಿ ಅವರವರ ದೇಶದ ಶಿಕ್ಷಣ ಪ್ರಣಾಳಿಯನ್ನನುಸರಿಸಿಯೆ— ಶಿಕ್ಷಣ ಕೊಟ್ಟು ಪ್ರಬುದ್ಧಾವಸ್ಥೆಗೆ ಬಂದ ನಂತರ ಸ್ವದೇಶದಲ್ಲಿ ನೆಲಸುವುದಕ್ಕೆ ಅನುಕೂಲ ಮಾಡಿಕೊಡಲಾಗುತ್ತದೆ.

ಅಡಿಗೆ ಒಂದೇ ಕಡೆ ಮಾಡಿದರೂ ಊಟ ಪ್ರತ್ಯೇಕ ಪ್ರತ್ಯೇಕ ಮನೆಗಳಲ್ಲೇ ಆಗುತ್ತದೆ. ಆಯಾ ರಾಷ್ಟ್ರೀಯರ ರುಚಿಗಳಿಗನುಸಾರವಾಗಿ ಮಸಾಲೆಗಳನ್ನು ಸೇರಿಸಿಕೊಳ್ಳುವ ಅವಕಾಶವಿರುತ್ತದೆ.

ಪೆಸ್ಟಲೋಜಿಯ ಮನೆಗಳಲ್ಲಿ ಹಾಸ್ಟೆಲುಗಳಲ್ಲಿರುವಂಥ ಕಡು ಶಿಸ್ತಾಗಲಿ, ಅಪರಾಧಿ ಮಕ್ಕಳ ಸಂಸ್ಥೆಗಳಲ್ಲಿರುವಂಥ ಕಲಂಕವಾಗಲಿ ದೈಹಿಕ ಶಿಕ್ಷೆಯಾಗಲಿ ಇಲ್ಲದಿರುವುದರಿಂದ ಮಕ್ಕಳಿಗೆ ತಾವು ತಬ್ಬಲಿಗಳೆಂಬ ಭಾವನೆಯೆ ಬಾರದು. ಗೃಹ ಮಾತಾಪಿತೃಗಳ ಮಕ್ಕಳೊಡನೆ ತಾವೂ ಮನೆಯವರಾಗಿಯೆ ಅವರು ದುಡಿಯುತ್ತಾರೆ. ಸುಖಪಡುತ್ತಾರೆ.

ಪೆಸ್ಟಲೋಜಿ ಗ್ರಾಮದ ಪ್ರವರ್ತಕ ಜೂರಿಚ್‌ನ ಪತ್ರಿಕಾ ಸಂಪಾದಕ ವಾಲ್ಟರ್ ರೋಬರ್ಟ್ ಕೋರ್ಟಿ. ನಿಷ್ಪಾಪ ಮಕ್ಕಳು ಯುದ್ದದಿಂದ ದಿಕ್ಕೇಡಿಗಳಾಗಿ ಅಲೆಯುವುದನ್ನು ನೋಡಿ ಹೃದಯ ಕರಗಿದ ಅವನು ಬೆಳಕುಳ್ಳ ಭವಿಷ್ಯವನ್ನು ಈ ಮಕ್ಕಳಿಗೊದಗಿಸುವ ಹಂಬಲದಿಂದ ತನ್ನ ನಾಡವರಿಗೆ ಬಿನ್ನಹ ಮಾಡಿಕೊಂಡ. ಸ್ವಿಜರ್ಲಂಡಿನ ಮಕ್ಕಳು ಇದಕ್ಕೆ ನೆರವಾದ ರೀತಿ ಪ್ರಶಂಸಾರ್ಹವಾಗಿತ್ತು. ಅವರು ರಸ್ತೆಗಳಲ್ಲಿ ಬ್ಯಾಜುಗಳನ್ನು ಮಾರಿ, ಕಾರುಗಳನ್ನು ಪಾಲೀಸು ಮಾಡಿ, ವಿವಿಧ ವಿನೋದಗಳನ್ನೇರ್ಪಡಿಸಿ ಹಣ ಸಂಪಾದಿಸಿ ಕೊಟ್ಟರು. ೪೦ ದೇಶಗಳಿಂದ ಖಾಸಗಿ ಜನರು ಧನಸಹಾಯ ಕಳಿಸಿದರು. ಹನ್ನೊಂದು ಲಕ್ಷ ರೂಪಾಯಿ ಸಂಗ್ರಹವಾಯಿತು.

ಆಲ್ಪ್ಸ ಪರ್ವತದ ತಪ್ಪಲಿನ ಕಾನ್‌ಸ್ಟೆನ್ಸ್ ಸರೋವರ ಸಮೀಪದಲ್ಲಿರುವ ಟ್ರೋಜೆನ್ ಪಟ್ಟಣದ ನಗರ ಪಿತರು ಏಕವಾಕ್ಯತೆಯಿಂದ ಮಕ್ಕಳ ಗ್ರಾಮಕ್ಕಾಗಿ ೧೧ ಎಕರೆ ಭೂಮಿಯನ್ನು ಧರ್ಮಾರ್ಥವಾಗಿ ದಾನ ಮಾಡಿದರು. ಮನೆಗಳನ್ನು ಕಟ್ಟಲು ೧೨ ರಾಷ್ಟ್ರಗಳಿಂದ ಸ್ವಯಂಸೇವಕರು ಬಂದರು. ಜೂರಿಚ್ ನಗರದವರು ಒಂದು ಮನೆಯನ್ನು ಕಟ್ಟಿಕೊಟ್ಟರು; ಬಾಸೆಲ್‌ನವರು ಇನ್ನೊಂದನ್ನು. ಸ್ವಿಜರ್ಲಂಡಿನ ಒಬ್ಬ ಶಿಲ್ಪಿ ನಕ್ಷೆಗಳನ್ನು ತಯಾರಿಸಿಕೊಟ್ಟ. ಇಂಗ್ಲಂಡಿನಿಂದ ಕಂಬಳಿಗಳು ಬಂದವು, ಪಾಲಿಸ್ತಾನದಿಂದ ಜೇನು ಬಂತು, ಪೋಲಂಡು ಕಲ್ಲಿದ್ದಲಿ ಕೊಟ್ಟಿತು. ೧೯೪೬ ಮುಗಿಯುವುದರೊಳಗೆ ಪ್ರಥಮ ಮನೆ ಮುಗಿದು ಫ್ರಾನ್ಸಿನ ನಿರಾಶ್ರಿತ ಮಕ್ಕಳಿಗೆ ಆಶ್ರಯ ಕೊಡಲಾಯಿತು. ಒಂದೊಂದೇ ಮನೆ ಸಿದ್ಧವಾದಂತೆ ಒಂದೊಂದೇ ದೇಶದ ಆರಿಸಿದ ಮಕ್ಕಳನ್ನು ರೆಡ್‌ಕ್ರಾಸ್ ಸಂಸ್ಥೆ ಕಳಿಸಿತು.

ಮಕ್ಕಳ ಮನಸಿನ ಒಡೆದ ಕನ್ನಡಿಯನ್ನು ಬೆಸೆಯುವ ಪ್ರಯತ್ನ ಹೀಗೆ ಮೊದಲಾಯಿತು. ಪ್ರಥಮತಃ ಅದು ಸುಲಭವಾಗಿರಲಿಲ್ಲ. ಹಲ ವರ್ಷಗಳಿಂದ ಜೀವನದ ಭದ್ರತೆಯನ್ನೇ ಅರಿ

ಯದ ಮಕ್ಕಳು ಬಹಳ ದಿನ ತಮಗೆ ಬೇಕಾದುದನ್ನು ಕದ್ದು "ಬರಲಿರುವ ಕೆಟ್ಟ ದಿನ" ಗಳಿಗಾಗಿ ಅಡಗಿಸಿಡುತ್ತಿದ್ದರು. ಆಕ್ರಮಿತ ದೇಶಗಳಲ್ಲಿ ಕೂಟಯೋಧರ ಚಟುವಟಿಕೆಗಳನ್ನರಿತಿದ್ದ ಅವರು ಸೇತುವೆಗಳನ್ನು ಮದ್ದಿನಿಂದ ಸುಟ್ಟುಬಿಟ್ಟು ಆಟವಾಡುತ್ತಿದ್ದುದುಂಟು. ಒಂದು ಸಲ ನಿರ್ಗತಿಕ ಜರ್ಮನ್ ಮಕ್ಕಳು ನೆರೆಯ ಮನೆಯಲ್ಲಿ ನೆಲಸಿದಾಗ ಈಚೆ ಮನೆಯ ಪೋಲಿಶ್ ಮಕ್ಕಳು ಆ ಮನೆಗೆ ಬೆಂಕಿ ಹಚ್ಚಲು ಹೋದರು. —ಅಷ್ಟು ಪ್ರಬಲವಾಗಿತ್ತು ಪೋಲಂಡಿನವರಲ್ಲಿ ಜರ್ಮನರ ಮೇಲಿನ ದ್ವೇಷ.

ಆದರೆ ಬರಬರುತ್ತ ತಮಗೆ ದೊರೆತದ್ದು ನಿಜವಾಗಿದೆ, ತಮ್ಮ ಬಾಳು ಇಲ್ಲಿ ಸುರಕ್ಷಿತ ಎಂದು ಮನವರಿಕೆಯಾಗಿ ಈ ಮಕ್ಕಳು ತಮ್ಮ ಚಾಳಿಗಳನ್ನು ಬಿಟ್ಟು ಸಂಭಾವಿತರಾದರು. ವಿವಿಧ ಜನಾಂಗಗಳ ಮಕ್ಕಳು ನೆರೆಹೊರೆಯವರಾಗಿ ಮಿತ್ರರಾಗಿ ಬಾಳಲು ಕಲಿತರು. ಪರಸ್ಪರ ಸಂಭಾಷಣೆಗೆ ಅವರು ಆ ಪ್ರದೇಶದ ಜನರ ಭಾಷೆಯಾದ—ಜರ್ಮನನ್ನೇ ಉಪಯೋಗಿಸುತ್ತಾರೆ.

ಇಂದು ಇಲ್ಲಿ ಬರುವ ಮಕ್ಕಳು ಯುದ್ಧದಿಂದ ಗಾಯಗೊಂಡ ಮನಸ್ಸಿನವರಾಗಿಲ್ಲ. ಆ ಕಲೆಗಳೆಲ್ಲ ಮಾಯ್ದಿವೆ. ಅವರು ಹೆಚ್ಚು ಶಾಂತರೂ ಧ್ಯೇಯಯುಕ್ತರೂ ಆಗಿದ್ದಾರೆ. ಬೆಳಗ್ಗೆ ಅವರು ತಂತಮ್ಮ ಮನೆಗಳಲ್ಲೇ ಅಕ್ಷರ ವಿದ್ಯಾಭ್ಯಾಸ ಮಾಡುತ್ತಾರೆ. ಸಂಜೆ ಕಾರಖಾನೆಯಲ್ಲಿ, ಅನಂತರ ತೋಟದಲ್ಲಿ ವಿವಿಧ ರಾಷ್ಟ್ರೀಯರು ಒಟ್ಟಾಗುತ್ತಾರೆ. ಪೆಸ್ಟಲೋಜಿಯ ಪ್ರತಿಯೊಂದು ಮಗುವೂ ಒಂದು ಉದ್ಯೋಗ ಕಲಿಯಬೇಕಾಗುತ್ತದೆ. ಸಂಗೀತ, ಆಟ, ನಾಟಕ, ಕಲೆ, ಕೈಗಾರಿಕೆಗಳ ಅಂತರ್‌ರಾಷ್ಟ್ರೀಯ "ಭಾಷೆ"ಯನ್ನವರು ಅಭ್ಯಸಿಸುತ್ತಾರೆ. ನೆರೆಯ ಟ್ರೋಜೆನ್ ಪಟ್ಟಣದ ಶಾಲೆಗಳಲ್ಲೂ ಅವರು ಪಾಠ ಹೇಳಿಸಿಕೊಳ್ಳುವುದುಂಟು. ತಮ್ಮ ಆರಿಸಿದ ಉದ್ಯೋಗದಲ್ಲಿ ಪರಿಣತಿ ಹೊಂದಿದ ಮೇಲೆ ಅವರಿಗೆ ಸ್ವದೇಶದಲ್ಲಿ ಕೆಲಸ ದೊರಕಿಸಿ ಕೊಡುವ ವ್ಯವಸ್ಥೆಯೂ ಇದೆ.

ಸ್ವಿಜರ್ಲಂಡಿನ ಈ ಮಕ್ಕಳ ಹಳ್ಳಿಯ ಯಶಸ್ಸು ಸಮಾಜ ಸೇವಕರಿಗೆ ಹೊಸ ಸ್ಫೂರ್ತಿಯನ್ನಿತ್ತಿದೆ. ೧೯೫೯ ರಲ್ಲಿ ಅದರ ಮಾದರಿಯಲ್ಲೇ ಇಂಗ್ಲಂಡಿನ ಸಸೆಕ್ಸಿನಲ್ಲಿ ಎರಡನೇ ಪೆಸ್ಟಲೋಜಿ ಗ್ರಾಮವೊಂದು ಪ್ರಾರಂಭವಾಯಿತು. "ಒಂದು ದೀಪ ಇನ್ನೊಂದನ್ನು ಬೆಳಗುತ್ತದೆ; ತಾನು ಕುಂದುವುದೂ ಇಲ್ಲ." ★



ಅಪಘಾತಗಳಿಗೆ ಎಲ್ಲೆಲ್ಲಿಯೂ ಮಕ್ಕಳು ತುತ್ತಾಗುವುದೇ ಜಾಸ್ತಿ. ಮಕ್ಕಳ ಬಗ್ಗೆ ವಾಹನಗಳಿಗೆ ಎಚ್ಚರಿಕೆ ಕೊಡಲು ಎಲ್ಲೆಡೆ ಬೋರ್ಡು ಹಾಕಿದ ಹಾಗೆ ಮೆಕ್ಸಿಕೊ ನಗರದ ಒಂದು ಕತ್ತರಿ ರಸ್ತೆಯಲ್ಲಿ ಮೋಟಾರು ಓಡಿಸುವವರನ್ನು ಕುರಿತು ಈ ಫಲಕವನ್ನು ಹಾಕಲಾಗಿತ್ತು: "ಸ್ಕೂಲ್‌ಕ್ಷೇತ್ರ—ಯಾವ ಮಕ್ಕಳನ್ನೂ ಕೊಲೆ ಮಾಡಬೇಡಿ!" ಮರುದಿನ ಅದರ ಕೆಳಗೆ ಬಾಲ ಲಿಪಿಯಲ್ಲಿ ಈ ಕುಂಟುಪಂತಿಯೊಂದು ಬರೆಯಲ್ಪಟ್ಟಿತ್ತು:

"ಮಾಸ್ತರರು ಬರುವವರೆಗೆ ಕಾಯಿರಿ!"

ಪ್ರಥಮ ವರ್ಗದ ಭಾರತೀಯ ವಿಜ್ಞಾನ ಪದವೀಧರರು ವಿದೇಶಗಳಲ್ಲಿ ವಸತಿ ಮಾಡುತ್ತಿರುವಾಗ ಪಳಗಿದ ಪಾಶ್ಚಾತ್ಯ ವಿಜ್ಞಾನಿಯೊಬ್ಬ ಭಾರತದಲ್ಲಿ ಆಶ್ರಯ ಹೊಂದಿದ್ದಾರೆ

ಭಾರತೀಯನಾದ ಬ್ರಿಟಿಶ್ ವಿಜ್ಞಾನಿ

ಪಾವೆಂ

೧೯೫೫ ರಲ್ಲಿ ಬ್ರಿಟನ್ನಿನ "ರ್‍ಯಾಶನಲಿಸ್ಟ್" ಪತ್ರಿಕೆಯಲ್ಲಿ ಒಂದು ಲೇಖ ಪ್ರಕಟವಾಯಿತು. ಅದರಲ್ಲಿ ಲೇಖಕ ಇಂಗ್ಲಂಡನ್ನು "ಶುದ್ಧ ಗುಲಾಮ ರಾಷ್ಟ್ರ" ಎಂದು ಖಂಡಿಸಿದ್ದ. ಅನಂತರ ಆತ ಜಗತ್ತಿನ ಸುತ್ತೆಲ್ಲ ಕಣ್ಣು ಹಾಯಿಸಿ. ನಿಜವಾದ "ಸ್ವತಂತ್ರ" ರಾಷ್ಟ್ರವೆಲ್ಲಿದೆ ಎಂದು ಚರ್ಚಿಸಿದ್ದ. ಬೇರಾವುದೂ ಅಷ್ಟು ಸ್ವತಂತ್ರವಾಗಿದ್ದಂತೆ ಅವನಿಗೆ ಅನಿಸಲಿಲ್ಲ. ಮಾನಸಿಕವಾಗಿ, ಬೌದ್ಧಿಕವಾಗಿ, ಭೌತಿಕವಾಗಿ ನಿಜವಾದ ಸ್ವಾತಂತ್ರ್ಯವುಳ್ಳ ದೇಶವೆಂದರೆ ಭಾರತ ಮಾತ್ರ— ಎಂಬ ತೀರ್ಮಾನಕ್ಕೆ ಆತ ಬಂದಿದ್ದ. ಹೀಗಾಗಿ ಆತ ತನ್ನ ಮಾತೃಭೂಮಿಯಾಗಿದ್ದ ಬ್ರಿಟನನ್ನು ತೊರೆದು ಭಾರತಕ್ಕೆ ಹೋಗಲು ನಿಶ್ಚಯ ಮಾಡಿದ ಮತ್ತು ಸಾಧ್ಯವಾದರೆ ಭಾರತದ ನಾಗರಿಕನಾಗಿ ಸಾಯುವ ಅಪೇಕ್ಷೆಯನ್ನು ಬಹಿರಂಗಪಡಿಸಿದ.


ಈ ಲೇಖಕ ಸಾಮಾನ್ಯನಾಗಿರಲಿಲ್ಲ. ಜಗತ್ತಿನ ಪ್ರಥಮ ವರ್ಗದ ವಿಜ್ಞಾನಿಗಳ ಸಾಲಿನಲ್ಲಿ ಸೇರಿದ ಪ್ರೊಫೆಸರ್ ಜೆ. ಬಿ. ಎಸ್. ಹ್ಯಾಲ್ಡೇನರು ಅದೇ ವರ್ಷ ಭಾರತಕ್ಕೆ ಬಂದು ಕಲಕತ್ತೆಯಲ್ಲಿ ನೆಲಸಿ ತಮ್ಮ ಅಪೇಕ್ಷೆಯನ್ನು ಪೂರ್ತಿ ಮಾಡಿಕೊಂಡರು. ಕಲಕತ್ತೆಯಲ್ಲಿ ಪ್ರೊಫೆಸರ್ ಮಹಾಲನೊಬೀಸರ ಅಂಕಿ-ಸಂಖ್ಯಾಶಾಸ್ತ್ರ ಸಂಸ್ಥೆಗೆ ಅವರು ಸೇರಿದಾಗ ಭಾರತವು ಅನೇಕ ವಿಷಯಗಳಲ್ಲಿ ಅಪ್ರತಿಮನಾದ ಒಬ್ಬ ನಾಗರಿಕನನ್ನು ಸಂಪಾದಿಸಿದಂತಾಯಿತು.

ಪ್ರೊಫೆಸರ್ ಹ್ಯಾಲ್ಡೇನರು ಜೀವಶಾಸ್ತ್ರದಲ್ಲಿ ಅಪೂರ್ವ ಪ್ರತಿಭೆಯ ವ್ಯಕ್ತಿ : ಅವರು ಸಂಶೋಧನೆಗಳನ್ನು ಮಾಡಿ ಬರೆದ ವೈಜ್ಞಾನಿಕ ಲೇಖಗಳ ಸಂಖ್ಯೆ ಇನ್ನೂರು ಮೀರಿದೆ. ಪ್ರತಿಭಾಶಾಲಿ ವಿಜ್ಞಾನಿಗಳೂ ಜನಪ್ರಿಯ ವೈಜ್ಞಾನಿಕ ಲೇಖಕರೂ ಏಕಕಾಲದಲ್ಲಿ ಆಗಿರುವ ವ್ಯಕ್ತಿಗಳು ಇಲ್ಲವೆನ್ನುವಷ್ಟು ವಿರಳರು ; ಪ್ರೊಫೆಸರ್ ಹ್ಯಾಲ್ಡೇನರು ಅಂಥವರಲ್ಲೊಬ್ಬರು. ಅವರು ಬರೆದ ಪುಸ್ತಕಗಳ ಸಂಖ್ಯೆ ಇಪ್ಪತ್ತಕ್ಕೂ ಮೀರಿದೆ. ವಿಜ್ಞಾನದ ಜಟಿಲ ಸಮಸ್ಯೆಗಳನ್ನು ತಾಂತ್ರಿಕ ಭಾಷೆಯಲ್ಲಿ ಎಷ್ಟು ಸೂಕ್ಷ್ಮವಾಗಿ ವಿವೇಚಿಸಬಲ್ಲರೋ ಅಷ್ಟೇ ನಿರಾಯಾಸವಾಗಿ ಅವರು ವಿಜ್ಞಾನ ವಿಷಯಗಳನ್ನು ತಿಳಿಯಾದ ಮಾತಿನಲ್ಲಿ ವಿವರಿಸಬಲ್ಲರು. ಅವರು ಸರಳ ಶೈಲಿಯಲ್ಲಿ ಎಷ್ಟು ಎತ್ತಿದ ಕೈಯೆಂದರೆ ಮಕ್ಕಳಿಗಾಗಿ ಕಥೆಗಳನ್ನೂ ಬರೆದಿದ್ದಾರೆ.

ಪ್ರೊಫೆಸರ್ ಹ್ಯಾಲ್ಡೇನರ ಪ್ರತಿಭೆ ಎಷ್ಟು ಬಹುಮುಖವಾದುದೆಂದರೆ ಅವರು ಬರೆದ ಲೇಖಗಳು ಅವರ ವಿಶೇಷ ಅಭ್ಯಾಸ ವಿಷಯವಾದ ಜೀವಶಾಸ್ತ್ರ ಮತ್ತು ಅದರ ಅಂಗಗಳಿಗಷ್ಟೇ ಅಲ್ಲ ಗಣಿತ, ಭೌತಶಾಸ್ತ್ರ ಮೊದಲಾದ ಹಲವು ವಿಜ್ಞಾನಗಳಿಗೆ ಸಂಬಂಧಪಟ್ಟಿವೆ. ಆದರೆ ಅವರ ವಿಜ್ಞಾನಕ್ಕಿಂತಲೂ ಸ್ವಾರಸ್ಯವಾಗಿರುವುದು ಅವರ ಜೀವನ.

ಪ್ರೊ. ಜಾನ್ ಬರ್ಡನ್ ಸ್ಯಾಂಡರ್‌ಸನ್

ಹ್ಯಾಲ್ಡೇನರು ೧೮೯೨ ನವೆಂಬರದಲ್ಲಿ ಇಂಗ್ಲಂಡಿನಲ್ಲಿ ಹುಟ್ಟಿದರು. ಅವರ ತಂದೆ ಪ್ರೊ. ಜೆ. ಎಸ್. ಹ್ಯಾಲ್ಡೇನರು ಶರೀರ ಶಾಸ್ತ್ರದ ಪ್ರಮುಖ ಪಂಡಿತರಾಗಿದ್ದರು. ತಂದೆ ಹ್ಯಾಲ್ಡೇನರಿಂದಲೇ ಮಗ ಹ್ಯಾಲ್ಡೇನರು ತಮ್ಮ ಅನೇಕ ವೈಶಿಷ್ಟ್ಯಗಳನ್ನು ಪಡೆದಿದ್ದಾರೆನ್ನಬಹುದು. ಯಾವುದನ್ನೂ ಪರೀಕ್ಷಿಸದೆ ಒಪ್ಪಿಕೊಳ್ಳದ ಮಗ ಹ್ಯಾಲ್ಡೇನರು ಯಾವುದಾದರೂ ವಿಷಯದಲ್ಲಿ ಸಂಶಯ ಬಂದರೆ "ನಾಯಿಯ ಮೇಲೆ ಪ್ರಯೋಗ ಮಾಡಿ ನೋಡುವಾ" ಎಂದು ಹೇಳುತ್ತಿರುತ್ತಾರೆ. ಈ "ನಾಯಿ" ಮತ್ತಾರೂ ಆಗಿರದೆ ಸ್ವತಃ ಜೆ. ಬಿ. ಎಸ್. ರೇ ಆಗಿರುವುದು ಹೆಚ್ಚು. ಅವರು ಅನೇಕ ಅಪಾಯಕರ ಪ್ರಯೋಗಗಳನ್ನು ತಮ್ಮ ಮೇಲೆಯೆ ಮಾಡಿಕೊಂಡು ಜನಸಾಮಾನ್ಯಕ್ಕೆ ಉಪಕಾರ ಮಾಡಿದ್ದಾರೆ. "ನಾಯಿಯ" ಮೇಲೆ ಪ್ರಯೋಗ ಮಾಡುವುದನ್ನು ಅವರ ತಂದೆಯೆ ಅವರಿಗೆ ಕಲಿಸಿದರು.



ಹ್ಯಾಲ್ಡೇನರು ಮೂರು ವರ್ಷದ ಮಗುವಾಗಿದ್ದಾಗ ಅವರ ತಂದೆ ರಕ್ತದ ಬಗ್ಗೆ ಸಂಶೋಧನೆ ಮಾಡುವುದಕ್ಕಾಗಿ ಅವರ ರಕ್ತವನ್ನೇ ತೆಗೆದುಕೊಂಡು ವಿಶ್ಲೇಷಿಸುತ್ತಿದ್ದರು. ಮಗನಿಗೆ ಎಂಟು ವರ್ಷವಾಗಿದ್ದಾಗ ದೇಶದ ಕಲ್ಲಿದ್ದಲಿ ಗಣಿಗಳಲ್ಲಿನ ಹೊಲಸು ಅನಿಲಗಳಿಂದ ಕೆಲಸಗಾರರ ಮೇಲಾಗುವ ಪರಿಣಾಮವನ್ನು ಅಭ್ಯಸಿಸುತ್ತಿದ್ದ ತಂದೆ ಹ್ಯಾಲ್ಡೇನರು ಅವರನ್ನು ಒಂದು ಬಕೀಟಿನಲ್ಲಿ ಕಲ್ಲಿದ್ದಲಿ ಗಣಿಯೊಳಗಿಳಿಸಿ ಅದರ ಛತ್ತಿನ ಹತ್ತಿರ ನಿಂತು ಕವಿತಾಪಠನ ಮಾಡಲು ಹೇಳಿದರು. ಆಗಲೇ ಕಾವ್ಯನಾಟಕಗಳನ್ನು ಸಾಕಷ್ಟು ಅರಗಿಸಿಕೊಂಡಿದ್ದ ಹುಡುಗ ಶೇಕ್ಸ್‌ಪಿಯರನ "ಜೂಲಿಯಸ್ ಸೀಜರ್" ನಾಟಕದಿಂದ ಮಾರ್ಕ್ ಆಂಥನಿಯ ಭಾಷಣದ ಪಂಕ್ತಿಗಳನ್ನು ಉಚ್ಚರಿಸತೊಡಗಿದರು. "ಆದರೆ The evils that men do (೩ ನೇ ಪಂಕ್ತಿ) ಎಂಬಲ್ಲಿಗೆ ಬರುವ ಹೊತ್ತಿಗೆ ನಾನು ಮೂರ್ಛೆ ಹೋದೆ.. ಇದರಿಂದ ನನಗೆ Fire damp ಬಗ್ಗೆ ತುಂಬ ತಿಳಿವಳಿಕೆ ಬಂತು" ಎನ್ನುತ್ತಾರವರು. ಆದರೆ ಈ ಪರಿಶೀಲನೆಯ ಫಲವಾಗಿ ಜಗತ್ತಿನ ಗಣಿ ಕೆಲಸಗಾರರೆಲ್ಲರೂ ಋಣಿಯಾಗಿರಬೇಕಾದ ಗಣಿ ಸುಧಾರಣೆಗಳಾದವು.

ಮಗನ ಹದಿಮೂರನೇ ವಯಸ್ಸಿನಲ್ಲಿ ತಂದೆ ಹ್ಯಾಲ್ಡೇನರು, ಯಾರು ಬೇಕಾದರೂ ತರಬೇತಿಯಿಲ್ಲದೆ ೪೦ ಅಡಿಯವರೆಗೆ ಸಮುದ್ರದಲ್ಲಿ ಮುಳುಗು ಹಾಕಬಲ್ಲರು ಎಂದು ಸಾಧಿಸಿ, ನಾವಿಕರಿಗೆ ಸುದೀರ್ಘ ತರಬೇತಿ ಕೊಡುತ್ತಿದ್ದ ಬ್ರಿಟಿಶ್ ನೌಕಾಪಡೆಯೊಡನೆ ವಿವಾದ ಹೂಡಿ, "ತಗೊಳ್ಳಿ, ಈತ ನನ್ನ ಮಗ. ಅವನನ್ನು ಸಮುದ್ರಕ್ಕೆ ಒಗೆಯಿರಿ" ಎಂದು ಛಲ ಹೂಡಿದರು. ಒಗೆದದ್ದೂ ಆಯಿತು. "ನಾನು ತಳವನ್ನೇನೋ ಕಂಡೆ. ಆದರೆ ಮುಳುಗುವ ಸೂಟು ನನಗೆ ತೀರ ದೊಡ್ಡದಾದ್ದರಿಂದ ಒಳಗೆ ನೀರು ಹೊಕ್ಕು ತುಂಬಿಬಿಟ್ಟಿತು" ಎಂದು ಆ ಮೇಲೆ ಈ ಮಾನವ "ನಾಯಿ" ಹೇಳಿತು.

ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

ದಂತಕ್ಷಯವನ್ನು ಇದಿರಿಸಿರಿ !



ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒಮ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟು ಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.

ಊಟವಾದೊಡನೆ ಕಾಲ್ಗೇಟನಿಂದ ಹಲ್ಲುಜ್ಜುವುದರಿಂದ ದಂತಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ ಕಾಲ್ಗೇಟನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ!

ಊಟವಾದ ಮೇಲೆ ಬರೀ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು—ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟನಿಂದ ಉಜ್ಜಿರಿ. ಇದರ ಪ್ರಬಲವಾದ ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಆ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.

ಮಕ್ಕಳಿಗೆ ಕಾಲ್ಗೇಟನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ. ದೀರ್ಘಕಾಲ ಉಳಿಯುವ ಅದರ ಸ್ವಚ್ಛಕ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.

ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ... ಒಂದು ಡಬ್ಬ ಹಲವು ತಿಂಗಳುಗಳವರೆಗೆ ಸಾಕಾಗುವುದು.

ಕಾಲ್ಗೇಟನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✔ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✔ ದಂತಕ್ಷಯವನ್ನು ವಿರೋಧಿಸಲಾಗುವುದು
- ✔ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು



ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು... ಹೆಚ್ಚಿಗೆ ಜನರು ಪ್ರಪಂಚದ ಇತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

ತಂದೆ-ಮಕ್ಕಳ ಈ ಅಪಾಯಕರ ಸ್ವಯಂ-ಪ್ರಯೋಗಕ್ಕೆ ಕಳಸವಿಟ್ಟಂತೆ, ತಂದೆ ಪುಪ್ಪುಸ ಜ್ವರದಿಂದ ಸಾಯುತ್ತಿರುವಾಗಲೂ ಅವರು ಪರಸ್ಪರ ರಕ್ತನಾಳಗಳನ್ನು ಜೋಡಿಸಿಕೊಂಡು ರಕ್ತ ವಿನಿಮಯದ ಪ್ರಯೋಗ ಮಾಡಿದರು!

ಪ್ರಥಮ ಮಹಾಯುದ್ಧ ಪ್ರಾರಂಭವಾದಾಗ ಈಟನ್‌ನಲ್ಲಿ ಕಲಿಯುತ್ತಿದ್ದ ಜೆ. ಬಿ. ಎಸ್. ಹ್ಯಾಲ್ಡೇನರು ಸೈನ್ಯ ಸೇರಿ ಯುದ್ಧಕ್ಕೆ ಹೋಗಿ ಗಾಯಗೊಂಡರು. ಅನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅವರ ಉಜ್ವಲ ವಿದ್ಯಾರ್ಥಿ ದಶೆ ಕಳೆಯಿತು. ಕೇಂಬ್ರಿಜ್‌ನಲ್ಲಿ ಜೀವ ರಸಾಯನ ಶಾಸ್ತ್ರ (ಬಾಯೋ-ಕೆಮಿಸ್ಟ್ರಿ) ದ ರೀಡರರಾಗಿ ಸೇರಿದ ಅವರಿಗೆ ಬಲು ಬೇಗ ವೈಜ್ಞಾನಿಕ ಪ್ರಶಸ್ತಿ ಸಿಕ್ಕಿತು. ರಾಯಲ್ ಇನ್‌ಸ್ಟಿಟ್ಯೂಟಿನಲ್ಲಿ ಶರೀರ ಶಾಸ್ತ್ರದ ಪ್ರೊಫೆಸರರಾಗಿ, ಲಂಡನ್ ವಿಶ್ವವಿದ್ಯಾಲಯದಲ್ಲಿ ಸಂತತಿ ಶಾಸ್ತ್ರ (ಜೆನೆಟಿಕ್ಸ್) ದ ಪ್ರೊಫೆಸರರಾಗಿ, ಸಂತತಿ ಶಾಸ್ತ್ರ ಸಂಘದ ಅಧ್ಯಕ್ಷರಾಗಿ, ಅನೇಕ ವಿಶ್ವವಿದ್ಯಾಲಯಗಳ ಪ್ರಪ್ರಮುಖ ಸದಸ್ಯರಾಗಿ ಬೆಳಗಿದರು.

ತಮ್ಮ ನಿರಂತರ ಶಿಕ್ಷಣ ಮತ್ತು ಸಂಶೋಧನ ಜೀವನದ ನಡುವೆಯೂ ಅವರು ತಮ್ಮ ಅಪಾಯಕರ ಆತ್ಮಪ್ರಯೋಗಗಳನ್ನು ಸಾಗಿಸಿಯೇ ಇದ್ದರು. ಅವರ ಕುತೂಹಲಕ್ಕೆ ಮಿತಿಯಿಲ್ಲ. ೧೯೩೯ ರಲ್ಲಿ "ಥೆಟಿಸ್" ಎಂಬ ಬ್ರಿಟಿಶ್ ಸಬ್‌ಮೆರೀನ್ ಮುಳುಗಿದಾಗ ೯೧ ಜನ ಪ್ರಾಣ ನೀಗಿದರು. ಸಾಯುವಾಗ ಅವರಿಗೆ ಕಷ್ಟವಾಯಿತೆ? ಎಂಬ ಪ್ರಶ್ನೆ ಪ್ರೊಫೆಸರರನ್ನು ಪ್ರಚೋದಿಸಿತು. ಅವರು ೧೯೨ ಘನ ಅಡಿ ಅವಕಾಶವುಳ್ಳ ಒಂದು ಮೊಹರ್ ಬಂದ್ ಪೆಟಿನಲ್ಲಿ ೧೪ ತಾಸಿಗಿಂತಲೂ ಹೆಚ್ಚು ಕಾಲ ಕುಳಿತು ತಮಗೆ ಆದದ್ದನ್ನೆಲ್ಲ ಬರೆದುಕೊಂಡರು. ಸಬ್‌ಮೆರೀನ್‌ನಲ್ಲಿ ಸತ್ತವರು ಯಾತನೆಯಿಲ್ಲದೆ ಸತ್ತರು ಎಂದು ಅವರು ಆ ಮೇಲೆ ನಿರ್ಣಯ ಕೊಟ್ಟು ಸತ್ತವರ ಬಂಧು ಬಾಂಧವರಿಗೆ ಆ ಮಟ್ಟಿಗೆ ಸಮಾಧಾನವಾಗುವಂತೆ ಮಾಡಿದರು. ಯುದ್ಧದಂಥ ಅಪಾಯಕರ ಸನ್ನಿವೇಶದಲ್ಲೂ ಅವರ ಶೋಧಕ ಬುದ್ಧಿ ಸುಮ್ಮನಿರುವುದಿಲ್ಲ. ಸ್ಪೈನಿನ ಯಾದವೀ ಯುದ್ಧದಲ್ಲಿ ಫ್ರಾಂಕೋನ ವಿರುದ್ಧ ಹೋರಾಡಲು ಹೋದ ಅವರು ಸುತ್ತಲೂ ಬಾಂಬುಗಳು ಸಿಡಿಯುತ್ತಿದ್ದಾಗ, ತಾವು ಅವಿತಿದ್ದ ಕಂದಕದಲ್ಲಿ ಬೆಳೆಯುವ ಒಂದು ತರಹದ ಸವತೆ ಗಿಡಗಳ ಸಂತತಿಶಾಸ್ತ್ರೀಯ ವೈಶಿಷ್ಟ್ಯಗಳ ಅಭ್ಯಾಸದಲ್ಲಿ ತಲ್ಲಿನರಾಗಿದ್ದರು.

ವೈದ್ಯಕೀಯ ಸಂಶೋಧಕರಿಗೆ ಹ್ಯಾಲ್ಡೇನರು "ಗಿನಿ ಪಿಗ್" ಆಗಿ ತಮ್ಮನ್ನೇ ಕೊಟ್ಟುಕೊಂಡದ್ದುಂಟು. ಬಾಲಗ್ರಹಕ್ಕೊಂದು ಪರಿಹಾರ ಹುಡುಕುವ ಸಲುವಾಗಿ ಅವರು ತಮ್ಮ ಕೈಕಾಲು ಮುಖಗಳಿಗೆ ನಡುಕವುಂಟುಮಾಡುವ ವಿಷ ಸೇವಿಸಿ ಒಂದೂವರೆ ತಾಸು ಯಾತನೆಯನ್ನು ಅನುಭವಿಸಿದರು. ಮಧುಮೇಹ ರೋಗದ ಸಂಶೋಧನೆ ನಡೆಸುವ ಸಲುವಾಗಿ ಸೆಂಟ್ ಬಾರ್ಥೆಲೋಮಿಯೊ ಆಸ್ಪತ್ರೆಯಲ್ಲಿ ಹ್ಯಾಲ್ಡೇನರು ತಮ್ಮ ರಕ್ತವೂ ಮಧುಮೇಹ ಪೀಡಿತರ ರಕ್ತದಂತೆ ಆಮ್ಲೀಕೃತವಾಗುವಂತೆ ಔಷಧ ಸೇವಿಸಿ ತಮ್ಮ ರಕ್ತ ಪರೀಕ್ಷೆ ಮಾಡಲು ಅವಕಾಶವಿತ್ತರು. ಧನುರ್ವಾತ ರೋಗಕ್ಕೆ ಅಮೋನಿಯಂ ಕ್ಲೋರೈಡ್ ಫಲಕಾರಿಯಾದೀತೇ ಎಂದು ಪರೀಕ್ಷಿಸಲು ಒಮ್ಮೆ ಅವರು ಒಂದು ಔನ್ಸಿನಷ್ಟು ಆ ದ್ರವ್ಯವನ್ನು ತಿಂದರು.

ಪ್ರೊಫೆಸರ್ ಜೆ ಬಿ. ಎಸ್. ಹ್ಯಾಲ್ಡೇನರು ಭಾರಿ ಧಾಂಡಿಗವ್ಯಕ್ತಿ. ಪೊದರಿನಂಥ ಹುಬ್ಬುಗಳು ಕೆಳಗೆ ಜೋಲುತ್ತ ಅವರ ಕಣ್ಣುಗಳನ್ನು ಮುಚ್ಚುತ್ತವೆ. ಅವರ ಮೀಸೆಯ ಎಡೆಯಲ್ಲಿ ಕಿರುನಗೆ ಮಿಂಚುತ್ತಿರುತ್ತದೆ. ಆದರೆ ಈ ನಗೆಯನ್ನು ನಂಬಿ ನೀವು ಅವರನ್ನು ಅಜಾಗ್ರತೆಯಿಂದ ಸಮೀಪಿಸಿದಿರೋ, ಕೆಟ್ಟಿರಿ. ಅವರೊಡನೆ ಹೊಂದಿಕೊಳ್ಳುವುದು ಬಲು ಕಷ್ಟ. ಅವರು ಹೇಳಲಾರದಷ್ಟು ಒರಟುತನವನ್ನು ಪ್ರದರ್ಶಿಸುತ್ತಾರೆ. ಅವರ

ಸಿಟ್ಟು ಮೂಗಿನ ತುದಿಯಲ್ಲೇ ಇರುತ್ತದೆ. ಅವರು ತಮ್ಮ ಅಸಂಖ್ಯ ಸಮಾನಿಕರನ್ನು ಬಹಿರಂಗವಾಗಿ ಅವಮಾನಿಸಿದ್ದಾರೆ, ತಮ್ಮ ಕೈಕೆಳಗಿನವರಿಗೆ ಕಣ್ಣೀರು ಬರುವಂತೆ ಅವರ ಮೇಲೆ ಹರಿಹಾಯ್ದಿದ್ದಾರೆ. ಹ್ಯಾಲ್ಡೇನರೊಡನೆ ವ್ಯವಹರಿಸಲು ಒಂದೇ ಸರಿಯಾದ ದಾರಿಯಿದೆ—ಅದೆಂದರೆ ವಕೀಲರ ಮೂಲಕ ಎಂದೊಬ್ಬರು ಹೇಳಿದ್ದುಂಟು.

ಭಾರತಕ್ಕೆ ಬಂದ ನಂತರ ಹ್ಯಾಲ್ಡೇನರು ತಮ್ಮ ಸ್ವಭಾವ ವೈಚಿತ್ರ್ಯಕ್ಕೆ ಇನ್ನೊಂದು ಬಣ್ಣದ ಗರಿಯನ್ನು ಸಿಕ್ಕಿಸಿಕೊಂಡಿದ್ದಾರೆ. ಅದೆಂದರೆ ಉಪವಾಸಾಸ್ತ್ರ. ಈಚೆಗೆ ಅವರು ಈ ಅಸ್ತ್ರವನ್ನು ಭಾರತದಲ್ಲಿರುವ ಅಮೇರಿಕನ್ ರಾಯಭಾರದ ವಿರುದ್ಧ ಪ್ರಯೋಗಿಸಿದರು. ಇಲ್ಲಿಗೆ ಬಂದ ಇಬ್ಬರು ಅಮೇರಿಕನ್ ವಿಜ್ಞಾನಿಗಳನ್ನು ತಮ್ಮಲ್ಲಿಗೆ ಭೋಜನಕ್ಕೆ ಬಾರದಂತೆ ಅಮೇರಿಕನ್ ಅಧಿಕಾರಿಗಳು ತಡೆದರೆಂಬುದಕ್ಕಾಗಿ ಪ್ರೊ. ಹ್ಯಾಲ್ಡೇನ್ ಒಂದು ವಾರದ ಉಪವಾಸ ಮಾಡಿದರು. ಹ್ಯಾಲ್ಡೇನರು ಹಿಂದೊಮ್ಮೆ ಕಮ್ಯುನಿಸ್ಟರಾಗಿದ್ದರೆಂಬುದರಿಂದ ಅಮೇರಿಕನ್ ರಾಯಭಾರದವರು ಹೀಗೆ ಅಡ್ಡಗಾಲು ಹಾಕಿರಬೇಕೆಂಬ ಹ್ಯಾಲ್ಡೇನರ ಸಂಶಯ ಸರಿಯೋ ತಪ್ಪೋ ದೇವರೇ ಬಲ್ಲ. ಅಂತೂ ಅಮೇರಿಕನ್ ರಾಯಭಾರದವರು ಅವಸರದಿಂದ ವಿವರಣೆ ಕೊಡುವ ಪ್ರಸಂಗ ಬರುವಷ್ಟು ಗಲಾಟೆ ಇದರಿಂದಾಯಿತು. ಆದರೆ ಉಪವಾಸಾಸ್ತ್ರವನ್ನು ಅವರು ಪರರ ಆತ್ಮಶುದ್ಧಿಗಾಗಿ ಮಾತ್ರ ಉಪಯೋಗಿಸುತ್ತಾರೆಂದಲ್ಲ. ೧೯೫೫ ರಲ್ಲಿ ಅವರು ಮೊದಲು ಈ ದೇಶಕ್ಕೆ ಬಂದಾಗ ಒಬ್ಬ ಪತ್ರಿಕೋದ್ಯಮಿಯನ್ನು ಭಯಂಕರವಾಗಿ ಅವಮಾನಿಸಿ ಪ್ರಾಯಶ್ಚಿತ್ತಾರ್ಥವಾಗಿ ಒಂದು ವಾರ ತಾವೇ ಉಪವಾಸ ಮಾಡಿದರು.

ಹ್ಯಾಲ್ಡೇನರ ಜೀವಮಾನವೆಲ್ಲ ಹೋರಾಟದಿಂದ ತುಂಬಿದೆ. ಅವರು ಆಕ್ಸ್‌ಫರ್ಡಿನಲ್ಲಿ ರೀಡರರಾಗಿದ್ದಾಗ ಅವರ ಸಂದರ್ಶನ ತೆಗೆದುಕೊಳ್ಳಲು ಬಂದಿದ್ದ ವಿವಾಹಿತ ಪತ್ರಿಕೋದ್ಯಮಿಯೊಬ್ಬಳೊಡನೆ ಅವರು ಪ್ರೇಮ ಸಂಬಂಧ ಬೆಳೆಸಿದರೆಂದು ಅವಳ ಗಂಡ ವಿವಾಹ ವಿಚ್ಛೇದದ ದಾವೆ ತಂದ. ಈ ಪ್ರಸಂಗದಿಂದಾಗಿ ವಿಶ್ವವಿದ್ಯಾಲಯವು ಅವರನ್ನು ಕೆಲಸದಿಂದ ಕಿತ್ತುಹಾಕಿತು. ಪ್ರೊಫೆಸರನ ಸ್ವಂತ ನೀತಿಗೂ ವಿಶ್ವವಿದ್ಯಾಲಯಕ್ಕೂ ಏನು ಸಂಬಂಧ? ಎಂದು ಹ್ಯಾಲ್ಡೇನರು ನ್ಯಾಯಾಲಯಕ್ಕೆ ಹೋದರು, ಗೆದ್ದರು.

ರಾಜಕೀಯ ರಂಗದಲ್ಲಿಯೂ ಅವರು ಹೋರಾಡಿದರು. ಮೊದಲೇ ಅ-ಜನಪ್ರಿಯರಾದ ಅವರು ತಮ್ಮ ಸಮಾಜವಾದದ ದೆಸೆಯಿಂದ ಇನ್ನಷ್ಟು ಅ-ಜನಪ್ರಿಯರಾದರು. ಅವರ ಸುಲಭ ವೈಜ್ಞಾನಿಕ ಲೇಖನಗಳನ್ನು ಪತ್ರಿಕೆಗಳು ಪ್ರಕಟಿಸಲು ಹಿಂಜರಿದಾಗ ಕಮ್ಯುನಿಸ್ಟ್ ದಿನ ಪತ್ರಿಕೆಯಾದ "ಡೇಲಿ ವರ್ಕರ್" ನಲ್ಲಿ ಅವು ಪ್ರಕಟವಾಗತೊಡಗಿದವು. ಕೆಲಕಾಲಾನಂತರ ಅವರು ಪಕ್ಷದ ಸದಸ್ಯರೇ ಆಗಿ ಆ ಪತ್ರಿಕೆಯ ಸಂಪಾದಕ ಮಂಡಲದ ಅಧ್ಯಕ್ಷರಾದರು. ಇದರಿಂದ ಅಮೇರಿಕದಲ್ಲಿ ಅವರ ಅ-ಜನಪ್ರಿಯತೆಗೆ ಸೀಮೆಯೇ ಉಳಿಯಲಿಲ್ಲ. ಎಷ್ಟು ಮಟ್ಟಿಗೆಂದರೆ ಅಮೇರಿಕದ ಯಾವುದೇ ವಿಜ್ಞಾನ ವಿಶ್ವಕೋಶದಲ್ಲಿ—ಬ್ರಿಟಿಶ್ ಎನ್‌ಸೈಕ್ಲೋಪೀಡಿಯದಲ್ಲಿ ಕೂಡ—ತಪ್ಪಿಯೂ ಅವರ ಹೆಸರಿನ ಉಲ್ಲೇಖವಿಲ್ಲ.

ಆದರೆ ಸ್ವತಂತ್ರ ವಿಚಾರದವರಾದ ಅವರು ಬಹುಕಾಲ ಕಮ್ಯುನಿಸ್ಟರ ಬಾಯಿಯ ತುತ್ತಾಗಿಯೂ ಉಳಿಯದೆ ಹೋದರು. ರಶಿಯದ ಲೈಸೆಂಕೊ ಎಂಬ ವಿಜ್ಞಾನಿಯ ರಾಜಕೀಯ ಪ್ರಭಾವದಿಂದ ರಶಿಯನ್ ಸರಕಾರ ಅಂಕಿಸಂಖ್ಯಾತ್ಮಕ ಸಂತತಿ ಶಾಸ್ತ್ರೀಯ ಪದ್ಧತಿಯನ್ನು "ಬೂರ್ಜುವಾ" ಪದ್ಧತಿಯೆಂದು ಸತ್ಯಕ್ಕೆ ವಿದೂರವಾಗುವಂತೆ ಟೀಕಿಸಿದಾಗ ಸತ್ಯ ಪಕ್ಷಪಾತಿ ಹ್ಯಾಲ್ಡೇನರು ಬ್ರಿಟಿಶ್ ಕಮ್ಯುನಿಸ್ಟ್ ಪಕ್ಷದಿಂದ ಹೊರಬಿದ್ದು ಅದರ ಪತ್ರಿಕೆಯ ಸಂಬಂಧ ಕಡಿದು

ಕೊಂಡು ಲೈಸೆಂಕೋನ ಅವೈಜ್ಞಾನಿಕ ರೀತಿಯನ್ನು ಟೀಕಿಸಿದರು. ಈಗ ಅವರು ಕಮ್ಯುನಿಸ್ಟರಲ್ಲಿಯೂ ಜನಪ್ರಿಯತೆ ಕಳೆದುಕೊಂಡಿದ್ದಾರೆ.

ಈಗ್ಗೈದು ವರ್ಷದಿಂದ ಅವರು ಭಾರತದಲ್ಲಿ ಪತ್ನೀಸಮೇತರಾಗಿ ಇದ್ದಾರೆ. (ಅವರ ಎರಡನೇ ಹೆಂಡತಿಯೂ ಅವರಂತೆ ಸಂತತಿವಿಜ್ಞಾನಿ. ೧೯೫೫ ರಲ್ಲಿ ಡಾ. ಹೆಲೆನ್ ಸ್ಪರ್ವೇ [ಶ್ರೀಮತಿ ಹ್ಯಾಲ್ಡೇನ್] ಗಂಡಸರ ಸಂಪರ್ಕವಿಲ್ಲದೆ ಮನುಷ್ಯರಲ್ಲಿಯೂ ಮಕ್ಕಳಾಗುವ ಸಂಭವವಿದೆ ಎಂದು ಹೇಳಿ ವೈಜ್ಞಾನಿಕ ವರ್ಗಗಳಲ್ಲಿ ಒಂದು ಚಿಕ್ಕ ಕೋಲಾಹಲವೆಬ್ಬಿಸಿದರು.)

ಭಾರತದ ನಾಗರಿಕರಾದ ಮೇಲೆ ಹ್ಯಾಲ್ಡೇನರು ಕನಿಷ್ಠಪಕ್ಷ ಭಾರತೀಯರಷ್ಟೇ ಭಾರತೀಯರಾಗಲು ಯತ್ನಿಸುತ್ತಿದ್ದಾರೆ. ಅವರು ಧೋತರ ಉಡಲು ಕಲಿತಿದ್ದಾರೆ. ಈಚೆಗೆ ಯುರೋಪಿಗೆ ಭೆಟ್ಟಿ ಕೊಟ್ಟಾಗ ಅವರು ಇಟಲಿಯ ಸಮುದ್ರತೀರದ ವಿಶ್ರಾಮ ಸ್ಥಳಗಳಲ್ಲಿ ಧೋತರ ಉಟ್ಟುಕೊಂಡೇ ತಿರುಗಾಡುತ್ತಿದ್ದುದು ವರದಿಯಾಗಿದೆ. "ಧೋತರ ಚಲ್ಲಣಕ್ಕಿಂತ ಹಿತವಾಗಿರುತ್ತದೆ" ಎಂದವರು ಹೇಳುತ್ತಾರೆ. ಭಾರತೀಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಅವರ ಲೇಖಗಳನ್ನು ನೋಡಿದರೆ ಭಾರತದ ಷಡ್ದರ್ಶನಗಳನ್ನೂ ಪ್ರಾಚೀನ ಜ್ಯೋತಿಶ್ಶಾಸ್ತ್ರವನ್ನೂ ಪುರಾಣಗಳನ್ನೂ ಯಾವ ಭಾರತೀಯ ವಿಜ್ಞಾನಿಗಿಂತಲೂ ಹೆಚ್ಚು ಅರಗಿಸಿಕೊಂಡಿದ್ದಾರೆಂದು ವ್ಯಕ್ತವಾಗುತ್ತದೆ. ಭಗವದ್ಗೀತೆ ಅವರ ನಾಲಿಗೆಯಲ್ಲಿದೆ.

ಆದರೆ ಭಾರತದಲ್ಲಿಯ ಕುಂದುಕೊರತೆಗಳು ಅವರ ಟೀಕಾಸ್ತ್ರಕ್ಕೆ ಆಗಲೇ ಗುರಿಯಾಗಿವೆ. ಇಲ್ಲಿನ ವಿಜ್ಞಾನಿಗಳು ಒತ್ತಟ್ಟಿಗೆ ಸೇರಿದಾಗ ವಿಜ್ಞಾನ ವಿಷಯಗಳನ್ನು ಚರ್ಚಿಸುವ ಬದಲು ಒಣ ಹರಟೆಯಲ್ಲಿ ಹೊತ್ತು ಕಳೆಯುತಾರೆಂದು ಅವರು ಆಕ್ಷೇಪಿಸಿದ್ದಾರೆ. ವಿಜ್ಞಾನಿಗಳ ಸಮ್ಮೇಳನಗಳಿಗೆ ರಾಜಕಾರಣಿಗಳನ್ನು ಕರೆದು ವೇಳೆಗಳೆಯುವುದೂ ಹೊತ್ತಿಗೆ ಸರಿಯಾಗಿ ಯಾವ ಕಾರ್ಯಕ್ರಮಗಳೂ ನಡೆಯದಿರುವುದೂ ಅವರನ್ನು ಕೆರಳಿಸಿವೆ. ನಮ್ಮ ಸರಕಾರ ತನ್ನ ದೇಶದ ಅಗತ್ಯಗಳನ್ನು ಗಮನಿಸದೆ ಪಾಶ್ಚಾತ್ಯರನ್ನು ಅನುಕರಿಸಿ ಅಗತ್ಯವಿಲ್ಲದ ಸಂಶೋಧನೆಗಳಿಗೆ ಹಣ ಸುರಿಯುವುದನ್ನವರು ವಿರೋಧಿಸಿದ್ದಾರೆ. ಇವೆಲ್ಲವೂ ಸಕಾರಣವಾದವುಗಳೆಂಬ ಮಾತು ನಿಜವಾದರೂ ಅವರ ಜನಪ್ರಿಯತೆಯನ್ನು ಹೆಚ್ಚಿಸುತ್ತಿಲ್ಲ. ಈಗ ಅವರು ಕಲಕತ್ತೆಯ ಅಂಕಿ-ಸಂಖ್ಯಾಶಾಸ್ತ್ರ ಸಂಸ್ಥೆಯೊಡನೆ ಮತಭೇದದ ದೆಸೆಯಿಂದ ರಾಜೀನಾಮೆ ಕೊಟ್ಟಿದ್ದಾರೆ.

ಹೀಗಿದ್ದರೂ ಹೊರಗಿನವರು ಭಾರತವನ್ನು ಟೀಕಿಸಿದರೆ ಅವರು ಉರಿದೇಳುತ್ತಾರೆ. ಪ್ರಸಿದ್ಧ ಲೇಖಕ ಆರ್ಥರ್ ಕೋಸ್ಲರ್ ಅವರು ಈಚೆಗೆ ಭಾರತೀಯ ದರ್ಶನವನ್ನೂ ಯೋಗಶಾಸ್ತ್ರವನ್ನೂ ಖಂಡಿಸಿ ಬರೆದ ಪುಸ್ತಕವನ್ನು ಪ್ರೊಫೆಸರ್ ಹ್ಯಾಲ್ಡೇನರು ವಿಮರ್ಶಿಸಿ ಬರೆದ ಲೇಖ ಅತ್ಯಂತ ತೀಕ್ಷ್ಣವಾಗಿದೆ.

ಎಷ್ಟೇ ಶೀಘ್ರಕೋಪಿಗಳಾಗಿದ್ದರೂ ಹ್ಯಾಲ್ಡೇನರಲ್ಲಿ ವಿನೋದ ವೃತ್ತಿಯಿಲ್ಲದಿಲ್ಲ. ಅವರೊಮ್ಮೆ ಒಂದು ವಿವಿಧ ವಿನೋದಾವಳಿಯಲ್ಲಿ ತಮ್ಮ ಬೋಳುತಲೆಯ ಮೇಲೆ ಒಂದು ಮುಖದ ಆಕೃತಿಯನ್ನು ಬರೆಸಿಕೊಂಡು "ಇಮ್ಮುಖದ ರಾಜಕಾರಣಿ" ಯ ವೇಷವನ್ನು ಪ್ರದರ್ಶಿಸಿದರು. ಇನ್ನೊಮ್ಮೆ ಒಂದು ವೈಜ್ಞಾನಿಕ ಸಭೆಯಲ್ಲಿ ಕರಡಿಗೆಯೊಂದನ್ನು ತೋಳಿಗೆ ತಾಯಿತದಂತೆ ಕಟ್ಟಿಕೊಂಡು ಓಡಾಡುತ್ತಿದ್ದರು. ಅದೇನೆಂದು ಕೇಳಿದಾಗ "ಅದರಲ್ಲೊಂದು ತಗಣೆಯಿದೆ, ನನ್ನನು ಕಡಿಯಲು ಒಪ್ಪಿದ ಏಕಮಾತ್ರ ತಗಣೆಯಿದು" ಎಂದರು.

ಹೌದು, ಹ್ಯಾಲ್ಡೇನರನ್ನು ಕಡಿಯುವ ಧೈರ್ಯ ತಗಣೆಗಳಿಗೂ ಇಲ್ಲ. ★

ದೊಡ್ಡವರ
ಸಣ್ಣ
ಕತೆಗಳು

ಭರತಪುರದ ಮಹಾರಾಜರು ಎಲ್ಲಿಗೆ ಪ್ರಯಾಣ ಮಾಡಿದರೂ ತಮ್ಮೊಡನೆ ಪೂಜಾ ಸಾಮಗ್ರಿಗಳ ಪೆಟ್ಟಿಗೆಯನ್ನೂ ಒಯ್ಯುತ್ತಾರೆ. ಅವರು ಆ ಪೂಜಾ ಪೆಟ್ಟಿಗೆಗೂ ಒಂದು ಟಕೇಟನ್ನು ಕೊಂಡು, ತಮ್ಮ ಪಕ್ಕದ ಆಸನದಲ್ಲೇ ಇಟ್ಟುಕೊಳ್ಳುವುದು ಪದ್ಧತಿ. ಒಂದು ಬಾರಿ ಅವರು ಹೈದರಾಬಾದಿನಿಂದ ವಿಮಾನದಲ್ಲಿ ಹೋಗಬೇಕಾದಾಗ, ಪದ್ಧತಿಯಂತೆ ಪೂಜೆಯ ಪೆಟ್ಟಿಗೆಗೂ ಟಕೇಟನ್ನು ಕೊಂಡು, ಪಕ್ಕದಲ್ಲಿರಿಸಿಕೊಂಡು ಕುಳಿತರಂತೆ. ವಿಮಾನ ಭರ್ತಿಯಾಗಿ, ನಿಲ್ದಾಣ ಬಿಡುವ ಸಮಯ ಕಳೆದು ೧೦ ನಿಮಿಷಗಳಾದರೂ ಇನ್ನೂ ಹೊರಡದಿದ್ದಕ್ಕೆ ವಿಮಾನದ ಸ್ಟಿವರ್ಡಳನ್ನು ಪ್ರಶ್ನಿಸಿದಾಗ ಅವಳು ಈ ಉತ್ತರ ಕೊಟ್ಟಳಂತೆ:

"ಮಿಸ್ಟರ್ ಪೂಜಾ ಎಂಬ ರಿಜರ್ವ್ ಸೀಟಿನ ಪ್ರಯಾಣಿಕರೊಬ್ಬರು ಬರಬೇಕಾಗಿದೆ!"

"ಮಿಸ್ಟರ್ ಪೂಜಾ" ತಮ್ಮ ಪಕ್ಕದ ಆಸನದಲ್ಲಿದ್ದ ಪೂಜಾ ಪೆಟ್ಟಿಗೆಯೆಂದು ತಿಳಿಸಿದ ನಂತರ ವಿಮಾನ ಹೊರಟಿತು!

— ಸು. ರಾ. ಕನಕರಾಜ

ಒಮ್ಮೆ. ಸಾಹಿತಿ ಕೈಲಾಸಂರವರನ್ನು ಮಹಾರಾಜಾ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ಒಬ್ಬರು ಕೇಳಿದರಂತೆ—

"ನೀವು ಸಿಗರೇಟನ್ನು ಒಂದರ ಹಿಂದೆ ಮತ್ತೊಂದರಂತೆ ಏಕೆ ಸೇದುತ್ತೀರಿ?"

ಅದಕ್ಕೆ ಕೈಲಾಸಂರವರು ಸ್ವಲ್ಪ ಹೊತ್ತು ಯೋಚಿಸಿ, ಒಂದು ಸಿಗರೇಟನ್ನುಹೊತ್ತಿಸಿ, ಒಂದೆರಡು ಬಾರಿ ಹೊಗೆಯನ್ನು ಉಗುಳಿ ಹೇಳಿದರಂತೆ—

"ನಾನು ಒಂದಲ್ಲದಿದ್ದರೊಂದು ದಿನ ಹೊಗೆಯಲ್ಲಿ ಪರ್ಯವಸಾನ ಹೊಂದುವೆನೆಂಬುದನ್ನು ಜ್ಞಾಪಿಸಿಕೊಳ್ಳುವುದಕ್ಕೆ."

— ಗಜಲು

ಒಮ್ಮೆ ಲಾರ್ಡ್ ಹೆಲಿಫಾಕ್ಸ್(ಮೊದಲು ಭಾರತದ ವೈಸರಾಯರಾಗಿದ್ದ ಐರ್ವಿನ್) ಉಗಿಬಂಡಿಯಲ್ಲಿ ಇಬ್ಬರು ಅಪರಿಚಿತ ಆದರೆ ಸಿಡುಕು ಮುಖದ ಹೆಂಗಸರೊಡನೆ ಪ್ರಯಾಣ ಮಾಡಬೇಕಾದ ಸಂದರ್ಭ ಒದಗಿಬಂತು. ರೈಲು ಒಂದು ಸುರಂಗದ ಮೂಲಕವಾಗಿ ಹಾದು ಹೋಗಬೇಕಿತ್ತು. ಅದು ಸುರಂಗವನ್ನು ಪ್ರವೇಶಿಸಿದೊಡನೆ ಎಲ್ಲ ಕತ್ತಲಿನಿಂದ ತುಂಬಿತು. ಹೆಲಿಫಾಕ್ಸ್ ತನ್ನ ಕೈಯನ್ನು ತನ್ನ ತುಟಿಗಳ ಮೇಲಿರಿಸಿ ಹಲವು ಬಾರಿ ದೊಡ್ಡದಾಗಿ ಚುಂಬಿಸುವಾಗ ಆಗುವಂತಹ ಶಬ್ದಗಳನ್ನು ಹೊರಡಿಸಿದ. ಸುರಂಗವನ್ನು ದಾಟಿ ರೈಲು ಸಣ್ಣ ಸ್ಟೇಶನೊಂದರಲ್ಲಿ ನಿಂತಿತು. ಅಲ್ಲಿ ಇಳಿಯುತ್ತ ಅವನು ಆ ಹೆಂಗಸರನ್ನುದ್ದೇಶಿಸಿ ಹೇಳಿದ: "ಸುರಂಗದೊಳಗೆ ರೈಲು ಸಾಗುತ್ತಿದ್ದಾಗ ನನಗೆ ದೊರಕಿದ ಆನಂದದಾಯಕವಾದ ಪ್ರಸಂಗಕ್ಕಾಗಿ ನಿಮ್ಮಲ್ಲಿ ಯಾರನ್ನು ಅಭಿನಂದಿಸಲಿ?" ಅವನು ಬಂಡಿಯಿಂದ ಕೆಳಗಿಳಿದಾಗ ಅವರಿಬ್ಬರೂ ಒಬ್ಬರನ್ನೊಬ್ಬರು ದ್ವೇಷದೃಷ್ಟಿಯಿಂದ ನೋಡುತ್ತಿದ್ದರು. —ಡಿ. ಎನ್. ಶಂಕರಭಟ್ಟ

ತಿಬೇಟಿನ ಧರ್ಮಸಂಸ್ಕೃತಿ ಸಂಪ್ರದಾಯ ಗಳನ್ನು ನಾಶಗೊಳಿಸಲು ಚೀನೀಯರು ನಡೆಸಿರುವ ಚಿತ್ರಹಿಂಸೆ ಕೊಲೆ ಸುಲಿಗೆಗಳ ಆಳಿಕೆಯ ಕರುಣ ಕಥೆ

ತಿಬೇಟಿನಲ್ಲಿ ದಬ್ಬಾಳಿಕೆ

ಲೋವೆಲ್ ಥಾಮುಸ್

೧೯೫೦ ಕ್ಕೆ ಮೊದಲು ದಕ್ಷಿಣಮಧ್ಯ ಏಶಿಯದಲ್ಲಿ ತಿಬೇಟ್ ಒಂದು ಬಾಹ್ಯಸಂಪರ್ಕವಿಲ್ಲದ ಗುಡ್ಡಗಾಡು ದೇಶವಾಗಿದ್ದಿತು. ಅದರ ೨೦ ಲಕ್ಷ ಜನರು (ಜನಸಂಖ್ಯೆ ಇದರ ಎರಡು ಅಥವಾ ಮೂರು ಪಟ್ಟು ಇದ್ದಿರಲಿಕ್ಕೂ ಸಾಕು. ತಿಬೇಟಿನಲ್ಲಿ ಜನಗಣತಿ ಎಂದೂ ನಡೆದಿಲ್ಲ.) ಪೂಜೆ ಪ್ರಾರ್ಥನೆಗಳಲ್ಲಿ ಮಗ್ನರಾಗಿರುತ್ತಿದ್ದರು. ಆದರೆ ಆ ವರ್ಷ ಅಕ್ಟೋಬರ ತಿಂಗಳಲ್ಲಿ ತಿಬೇಟಿನ ಒಳನಾಡಿನಲ್ಲಿ ದಲಾಯಿ ಲಾಮಾರ ರಾಜ್ಯದ ಮೇಲೆ ಚೀನವು ದಾಳಿ ಮಾಡಿತು. ೬೭ ಕೋಟಿ ಜನಸಂಖ್ಯೆಯಿರುವ ಚೀನದ ಧುರೀಣರು " ಧರ್ಮವು ಒಂದು ಕೇಡು " ಎಂದು ಸಾರಿದ್ದಾರೆ.

ಈ ದಾಳಿಯಾದಂದಿನಿಂದ ತಿಬೇಟಿನಲ್ಲಿ ಕ್ರೂರ ದಬ್ಬಾಳಿಕೆ ನಡೆದಿದೆ. ಕೊಲೆ, ಹಿಂಸೆ ಮತ್ತು ಅತ್ಯಾಚಾರಗಳು ನಡೆದಿವೆ ಎಂದು ಅನೇಕ ವದಂತಿಗಳು ಹರಡಿವೆ.

ಉದಾಹರಣೆಗೆ, ನನ್ನ ಮಿತ್ರರಲ್ಲೊಬ್ಬರಾದ ಸರಾಂಗ್ ಶಾಪೆಯನ್ನು ಹಿಂಸಿಸಿ ಕೊಲ್ಲಲಾಯ್ತು ಎಂದು ನಾನು ಕೇಳಿದೆ. ಸರಾಂಗರು ಅನೇಕ ವರ್ಷಗಳ ಕಾಲ ಲ್ಹಾಸಾದಲ್ಲಿ ಮುಖ್ಯ ಕ್ಯಾಬಿನೆಟ್ ಮಂತ್ರಿಗಳಾಗಿದ್ದರು. ೧೯೪೯ ರಲ್ಲಿ ನಾನು ಅವರನ್ನು ಭೆಟ್ಟಿಯಾದಾಗ ಅವರು ನಿವೃತ್ತರಾಗಿದ್ದರು. ೧೯೫೦ ರಲ್ಲಿ ಚೀನೀ ಕಮ್ಯುನಿಸ್ಟರು ದಾಳಿ ಮಾಡಿದಾಗ ಸರಾಂಗರು ಭಾರತದ ಗಡಿಗೆ ಪಲಾಯನ ಮಾಡಿದರು. ಮುಂದೆ ಮತ್ತೆ ಈ ವೃದ್ಧರಾಜಕಾರಣಿ ಲ್ಹಾಸಾಕ್ಕೆ ಹಿಂತಿರುಗಿದರು. ತಮ್ಮ ಜನರೊಡನೆ ಇವರಿಗೆ ಶಾಂತವಾಗಿ ಇರಲು ಅವಕಾಶಕೊಡುವ ಬದಲು ಚೀನೀಯರು ಇವರನ್ನು ಸಂಕೋಲೆಗಳಿಂದ ಬಂಧಿಸಿ ಸಾಯುವವರೆಗೆ ಅವರನ್ನು ಬೀದಿಯಲ್ಲಿ ಎಳೆದರು. ಈ ಸಂಗತಿಯನ್ನು ಲ್ಹಾಸಾದಲ್ಲಿ ಅವರ ನೆರೆಯವರಾಗಿರುವ ಒಬ್ಬರಿಂದ ತಿಳಿದೆ. ಆದ್ದರಿಂದ ಈ ಮಾತು ಒಂದು ವದಂತಿ ಎಂದು ಹೇಳಲಾರೆ.

ಅದೇನೇ ಇರಲಿ, ಇದೀಗ ಮೊಟ್ಟಮೊದಲನೆಯ ಬಾರಿ ನಮಗೆ ಸತ್ಯ ತಿಳಿದಿದೆ. ಮತ್ತು ಈ ಸತ್ಯ ವದಂತಿಗಳಿಗಿಂತಲೂ ಭೀಕರವಾಗಿದೆ. ತಿಬೇಟಿನ ಈ ದುಃಖಮಯ ಕಾಲದ ವಿವರವಾದ ಇತಿಹಾಸವು ಅತ್ಯಂತ ಎಚ್ಚರಿಕೆಯಿಂದ ನಿರೀಕ್ಷಕರಿಂದ ಬರೆಯಲ್ಪಟ್ಟಿದ್ದು ಇದು ತುಂಬಾ ಬೀಭತ್ಸವಾಗಿದೆ. ರಾಜಕೀಯದಿಂದ ಅಲಿಪ್ತವಾಗಿರುವ ಸರಕಾರೇತರ ಅಂತರ್‌ರಾಷ್ಟ್ರೀಯ ನ್ಯಾಯಾಧೀಶರ ಸಮಿತಿಯಿಂದ ನೇಮಕವಾದ ಒಂದು ವಿಚಾರಣಾ ಸಮಿತಿಯು ಈ ೩೨೫ ಪುಟಗಳ ವರದಿಯನ್ನು ಒಪ್ಪಿಸಿದೆ. ಈ ಸಮಿತಿಯ ಮಾನ್ಯ ಸದಸ್ಯರಲ್ಲಿ ಸಿಲೋನಿನ ಸುಪ್ರೀಂ ಕೋರ್ಟಿನ ನ್ಯಾಯಾಧೀಶರು, ಬ್ರಹ್ಮದೇಶದ ಸುಪ್ರೀಂ

" ರೀಡರ್ಸ್ ಡೈಜೆಸ್ಟ್ " ನಿಂದ

ಕೋರ್ಟಿನ ಮಾಜಿ ನ್ಯಾಯಾಧೀಶರು, ಥೈಲಂಡಿನ ಮಾಜಿ ಪ್ರಧಾನಿಗಳು, ಫಿಲಿಪ್ಪೈನ್ ಬಾರ್ ಅಸೋಸಿಯೇಶನ್ನಿನ ಅಧ್ಯಕ್ಷರು, ಭಾರತ, ಘಾನಾ ಮತ್ತು ನಾರ್ವೆಯ ವಕೀಲರು ಇದ್ದರು.

ತಿಬೇಟಿನ ನಿಜಕಥೆಯನ್ನು ಅರಿಯುವಲ್ಲಿ ಈ ವಿಚಾರಣಾ ಸಮಿತಿ ಭಾರತದಲ್ಲಿ ಕೆಲಸ ಮಾಡಿತು. ದಲಾಯಿ ಲಾಮಾರನ್ನೊಳಗೊಂಡು ಭಾರತಕ್ಕೆ ಓಡಿ ಬಂದಿರುವ ೨೦,೦೦೦ ತಿಬೇಟಿಯನ್ನರಲ್ಲಿ ಅನೇಕರ ಹೇಳಿಕೆಯನ್ನು ಕೇಳಿಕೊಂಡಿತು. ಈ ನಿರಾಶ್ರಿತರ ಹೇಳಿಕೆಗಳನ್ನು ಕೇಳಿಕೊಂಡ ನಂತರ ಅವರನ್ನು ಬಹು ಸೂಕ್ಷ್ಮವಾಗಿ ಪ್ರಶ್ನಿಸಲಾಯಿತು. ಈ ಭೀಕರ ಕಾಲದಲ್ಲಿ ಚೀನೀ ಅಧಿಕಾರಿಗಳು, ಚೀನೀ ನಿಯಂತ್ರಿತ ತಿಬೇಟಿನ ಪತ್ರಿಕೆಗಳು ಮತ್ತು ರೇಡಿಯೊ ಪ್ರಚುರಪಡಿಸುತ್ತಿದ್ದ ಹೇಳಿಕೆಗಳ ಪ್ರತಿಗಳನ್ನೂ ಸಮಿತಿ ಸಂಗ್ರಹಿಸಿತು. ಇದೆಲ್ಲದರ ಪರಿಣಾಮವಾಗಿ ಹೊರಬಿದ್ದ ಚಿತ್ರ ನಂಬಲು ಬಾರದಷ್ಟು ಭಯಾನಕವಾಗಿದೆ.

೧೯೪೦ ರಲ್ಲಿ ಬುಶೆನ್‌ವಾಲ್ಡ್ ಹೇಗಿತ್ತೋ ಹಾಗೆ ೧೯೫೦ ರಲ್ಲಿ ತಿಬೇಟ್ ಇತ್ತು. ಬೌದ್ಧ ಧರ್ಮವನ್ನು ಅಳಿಸಲು ಒಂದು ಸುಸಜ್ಜಿತ ಯೋಜನೆಯನ್ನಿಟ್ಟುಕೊಂಡೇ ಚೀನಿಯರು ತಿಬೇಟಿಗೆ ಬಂದರು. ಧಾರ್ಮಿಕ ಧುರೀಣರ ಚಿತ್ರಹಿಂಸೆ ಮತ್ತು ಕೊಲೆ ಈ ಯೋಜನೆಯ ಅಂಗಗಳಾಗಿದ್ದವು. ಅದರಂತೆ ಮಾನಭಂಗ, ಅಪಹಾಸ್ಯಗಳೂ ಯೋಜನೆಯ ಅಸ್ತ್ರಗಳಾಗಿದ್ದವು.

ಶಾರ್ ಕಾಲೆನ್ ಯಾತ್ಸೊ, ಅರಾಕ್ ದೋರ್ಜಿ ಚುಂಗ್ ಮತ್ತು ಸರಾಂಗ್ ಕಾರ್ಪೊ ಎಂಬ ಮೂವರು ಲಾಮಾರ ಕಥೆಯನ್ನು ಕೇಳಿ. ಅವರನ್ನು ಒಂದು ಸಭೆಗೆ ಕರೆದೊಯ್ಯಲಾಯ್ತು. ಈ ಸಭೆಗೆ ಬರುವಂತೆ ತಿಬೇಟಿನ ಜನರನ್ನು ಬಲಾತ್ಕರಿಸಿದ್ದರು. ಮೊದಲು ಚೀನೀ ಹೆಂಗಸರು ಲಾಮಾರನ್ನು ಹೊಡೆದು ಆ ಮೇಲೆ ಅವರ ಕೂದಲನ್ನು ಕಿತ್ತು ತೆಗೆಯುವುದನ್ನು ಈ ಜನ ನೋಡಬೇಕಾಯಿತು. ಆಮೇಲೆ ಮರಣದ ಭೀತಿ ಹಾಕಿ ತಿಬೇಟಿನ ಜನರೇ ಲಾಮಾರನ್ನು ಥಳಿಸುವಂತೆ ಮಾಡಲಾಯ್ತು. ನಂತರ ಲಾಮಾರನ್ನು ಒಂದು ತಗ್ಗಿನಲ್ಲಿ ಕೂಡ್ರಿಸಿ ಅವರ ಮೇಲೆ ತಿಬೇಟಿನ ಜನ ಮೂತ್ರವಿಸರ್ಜನೆ ಮಾಡುವಂತೆ ಒತ್ತಾಯ ಮಾಡಿದರು. ಈ ಹೇಸಿ ಕಾರ್ಯ ನಡೆಯುವಾಗ ಚೀನೀಯರು ಲಾಮಾರನ್ನು ಅಪಹಾಸ್ಯಗೈಯುತ್ತ "ಮಂತ್ರಬಲದಿಂದ ಹಾರಿ ಹೋಗಿರಲ್ಲ" ಎಂದು ಕುಚೇಷ್ಟೆ ಮಾಡಿದರು. ಕೊನೆಗೆ ಚೀನೀ ಸೈನಿಕರು ಆ ಮೂರು ಲಾಮಾರ ಕುತ್ತಿಗೆಗಳಿಗೆ ಸರಪಳಿ ಹಾಕಿ ಕಟ್ಟಿ ತಲೆಯ ಮೇಲೆ ಮನುಷ್ಯರ ಮಲವನ್ನು ಬುಟ್ಟಿಯಲ್ಲಿ ಹೊರಿಸಿ ಹಳ್ಳಿಯಿಂದ ಹಳ್ಳಿಗೊಯ್ದು ಜನರೆದುರು ಅವರ ಮೆರವಣಿಗೆ ಮಾಡಿದರು.

ಮರಣದಂಡನೆ ವಿಧಿಸುವ ಮೊದಲು ಈ ರೀತಿ ಅವಹೇಳನೆಗೈಯುವುದು ಜನರ ದೃಷ್ಟಿಯಲ್ಲಿ ಲಾಮಾ ಮತ್ತು ಅವರ ಧರ್ಮವನ್ನು ಕುಚೇಷ್ಟೆ ಮಾಡುವುದೇ ಆಗಿತ್ತು. ಕೆಲಸ ಮಾಡಲು ನಿರಾಕರಿಸಿದ ರಾಸಾಂಗ್ ಮಠದ ಲಾಮಾರನ್ನು ನಾಲ್ಕು ದಿನಗಳ ವರೆಗೆ ಅನ್ನವಿಲ್ಲದೆ ಒಂದು ಕೋಣೆಯಲ್ಲಿಬಂಧಿಸಿಟ್ಟುಚೀನೀ ಕಮ್ಯುನಿಸ್ಟರು "ನಿಮ್ಮ ದೇವರು ನಿಮಗೆ ಅನ್ನ ಕೊಡುತ್ತಾನೆ" ಎಂದರು. ಮಾಲುಂಗ್‌ನಲ್ಲಿ ಐದು ದಿನಗಳ ವರೆಗೆ ಅನ್ನನೀರಿಲ್ಲದೆ ಬಳಲಿ ಫುಂಟ್ಸೊಗ್ ನೊರ್ಬು ಎಂಬ ಲಾಮಾ ಸಾಯಲು, ಚೀನೀಯರು ಜನರನ್ನು ಕರೆಸಿ ಅವರಿಗೆ ಆ ಹೆಣ ತೋರಿಸಿ "ನೋಡಿ,ದೇವರು ಈ ಲಾಮಾನಿಗಾಗಿ ಏನನ್ನೂ ಮಾಡಲಿಲ್ಲ. ಆದ್ದರಿಂದ ನಿಮ್ಮ ಧರ್ಮವನ್ನು ನೀವು ತ್ಯಜಿಸುವುದು ಒಳ್ಳೆಯದು" ಎಂದರು. ಇನ್ನೊಂದು ಮಠದಲ್ಲಿ ತುರುಕ್ಲು-ಸಂಗ್ರಾಬ್ ಎಂಬ ಲಾಮಾ, ಚೀನೀಯರು ಧರ್ಮಗ್ರಂಥಗಳ ಹಾಳೆಗಳನ್ನು ಮಲಮೂತ್ರ ವಿಸರ್ಜನೆಗಾಗಿ ಉಪಯೋಗಿಸುವುದನ್ನು ಪ್ರತಿಭಟಿಸಿದಾಗ, ಒಬ್ಬ ಚೀನೀ ಮನುಷ್ಯ ಅವರ ಮುಂಗೈ



ದಲಾಯಿ ಲಾಮಾ

ಯನ್ನು ಕಡಿದು "ಚಿಂತೆ ಮಾಡಬೇಡ. ನಿನ್ನ ದೇವರು ಅದನ್ನು ತಿರುಗಿ ನಿನಗೆ ಕೊಡುತ್ತಾನೆ" ಎಂದ.

ಡರ್ಜ್ ಎಂಬಲ್ಲಿಯ ಮಠದ ಒಬ್ಬ ಲಾಮಾನನ್ನು ಹಿಡಿದು ಚೀನೀಯರು ಅವನನ್ನು ಕುದುರೆಯಂತೆ ಬಂಡಿಗೆ ಕಟ್ಟಿ ಅವನು ಹುಲ್ಲು ತಿನ್ನುವಂತೆ ಮಾಡಿದರು; ಹಳ್ಳಿಗರು ಅವನ ಮೇಲೇರಿ ಹೊಡೆದು ಅಟ್ಟುವಂತೆ ಮಾಡಿದರು. ಸಾಕ್ಯಾ ಮಠದ ಕೋಶಾಧ್ಯಕ್ಷನನ್ನು ಚೆನ್ನಾಗಿ ಥಳಿಸದ ಹಳ್ಳಿಗರಿಗೇ ಬೆತದ ಏಟುಗಳು ಬಿದ್ದವು. ಇಂಥ ಸಾರ್ವಜನಿಕ ದಂಡನೆಯ ಒಂದು ಪ್ರಸಂಗದಲ್ಲಿ ತನ್ನ ಒಡೆಯ ಲಾಮಾನನ್ನು ಹೊಡೆಯಲು ನಿರಾಕರಿಸಿದ ಶಿರಾಬ್ ಯಾತ್ಸೊ ಎಂಬವನ್ನೊಳಗೊಂಡು ಐದು ಜನರು, ಚೀನೀಯರ ಬಡಿತದಿಂದಲೇ ಸತ್ತರು.

ಜಗತ್ತಿನಲ್ಲಿಯೆ ಅತಿ ಸುಖಿಗಳಾಗಿದ್ದ ತಿಬೇಟಿನ ಜನರ ಧಾರ್ಮಿಕ ಶ್ರದ್ಧೆಯನ್ನು ಹಾಳು ಮಾಡಲು ಕಮ್ಯುನಿಸ್ಟರು ಹೀನ ಮಾರ್ಗಗಳೆಲ್ಲವನ್ನೂ ಉಪಯೋಗಿಸಿದರು. ಭಿಕ್ಷುಕರಿಂದ ನಾಯಿಗಳನ್ನು ಕೊಲಿಸಿ ದೇವಾಲಯಗಳ ಎದುರಿನಲ್ಲಿ ಅವುಗಳ ಚರ್ಮ ಸುಲಿಸಿ ಆ ಮೇಲೆ ಆ ದೇಹಗಳನ್ನು ದೇವಾಲಯಗಳೊಳಗೆ ಊದುಬತ್ತಿಯ ಬದಲು ಸುಡುವಂತೆ ಬಲಾತ್ಕರಿಸಿದರು. ಪವಿತ್ರ ಚಿತ್ರಗಳನ್ನು ಮೈಲಿಗೆ ಮಾಡಲಾಯಿತು. ದೇವರ ಮೂರ್ತಿಗಳನ್ನು ಬೀದಿಯಲ್ಲಿ ಎಳೆದರು. ದೇವಾಲಯಗಳಲ್ಲಿ ಕುದುರೆಗಳನ್ನು ಕಟ್ಟಿದರು. ಮಠಗಳಲ್ಲಿದ್ದ ಚಹ ಕುದಿಸುವ ಹಂಡೆಗಳನ್ನು ಚೀನೀ ಸೈನಿಕರು ಮೂತ್ರವಿಸರ್ಜನೆಗಾಗಿ ಉಪಯೋಗಿಸಿದರು. ಪ್ರಾರ್ಥನಾಚಕ್ರಗಳನ್ನು ಉಪಯೋಗಿಸಲು, ಬುದ್ಧ ವಿಗ್ರಹಗಳ ಎದುರು ದೀಪ ಹಚ್ಚಲು ಪ್ರತಿಬಂಧ ಹೇರಲಾಯಿತು.

ಲಾಮಾರಲ್ಲಿ ಹೆಚ್ಚಿನವರನ್ನು (ಶಿಕ್ಷಕರು, ಪಂಡಿತರು, ಪುರೋಹಿತರು) ಕೊಲ್ಲಲಾಯಿತು. ಧರ್ಮಗುರುಗಳನ್ನು ಜಾತಿಗೆಡಿಸಲಾಯಿತು. ಲಾಮಾರ ಅಸ್ತಿತ್ವವನ್ನು ಇಲ್ಲದಂತೆ ಮಾಡಿದರೆ ಧಾರ್ಮಿಕ ಶಿಕ್ಷಣ ಮತ್ತು ಸಂಘಟಿತ ಪೂಜೆ-ಪುರಸ್ಕಾರ ಪದ್ಧತಿ ಕೊನೆಗೊಳ್ಳುವುದು ಎಂಬುದೇ ಚೀನೀಯರ ವಾದವಿರಬೇಕು. ಧರ್ಮಗುರುಗಳನ್ನು ಜಾತಿಗೆಡಿಸಿದರೆ ಧರ್ಮದ ಬೆಲೆ ಸಹಜವಾಗಿಯೆ ಕುಗ್ಗುವುದಲ್ಲದೆ ಅವರಿಂದ ಕೆಲಸ ಮಾಡಿಸುವುದೂ ಸಾಧ್ಯವಾಗುವುದು ಎಂದು ಕಮ್ಯುನಿಸ್ಟರು ಬಗೆದಿದ್ದರು. ಚೀನೀ ದಾಳಿಗಾರರು ಚೀನದಿಂದ ತಿಬೇಟಿಗೆ ಎರಡು ಹೆದ್ದಾರಿಗಳನ್ನೂ ತಿಬೇಟಿನಲ್ಲಿ ಅನೇಕ ರಸ್ತೆಗಳನ್ನೂ ವಿದ್ಯುದಾಗಾರಗಳನ್ನೂ ವಿಮಾನ ನಿಲ್ದಾಣಗಳನ್ನೂ ಸೇತುವೆಗಳನ್ನೂ ಕಟ್ಟತೊಡಗಿದ್ದರು. ಒಂದು ಹೆದ್ದಾರಿ-೧,೪೦೦ ಮೈಲುದ್ದದ ತಿಬೆಟ್-ಸಿಕಾಂಗ್ ಹೆದ್ದಾರಿ-ಸರಾಸರಿ ೧೩,೦೦೦ ಅಡಿ ಎತ್ತರದ ಮೇಲಿರುವ ಹನ್ನೆರಡು ನದಿಗಳು

ಮತ್ತು ಹದಿನಾಲ್ಕು ಪರ್ವತ ಶ್ರೇಣಿಗಳನ್ನು ಹಾಯ್ದು ಬರಬೇಕಾಗಿತ್ತು. ಈ ದೃಷ್ಟಿಯಿಂದ ತಿಬೇಟಿನ ೩,೦೦,೦೦೦ ಧರ್ಮಗುರುಗಳು ಬಂದೂಕಿನ ಗುಂಡುಗಳಿಗೆ ಆಹುತಿಕೊಡಲು ಬಾರದಂಥ "ಮನುಷ್ಯ ಶಕ್ತಿ" ಯಾಗಿದ್ದರು.

ಮುಂಜಾನೆಯಿಂದ ಸಂಜೆಯವರೆಗೂ ಬಿಡುವು ಕೊಡದೆ ಈ ಧರ್ಮಗುರುಗಳನ್ನು ದುಡಿಸುತ್ತಿದ್ದರು ಊಟ ಮಾಡುತ್ತಿರುವಾಗಲೂ ಅವರು ಕೆಲಸ ಮಾಡುತ್ತಲೇ ಇರಬೇಕಿತ್ತು. ಅವರ ಅಂಗೈಗೆ ಗಾಯವಾಗದಿದ್ದರೆ ಅಥವಾ ಗುಳ್ಳೆಯೇಳದಿದ್ದರೆ ಅವರು ಮೈಗಳ್ಳತನ ಮಾಡುತ್ತಿದ್ದಾರೆಂದು ಆರೋಪಿಸಲಾಗುತ್ತಿತ್ತು. ಒಪ್ಪಿಸಿದ ಕೆಲಸ ಪೂರ್ತಿಯಾಗದಿದ್ದರೆ ಅವರಿಗೆ ಸೀದಾ ಕೊಡುತ್ತಿರಲಿಲ್ಲ. ಹೆಂಗಸರು-ಭಿಕ್ಷುಣಿಯರು ಕೂಡ ರಸ್ತೆಗಳಲ್ಲಿ ಕೆಲಸ ಮಾಡಬೇಕಾಯಿತು.

ಈ ಸಮಯದಲ್ಲಿಯೆ ಚೀನೀಯರು ಈ ಧರ್ಮಗುರುಗಳ ಮತ್ತು ಕೆಲ ಲಾಮಾರ ಮೇಲೆ ಚೀನದಿಂದ ಆ ಉದ್ದೇಶಕ್ಕಾಗಿಯೆ ತಂದಿದ್ದ ಹೆಂಗಸರೊಡನೆ ಸಂಸಾರಹೂಡಲು ಒತ್ತಾಯ ತರುತ್ತಲೇ ಇದ್ದರು. ಧಾರ್ಮಿಕ ಭಾವನೆಗೆ ಬುದ್ಧಿಪೂರ್ವಕವಾಗಿ ತೋರುತ್ತಿದ್ದ ಈ ಅವಹೇಳನ ಪ್ರತ್ಯಕ್ಷವಾಗಿ ಕಾಣಿಸುವಂತೆ ಮಾಡಲು "ಸಂಸಾರ ಹೂಡದಿದ್ದರೆ ಉಪವಾಸ ಕೊಲ್ಲುವೆವು, ಚಿತ್ರಹಿಂಸೆ ಕೊಟ್ಟು ಕೊಲ್ಲುವೆವು" ಎಂಬ ಬೆದರಿಕೆ ಹಾಕುತ್ತಿದ್ದರು. ನಾಂಗ್ ಸಂಗ್ ಗೊಂಪಾ ಮಠದಲ್ಲಿ ಡಕೊರ್ಂಗ್ ಬೋಝು ಎಂಬ ಗುರುವಿಗೆ "ಪ್ರಾರ್ಥನೆ ಪೂಜೆಗಳನ್ನು ನಿಲ್ಲಿಸಿ ಲಗ್ನ ಮಾಡಿಕೊಂಡು ಕೆಲಸಕ್ಕೆ ಹೋಗು" ಎಂದು ಆಜ್ಞಾಪಿಸಿದರು. ಆತ ನಿರಾಕರಿಸಿದ. ೧೯೫೮ ರ ಸೆಪ್ಟೆಂಬರ ತಿಂಗಳಲ್ಲಿ ಚೀನೀಯರು ಮಠದ ಮೇಲೆ ದಾಳಿ ಮಾಡಿ ಅಲ್ಲಿದ್ದ ಎಲ್ಲ ಧರ್ಮಗ್ರಂಥಗಳನ್ನು ಸುಟ್ಟುಹಾಕಿ ಸಾಮಾನುಗಳನ್ನು ಜಪ್ತಿ ಮಾಡಿದರು. ಆಮೇಲೆ ಊರವರನ್ನು ಕಲೆಹಾಕಿ ಅವರೆದುರು ಡಕೊರ್ಂಗ್ ಬೋಝುಯನ್ನು ಮಶಿನ್‌ಗನ್ನಿನ ಗುಂಡುಗಳಿಂದ ಕೊಲೆ ಮಾಡಿದರು.

ಚೀನೀಯರು ನಡೆಸಿದ ಸಾಮೂಹಿಕ ಕೊಲೆಗಳ ಬಗ್ಗೆ ವಿಚಾರಣಾ ಸಮಿತಿಗೆ ಸಾಕಷ್ಟು ಪುರಾವೆಗಳು ದೊರೆತವು. ಒಬ್ಬ ಸಂಚಾರಿ ತಾನು ಗುಡ್ಡಗಳಲ್ಲಿ ಅಡಗಿಕೊಂಡಿದ್ದಾಗ ಒಂದು ಜಿಲ್ಲೆಯ ಮಠಗಳ ಲಾಮಾರನ್ನೆಲ್ಲ ಒಂದೆಡೆ ಕಲೆ ಹಾಕಿರುವುದನ್ನು ಕಂಡಿದ್ದಾಗಿ ಹೇಳಿದ. ೧೫ ದಿನಗಳಲ್ಲಿ ಅವರಲ್ಲಿ ಸುಮಾರು ೧೦೦೦ ಜನರನ್ನು ಸಾರ್ವಜನಿಕವಾಗಿ ಕೊಲೆಗೈದಿರಬೇಕು ಎಂದು ಅವನು ಅಂದಾಜು ಮಾಡಿದ್ದ. ಶ್ರೀಮಂತ ವರ್ಗದ ಮೂರು ನೂರು ಜನರನ್ನು ಒಂದು ದೊಡ್ಡ ಹೊಲಕ್ಕೆ ಕರೆಸಿ ಸಾಲಾಗಿ ನಿಲ್ಲಿಸಿ ಒಬ್ಬೊಬ್ಬರನ್ನಾಗಿ ಗುಂಡಿಕ್ಕಿ ಜನರೆದುರು ಕೊಂದರು.

ಸಾಮಾನ್ಯವಾಗಿ ಒಂದೊಂದು ಸಲಕ್ಕೆ ಕೆಲವೇ ಲಾಮಾರನ್ನು ಹಿಂಸಿಸಿ ಕೊಲ್ಲಲು—ನನ್ನ ಮಿತ್ರ ವೃದ್ಧ ಮಾಜಿ ಕ್ಯಾಬಿನೆಟ್ ಮಂತ್ರಿ ಸರಾಂಗ್ ಶಾಪೆಯನ್ನು ಹಿಂಸಿಸಿಕೊಂದಂತೆ—ಬಯಸುತ್ತಿದ್ದರು. ಜನರನ್ನು ನೀರಲ್ಲಿ ಮುಳುಗಿಸಿ, ಸುಡಿಸಿ, ಶಿಲುಬೆಗೇರಿಸಿ, ಜೀವಂತ ಹುಗಿದು ಕೊಲ್ಲಿಸುತ್ತಿದ್ದುದಕ್ಕೆ ಸಮಿತಿಯವರಿಗೆ ಸಾಕ್ಷಿಗಳು ಸಿಕ್ಕವು. ಈ ಎಲ್ಲ ಭಯಾನಕ ಸಂಗತಿಗಳಲ್ಲಿ ಸರ್ವಸಾಮಾನ್ಯವಾದ ಕೆಲ ಎಳೆಗಳಿವೆ: ಬಲಾತ್ಕಾರವಾಗಿ ಕೂಡಿಸಿದ ಜನತೆಯೆದುರು ಸುಳ್ಳು ಆರೋಪಗಳನ್ನು ಪುನರುಚ್ಚರಿಸುವುದು; ಬಹಿರಂಗವಾಗಿ ಚಿತ್ರಹಿಂಸೆ ಕೊಟ್ಟು ಆ ಮೇಲೆ ಕೊಲ್ಲುವುದು. ಲಿಟಾಂಗ್ ಮಠದಲ್ಲಿ ಸಾರ್ವಜನಿಕರು ಒಂದು ರಾಕ್ಷಸೀ ಪರೀಕ್ಷೆಯನ್ನು ನೋಡುವಂತೆ ಮಾಡಲಾಯಿತು: ಲಾಮಾರು ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಲಾರರು ಎಂದು. ನೋರಿಜೆನ್ ಮತ್ತು ನೋ-ಸೊಗ್ ಜೆನ್ ಎಂಬ ಇಬ್ಬರು ಲಾಮಾರಿಗೆ ಗುಂಡಿಕ್ಕಲಾಯಿತು. ಆದರೆ ಗುಂಡಿನೇಟಿನಿಂದ ಅವರು ಸಾಯದಂತೆ ನೋಡಿಕೊಳ್ಳಲಾಗಿತ್ತು. ಆಮೇಲೆ

ನೋರ್ಬಿಜೆನ್‌ನ ಮೇಲೆ ಕುದಿಯುವ ನೀರನ್ನು ಸುರಿದು ಬಳಿಕ ಅವನ ಕತ್ತು ಹಿಸುಕಲಾಯಿತು. ನೋ-ಸೊಗನನ್ನು ಕಲ್ಲಿನಿಂದ ಹೊಡೆದು ಆಮೇಲೆ ಕೊಡಲಿಯಿಂದ ಕೊಂದರು.

ಈ ಅತ್ಯಾಚಾರ ಧಾರ್ಮಿಕ ಧುರೀಣರಿಗಷ್ಟೇ ಸೀಮಿತವಾಗಿರಲಿಲ್ಲ. ಒಂದು ಹಳ್ಳಿಯಲ್ಲಿ ಚೊಪೆಲ್ ಗ್ಯಾಲ್ಟ್ಸೋ ಮತ್ತು ಡೋಲ್ಮಾ ಕ್ಯಾಪ್ ಎಂಬಿಬ್ಬರು ಧರ್ಮಭೀರು ಸಾಮಾನ್ಯರನ್ನು ಜನರೆದುರು ತರಲಾಯಿತು. ಅವರನ್ನು ಒಂದು ಗಿಡಕ್ಕೆ ಕಟ್ಟಿಹಾಕಿ ಚೀನೀಯರು ಸಾರಿದರು: "ಧರ್ಮದಲ್ಲಿ ನಂಬಿಗೆಯಿಟ್ಟು ಲಾಮಾರಿಗೆ ಹಣ ಕೊಡುತ್ತಿದ್ದ ಇಬ್ಬರು ಇಲ್ಲಿದ್ದಾರೆ. ಅವರು ಬದುಕಿದ್ದರೆ ತರುಣರಿಗೆ ಮತ್ತು ಮಕ್ಕಳಿಗೆ ಅವರು ಒಂದು ಕೆಟ್ಟ ಮೇಲ್ಪಂಕ್ತಿವಾಗುವರು" ಅವರಿಬ್ಬರನ್ನೂ ಒಂದು ತಗ್ಗಿನ ಅಂಚಿಗೊಯ್ದು ಬೆನ್ನಿಗೆ ಗುಂಡಿಕ್ಕಲಾಯಿತು.

ತಮ್ಮ ಸಂಯೋಜಿತ ಧರ್ಮ ವಿರೋಧಿ ಯೋಜನೆಯಲ್ಲಿ ಚೀನೀಯರು ತಿಬೇಟಿನ ಮಕ್ಕಳತ್ತ ವಿಶೇಷ ಲಕ್ಷ್ಯ ಪೂರೈಸುತ್ತಿದ್ದರು. ತಿಬೇಟಿನ ನಿರಾಶ್ರಿತ ಸಮಸ್ಯೆಯ ವಿಚಾರದಲ್ಲಿ ದುಡಿಯುತ್ತಿದ್ದ ನಮಗೆಲ್ಲ ಮೊದಲೇ ಗೊತ್ತಾಗಿದ್ದಂತೆ, ಚೀನಕ್ಕೆ ಟ್ರಕ್ಕುಗಟ್ಟಲೆ ಹುಡುಗರನ್ನು ಒಯ್ದುದ್ದು ಅಂತರ್‌ರಾಷ್ಟ್ರೀಯ ನ್ಯಾಯಾಧೀಶ ಸಮಿತಿಯವರಿಗೂ ತಿಳಿಯಿತು. ಈ ಹುಡುಗರನ್ನು ಒಯ್ಯುವುದರಲ್ಲಿ ಅವರನ್ನು ತಂದೆ ತಾಯಿಗಳ ಮತ್ತು ಧಾರ್ಮಿಕ ವರ್ಚಸ್ಸಿನಿಂದ ದೂರವಿರಿಸುವುದೇ ಚೀನೀಯರ ಮುಖ್ಯೋದ್ದೇಶವಾಗಿತ್ತು. "ತುಂಬ ಧಾರ್ಮಿಕ ವಾತಾವರಣದಿಂದ ಕಮ್ಯುನಿಸ್ಟ್ ಸಮಾಜದ ವಾತಾವರಣಕ್ಕೆ ದೊಡ್ಡ ಸಂಖ್ಯೆಯಲ್ಲಿ ಚಿಕ್ಕ ಮಕ್ಕಳನ್ನು ಸ್ಥಳಾಂತರಿಸುವುದರಿಂದ, ಆ ಮಕ್ಕಳು ತಿಬೇಟಿಗೆ ಮರಳಲಿ ಬಿಡಲಿ, ಬುದ್ಧಧರ್ಮದಿಂದ ಬಹು ದೂರವಿರುವ ಒಂದು ಹೊಸ ಪೀಳಿಗೆಯನ್ನು ಸೃಷ್ಟಿಸಿದಂತಾಗುವುದು" ಹೀಗೆ ಕಮ್ಯುನಿಸ್ಟರು ಎಣಿಸಿದ್ದರು ಎಂದು ಸಮಿತಿಯವರು ಅಭಿಪ್ರಾಯಪಟ್ಟಿರುವರು.

ಆಕ್ರಮಣದ ಮೊದಲ ವರ್ಷಗಳಲ್ಲಿ ಚೀನೀಯರು ೮ ರಿಂದ ೧೫ ವರ್ಷದ ಮಕ್ಕಳ ಮೇಲೆ ಲಕ್ಷ್ಯವಿಟ್ಟರು. ಆ ಮೇಲೆ ಅವರು ಅದಕ್ಕೂ ಚಿಕ್ಕವರನ್ನೂ ಕೊನೆಗೆ ಕೂಸುಗಳನ್ನೂ ಒಯ್ಯತೊಡಗಿದರು. ಕೆಲ ಪ್ರದೇಶಗಳಲ್ಲಿ ಹುಟ್ಟಿದ ಮಕ್ಕಳೆಲ್ಲರ ವರದಿ ಒಪ್ಪಿಸಬೇಕಿತ್ತು. ಹುಟ್ಟಿ ೧೦-೧೫ ದಿನಗಳಾದ ನಂತರ ಆ ಕೂಸುಗಳನ್ನು ಕಮ್ಯುನಿಸ್ಟರು ಒಯ್ಯುತ್ತಿದ್ದರು. ಕೆಲ ಹಳ್ಳಿಗಳಲ್ಲಿ ಎಲ್ಲ ಮಕ್ಕಳನ್ನೂ ಒಯ್ದರೆ ಕೆಲ ಹಳ್ಳಿಗಳಲ್ಲಿ ಇಂತಿಷ್ಟು ಎಂದು ವಿಧಿಸುತ್ತಿದ್ದರು.

ಹುಡುಗ-ಹುಡುಗಿಯರಿಗೆ ಚಲಚ್ಚಿತ್ರಗಳನ್ನು ತೋರಿಸಿ ಚೀನದಲ್ಲಿ ನೀವು ಇಂಥ ಇನ್ನೂ ಅನೇಕ ಚಿತ್ರಗಳನ್ನು ನೋಡುವಿರಿ ಎಂದು ಅವರಿಗೆ ಹೇಳುವುದು ಕಮ್ಯುನಿಸ್ಟರ ಗತ್ತುಗಳಲ್ಲೊಂದಾಗಿತ್ತು. ಮಕ್ಕಳು ಹೋಗಲು ಒಪ್ಪಿದರೆ ಆತಂಕ ಮಾಡಬಾರದೆಂದು ತಂದೆ ತಾಯಿಗಳಿಗೆ ವಿಧಿಸಲಾಗುತ್ತಿತ್ತು. ಮಕ್ಕಳು ಈ ಬಲೆಗೆ ಸಿಲುಕದಿದ್ದರೆ ತಂದೆ ತಾಯಿಗಳ ಮೇಲೆ ಅದರ ದೋಷ ಹೊರಿಸಿ ಅವರನ್ನು ಬಹಿರಂಗವಾಗಿ ಹೊಡೆಯುತ್ತಿದ್ದರು. ನಿಷೇಧ ವ್ಯಕ್ತಪಡಿಸಿದ ಕೆಲ ತಂದೆ ತಾಯಿಗಳನ್ನು ಮರಣದಂಡನೆಗೊಳಪಡಿಸಿದ ಬಗ್ಗೆ ವಿಚಾರಣಾ ಸಮಿತಿಗೆ ಸಾಕ್ಷಿ ದೊರೆತಿತು.

ಚೀನಕ್ಕೆ ಕಳಿಸದಿದ್ದ ಮಕ್ಕಳನ್ನು ತಿಬೇಟಿನಲ್ಲಿ ಸ್ಥಾಪಿಸಿದ ಕಮ್ಯುನಿಸ್ಟ್ ಶಾಲೆಗಳಿಗೆ ಕಳಿಸುತ್ತಿದ್ದರು. ತಮ್ಮ ಮಕ್ಕಳನ್ನು ಈ ಶಾಲೆಗೆ ಕಳಿಸದಿದ್ದವರಿಗೆ ಆಹಾರ ಸಿಗದಂತೆ ಮಾಡುತ್ತಿದ್ದರು. ಕಮ್ಯುನಿಜಂನ್ನು ವಿರೋಧಿಸಿದ ತಂದೆ-ತಾಯಿಗಳನ್ನು ಪೀಡಿಸಲು ಮಕ್ಕಳಿಗೆ ಉತ್ತೇಜನ ಕೊಡಲಾಗುತ್ತಿತ್ತು. ೧೮ ವರ್ಷದ ಹುಡುಗನೊಬ್ಬ ತನ್ನ ತಂದೆ ಪ್ರಾರ್ಥನಾಚಕ್ರವನ್ನು ತಿರುಗಿಸುವುದನ್ನು ಕಂಡಾಗ ಅವನನ್ನು ಕ್ರೂರವಾಗಿ ಒದೆಯಲಾರಂಭಿಸಿದ. ತಂದೆ ತನ್ನನ್ನು ರಕ್ಷಿಸಿಕೊಳ್ಳಲು ಯತ್ನಿಸಿದಾಗ ಚೀನೀ ಸೈನಿಕರು

ಅಡ್ಡ ಬಂದು ಹುಡುಗ ಮಾಡುತ್ತಿರುವುದು ಸರಿ, ಒದೆತ ತಿನ್ನು ಎಂದರು. ಹಿಂದಿನಿಂದ ಆ ತಂದೆ ಬಾವಿ ಹಾರಿ ಪ್ರಾಣ ಬಿಟ್ಟ. ಸುಯೋಜಿತ ವಾದ ಕೋಲಾಹಲವನ್ನೆಬ್ಬಿಸಿ ಪರಂಪರಾಗತ ಕುಟುಂಬ ವ್ಯವಸ್ಥೆಯನ್ನು ಹದಗೆಡಿಸುವುದು ಕಮ್ಯುನಿಸ್ಟರ ಧೋರಣವಾಗಿತ್ತು. "ನಿನ್ನ ತಾಯಿ ಎಂದಾದರೂ ನಿನ್ನನ್ನು ಹೊಡೆದಿರುವಳೇ? ಈಗ ಅವಳನ್ನು ಹೊಡೆಯುವುದು ನಿನ್ನ ಸರತಿ" ಎಂದು ಒಬ್ಬ ಹುಡುಗನಿಗೆ ಹೇಳಿದರು.

ಈ ಕ್ರೂರ ದಬ್ಬಾಳಿಕೆ ಒಂಬತು ವರ್ಷ ನಡೆದ ಬಳಿಕ ಕಮ್ಯುನಿಸ್ಟರು ಕೊನೆಯ ಅವ ಮಾನವನ್ನು ತಿಬೇಟಿನ ಮುಖದ ಮೇಲೆ ಎಸೆದರು. ೧೯೫೯ ರ ಮಾರ್ಚ್ ತಿಂಗಳಲ್ಲಿ ತಿಬೇಟಿನಲ್ಲಿರುವ ಚೀನೀ ಸೈನ್ಯದ ಪೊಲಿಟಿಕಲ್ ಕಮಿಸಾರ್ ಲೆ. ಜ. ತಾನ್ ಕುವಾನ್-ಪಾವರು ತಿಬೇಟನ ದೇವರಾಜ ದಲಾಯಿ ಲಾಮಾರು ಪರಿವಾರರಹಿತರಾಗಿ ಚೀನೀ ಮಿಲಿಟರಿ ಕೇಂದ್ರ ಠಾಣೆಗೆ ಹಾಜರಾಗಬೇಕು ಎಂದು ಉದ್ಧಟತನದ ಪತ್ರವೊಂದನ್ನು ಬರೆದರು. ಈ ಆಜ್ಞೆ ಅತ್ಯಂತ ಅವಮಾನಕಾರಕವಾಗಿತ್ತು. ಏಕೆಂದರೆ ಬುದ್ಧಾವತಾರರಾದ ದಲಾಯಿ ಲಾಮಾರು ತಮ್ಮ ಹಿರಿ ಧರ್ಮಗುರುಗಳ ಮತ್ತು ದರಬಾರಿನವರ ಜೊತೆಯಲ್ಲಲ್ಲದೆ ಬಹಿರಂಗದಲ್ಲಿ ಎಲ್ಲಿಯೂ ಕಾಣಿಸಿಕೊಳ್ಳಬಾರದು ಎಂದು ಧರ್ಮ ಕಟ್ಟಳೆಯಿತ್ತು. ಇದರ ಹಿಂದೆ ದಲಾಯಿ ಲಾಮಾರನ್ನು ಸಿಂಹಾಸನಚ್ಯುತರನ್ನಾಗಿ ಮಾಡಲಾಗುವುದು, ಅವರ ಸಲಹೆಗಾರರಿಂದ ಪ್ರತ್ಯೇಕವಾಗಿಡಲಾಗುವದು, ಆಮೇಲೆ ಅವರನ್ನು ಕಮ್ಯುನಿಸ್ಟರ ಅಸಹಾಯ ಕೈಗೊಂಬೆಯನ್ನಾಗಿ ಮಾಡಲಾಗುವುದು ಎಂಬ ಬೆದರಿಕೆಯೂ ಇತ್ತು.

ಈ ಆಜ್ಞೆಯ ಪರಿಣಾಮ ದಲಾಯಿ ಲಾಮಾ ಭಾರತಕ್ಕೆ ಓಡಿ ಬರುವುದರಲ್ಲಾಯಿತು. ಅವರು ಭಾರತದಲ್ಲಿ ವಿಚಾರಣಾ ಸಮಿತಿಯವರೆದುರು "ತಿಬೇಟನ್ನು ವಿಮೋಚನಗೊಳಿಸುವ ನೆವದಲ್ಲಿ ಚೀನೀಯರು ತಿಬೇಟಿನ ಮೇಲೆ ದಾಳಿ ಮಾಡಿದರು. ತಿಬೇಟಿನ ಸ್ವಾತಂತ್ರ್ಯಕ್ಕಾಗಿ ಕಾದುತ್ತ ಪ್ರಾಣ ತೆತ್ತ ಆ ನನ್ನ ಧೀರ ದೇಶವಾಸಿಗಳಿಗೆ ವಿಮೋಚನೆ ಸಿಕ್ಕಿದೆ: ನನ್ನ ದೇಶದ ಉಳಿದವರೆಲ್ಲ ಕ್ರೌರ್ಯ ಮತ್ತು ಸಾಮ್ರಾಜ್ಯ ವಿಸ್ತಾರ ಧೋರಣಕ್ಕಾಗಿ ಪ್ರಸಿದ್ಧವಾಗಿರುವ ವಿದೇಶೀ ಶಕ್ತಿಗೆ ಗುಲಾಮರಾಗಿದ್ದಾರೆ" ಎಂದರು.

ದೇವರಾಜ ದಲಾಯಿ ಲಾಮಾರ ಪಲಾಯನ ತಿಬೇಟಿನವರೆಲ್ಲ ಬಂಡೇಳುವಂತೆ ಮಾಡಿತು. ಚೀನೀಯರು ಅದನ್ನು ಪಾಶವೀ ರೀತಿಯಲ್ಲಿ ಸದೆಬಡಿದರು. ಸಾವಿರಾರು ತಿಬೇಟಿಯನ್ನರು ಕೊಲ್ಲಲ್ಪಟ್ಟರು. ದೇಶದ ದುರ್ಗಮ ಸ್ಥಳಗಳಲ್ಲಿ ಇನ್ನೂ ಬಂಡುಗಾರರ ಪ್ರತಿಭಟನೆ ಇದ್ದೇ ಇದೆ.


ಹನ್ನೆರಡು ವರ್ಷಗಳ ಹಿಂದೆ ಸಂಯುಕ್ತರಾಷ್ಟ್ರ ಸಂಘದ ಸದಸ್ಯರಾಷ್ಟ್ರಗಳು ಜನಾಂಗಹತ್ಯೆಯ ಪ್ರತಿಬಂಧ ಮತ್ತು ಶಿಕ್ಷೆಯನ್ನು ಕುರಿತು ಒಂದು ಒಪ್ಪಂದವನ್ನು ಮಾಡಿಕೊಂಡವು. ಜನಾಂಗಹತ್ಯೆ ಯಾವುದೇ ಒಂದು ರಾಷ್ಟ್ರದ ಮೇಲೆ ಹೊರಿಸಬಹುದಾದ ಅತ್ಯಂತ ಘೋರ ಅಪರಾಧವಾಗಿದೆ. ತಿಬೇಟಿನಲ್ಲಿ ಚೀನೀಯರೆಸಗಿದ ಕೃತ್ಯಗಳ ಬಗ್ಗೆ ಮಾತಾಡುತ್ತ ದಲಾಯಿ ಲಾಮಾರು "ಜನತೆಯ ದೊಡ್ಡ ಭಾಗವನ್ನು ನಾಶ ಮಾಡಲು ಜನಾಂಗ ಹತ್ಯೆಯೆ ನಡೆಯಬೇಕು ಎಂದು ನನಗನಿಸುವುದಿಲ್ಲ. ವಿದೇಶೀ ಸರಕಾರವೊಂದು ಸಾಮೂಹಿಕ ಕೊಲೆಗಳ ಮೂಲಕ, ಗಡೀಪಾರಿನ ಮೂಲಕ ದೇಶದ ಸ್ವರೂಪವನ್ನು ಅಲ್ಲಿಯ ಜನರು ಅಲ್ಪ ಸಂಖ್ಯಾಕರಾಗುವಂತೆ, ಅವರ ಧರ್ಮ ಸಂಸ್ಕೃತಿ ಮತ್ತು ಅವರ ವೈಶಿಷ್ಟಗಳು ನಾಶವಾಗುವಂತೆ ಮಾಡಿದರೆ ಸಾಕಾಗುತ್ತದೆ. ತಿಬೇಟಿನಲ್ಲಿ ಸದ ಇದೇ ನಡೆಯುತ್ತಿದೆ" ಎಂದರು. *

Translated and reprinted by permission of Reader's Digest Association (Indian Edition) February, 1961.

೧೬೭೧ರ ಪ್ರಾರಂಭದಲ್ಲೊಂದು ದಿನ ಲಂಡನ್ ಗೋಪುರದಲ್ಲಿ ರಾಜರತ್ನ ಭಾಂಡಾರದ ಸಹಾಯಕ ಭಾಂಡಾರಿಯಾದ ಟಾಲ್ಬಟ್ ಎಡ್ವರ್ಡ್ಸ್‌ನನ್ನು ಕಾಣಲು ಒಬ್ಬ ಪಾದ್ರಿಯೂ ಅವನ ಹೆಂಡತಿಯೂ ಬಂದರು. ತಾನು "ಪಾದ್ರಿ ಬ್ಲಡ್" ಎಂದೂ ಪರಸ್ಥಳದವನೆಂದೂ ಹೇಳಿ ಆಗಂತುಕನು ತಾನು ಬಂದ ಉದ್ದೇಶವನ್ನು ವಿವರಿಸಿದನು. ಎಡ್ವರ್ಡ್ಸ್‌ನ ರಕ್ಷಣೆಯಲ್ಲಿದ್ದ ರಾಜಮುಕುಟ, ರಾಜದಂಡ ಮೊದಲಾದ ರಾಜಚಿಹ್ನಗಳ ದರ್ಶನಾಪೇಕ್ಷಿಯಾಗಿ ಆತ ಬಂದಿದ್ದ. ಲಂಡನ್ ಗೋಪುರದಲ್ಲಿ ಭದ್ರಕಾವಲಿನಲ್ಲಿದ್ದರೂ ಈ ಅಮೂಲ್ಯ ರಾಜಚಿಹ್ನಗಳನ್ನು ಪ್ರತಿಷ್ಠಿತ ನಾಗರಿಕರಿಗೆ ತೋರಿಸುವ ಪರಿಪಾಠವಿತ್ತು.


ಅಂದು ಕಿರೀಟ ಮತ್ತು ಇತರ ರಾಜಚಿಹ್ನಗಳು ಅಲ್ಲಿದ್ದುದೂ ಒಂದು ಆಕಸ್ಮಿಕವೇ. ಆಗಿನ ದೊರೆ ಎರಡನೇ ಚಾರ್ಲ್ಸನು ಎಂಥ ವಿಷಯಲೋಲುಪ ಮತ್ತು ದುಂದುಗಾರನಾಗಿದ್ದನೆಂದರೆ ರಾಜಕುಟುಂಬದ ಅಮೂಲ್ಯ ರತ್ನಾಭರಣಗಳನ್ನಷ್ಟೇ ಅಲ್ಲ, ಕಿರೀಟವನ್ನು ಕೂಡ ಕೆಲ ವೇಳೆ ಒತ್ತೆ ಹಾಕುತ್ತಿದ್ದನು !

ಭಾಂಡಾರಿ ಎಡ್ವರ್ಡ್ಸ್‌ನಿಗೆ ಈ "ಪಾದ್ರಿ" ನಿಜವಾಗಿ ಯಾರೆಂದು ಗೊತ್ತಿದ್ದರೆ ಅವನು ರಾಜಮುಕುಟಾದಿಗಳನ್ನು ಆಗಂತುಕನಿಗೆ ತೋರಿಸುವ ಮೌಢ್ಯವನ್ನು ಮಾಡುತ್ತಿರಲಿಲ್ಲ. ಏಕೆಂದರೆ ಈ ಬ್ಲಡ್ ಇಂಗ್ಲಂಡಿನ ರಾಜಸತ್ತೆಯ ಪರಮ ದ್ವೇಷಿಯಾಗಿದ್ದನು. ಅವನ ಹೆಸರು ಥಾಮಸ್ ಬ್ಲಡ್. ಎರಡನೇ ಚಾರ್ಲ್ಸನ ತಂದೆಯಾದ ಒಂದನೇ ಚಾರ್ಲ್ಸನ ರುಂಡ ಹಾರಿಸಿ ಹನ್ನೆರಡು ವರ್ಷ ಕಾಲ ಇಂಗ್ಲಂಡನ್ನು ಗಣರಾಜ್ಯವಾಗಿ ಮಾಡಿ ಆಳಿದ ಒಲಿವರ್ ಕ್ರಾಂವೆಲ್ಲನ ಬಂಟರಲ್ಲೊಬ್ಬನಾಗಿದ್ದ ಕರ್ನಲ್ ಥಾಮಸ್ ಬ್ಲಡ್‌ನು ಕ್ರಾಂವೆಲ್ಲನ ಮರಣಾನಂತರ ಪುನಃ ಇಂಗ್ಲಂಡಿನಲ್ಲಿ ರಾಜಸತ್ತೆ ತಲೆಯೆತ್ತಿದ್ದನ್ನು ಸರ್ವಥಾ ಕ್ಷಮಿಸಿರಲಿಲ್ಲ. ಕ್ರಾಂವೆಲ್ಲನು ಅವನಿ



ಗಿತ್ತಿದ್ದ ದೇಸಗತಿಯನ್ನು ಕಸಿದುಕೊಂಡು ಎರಡನೇ ಚಾರ್ಲ್ಸನು ಕರ್ನಲ್ ಬ್ಲಡ್‌ನ ದ್ವೇಷಕ್ಕೆ ಪುಟವನ್ನೇ ಕೊಟ್ಟಿದ್ದನು.

ಕರ್ನಲ್ ಬ್ಲಡ್ ಎರಡನೇ ಚಾರ್ಲ್ಸನ ವಿರುದ್ಧ ಒಂದಕ್ಕಿಂತ ಹೆಚ್ಚು ರಾಜದ್ರೋಹದ ಕೃತ್ಯಗಳನ್ನೆಸಗಿ ದೇಶದಲ್ಲೆಲ್ಲ ಒಂದು ತರಹದ ಭೀಮಸಾಹಸಿಯೆಂದು ಹೆಸರಾಗಿದ್ದನು. ಅವನು ಐರ್ಲಂಡಿನಲ್ಲೊಂದು, ಇಂಗ್ಲಂಡಿನಲ್ಲೊಂದು, ಸ್ಕಾಟ್ಲಂಡಿನಲ್ಲೊಂದು ಬಂಡಾಯದ ನಾಯಕತ್ವ ವಹಿಸಿದ್ದನು. ಬಂಡಾಯಗಳು ವಿಫಲವಾಗಿದ್ದವು; ಆದರೆ ಕರ್ನಲ್ ಬ್ಲಡ್ ಪ್ರತಿ ಸಾರಿಯೂ ಅಮಿತ ಕೌಶಲದಿಂದ ತಪ್ಪಿಸಿಕೊಂಡಿದ್ದನು. ತನ್ನನ್ನು ಹುಡುಕುತ್ತಿದ್ದ ರಾಜಭಟರ ಮೂಗಿನ ಕೆಳಗೇ ಅವನು ಇಂಗ್ಲಂಡಿನೊಳಗೆ ನುಸುಳಿ ಅರಸನ ಪಡೆಯ ಮೇಲೆ ಆಕಸ್ಮಿಕ ದಾಳಿ ಮಾಡಿ ಅವರ ವಶದಲ್ಲಿ ಸೆರೆಯಲ್ಲಿದ್ದ ತನ್ನೊಬ್ಬ ಸಂಗಡಿಗನನ್ನು ಬಿಡಿಸಿಕೊಂಡು ಹೋಗಿದ್ದನು. ತನ್ನ ರುಂಡಕ್ಕಾಗಿ ೫೦೦ ಪೌಂಡಿನ ಬಹುಮಾನ ಘೋಷಿತವಾಗಿದ್ದಾಗ



ಹತ್ತಿರವೇ ಕೆಂಟ್ ಪರಗಣೆಯಲ್ಲಿ ವೈದ್ಯವೇಷ ದಿಂದ ಹಲ ಕಾಲ ತಲೆಮರೆಸಿಕೊಂಡು ಹೊಸ ತಂತ್ರಗಳಲ್ಲಿ ಮಗ್ನನಾಗಿದ್ದನು. ೧೬೭೦ ರಲ್ಲಿ ಅವನು ಐರ್ಲಂಡಿನ ರಾಜಪ್ರತಿನಿಧಿಯೂ ಬ್ಲಡ್‌ನ ಆಸ್ತಿ ಕಸಿದುಕೊಳ್ಳಲು ಪ್ರೇರಕನೂ ಆಗಿದ್ದ ಅರ್ಮಾಂಡಿನ ಡ್ಯೂಕನನ್ನು ಒಂದು ತುಂಬಿದ ಸಮಾರಂಭದಲ್ಲಿ ಅಪಹರಿಸಿ ಹೆಡಮುರಿಗೆ ಬಿಗಿದು ಕುದುರೆಯ ಬೆನ್ನಿಗೆ ಕಟ್ಟಿ ವಧೆಗಾಗಿ ಸಾಗಿಸಿದನು. ಆಯುಷ್ಯವಿದ್ದುದರಿಂದ ಡ್ಯೂಕ್ ಹೇಗೋ ಪಾರಾದನು. ಆದರೆ ಥಾಮಸ್ ಬ್ಲಡ್ ಈ ಘಟನೆಯಿಂದ ಇನ್ನಷ್ಟು ಪ್ರಸಿದನಾದನು.

ಆದರೆ ಬ್ಲಡ್‌ನ ಪಾದ್ರಿ ವೇಷ ಎಷ್ಟು ಚೆನ್ನಾಗಿತ್ತೆಂದರೆ ಬಡಪಾಯಿ ಭಾಂಡಾರಿ ಎಡ್ವರ್ಡ್ಸ್ ಅವನನ್ನೂ ಅವನ ವೇಷಧಾರಿ ಹೆಂಡತಿಯನ್ನೂ (ಇವಳು ಯಾರೆಂದು ಕೊನೆಗೂ ಪತ್ತೆ ಹತ್ತಲಿಲ್ಲ. ಅವನ ನಿಜ ಹೆಂಡತಿ ಆ ಸಮಯದಲ್ಲಿ ಎಲ್ಲೋ ದೂರ ರುಗ್ಣಶಯ್ಯೆಯಲ್ಲಿದ್ದಳು.) ರಾಜ ಚಿಹ್ನಗಳನ್ನಿಟ್ಟ ಉಗ್ರಾಣಕ್ಕೆ ಕರೆದೊಯ್ದನು. ಇಬ್ಬರೂ ರಾಜಮುಕುಟ, ರಾಜದಂಡಾದಿಗಳನ್ನು ನೋಡುತ್ತಿದ್ದಾಗ ಒಮ್ಮೆಲೇ "ಪಾದ್ರಿ ಬ್ಲಡ್" ನ ಹೆಂಡತಿ "ಬವಳಿ" ಬಂದು ಬಿದ್ದಳು. ಭಾಂಡಾರಿ ಎಡ್ವರ್ಡ್ಸನ ಹೆಂಡತಿ ಅವಳಿಗೆ ಬ್ರಾಂಡಿ ಕೊಟ್ಟು ಶುಶ್ರೂಷೆ ಮಾಡುತ್ತಿದ್ದಾಗ ಬ್ಲಡ್ ಎಡ್ವರ್ಡ್ಸ್ ನೊಡನೆ ಹರಟುತ್ತ, ಉಗ್ರಾಣ ಮತ್ತು ರಾಜ ಚಿಹ್ನದ ಕಪಾಟುಗಳ ಇರವು ತೆರವುಗಳನ್ನು ಪರಿಶೀಲಿಸಿದನು. ಠಕ್ಕ ಹೆಂಡತಿ ಯೋಗ್ಯ ಕಾಲ ದಲ್ಲಿ ತನ್ನ ಠಕ್ಕ ಮೂರ್ಛೆಯಿಂದ ತಿಳಿದೆದ್ದಳು. "ಪಾದ್ರಿ ಬ್ಲಡ್" ಮೋಹಕರೀತಿಯಲ್ಲಿ ಎಡ್ವರ್ಡ್ಸ ದಂಪತಿಗಳಿಗೆ ಕೃತಜ್ಞತೆಗಳನ್ನರ್ಪಿಸಿ ಬೀಳ್ಕೊಂಡನು.

"ಪಾದ್ರಿ ಬ್ಲಡ್" ಲಂಡನ್ ಗೋಪುರಕ್ಕೆ ಬಂದುಹೋಗುವುದು ಹೆಚ್ಚಾಯಿತು. ಕೆಲವೇ ದಿನಗಳಲ್ಲಿ ಅವನು ಎಡ್ವರ್ಡ್ಸ್ ದಂಪತಿಗಳನ್ನು ಸಂಪೂರ್ಣವಾಗಿ ತನ್ನ ಮಾಯಾಜಾಲದಲ್ಲಿ ಕೆಡವಿಬಿಟ್ಟಿದ್ದನು. ಎಡ್ವರ್ಡ್ಸ್‌ನಿಗೆ ವಿವಾಹ ಯೋಗ್ಯಮಗಳೊಬ್ಬಳಿದ್ದಳು. ಅವಳ ಮದುವೆಯ ಪ್ರಸ್ತಾಪವೆತ್ತಿ ಒಂದು ದಿನ ಬ್ಲಡ್ ತನಗೊಬ್ಬ ಶ್ರೀಮಂತ, ತರುಣ ಸೋದರಳಿಯನಿದ್ದಾನೆಂದು ಹೇಳಿದನು. ಅವನೊಡನೆ ಏಕೆ ವಿವಾಹ ಸಂಬಂಧ ಕೂಡಬಾರದು? "ಅವನನ್ನೊಮ್ಮೆ ಇಲ್ಲಿ ಕರೆತರುತ್ತೇನೆ. ನಿಮ್ಮಮಗಳೂ ಅವನನ್ನು ನೋಡಲಿ" ಎಂದನಾತ. ಎಡ್ವರ್ಡ್ಸ್ ದಂಪತಿಗಳು ಬೋನಿನಲ್ಲಿ ಬಿದ್ದರು.



೧೬೭೧ ಮೇ ತಿಂಗಳಲ್ಲೊಂದು ಬೆಳಗ್ಗೆ ಕನ್ಯೆಯೂ ಅವಳ ತಾಯಿಯೂ ಶೃಂಗಾರ ಸಂಭ್ರಮದಲ್ಲಿ ಮಗ್ನರಾಗಿದ್ದಾಗ ಥಾಮಸ್ ಬಡ್ಲ್ ತನ್ನ ಮೂವರು ಸಂಗಡಿಗರು ಮತ್ತು ನಾಲ್ಕು ಕುದುರೆಗಳೊಡನೆ ಲಂಡನ್ ಗೋಪುರಕ್ಕೆ ಬಂದನು. ಕುದುರೆಗಳನ್ನೂ ಒಬ್ಬ ಕಾವಲುಗಾರನನ್ನೂ ಹೊರಗೆ ನಿಲ್ಲಿಸಿ ಬ್ಲಡ್ ಮತ್ತು ಇನ್ನಿಬ್ಬರು ಎಡ್ವರ್ಡ್ಸ್‌ನ ಬೀಡಾರವನ್ನು ಪ್ರವೇಶಿಸಿದರು. ಇಷ್ಟರೊಳಗೆ ಬ್ಲಡ್ ಲಂಡನ್ ಗೋಪುರದ ಕಾವಲುಗಾರರಿಗೆಲ್ಲ ಎಡ್ವರ್ಡ್ಸ್‌ನ ಆತ್ಮೀಯನೆಂದು ಪರಿಚಿತನಾಗಿ

ಹೋಗಿದ್ದುದರಿಂದ ಅವರ ಪ್ರವೇಶಕ್ಕೆ ಯಾವ ಆತಂಕವೂ ಬರಲಿಲ್ಲ.

ಪಾದ್ರಿ ಬ್ಲಡ್ ಒಳಗೆ ಬಂದು, ಆಕಸ್ಮಿಕ ತೊಂದರೆಯಿಂದ ತನ್ನ ಸೋದರಳಿಯ ಬರುವುದು ಸ್ವಲ್ಪ ವಿಲಂಬವಾಗಲಿದೆಯೆಂದು ವಿಷಾದ ಪ್ರದರ್ಶಿಸಿ, ಆ ವರೆಗೆ ತನ್ನ ಮಿತ್ರರಿಗೆ ರಾಜಚಿಹ್ನಗಳನ್ನು ತೋರಿಸುವುದರಲ್ಲಿ ಹೊತ್ತು ಕಳೆಯಬಹುದಲ್ಲ ಎಂದನು. ಉಗ್ರಾಣದಲ್ಲಿ ಪ್ರವೇಶಿಸಿ ಬಾಗಿಲು ಹಾಕಿದ್ದೇ ತಡ, ಮೂವರೂ "ವರಪಕ್ಷ" ದವರು ಎಡರ್ಡ್ಸನನ್ನು ಸುತ್ತಿಗೆಯಿಂದ ಕುಟ್ಟಿ ಕೆಡವಿ, ಬಾಯಿಗೆ ಅರಿವೆ ತುರುಕಿ, ಕಟ್ಟಿ ಹಾಕಿದರು. ಅವನು ಮತೂ ಪ್ರತಿಭಟನೆ ತೋರಲಣಿಯಾದಾಗ ಥಾಮಸನು ಅವನನ್ನು ತಿವಿದು ಯಮಸದನಕ್ಕಟ್ಟಿದನು. ಥಾಮಸನು ರಾಜ ಕಿರೀಟವನ್ನು ಮುದುಡೆ ಮಾಡಿ ತನ್ನ ಮೇಲಂಗಿಯಲ್ಲಿ ಮುಚ್ಚಿಟ್ಟುಕೊಂಡನು. ಮುದುಡೆ ಮಾಡುವಾಗ ಅದರಲ್ಲಿದ್ದ ಪ್ರಸಿದ್ಧ "ಕೃಷ್ಣ ರಾಜಕುಮಾರ ಗೋಮೇದಕ" ವೆಂದು ಹೆಸರಾದ ಕೆಂಪು ರತ್ನ ಕಿತ್ತು ಕೆಳಗೆ ಬಿತ್ತು; ಅದನ್ನು ಥಾಮಸ್ ಜೇಬಿಗೆ ತುರುಕಿದ; ಇನ್ನೊಬ್ಬನು ರಾಜಗೋಲವನ್ನು ಚಲ್ಲಣದಲ್ಲಿ ಅಡಗಿಸಿಕೊಂಡನು; ಮತ್ತೊಬ್ಬನು ರಾಜದಂಡವನ್ನು ಅಡಗಿಸಿಕೊಳ್ಳಲು ಅನುಕೂಲವಾಗುವಂತೆ ಅದನ್ನು ಮುರಿಯುವುದರಲ್ಲಿದ್ದನು.

ಅಷ್ಟರಲ್ಲಿ ಹೊರಗೆ ಕಾವಲು ನಿಂತಿದ್ದ ಥಾಮಸ್ ಬ್ಲಡ್‌ನ ಕೈವಾರಿ ಎಚ್ಚರಿಕೆಕೊಟ್ಟನು. ಘಾತವಾಗಿ ಹೋಗಿತ್ತು. ಸೈನ್ಯದಿಂದ ರಜೆ ಪಡೆದಿದ್ದ ಟಾಲ್ಬಟ್ ಎಡ್ವರ್ಡ್ಸ್‌ನ ಮಗನು ಅಲ್ಲಿಗೆ ಬಂದಿದ್ದನು. ಬ್ಲಡ್‌ನ ಕಾವಲುಗಾರ ಅವನನ್ನು ತಡೆದನು; ಜಗಳವಾಗಿ ಕಾವಲುಗಾರ ಅವನನ್ನು ಕಠಾರಿಯಿಂದ ತಿವಿದು ಮೂಲೆಯಲ್ಲಿ ಕೆಡವಿದನು.



"ರಾಜದ್ರೋಹ! ಕೊಲೆ!" ಎಂಬ ಅವನ ಕೂಗು ಕೇಳಿ ವರಪ್ರತೀಕ್ಷೆಯಲ್ಲಿದ್ದ ಅಲಂಕೃತ ವಧುವೂ ಅವಳ ತಾಯಿಯೂ ಮೇಲಂತಸ್ತಿನಿಂದ ಕೆಳಗೆ ಧಾವಿಸಿ ಸತ್ತುಬಿದ್ದಿದ್ದ ತಂದೆಯನ್ನೂ ರಕ್ತ ಸುರಿಸುತ್ತಿದ್ದ ಮಗನನ್ನೂ ಕಂಡರು. "ಪಾದ್ರಿ" ಬ್ಲಡ್" ಮತ್ತು "ವರಪಕ್ಷ" ದವರೂ ಅವರೊಡನೆ ರಾಜಮುಕುಟ, ರಾಜಗೋಲಗಳೂ ಕಣ್ಮರೆಯಾಗಿಹೋಗಿದ್ದವು.

ಲಂಡನ್ ಗೋಪುರದಲ್ಲಿ ಕೋಲಾಹಲ ಮಸಗಿತು. ಕಾವಲುಗಾರರು ಅಶ್ವಾರೂಢರಾಗಿ ಸಾಗಿದ್ದ ಕಪಟ ನಾಟಕಕಾರರನ್ನು ಬೆನ್ನಟ್ಟಿದರು. ಥಾಮಸ್ ಪಾರಾಗಿಯೆ ಹೋಗುವವನಿದ್ದ. ಆದರೆ ಅವನು ಗೋಪುರದ ಹೊರಗೆ ತಪ್ಪು ರಸ್ತೆಗೆ ತಿರುಗಿ ಮೋಸ ಹೋದ. ಅವನ ಕುದುರೆಯ ಕಾಲೂ ಜಾರಿತು. ರಾಜಗೋಲಕವನ್ನು ಬಚ್ಚಿಟ್ಟುಕೊಂಡಿದ್ದಾತ ಓಡಲು ಅದರಿಂದ ಅಡಚಣೆಯಾದುದರಿಂದ ಅದನ್ನು ಒಗೆದು ಓಡಿದ. ಇಬ್ಬರನ್ನೂ ಕಾವಲುಗಾರರು ಹಿಡಿದರು. ಉಳಿದಿಬ್ಬರು ಮಾತ್ರ ಗದ್ದಲದಲ್ಲಿ ಹೇಗೋ ತಪ್ಪಿಸಿಕೊಂಡುಬಿಟ್ಟರು.

ವಾರ್ತೆ ಕೇಳಿ ಇಡೀ ದೇಶವೇ ಉತ್ತೇಜಿತವಾಯಿತು. ಕಟ್ಟಕಡೆಗೆ ಈ ಮಹಾಮಾಯಾವಿ, ಅದೂ ಘೋರ ಅಪರಾಧ ಮಾಡುತ್ತಿರುವಾಗಲೇ ಸಿಕ್ಕಿಬಿದ್ದಿದ್ದ. ಅವನಿಗೆ ಏನು ಶಿಕ್ಷೆಯಾದೀತು ? ಮರಣ ಎಂಬುದರಲ್ಲಿ ಯಾರಿಗೂ ಸಂದೇಹವಿರಲಿಲ್ಲ. ಇದೇ ಲಂಡನ್ ಗೋಪುರ ರಾಜದ್ರೋಹಿಗಳನೇಕರ ಶಿರಶ್ಛೇದಕ್ಕೆ ಸಾಕ್ಷಿಯಾಗಿತ್ತು. ಬ್ಲಡ್‌ಗೆ ಯಾವ ತರಹದ ಚಿತ್ರಹಿಂಸಾಪೂರ್ವಕ ಮೃತ್ಯು ಕಾದಿದೆಯೆಂದಿಷ್ಟೇ ಜನ ಕುತೂಹಲದಿಂದ ಕಾದಿತ್ತು.

ಆದರೆ ಅನಂತರ ನಡೆದದ್ದನ್ನು ನೋಡಿ

ಇಂಗ್ಲಂಡು ಅವಾಕ್ಕಾಯಿತು. ಈ ಬಂಡುಖೋರ, ಕೊಲೆಗಡಕ, ರಾಜದ್ರೋಹಿಗೆ ಮರಣದಂಡನೆಯಿರಲಿ, ಸೆರೆಮನೆವಾಸ ಕೂಡ ಆಗಲಿಲ್ಲ. ಕೆಲ ದಿನಗಳಲ್ಲೇ ಆತ ಪ್ರತಿಷ್ಠಿತ ನಾಗರಿಕನಾಗಿ ಸಮಾಜದಲ್ಲಿ ಕಾಣಿಸಿಕೊಳ್ಳತೊಡಗಿದನು.

ಅದು ನಡೆದದ್ದು ಹೀಗೆ: ಥಾಮಸನನ್ನು ಹಿಡಿದು ಅಧಿಕಾರಿಗಳ ಮುಂದೆ ತಂದಾಗ ಆತ ಎಲ್ಲವನ್ನೂ ಸ್ವತಃ ಅರಸನೊಬ್ಬನ ಮುಂದೆಯೆ ಹೇಳುವುದಾಗಿ ಪಟ್ಟುಹಿಡಿದು ಕುಳಿತನು. ನಿರುಪಾಯರಾಗಿ ಅಧಿಕಾರಿಗಳು ಏಕಾಂತದಲ್ಲಿ ಅರಸನ ಮುಂದೆ ಅವನನ್ನು ನಿಲ್ಲಿಸಿದರು. ಅವನು ಅರಸನಿಗೆ ಏನು ಹೇಳಿದನೆಂದು ಯಾರಿಗೂ ಇಂದಿಗೂ ಸರಿಯಾಗಿ ಗೊತ್ತಿಲ್ಲ. ಆದರೆ ಸಂದರ್ಶನದ ಅಂತ್ಯದಲ್ಲಿ ಥಾಮಸನ ಜಮೀನು ಮತ್ತು ೫೦೦ ಪೌಂಡಿನ ವರ್ಷಾಶನ ಅವನಿಗೆ ದೊರೆತಿತ್ತು!

ಥಾಮಸನು ನಿರ್ಭಯವಾಗಿ ತನ್ನ ಕೃತ್ಯಗಳನ್ನೂ ಅವುಗಳ ಹಿಂದಿದ್ದ ಹೇತುವನ್ನೂ ಅರಸನಿಗೆ ವಿವರಿಸಿದನೆಂದೂ ಆದರೆ ತಪ್ಪಿಸಿಕೊಂಡ ಸಂಗಡಿಗರ ಹೆಸರು ದೆಸೆಗಳನ್ನು ಮಾತ್ರ ತಿಳಿಸಲು ನಿರಾಕರಿಸಿದನೆಂದೂ ತನ್ನ ಜೀವಕ್ಕೆ ಅಪಾಯವೇನಾದರೂ ಆದರೆ ತನ್ನ ಗುಪ್ತ ಮಿತ್ರರು ಅರಸನ ಮೇಲೆ ಸೇಡು ತೀರಿಸಿಕೊಳ್ಳದೆ ಬಿಡರೆಂಬುದಾಗಿ ಹೆದರಿಕೆ ಹಾಕಿದನೆಂದೂ ಹೇಳಲಾಗುತ್ತದೆ. ಇಷ್ಟೇ ಅಲ್ಲ, ರಾಜನ ಕೊಲೆಗಾಗಿ ತಾನು ಹೂಡಿದ್ದ ಹಂಚಿಕೆಯೊಂದನ್ನು ಬಹಿರಂಗಪಡಿಸಿ ಎರಡನೇ ಚಾರ್ಲಸ್ ಒಂದು ದಿನ ನದಿಯ ದಂಡೆಯಲ್ಲಿದ್ದಾಗ ಅವನನ್ನು ಇತಿಶ್ರೀ ಮಾಡುವ ಸಂಚು ಸಂಪೂರ್ಣವಾಗಿ ಸಿದ್ಧವಾಗಿತ್ತೆಂದೂ ಆದರೆ ಅರಸನ ಗಂಭೀರ ಮುಖಭಾವವನ್ನು ನೋಡಿ ಏಕೋ ತನಗೆ ತನ್ನ ಹಂಚಿಕೆಯನ್ನು ಪೂರ್ಣಗೊಳಿಸಲು ಮನಸಾಗಲಿಲ್ಲವೆಂದೂ ತಿಳಿಸಿದನಂತೆ. ಇಂಥ ಬಲವದ್ವೈರಿಯನ್ನು ದಂಡಕ್ಕಿಂತ ದಾನೋಪಾಯದಿಂದ ವಶಪಡಿಸಿಕೊಳ್ಳುವುದು ಲೇಸೆಂದು ಅರಸನಿಗೆ ಅನಿಸಿರಬೇಕು. ★

ಸ್ವಾಮಿ ದಯಾನಂದರು ಚಿಕ್ಕವರಿರುವಾಗಲೇ ಶಿಷ್ಯರೆಂದು ಗುರುಗಳ ಕಡೆಗೆ ಇರಲು ಹೋದರು. ವೃದ್ಧ ಗುರುವಿಗೆ ಕಣ್ಣು ಕಾಣಿಸುತ್ತಿರಲಿಲ್ಲ. ವಿದ್ವಾನ್‌ರಾದ ಗುರುಗಳು ಸಿಟ್ಟಿಗೆ ಬಂದರೆ ಜಮದಗ್ನಿಯ ಅವತಾರವನ್ನು ತಾಳುತ್ತಿದ್ದರು. ಅವರ ಸ್ನಾನಕ್ಕಾಗಿ ದಿನಾಲೂ ೨೫-೩೦ ಕೊಡ ನೀರನ್ನು ಬಹಳ ದೂರದಿಂದ ತರಬೇಕಾಗುತ್ತಿತ್ತು. ಮತ್ತು ಆಶ್ರಮವನ್ನು ಸ್ವಚ್ಛವಾಗಿ ಇಡಬೇಕಾಗುತ್ತಿತ್ತು. ಇದೆಲ್ಲವನ್ನೂ ಚಿಕ್ಕ ದಯಾನಂದರೇ ಮಾಡುತ್ತಿದ್ದರು.

ಒಂದು ದಿನ ನಸುಕಿನಲ್ಲಿಯೇ ಎದ್ದ ದಯಾನಂದರು ಆಶ್ರಮದ ಕಸಗೂಡಿಸಿ ಒಂದು ಕಡೆಗೆ ಗುಂಪೆ ಮಾಡಿಟ್ಟರು. ಅಕಸ್ಮಾತ್ತಾಗಿ ಅದು (ಕಸವು) ಗುರುಗಳ ಕಾಲಿಗೆ ತಟ್ಟಿತು. ಸಿಟ್ಟಿಗೆದ್ದ ಗುರುಗಳು ಕಟ್ಟಿಗೆ ಮುರಿಯುವ ವರೆಗೂ ದಯಾನಂದರನ್ನು ಹೊಡೆದರು. ದಯಾನಂದರು ಸ್ವಲ್ಪೂ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ.

ಸಾಯಂಕಾಲ ಗುರುಗಳ ಸೇವೆಯಲ್ಲಿ ನಿರತರಾದ ದಯಾನಂದರು, "ಗುರುಗಳೇ, ಇಂದು ತಮಗೆ ಬಹಳ ದಣಿವಾದಂತೆ ಕಾಣುತ್ತದೆ. ಮತ್ತೆಂದಾದರೂ ನನಗೆ ಶಿಕ್ಷೆ ಕೊಡಬೇಕಾದಲ್ಲಿ ಅದನ್ನು ಬೇರೆ ಯಾರಿಂದಾದರೂ ಕೊಡಿಸಿರಿ" ಎಂದರು.

— ಸಂಗ್ರಹ: ಬಿ. ಕೆ. ಕೊಟ್ಟಲಗಿ

ನಿಸರ್ಗದ ಯಂತ್ರಕೌಶಲದ
ಅಸದೃಶ ನಿರ್ಮಾಣ



ಸ್ನಾಯುಗಳು ಮತ್ತು ನೀವು

ಮುರಲೀಧರ

ನೀವು ಈ ಪಂಕ್ತಿಗಳ ಮೇಲೆ ದೃಷ್ಟಿಯನ್ನು ಹಾಯಿಸುತ್ತಿರುವಾಗ, ಈ ಪುಟ ಮುಗಿದೊಡನೆ ಮೆದುವಾಗಿ ಅದನ್ನು ಮಗುಚುವಾಗ, ಮತ್ತು ನಡುನಡುವೆ ನಿಮಗರಿಯದೆನೇ ರೆಪ್ಪೆ ಹೊಡೆಯುವಾಗ ಪ್ರತಿ ಸಲವೂ ನಿಸರ್ಗದ ಅತಿ ಸೋಜಿಗದ ವ್ಯಾಪಾರವೊಂದು ಜರಗುತ್ತಿದೆಯೆಂದು ನೀವೆಂದಾದರೂ ಯೋಚಿಸಿದ್ದೀರಾ? ಈ ಎಲ್ಲವೂ ನಿಮ್ಮ ಸ್ನಾಯುಗಳ ಕ್ರಿಯೆಗಳು ಮತ್ತು ನಿಮಗೆ ತಂತಾನೆ ನಡೆಯುವಂತೆ ಕಾಣುವ ಈ ಕ್ರಿಯೆಗಳಲ್ಲಿ ವಿಜ್ಞಾನಿಗಳಿಗೂ ನೆಲೆ ಸಿಕ್ಕದ ಜಟಿಲತೆಯಿದೆ.

ಶರೀರದ ಸಮಸ್ತ ಚಲನೆಗೂ ಸ್ನಾಯುಗಳೇ ಆಧಾರ. ಎಲುಬುಗಳಿಲ್ಲದ ಪ್ರಾಣಿಗಳೆಷ್ಟೋ ಇವೆ, ಆದರೆ ಸ್ನಾಯುಗಳಿಲ್ಲದವು ಅತಿ ವಿರಳ. ನಿಮ್ಮ ಹುಟ್ಟು ಸ್ನಾಯುಗಳಿಂದಲೇ ಸಾಧ್ಯವಾಗಿದೆ:-ತಾಯಿಯ ಗರ್ಭಾಶಯದ ಸ್ನಾಯುಗಳ ದಬ್ಬಾಟದಿಂದಲೇ ಮನುಷ್ಯ ಹುಟ್ಟುತ್ತಾನೆ— ಮತ್ತು ಹೃದಯದ ಸ್ನಾಯುಗಳು ಕೆಲಸ ಮಾಡಲು ನಿರಾಕರಿಸಿದಾಗ ಆತ ಸಾಯುತ್ತಾನೆ. ಈ ಎರಡು ಘಟನೆಗಳ ನಡುವೆ ಅವನ ಓಡಾಟ ಮಾತ್ರವಲ್ಲ, ಅವನ ನಗೆ, ಕಣ್ಣೀರು, ಊಟ ಉಸಿರು, ಹಾಡು—ಎಲ್ಲವೂ ಸ್ನಾಯು ಬಲದಿಂದಲೇ ನಡೆಯುತ್ತದೆ.

ನಮ್ಮ ಶರೀರದ ಅರ್ಧಾಂಶಕ್ಕಿಂತ ಹೆಚ್ಚು ಭಾಗ ಸ್ನಾಯುಗಳೇ. ಮತ್ತೆ ನಿಮ್ಮ ಕೈ ಮಡಚುವಾಗ ಮುಂದೋಳಿನಲ್ಲಿ ಉಬ್ಬುವ ಆ ಭಾಗ, ಅಥವಾ ನಿಮ್ಮ ತೊಡೆಯನ್ನು ಪುಷ್ಟವಾಗಿ, ನಿಮ್ಮ ಮೀನಖಂಡವನ್ನು ವೃತ್ತವಾಗಿ ಮಾಡುವವಷ್ಟೆ ಸ್ನಾಯುಗಳೆಂದು ಬಗೆಯದಿರಿ. ನಿಮ್ಮ ಆಹಾರವನ್ನು ಗಂಟಲಿಂದ ಜಠರಕ್ಕೆ, ಅಲ್ಲಿಂದ ಕರುಳುಗಳೊಳಗೆ ತಳ್ಳುವುದು ಸ್ನಾಯುಗಳು; ನಿಮ್ಮ ರಕ್ತವನ್ನು ಹೃದಯದಿಂದ ತಳ್ಳುವುದು ಸ್ನಾಯುಗಳು (ಏಕೆಂದರೆ ಹೃದಯವೇ ಒಂದು ಸ್ನಾಯು) ಮತ್ತು ಅದನ್ನು ರಕ್ತವಾಹಿನಿಗಳ ಮೂಲಕ ಅಭಿಸರಣ ಮಾಡಿಸುವುದು ಸ್ನಾಯುಗಳು—ಅಷ್ಟೇಕೆ; ನಿಮಗೆ ರೋಮಾಂಚವಾದರೆ

ಅದೂ ಸ್ನಾಯುಗಳ ಕೆಲಸವೇ. ನಿಮ್ಮ ಪ್ರತಿಯೊಂದು ಕೂದಲಿನ ಬುಡಕ್ಕಿರುವ ಅತಿ ಸೂಕ್ಷ್ಮ ಸ್ನಾಯುವು ಒಂದು ಜ್ಞಾನ ತಂತುವಿನಿಂದ ಪ್ರೇರಣೆಗೊಂಡು ಆಕುಂಚನಗೊಳ್ಳುವುದೇ ನಿಮ್ಮ ಕೂದಲು ನೆಟ್ಟಗಾಗಲು ಕಾರಣ.

ಪ್ರೊ. ರಾಮಮೂರ್ತಿಯವರು ಓಡುವ ಕಾರುಗಳನ್ನು ಹಿಡಿದು ನಿಲ್ಲಿಸುತ್ತಿದ್ದರು. ಇಂಥ ಕರಾಮತ್ತುಗಳನ್ನು ಸಾಧ್ಯವಾಗಿ ಮಾಡುವ ಸ್ನಾಯುಗಳು ೧।೫೦೦ ಅಂಗುಲದಿಂದ ಮೂರಂಗುಲದ ವರೆಗೂ ಉದ್ದವಿರಬಹುದಾದ ಸೂಕ್ಷ್ಮ ಎಳೆಗಳ ಪುಂಜಗಳು. ಆದರೆ ಸ್ನಾಯುಗಳನ್ನು ಆಕುಂಚನಗೊಳಿಸಲು ಕಾರಣವಾದ ಪದಾರ್ಥ ಲೋಳೆಯಂಥ ಮೃದು ಪದಾರ್ಥ. ಅದು ಆಕುಂಚನಗೊಂಡಾಗ ತನಗಿಂತ ಸಾವಿರ ಪಟ್ಟು ತೂಕದ ವಸ್ತುವನ್ನು ಎತ್ತುವಂಥ ಶಕ್ತಿಯನ್ನು ನಿಮ್ಮ ಕೈಗೆ ಒದಗಿಸುತ್ತದೆಂಬುದೀಗ ಆಶ್ಚರ್ಯಕರ ವಿಚಾರ.

ಮೂರು ಬಗೆಯ ಸ್ನಾಯುಗಳಿವೆ. (೧) ಐಚ್ಛಿಕ ಸ್ನಾಯುಗಳು: ಇವು ಉದ್ದನ್ನ ತಂತುಗಳಿಂದ ಕೂಡಿದ್ದು ನಡೆಯುವುದು, ಹಿಡಿಯುವುದು, ಎತ್ತುವುದು, ಕಡಿಯುವುದೇ ಮೊದಲಾದ ಐಚ್ಛಿಕ ಕಾರ್ಯಗಳಿಗೆ ಅವುಗಳನ್ನುಪಯೋಗಿಸುತ್ತೇವೆ. (೨) ಅನೈಚ್ಛಿಕ ಸ್ನಾಯುಗಳು: ಇವು ಮೆತ್ತಗಾಗಿವೆ ಮತ್ತು ತಾವಾಗಿ ಚಲಿಸುತ್ತವೆ. ಜಠರ, ಕರಳುಗಳ ಕಡೆಯುವ ಕ್ರಿಯೆ ಇವುಗಳಿಂದಲೇ ಆಗುತ್ತದೆ; ಶುದ್ಧ ರಕ್ತವಾಹಿನಿಗಳ ಒಳಭಾಗದಲ್ಲೆಲ್ಲ ಇರುವ ಈ ಜಾತಿಯ ಸ್ನಾಯುಗಳು ಹೃದಯದ ಪ್ರತಿಯೊಂದು ಬಡಿತದ ಸಂಗಡ ಒಮ್ಮೆ ಕುಗ್ಗಿ ಮತ್ತೆ ಹಿಗ್ಗುವುದರಿಂದಲೇ ರಕ್ತ ಮುಂದೊತ್ತಲ್ಪಡುತ್ತದೆ. (೩) ಎರಡೂ ಬಗೆಯ ಮಿಶ್ರಣದಂತಿರುವ ಹೃದಯದ ಸ್ನಾಯು.

ಮೂರೂ ತರದ ಸ್ನಾಯುಗಳು ಆಹಾರದಲ್ಲಡಕವಾದ ರಾಸಾಯನಿಕ ಶಕ್ತಿಯನ್ನು ಚಲನೋಪಯೋಗಿಯಾದ ಯಂತ್ರಶಕ್ತಿಯಾಗಿ ಮಾರ್ಪಡಿಸುವ ದಕ್ಷ ಯಂತ್ರಗಳು. ಪ್ರತಿಯೊಂದೂ ತನ್ನ ರೀತಿಯಲ್ಲೊಂದು ಅದ್ಭುತವೇ.

ಐಚ್ಛಿಕ ಸ್ನಾಯುಗಳನ್ನೇ ತೆಗೆದುಕೊಳ್ಳಿ. ನೀವು ಬರೆಯಲು ಲೇಖನಿ ತೆಗೆದುಕೊಳ್ಳಬೇಕೆನ್ನುತ್ತೀರಿ. ಕೈಯನ್ನು ನೀಡುತ್ತೀರಿ. ನಿಮ್ಮ ಮಿದುಳಿನಿಂದ ಕೈಯ ಸ್ನಾಯುಗಳಿಗೆ ಬಂದಿರುವ ಜ್ಞಾನ ತಂತುಗಳು ನಿಮಗೆ ಕೈಯನ್ನು ಎಲ್ಲಿಯವರೆಗೆ ನೀಡಬೇಕು, ಎಷ್ಟು ಗಟ್ಟಿಯಾಗಿ ನಿಮ್ಮ ಬೆರಳು ಲೇಖನಿಯನ್ನು ಹಿಡಿಯಬೇಕು ಎಂದು ಹೇಳುತ್ತವೆ. ಕ್ಷಣದೊಳಗೆ ನಡೆಯುವ ಈ ಆಜ್ಞೆ ಮತ್ತು ಪಾಲನೆ ತಾನಾಗಿ ನಡೆಯುತ್ತದೆ. ಅದಕ್ಕೇ "ಸ್ನಾಯುಪ್ರಜ್ಞೆ" ಎಂಬ ಆರನೇ ಇಂದ್ರಿಯವೊಂದು ನಮಗಿದೆ, ಅದು ಸ್ನಾಯುವಿಗೆ ಯಾವ ಕ್ಷಣದಲ್ಲಿ ತಾನೆಲ್ಲಿದ್ದೇನೆಂದು ತಿಳಿಸುತ್ತಿರುತ್ತದೆ ಎನ್ನುತ್ತಾರೆ ತಜ್ಞರು.

ಐಚ್ಛಿಕ ಸ್ನಾಯುಗಳು ಅಗಾಧ ಕಸರತ್ತುಗಳನ್ನೂ ಸೂಕ್ಷ್ಮ ಕುಶಲ ಕಾರ್ಯಗಳನ್ನೂ ಮಾಡಬಲ್ಲ ಬಲಿಷ್ಠ ಯಂತ್ರಗಳು. ಆದರೆ ಅವಕ್ಕೆ ಕೆಲಸವೂ ಬೇಕು; ವಿಶ್ರಾಂತಿಯೂ ಬೇಕು. ಎರಡರಲ್ಲಿ ಒಂದು ಇಲ್ಲದಿದ್ದರೂ ಅವು ಬಲಗುಂದುತ್ತವೆ. ಆದರೆ ಅನೈಚ್ಛಿಕ ಸ್ನಾಯುಗಳು ಹಾಗಲ್ಲ, ಅವು ವಿಶ್ರಾಂತಿಯಿಲ್ಲದೆ ಜೀವಮಾನವೆಲ್ಲ ದುಡಿಯಲು ತಯಾರಾದ ಅಂಗಗಳು. ತಾಯ ಗರ್ಭದಲ್ಲಿದ್ದಾಗಲೇ ಕೆಲಸ ಪ್ರಾರಂಭಮಾಡಿದ ಹೃದಯದ ಸ್ನಾಯು ನಮ್ಮ ಎಪ್ಪತ್ತು ವರ್ಷದ ಆಯುರ್ಮಾನದಲ್ಲಿ ೨೫೦ ಕೋಟಿ ಸಲ ನಿರಂತರವಾಗಿ ನಡೆಯುತ್ತದೆ. ಹಾಗೆಯೇ ದೀರ್ಘ ಕಾಲ ವಿಶ್ರಾಂತಿಯಲ್ಲಿದ್ದು ಸರಿಯಾದ ಕ್ಷಣದಲ್ಲಿ ಪುಟಿದೆದ್ದು ಆಕುಂಚನ ಕ್ರಿಯೆಯನ್ನು ನಡೆಸಿ ಆ ಮೇಲೆ ಪುನಃ ಸುಮ್ಮನೆ ಬಿದ್ದಿರುವ ಅನೈಚ್ಛಿಕ ಸ್ನಾಯುಗಳೂ ಇವೆ. ಹೆಂಗಸಿನ ಗರ್ಭಕೋಶ ಇಂಥ ಸ್ನಾಯುವಾಗಿದೆ.

ನಮ್ಮ ದೇಹದಲ್ಲಿ ೫೦೦ ಕ್ಕೂ ಹೆಚ್ಚು ಐಚ್ಛಿಕ ಸ್ನಾಯುಗಳಿವೆ. ನಮ್ಮ ಮನಸಿನ ಪ್ರತಿಯೊಂದು

ಲಹರಿಯನ್ನು ತತ್‍ಕ್ಷಣ ಪ್ರತಿಬಿಂಬಿಸುವ ಸೂಕ್ಷ್ಮವಾದ ಹನ್ನೆರಡು ಸ್ನಾಯುಗಳು ಮುಖದಲ್ಲೇ ಇವೆ. ಬಾಯಿ ಸುತ್ತಲ ನಾಲ್ಕು ಸ್ನಾಯುಗಳು ನೀವು ವ್ಯಥಿತರಾಗಿದ್ದಾಗ ನಿಮ್ಮ ತುಟಿಗಳನ್ನು ಕೆಳಕ್ಕೆಳೆದರೆ ಸುಖಿಗಳಾಗಿರುವಾಗ ನಸುನಗುವಂತೆ ಮಾಡಲು ಬೇರೆ ಎರಡು ಸ್ನಾಯುಗಳಿವೆ.

ಐಚ್ಛಿಕ ಸ್ನಾಯುಗಳು ಪರಸ್ಪರ ವಿರುದ್ಧ ತಂಡಗಳಾಗಿ ಸಹಕಾರದಿಂದ ಕೆಲಸ ಮಾಡುತ್ತವೆ. ತೋಳೆತ್ತುವಾಗ ತೋಳಿನ ಮುಂದೆ ಸ್ನಾಯುಗಳು ಬಿಗಿಯಾಗುತ್ತವೆ. ಮತ್ತು ಮೇಲ್ತೋಳಿನ ಹಿಂದಿರುವ ಸಾಯ್ನುಗಳು ಸಡಿಲಾಗುತ್ತವೆ. ಕೈ ಇಳಿಸಬೇಕಾದಾಗ ಅವು ಸಡಿಲಾಗಿ ಇವು ಬಿಗಿಯಾಗುತ್ತವೆ. ಕೈ, ಕಾಲು, ಪಾದ, ಕೊರಳು, ಬಾಯಿ, ಎದೆ, ಕಣ್ಣು ಇವೆಲ್ಲವುಗಳ ಸ್ನಾಯುಗಳೂ ಹೀಗೆ ತಂಡವಾಗಿಯೇ ಕೆಲಸ ಮಾಡುತ್ತವೆ.

ಅನೈಚ್ಛಿಕ ಸ್ನಾಯುಗಳ ಮೇಲೆ ನಿಮ್ಮ ಅಪ್ಪಣೆ ನಡೆಯುವುದಿಲ್ಲ. ಆದರೆ ನಿಮ್ಮ ಮನೋಭಾವನೆಗಳು ಕ್ಷಣದಲ್ಲಿ ಅವುಗಳ ಮೇಲೆ ಪರಿಣಾಮ ಮಾಡಬಲ್ಲವು. ಗಾಬರಿಯಾದಾಗ ಹೃದಯದ ವೇಗ ಹೆಚ್ಚುತ್ತದೆ, ಜಠರ ಕರಳುಗಳ ಸ್ನಾಯು ಚಲನೆ ಕಡಿಮೆಯಾಗತ್ತದೆ.

ಹೆಂಗಸರ ಶರೀರದಲ್ಲಿ ಗಂಡಸರದಕ್ಕಿಂತ ಶೇಕಡಾ ೩೦—೪೦ ಅಂಶ ಕಡಿಮೆ ಸ್ನಾಯುಗಳಿರುತ್ತವೆ. ಅದಕ್ಕಾಗಿಯೆ ಹೆಂಗಸರನ್ನು “ ಅಬಲೆ ” ಯರೆನ್ನುವುದು. ಆದರೆ ಅವಳ ಸ್ನಾಯುಗಳ ತೂಕ ಕಡಿಮೆಯಾಗಿದ್ದರೂ ಅವುಗಳ ದಾರ್ಢ್ಯ ಕಡಿಮೆಯಾಗಿಲ್ಲ. ಆದ್ದರಿಂದಲೇ ಹೆಂಗಸಿನ ಪೈಗೆ ಮೋಹಕತೆ ಬರುವುದು.

ಡಾಕ್ಟರರಿಗೆ ಸ್ನಾಯುಗಳ ಬಾಹ್ಯಚರ್ಯೆಯ ತಿಳಿವಳಿಕೆ ಇದೆಯೇ ಹೊರತು ಅವುಗಳ ಅಂತರಂಗದ ಬಗ್ಗೆ ಬಹಳ ಮಟ್ಟಿಗೆ ಅಜ್ಞಾನವೇ ತುಂಬಿದೆ. ಉದಾಹರಣೆಗೆ, ಸ್ನಾಯುಗಳು ಹೇಗೆ ಆಕುಂಚನಗೊಳ್ಳುತ್ತವೆ ಎಂಬ ಗುಟ್ಟು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಗೊತ್ತಿದ್ದರೆ ಹೃದಯ ವಿಕಾರ, ರಕ್ತದ ಒತ್ತಡ ಮೊದಲಾದ ಅನೈಚ್ಛಿಕ ಸ್ನಾಯುಗಳ ರೋಗಗಳನ್ನು ಹೆಚ್ಚು ಯಶಸ್ವಿಯಾಗಿ ಎದುರಿಸಬಹುದಿತ್ತು.

ನೋಬೆಲ್ ಪಾರಿತೋಷಕ ಪಡೆದ ಅಮೇರಿಕನ್ ವಿಜ್ಞಾನಿ ಡಾಕ್ಟರ್ ಆಲ್ಬರ್ಟ್ ಜೆಂಟ್ ಜಾರ್ಜಿಯವರ ಸಂಶೋಧನೆಗಳಲ್ಲಿ ಸ್ನಾಯು ವ್ಯಾಪಾರದ ವಿಷಯ ಕಂಡುಬಂದಿರುವ ಸಂಗತಿಗಳು ಈ ರಹಸ್ಯದ ಬಾಗಿಲನ್ನಷ್ಟು ತೆರೆದಿದೆ. ಅವರು ಕಂಡುಹಿಡಿದ ಒಂದು ವಿಷಯವೆಂದರೆ ಸ್ನಾಯುಗಳು ಎಂದೂ ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳುವುದಿಲ್ಲ. ಅವು ಸದಾ ಅರ್ಧ-ಸಿದ್ಧಾವಸ್ಥೆಯಲ್ಲಿರುತ್ತವೆ. ಆದ್ದರಿಂದಲೇ ಮಿದುಳಿನಿಂದ ಕರೆ ಬಂದೊಡನೆ ಅವು ತತ್‍ಕ್ಷಣ ಕಾರ್ಯಪ್ರವೃತ್ತವಾಗುತ್ತವೆ.

ಜೆಂಟ್-ಜಾರ್ಜಿಯವರೂ ಅವರ ಸಂಗಡಿಗರೂ ನಾನಾ ಸ್ನಾಯುಗಳನ್ನು ಕೊಚ್ಚಿ ಚೂರು ಚೂರು ಮಾಡಿ ಪರೀಕ್ಷಿಸಿದಾಗ ಸ್ನಾಯುಗಳ ಆಕುಂಚನ-ವಿಕುಂಚನಗಳ ಕೆಲ ರಾಸಾಯನಿಕ ಗೋಪ್ಯಗಳು ಬೆಳಕಿಗೆ ಬಂದವು. ಮಿದುಳಿನಿಂದ ಒಂದು ಚಲನೆಗಾಗಿ ಒಂದು ಸ್ನಾಯುವಿಗೆ ಆಜ್ಞೆ ಬಂದಾಗ ಕಣ್ಮುಚ್ಚಿ ತೆರೆಯುವುದರೊಳಗೆ ಅತ್ಯಂತ ಜಟಿಲವಾದ ಕ್ರಿಯೆಗಳು ಜರುಗುತ್ತವೆ. ಸ್ನಾಯುವಿನಲ್ಲಿ ತೆಪ್ಪಗೆ ತಮ್ಮ ಪಾಡಿಗೆ ಬಿದ್ದಿರುವ ಲೋಳೆಯಂಥ ಆಕ್ಟಿನ್ ಮತ್ತು ಮಯೋಸಿನ್ ಎಂಬ ರಾಸಾಯನಿಕ ದ್ರವ್ಯಗಳು ಸಂಯೋಗ ಹೊಂದುತ್ತವೆ. ಹೀಗೆ ಉತ್ಪನ್ನವಾದ ಆಕ್ಟೋಮಯೋಸಿನ್ ಎಳೆಗಳೇ ಸ್ನಾಯುವಿನ ಆಕುಂಚನಕ್ಕೆ ಕಾರಣ. ಇದಕ್ಕೆ ಬೇಕಾದ ಶಕ್ತಿಯನ್ನು ಅಡೆನೊಸೀನ್-ಟ್ರೈಫಾಸ್ಫೇಟ್ ಎಂಬ ದ್ರವ್ಯ ಒದಗಿಸುತ್ತದೆ. ಇದು ಎಷ್ಟು ಸೂಕ್ಷ್ಮವಾಗಿದೆಯೆಂದರೆ ಅದರ ಕಣಗಳು ಸಾಮಾನ್ಯ ಸೂಕ್ಷ್ಮದರ್ಶಕಕ್ಕೂ ಕಾಣವು. ಆದರೆ ಅದರ ಶಕ್ತಿಯೋ ಅಪಾರ. ವರ್ಷಗಟ್ಟಳೆ ಶೀತಲ

ಯಂತ್ರದಲ್ಲಿ ಹಾಕಿಟ್ಟ ಒರಟಾಗಿ ಹೋಗಿದ್ದ ಪ್ರಾಣಿ ಸ್ನಾಯುವಿನ ತುಣುಕೊಂದಕ್ಕೆ ಒಂದು ಹನಿ ಅಡೆನೊಸೀನ್-ಟ್ರೈಫಾಸ್ಫೇಟ್ ಚಿಮುಕಿಸಿದಾಗ ಆ ಮೃತ ಸ್ನಾಯು ಒಮ್ಮೆಲೆ ಚಿಗಿತು ಜೀವಂತ ಸ್ನಾಯುವಾಗಿಬಿಟ್ಟಿತು.

ಅಡೆನೊಸೀನ್-ಟ್ರೈಫಾಸ್ಫೇಟಿನಲ್ಲೇ ಅನೇಕ ಸ್ನಾಯು ಮತ್ತು ಹೃದ್ರೋಗಗಳ ಬೀಗದ ಕೈ ಇರಬಹುದೆಂದು ತೋರುತ್ತದೆ. ಮಾನವ ಸಾಯುತ್ತಿರುವಾಗ ಈ ದ್ರವ್ಯ ಮೊದಲು ನಾಶವಾಗ ತೊಡಗುವುದರಿಂದ ಸ್ನಾಯುಗಳು ಕೊರಡಿನಂತಾಗುತ್ತವೆ. ಅಡೆನೊಸೀನ್-ಟ್ರೈಫಾಸ್ಫೇಟ್ ಏಕೆ ನಶಿಸುತ್ತದೆ? ಜೀವಂತ ಮನುಷ್ಯರಲ್ಲಿ ಹಲವು ಸ್ನಾಯುಗಳು ಸರಿಯಾಗಿ ಕೆಲಸ ಮಾಡದೆ ಕೊರಡುಗಟ್ಟಿ ಬರುವ ರೋಗಗಳಲ್ಲಿ ಇದರ ಪಾತ್ರವೇನು?

ಮೇಲೆ ಹೇಳಿದ ಶೋಧನೆಗಳು ತೋರಿಸಿದ ದಾರಿಯಿಂದ ನಡೆದು ವಿಜ್ಞಾನಿಗಳು ಸ್ನಾಯು ವ್ಯಾಪಾರದ ಆದ್ಯಂತವನ್ನು ಕಂಡು ಹಿಡಿದ ದಿನ ಮಾನವನ ಆಯುಷ್ಯಮಿತಿ ಬಹಳ ವಿಸ್ತಾರಗೊಳ್ಳುವುದು ಖಂಡಿತ. ಆದರೆ ಅದು ಸ್ವಲ್ಪ ದೂರದ ಮಾತು. ಆ ವರೆಗೆ ನಾವು ನಮ್ಮ ಸ್ನಾಯುಗಳ ಹಿತಾಹಿತಗಳನ್ನರಿತು ನಡೆವರೆ ಆರೋಗ್ಯ ಭಾಗ್ಯವನ್ನು ಹೆಚ್ಚಿಸಿಕೊಳ್ಳಬಹುದು.

ಸ್ನಾಯುಗಳು ದಕ್ಷವಾಗಿರಲು ಎರಡು ಗುಣಗಳು ಅವುಗಳಲ್ಲಿರಬೇಕು: ಕಸುವು ಮತ್ತು ಪಟುತ್ವ. ಸ್ನಾಯು ಸಡಿಲಾಗಿದ್ದರೆ ಅದಕ್ಕೆ ಪಟುತ್ವವಿಲ್ಲೆಂದರ್ಥ. ದೃಢವಾಗಿ, ಸ್ಪ್ರಿಂಗಿನಂತೆ ಸ್ಥಿತಿಸ್ಥಾಪಕವಾಗಿದ್ದರೆ ಅದು ಪಟುವಾಗಿದೆ. ಪಟುವಾದ ಸ್ನಾಯುಗಳು ಚೆನ್ನಾಗಿ ಕೆಲಸ ಮಾಡಬಲ್ಲವು. ಬೇಗ ದಣಿಯುವುದಿಲ್ಲ. ಇದಕ್ಕೆ ವ್ಯಾಯಾಮದಂಥ ಉಪಾಯ ಬೇರೊಂದಿಲ್ಲ.

ವ್ಯಾಯಾಮ ಮಾಡುವಾಗ ಸ್ನಾಯುಗಳು ಹೆಚ್ಚು ಶಕ್ತಿಯನ್ನು ವೆಚ್ಚಮಾಡುತ್ತವೆ. ಅದಕ್ಕಾಗಿ ಹೆಚ್ಚು ಆಹಾರ ಮತ್ತು ಪ್ರಾಣವಾಯು (ಆಮ್ಲಜನಕ) ವನ್ನು ಅಪೇಕ್ಷಿಸುತ್ತವೆ. ಅದನ್ನು ತಲುಪಿಸಲು ಹೆಚ್ಚು ರಕ್ತ ಬೇಕಾಗುತ್ತದೆ. ಹೆಚ್ಚು ರಕ್ತವನ್ನು ಕಳಿಸಲು ಹೃದಯ ಹೆಚ್ಚು ದುಡಿಯಬೇಕಾಗುತ್ತದೆ ಮತ್ತು ಹೆಚ್ಚು ರಕ್ತಕ್ಕೆ ಹೆಚ್ಚು ಪ್ರಾಣವಾಯುವನ್ನೊದಗಿಸಲು ಶ್ವಾಸಕೋಶಗಳು ಹೆಚ್ಚು ಕೆಲಸಮಾಡುತ್ತವೆ. ಹೆಚ್ಚು ಕೆಲಸ ಮಾಡಿದ್ದರಿಂದ ಸ್ನಾಯುಗಳಲ್ಲಿರುವ ಎಳೆಗಳು ಕೊಬ್ಬುತ್ತವೆ. ಆದ್ದರಿಂದಲೇ ವ್ಯಾಯಾಮ ಮಾಡಿದವರ ಸ್ನಾಯುಗಳು ಪುಷ್ಟಿಯಾಗಿರುವುದು.

ಕೂತು ಕೆಲಸ ಮಾಡುವವರ ಸ್ನಾಯುಗಳಲ್ಲಿರುವ ಸೂಕ್ಷ್ಮ ರಕ್ತನಾಳಗಳು ಕೆಲಸವಿಲ್ಲದ ಮೂಲಕ ಜೋತುಬಿದ್ದು ಹೋಗುತ್ತವೆ ಅವರ ಹೃದಯ ದುರ್ಬಲವಾಗಿ ರಕ್ತವನ್ನು ತಳ್ಳುವ ಅಭ್ಯಾಸ ಮಾಡಿಕೊಂಡಿರುವುದರಿಂದ ಎಲ್ಲಾದರೂ ಸ್ವಲ್ಪ ಶಾರೀರಿಕ ಶ್ರಮಬಿದ್ದರೂ ಬಡಬಡ ಎಂದು ಹೊಡೆದುಕೊಳ್ಳಲಾರಂಭಿಸುತ್ತದೆ. ಕಾರಣವಿಷ್ಟೇ: ದುರ್ಬಲವಾಗಿ ರಕ್ತವನ್ನು ತಳ್ಳಿದರೆ ಕಡಿಮೆ ರಕ್ತ ನುಗ್ಗುತ್ತದೆ. ಶ್ರಮದ ಕೆಲಸ ಮಾಡಬೇಕಾದಾಗ ಹೆಚ್ಚು ರಕ್ತದ ಅಗತ್ಯವಿರುವುದರಿಂದ ಅದು ಹೆಚ್ಚು ಸಲ ಒತ್ತಿ ತಳ್ಳಬೇಕಾಗುತ್ತದೆ. ಅದೇ ಬಡಬಡ.

ಅನೇಕ ಪರಿಶೀಲನೆಗಳಲ್ಲಿ ವ್ಯಾಯಾಮ ಮಾಡಿದವರ ಹೃದಯದ ಸ್ನಾಯುಗಳು ಕುಳಿತು ಕಾಲ ಕಳೆಯುವವರ ಸ್ನಾಯುಗಳಿಗಿಂತ ಸುಸ್ಥಿತಿಯಲ್ಲಿರುವುದು ಕಂಡುಬಂದಿದೆ. ನಡೆಯುತ್ತ ಕೆಲಸ ಮಾಡುವ ಪೇದೆಗಳು ಕುಳಿತು ಕೆಲಸ ಮಾಡುವ ಗುಮಾಸ್ತರಿಗಿಂತ ಕಡಿಮೆ ಹೃದಯ ರೋಗ ಪೀಡಿತರಾಗುತ್ತಾರೆ. ಅದೇ ಡಬಡಬ.

ಯಂತ್ರ ಮತ್ತು ಯಾಂತ್ರಿಕ ವಾಹನಗಳ ಬಳಕೆಯೂ ಆಡಳಿತ ಕಾರ್ಯದ ವಿಸ್ತರಣೆಯೂ ಆಧುನಿಕ ಜಗತಿನಲ್ಲಿ ಒಂದೇ ಸಮನೆ ಹೆಚ್ಚುತ್ತಿರುವುದರಿಂದ ಮಾನವನ ದೈನಂದಿನ ಚಟುವಟಿಕೆಗಳಿಂದ ಅವನಿಗೆ ವ್ಯಾಯಾಮ ಸಿಗದ ಹಾಗೆಯೆ

ಆಗತೊಡಗಿದೆ. ಎಷ್ಟೇ ಉತ್ತಮ ಆಹಾರವನ್ನು ತೆಗೆದುಕೊಂಡರೂ ಶರೀರದ ಸ್ನಾಯುಗಳಿಗೆ ಕೆಲಸವಿಲ್ಲದಿರುವುದರಿಂದ ಅವು ಸುಸ್ಥಿತಿಯಲ್ಲಿರದಿರುವುದು ಇಂದಿನ ಸಮಸ್ಯೆಯಾಗಿದೆ. ಕೊಬ್ಬು ಹೆಚ್ಚು, ಕಸುವು ಕಡಿಮೆ ಎಂದಾಗಿದೆ.

ಆದರೆ ವ್ಯಾಯಾಮದ ಮಹತ್ವವನ್ನು ಒತ್ತಿ ಹೇಳುವಾಗ ಸ್ನಾಯುಗಳಿಗೆ ಉತ್ತಮ ಆಹಾರ ಮತ್ತು ವಿಶ್ರಾಂತಿಯೂ ಬೇಕೆಂಬುದನ್ನು ಮರೆಯಬಾರದು. ನೀವು ಮಾಡುವ ಕೆಲಸದ ವೇಗ ಹೆಚ್ಚಾಗಿದ್ದರೆ ಬೇಗನೆ ಶ್ರಮವಾಗುತ್ತದೆ. ಸ್ವಲ್ಪ ಸಾವಕಾಶವಾಗಿ, ಆದರೆ ಒಂದೇ ಸವನೆ ಕೆಲಸ ಮಾಡುವವರಿಗಿಂತ ಬಲು ವೇಗವಾಗಿ ಕೆಲಸ ಮಾಡುವವರು ಬೇಗನೆ ದಣಿದುಹೋಗುತ್ತಾರೆ; ಹಾಗಾಗಿ ಅವರು ಮಾಡುವ ಒಟ್ಟು ಕೆಲಸ ಸಾವಕಾಶವಾಗಿ ಮಾಡುವವರಿಗಿಂತ ಕಡಿಮೆಯೆ ಇರುತ್ತದೆ. ನೀವು ಮಿನಿಟಿಗೆ ೧೫ ಸುತ್ತು ಪೆಡೆಲ್ ತುಳಿದು ಸೈಕಲ್ ಹೊಡೆಯುವುದರ ಬದಲು ವೇಗವನ್ನು ಹೆಚ್ಚಿಸಲು ೩೦ ಸುತ್ತು ಹೊಡೆಯತೊಡಗಿದರೆ ನಿಮಗೆ ರಕ್ತಕ್ಕೆ ಇಮ್ಮಡಿಯಲ್ಲ, ಎಂಟು ಪಟ್ಟು ಪ್ರಾಣವಾಯು ಬೇಕಾದೀತೆಂದು ಕೆಲ ಪರಿಶೀಲನೆಗಳಿಂದ ವ್ಯಕ್ತವಾಗಿದೆ. ಇಷ್ಟು ಪ್ರಾಣವಾಯುವನ್ನು ನಿಮ್ಮ ರಕ್ತ ಪೂರೈಸಲಾರದ್ದರಿಂದ ನೀವು ಕೆಲವೇ ಕ್ಷಣಗಳಲ್ಲಿ ತೀರ ದಣಿದುಹೋಗುವಿರಿ. ✶

ದಿವಂಗತ ಪಂಡಿತ ಮೋತೀಲಾಲರು ಕಾಂಗ್ರೆಸ್ ಪ್ರಚಾರಕ್ಕಾಗಿ ಹೊರಟಿದ್ದರು. ಹೋಶಂಗಾಬಾದಿನಲ್ಲಿ ಅವರ ಭಾಷಣವಾಗಲಿತ್ತು. ಅದಕ್ಕೂ ಕೆಲ ದಿನ ಮೊದಲು ಅಲ್ಲಿ ಕಾಂಗ್ರೆಸ್ ವಿರೋಧಿ ಲೀಡರರೊಬ್ಬರ ಭಾಷಣವಾಗಿ ಅದರಲ್ಲಿ ಹಗರಣವಾಗಿತ್ತು. ಭಾಷಣಕಾರರಿಗೆ ತಾವು ಬ್ರಾಹ್ಮಣರಾಗಿದ್ದರೂ ಮಾಂಸ ತಿನ್ನುತ್ತಿದ್ದೇವೆಂದು ಅಭಿಮಾನ ಪೂರ್ವಕ ಹೇಳುವ ಚಟವಿತ್ತು. ಇದನ್ನರಿತಿದ್ದ ಅವರ ವಿರೋಧಿಪಕ್ಷದವನೊಬ್ಬನು ಸಭೆಯಲ್ಲಿ ಅವರಿಗೆ "ನೀವು ಮಾಂಸ ಮಾತ್ರ ತಿನ್ನುತ್ತೀರಾ ಅಥವಾ ಮೀನನ್ನೂ ತಿನ್ನುತ್ತೀರಾ?" ಎಂದು ಕೇಳಿದ. ಅವರು ಆಢ್ಯತೆಯಿಂದ "ಸ್ವಾಮೀ, ನಾನು ಕೇವಲ ಮಾಂಸ ತಿನ್ನುತ್ತೇನೆ" ಎಂದರು. ಹೋಶಂಗಾಬಾದಿನ ಬಹುಜನ ನಾಗರಿಕರು ಜೈನ ಮತ್ತು ವೈಷ್ಣವರು. ಭಾಷಣಕಾರರ ಈ ಹೇಳಿಕೆಯಿಂದ ಜುಗುಪ್ಸೆಗೊಂಡು ಅವರೆಲ್ಲ ಸಭೆಯಿಂದ ಎದ್ದು ಹೋದರು. ಸಭೆ ಬರಿದಾಗಿ ಹೋಯಿತು.

ತಮ್ಮನ್ನು ಹೀಗೆ ಉಪಾಯದಿಂದ ಪೇಚಿಗೆ ಗುರಿ ಮಾಡಿದ್ದರ ಸೇಡು ತೀರಿಸಿಕೊಳ್ಳಲು ಕಾಂಗ್ರೆಸ್ ವಿರೋಧಿಗಳು ಮೋತೀಲಾಲರ ಭಾಷಣ ಕಾಲದಲ್ಲಿ ಸನ್ನಾಹ ಮಾಡಿಕೊಂಡಿದ್ದರು. ವಕೀಲನೊಬ್ಬ ನಡುವೆ ಎದ್ದು ಅವರಿಗೆ ಅದೇ ಪ್ರಶ್ನೆ ಕೇಳಿದ. ಮೋತೀಲಾಲರು ತಟ್ಟನೆ ಉತ್ತರವಿತ್ತರು: "ನಾಲ್ಕು ಕಾಲಿನವುಗಳಲ್ಲಿ ನಾನು ಮಂಚ ಮಾತ್ರ ತಿನ್ನುವುದಿಲ್ಲ. ಹಾರುವವುಗಳಲ್ಲಿ ಗಾಳಿಪಟವೊಂದನ್ನು ತಿನ್ನುವುದಿಲ್ಲ. ಮತ್ತೆ ನೀವು ದೇಶದ ಸ್ವಾತಂತ್ರ್ಯದ ವಿರೋಧಿಗಳಾಗಿದ್ದರೆ ನಿಮ್ಮನ್ನೂ ನುಂಗಿಬಿಡಲು ಸಿದ್ಧನಾಗಿದ್ದೇನೆ." ಹೀಗೆಂದು ಅವರು ಗಹಗಹಿಸಿ ನಕ್ಕಾಗ ಪ್ರಶ್ನ-ಕರ್ತ ವಕೀಲರು ಹೇಳದೆ ಕೇಳದೆ ಪಲಾಯನ ಮಾಡಿದರು.

— ಮಾಖನಲಾಲ ಚತುರ್ವೇದಿ

ಇದುವೆ ಜೀವ, ಇದು ಜೀವನ

ಮನೆಯೊಂದರ ಮುಂದೆ ನಾನು ಕಂಡ ಬೋರ್ಡ್ ಈ ರೀತಿ ಇದೆ:

"ಸದ್ಗುರು ಸಾಯಿ ಬಾಬ ಮಂದಿರ ಎಚ್ಚರಿಕೆ! (ಕೆಂಪು ಅಕ್ಷರದಲ್ಲಿ)

ದೇವರಿದ್ದಾರೆ.

ಕಾಲು ತೊಳೆದು ಒಳಗೆ ಬನ್ನಿ."

ಆ ಮನೆಯ ಮುಂಭಾಗದಲ್ಲಿ ಯಾವಾಗಲೂ ಒಂದು ಪಾತ್ರೆಯಲ್ಲಿ ನೀರು ಹಾಗೂ ಒಂದು ಚಿಕ್ಕ ತಂಬಿಗೆ ಇರುತ್ತದೆ.

—ಶಂಕಣ್ಣಿ, ಬೆಂಗಳೂರು

ಇದು ನಡೆದದ್ದು ನಾನು ಉದ್ಯೋಗಕ್ಕಾಗಿ ಹುಬ್ಬಳ್ಳಿಯಲ್ಲಿ ನೆಲೆಸಿದ್ದಾಗ. ಮೊದಲ ಬಾರಿಗೆ ಹುಬ್ಬಳ್ಳಿಗೆ ಹೋಗುವಾಗ ರೈಲಿನಲ್ಲಿ ಮಂಗಳೂರಿನ ಒಬ್ಬ ಯುವಕನ ಭೆಟ್ಟಿ ಆಗಿತ್ತು. ಆತನೂ ನೌಕರಿಗಾಗಿಯೇ ಹುಬ್ಬಳ್ಳಿಗೆ ಬಂದವನಿದ್ದ. ನನಗೆ ಬಂದ ಕೆಲವು ದಿನಗಳಲ್ಲಿ ಉದ್ಯೋಗ ದೊರೆತು ಊರ ಹೊರಗಿನ ಒಂದು ವಠಾರದಲ್ಲಿ ನನ್ನ "ಸ್ವಯಂಪಾಕ" ಜೀವನ ಪ್ರಾರಂಭಿಸಿದೆ. ಆ ನನ್ನ ಸಹ ಪಯಣಿಗ ಮಿತ್ರ ಒಮ್ಮೆ ಪೇಟೆಯಲ್ಲಿ ಭೆಟ್ಟಿ ಆಗಿದ್ದಾಗ ನನ್ನ ವಿಳಾಸ ತಿಳಿಸಿ ಯಾವಾಗಲಾದರೂ ಬರಬಹುದೆಂದು ಆಮಂತ್ರಿಸಿದ್ದೆ. ದುರದೃಷ್ಟದಿಂದ ಆತನಿಗೆ ಬಹಳ ಕಾಲ ನೌಕರಿ ಸಿಕ್ಕಿರಲಿಲ್ಲ.

ಅಂದು ಒಂದು ರಜಾದಿನ ಮಧ್ಯಾನ್ಹ ನನ್ನ ಊಟ ಸಿದ್ಧವಾಗಿತ್ತು. ಆ ನನ್ನ ಮಿತ್ರ ಮನೆಗೆ ಬಂದಾಗ ಬೇಸಿಗೆಯ ಬಿಸಿಲು ಝುಗಮುಗಿಸಿತ್ತು. ಬಂದವನು ಬಹಳ ಬಳಲಿ ಬೆಂಡಾಗಿದ್ದುದು ಆತನ ಮುಖದಲ್ಲಿಯೇ ಪ್ರದರ್ಶಿತವಾಗುತ್ತಿತ್ತು. ಆತ "ನಿಮ್ಮೊಡನೆ ಮಾತನಾಡುವುದಿದೆ" ಎಂದ. "ಮಾತು ಹಾಗಿರಲಿ, ಏಳಿ ಮೊದಲು ಊಟ ಮಾಡೋಣ" ಎಂದೆ. ಅದಕ್ಕವನು "ಆಯಿತು" ಎಂದ. ಆತನು ಸಂಕೋಚದಿಂದ ಹಾಗೆಂದಿರಬೇಕೆಂದು "ಪರವಾಗಿಲ್ಲ ಏಳಿ, ಸ್ವಲ್ಪ ಊಟ ಮಾಡಿದರಾಯಿತು" ಎಂದೆ. ಆತ ಪುನಃ "ಆಯಿತು" ಎಂದ. ಆಗ ನಾನು "ಹಾಗಾದರೆ ನೀವು ಈ ಪತ್ರಿಕೆ ನೋಡುತ್ತಿರಿ. ನಾನು ಐದು ನಿಮಿಷದಲ್ಲಿ ಬಂದುಬಿಡುತ್ತೇನೆ" ಎಂದು ಹೇಳಿ ಊಟ ಮುಗಿಸಿ ಆತನನ್ನು ವಿಚಾರಿಸಲು ಬಂದೆ. ಆತ, "ಏನೋ ಮಾತನಾಡಲು ಬಂದೆ. ಆದರೆ ಪರಿಸ್ಥಿತಿ ಅನುಕೂಲವಾಗಲಿಲ್ಲ, ನಾನಿನ್ನು ಬರುತ್ತೇನೆ" ಎಂದವನೇ ಕಾಲೆಳೆದುಕೊಂಡು ಹೊರಟು ಹೋದ. "ಸ್ವಲ್ಪ ಚಹ ಮಾಡುತ್ತೇನೆ ತಾಳಿರಿ" ಎಂದರೂ ಒಪ್ಪಲಿಲ್ಲ.

ಇದಾದ ಒಂದು ತಿಂಗಳ ಬಳಿಕ ಆತ ನನಗೆ ಭೆಟ್ಟಿ ಆದಾಗ ಅವನಿಗೆ ನೌಕರಿ ದೊರೆತಿತ್ತು. ನನ್ನನ್ನು ಚಹಾ ಕುಡಿಯಲೆಂದು ಹೋಟಲೊಂದಕ್ಕೆ ಕರೆದೊಯ್ದ. ಚಹಾಪಾನವೂ ಆಯಿತು. ಹೊರಡುವ ಮುನ್ನ ಈ ಹಿಂದೆ ತಾನು ಬಂದಾಗ ನಡೆದದ್ದನ್ನು ವಿವರಿಸಿದ. ವಾಸ್ತವವಾಗಿ ಆ ದಿನ ಕೇವಲ ಊಟಕ್ಕಾಗಿಯೇ ನನ್ನನ್ನು ಹುಡುಕಿ ಬಂದಿದ್ದನಂತೆ; ಆ ವೇಳೆಗೆ

ಅವನು ಊಟಮಾಡಿ ಎರಡು ದಿನಗಳಾಗಿದ್ದವಂತೆ; ಕಡೆಯ ಪ್ರಯೋಗವೆಂದು ನನ್ನಲ್ಲಿಗೆ ಬಂದಿದ್ದನಂತೆ. ಆದರೆ ನಾನು ಆ ದಿನ ಊಟಕ್ಕೆ ಎಬ್ಬಿಸಿಯೂ ಸಹ ಅವನನ್ನು ಉಪವಾಸವಿಟ್ಟು ಊಟಮಾಡಿದ ದುರ್ದೈವೀ ಪ್ರಸಂಗವನ್ನು ಹೇಳಲಾರದೆ ಹೇಳಿ ''ಇದಕ್ಕೆ ನೋಡಿ 'ಅನ್ನದ ಋಣ' ಎನ್ನುವುದು'' ಎಂದು ಮುಗಿಸಿದ.

ಈ ಮಾತನ್ನು ಕೇಳಿ ನನಗೆ ಆಗತಾನೆ ಕುಡಿದ ಚಹ ಹೊಟ್ಟೆಯಲ್ಲಿ ಕುದಿದು ಮರಳಿದಂತಾಯಿತು. ದಕ್ಷಿಣ ಕನ್ನಡದಲ್ಲಿ "ಆಯಿತು" ಎಂಬುದಕ್ಕೆ "ಆಗಲಿ" ಎಂದರ್ಥವಿದೆಯೆಂಬುದು ನನಗೆ ಗೊತ್ತಿರಲಿಲ್ಲವಾದರೂ ಅವನ ಹಸಿದ ಮುಖವನ್ನು ಅರ್ಥ ಮಾಡಿಕೊಳ್ಳಲು ತಪ್ಪಿದ ನನ್ನ ಅಪರಾಧವನ್ನು ಅವನ ಮುಂದೆ ಸಮರ್ಥಿಸಿಕೊಳ್ಳಲಾಗದೆ ಹೋದೆ. —ಸಿ. ಎಸ್. ಶರ್ಮಾ

ಮರುದಿನ ನಮ್ಮ ಶಾಲೆಗೆ ಇನ್‌ಸ್ಪೆಕ್ಟರರು ಬರುತ್ತಾರೆಂದು ಗೊತ್ತಾಯಿತು. ನಮ್ಮ ಉಪಾಧ್ಯಾಯರು ವೀಳ್ಯ ಹಾಕುವುದರಲ್ಲಿ ನಿಸ್ಸೀಮರಾಗಿದ್ದರು. ಅವರು ವೀಳ್ಯ ಹಾಕಿ ಯಾವಾಗಲೂ ಕ್ಲಾಸಿನ ಹತ್ತಿರದ ಕಿಟಕಿಯಿಂದಲೇ ಉಗುಳುತ್ತಿದ್ದರು. ಆ ಕಿಡಿಕಿಯು ಉಪಾಧ್ಯಾಯರ ಮೇಲೆ ಕೋಪ ತಾಳಿದೆಯೋ ಎಂಬಂತೆ ಕೆಂಪಾಗಿತ್ತು. ಉಪಾಧ್ಯಾಯರು ನಾಳೆ ಇನ್‌ಸ್ಪೆಕ್ಟರರು ಬರುತ್ತಾರೆಂದು ಆ ಕಿಡಿಕಿಗೆ ಒಂದು ಭಾರತದ ನಕಾಶೆಯನ್ನು ಹಚ್ಚಿಟ್ಟರು. ಮರುದಿನ ಶಾಲೆಗೆ ಇನ್‌ಸ್ಪೆಕ್ಟರರು ಬಂದರು. ಅವರು ಎಲ್ಲಾ ಕ್ಲಾಸುಗಳಲ್ಲಿ ಪ್ರಶ್ನೆಗಳನ್ನು ಕೇಳಿ ನಮ್ಮ ಕ್ಲಾಸಿಗೆ ಬಂದರು. ಕೊನೆಗೆ "ಹಿಮಾಲಯದ ಹಿಂದು ಗಡೆಯೇನಿದೆ?" ಎಂದು ಪ್ರಶ್ನಿಸಿದಾಗ ಒಬ್ಬ ಹುಡುಗ, "ಹಿಮಾಲಯದ ಹಿಂದೆ ಉಪಾಧ್ಯಾಯರ ವೀಳ್ಯದ ಎಂಜಲು ಇದೆ" ಯೆಂದು ಉತ್ತರಿಸಿದ. ಈಗ ಆ ಕಿಡಿಕಿ ಸ್ವಚ್ಛವಾಗಿದೆ.

— ಎಚ್. ಪಿ ಫಾಟಕ

ಆ ದಿನ ಕಾಲೇಜಿಗೆ ತಡವಾಗುತ್ತದೆಂದು ಬಲು ಬೇಗ ಹೆಜ್ಜೆ ಇಡುತ್ತಿದೆ. ಅನತಿ ದೂರದಲ್ಲಿ ರಸ್ತೆಯ ಬದಿಯಲ್ಲಿ ಒಂದು ಮಗು (ಸುಮಾರು ಆರು ವರ್ಷ ವಯಸ್ಸಿನದು) ಅಳುತ್ತಾ ನಿಂತಿತ್ತು. ಆದರ ಅಳು ನೋಡಿ ನನಗೆ ಕನಿಕರ ಮೂಡಿತು. ಹಿಂದಿನ ದಿನವೇ ನಮ್ಮ ಕಾಲೇಜಿನಲ್ಲಿ "ಸಮಾಜ ಸೇವೆ" ನಮ್ಮ ಕರ್ತವ್ಯ. ಶಾಲಾ-ಕಾಲೇಜುಗಳಲ್ಲಿ ಕಲಿಯುವುದೇ ಮುಖ್ಯ ಧ್ಯೇಯವಲ್ಲವೆಂದು ನಮ್ಮ ಪ್ರಿನ್ಸಿಪಾಲರು ಹೇಳಿದುದು ನೆನಪಾಯಿತು. ಆ ಅಳುತ್ತಿದ್ದ ಮಗುವನ್ನು ವಿಚಾರಮಾಡಿ ಅದರ ಮಾತಾಪಿತೃಗಳಿಗೆ ಒಪ್ಪಿಸೋಣವೆಂದು ಮಗುವಿನ ಹೆಸರು, ವಿಳಾಸ ಕೇಳಿದೆ. ಅದು ಅಳುತ್ತಲೇ "ನನಗೆ ಬಿಸ್ಕತ್ ಕೊಡು, ಹೇಳ್ತೀನಿ" ಎಂದು ಬಿಕ್ಕಿ ಬಿಕ್ಕಿ ಅಳುವುದಕ್ಕೇ ಪ್ರಾರಂಭ ಮಾಡಿತು. ಅಂತೂ ಮಗು ಮನೆ ಸೇರಿದರೆ ನನಗೆ ಸಮಾಧಾನವೆಂದು, ಪಕ್ಕದ ಅಂಗಡಿಯಲ್ಲೇ ಬಿಸ್ಕತ್ ಖರೀದಿ ಮಾಡಿ ಕೊಟ್ಟೆ. ಅಳು ನಿಂತಿತು. ಮಗು ಕಣ್ಣು ಒರಸಿಕೊಂಡಿತು. ಸ್ವಲ್ಪ ಹಸನ್ಮುಖಿಯಾಗಿ, "ಬಾ, ಇಲ್ಲಿದೆ ನಮ್ಮನೆ ತೋರಿಸ್ತೀನಿ" ಎಂದು ತೊದಲುತ್ತ ಪಕ್ಕದ ಗಲ್ಲಿಯ ಲ್ಲಿ ತಿರುಗಿ ತನ್ನ ಮನೆಗೇ ಕರೆದುಕೊಂಡು ಹೋಯಿತು.

ಬಾಗಿಲಲ್ಲಿ ನಿಂತಿದ್ದ ಮಗುವಿನ ಅಪ್ಪ ನನಗೆ ನಗುತ್ತಾ ವಂದನೆಯನ್ನು ತಿಳಿಸಿದರು— "ಮಗುವಿಗೆ ಬಿಸ್ಕತ್ ಕೊಂಡು ಕೊಟ್ಟುದುದಕ್ಕಾಗಿ!"

— ಹೆಚ್. ಎಂ. ಸೂರ್ಯನಾರಾಯಣ


ದಿನೇ ದಿನೇ
ಅಧಿಕ ಸುಂದರ ಚರ್ಮ-
ಹೊಸ ರೆಕ್ಸೋನ ಅದರ ಮರ್ಮ
ನೀವು ರೆಕ್ಸೋನವನ್ನು ಬಳಸುವಾಗ ಅದರ ಅದ್ಭುತ ಗುಣ ನಿಮಗೆ ಕಂಡುಬರುವುದು. ಅದರ ಮೃದುವಾದ ನೊರೆಯಲ್ಲಿ ಕ್ಯಾಡಿಲ್—ಚರ್ಮವನ್ನು ಸುಂದರಗೊಳಿಸುವ ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣ—ಇದೆ. ಅದರ ಪ್ರಭಾವ ಚರ್ಮದ ಅಂತರ್ಭಾಗಕ್ಕೂ ಬೀಳುತ್ತದೆ ಮತ್ತು ಅದರಿಂದ ಚರ್ಮವು ಹೆಚ್ಚು ನುಣುಪಾಗಿ, ಹೆಚ್ಚು ಕೋಮಲವಾಗಿ ಸುಂದರವಾಗುವುದು!
ಬಹಳ ಹೊತ್ತಿನವರೆಗೆ ನಿಮಗೆ ಉಲ್ಲಾಸವನ್ನೀಯುವ ವಿಶಿಷ್ಟ ಪರಿಮಳವಿರುವ ರೆಕ್ಸೋನ ನಿಮ್ಮ ಸ್ನಾನಕ್ಕೆ ಆದರ್ಶಪ್ರಾಯವಾದುದು.
Rexona
GOOD FOR YOUR SKIN
ಹೊಸ ರ್ಯಾಪರ್ ಇರುವ, ಹೊಸ ಆಕಾರವಿರುವ, ಹೊಸ ಹಸುರು ಬಣ್ಣವಿರುವ ಹೊಸ ರೆಕ್ಸೋನ ನಿಮ್ಮ ಪ್ರೀತಿಗೆ ಪಾತ್ರವಾಗುವುದು.
ಹೊಸ ರೆಕ್ಸೋನ-ನಿಮ್ಮ ಚರ್ಮಕ್ಕೆ ಹಿತಕರ
RP.170-50 KN

L 5-6



ಪ್ರಾಣಿಗಳಿಗೆ

ಪ್ರಾಣಿಗಳು ಮಾತಾಡುವುದಿಲ್ಲ. ಹಾಗೆಂದು ಮನುಷ್ಯ ಹೇಳುತ್ತಿದ್ದಾನೆ. ಆದರೆ ತನ್ನ ವಿಚಾರಗಳನ್ನು ಇತರರಿಗೆ ತಿಳಿಸುವ ಭಾಷೆಯೆಂದರೆ ಶಬ್ದಗಳ ಭಾಷೆ ಮಾತ್ರವೇ ಎಂದೇನೂ ಇಲ್ಲ.

ನಾಯಿಗಳ ಬೊಗಳುವಿಕೆ, ಬೆಕ್ಕುಗಳ ಮಿಯಾಂವ್, ಕುದುರೆಗಳ ಹೇಷಾರವ, ಹಕ್ಕಿಗಳ ಚಿಲಿಪಿಲಿ ಸದ್ದು ಎಲ್ಲವೂ ಭಾಷೆಯ ವಿವಿಧ



ರೂಪಗಳೇ ಆಗಿದ್ದು ಪ್ರಾಣಿ ಜಗತ್ತಿನಲ್ಲಿ ಅವಕ್ಕೆ ಖಂಡಿತವಾಗಿಯೂ ನಿರ್ದಿಷ್ಟ ಅರ್ಥವಿದೆ ಕ್ರಿಮಿಕೀಟಕಗಳ ರೆಕ್ಕೆಗಳ ಸ್ಪಂದನವೂ ಅವುಗಳ ಭಾಷೆಯ ರೂಪವೇ ಆಗಿದೆ.

ಒಂದು ಜೇನು ತೊಟ್ಟಿಲಲ್ಲಿ ಅಲ್ಲಿಯ ರಾಣಿ ಸತ್ತಾಗ ಸಮೀಪದಲ್ಲಿದ್ದ ಎಲ್ಲ ತೊಟ್ಟಿಲುಗಳಿಗೂ ಆಗಿಂದಾಗ ಆ ಸುದ್ದಿ ತಲುಪುತ್ತದೆ. ಆಗ ಎಲ್ಲ ತೊಟ್ಟಿಲುಗಳಲ್ಲಿಯೂ ಏಕಕಾಲಕ್ಕೆ ಕಂಡುಬರುವ ಅಸಾಮಾನ್ಯ ಚಟುವಟಿಕೆ ಇದಕ್ಕೆ ಸಾಕ್ಷಿಯಾಗಿದೆ.

ತಾನು ಎಳೆದೊಯ್ಯಲಾರದಂಥ ಆಹಾರ ವಸ್ತು ಒಂದು ಇರುವೆಗೆ ಕಂಡಾಗ ಅದು ಅಲ್ಲಿಂದ ಹೊರಟು ಹೋಗಿ ಕೆಲವೇ ಕ್ಷಣಗಳಲ್ಲಿ ಹತ್ತಾರು ಸಂಗಡಿಗರನ್ನು ಕರೆದುಕೊಂಡು ಬರುತ್ತದೆ. ಯಾವುದೇ ಬಿಡಾಡಿ ನಾಯಿಗೆ ಅನ್ನಹಾಕುವ ದಯಾಳುವೊಬ್ಬನ ಪರಿಚಯವಾದರೆ ಅದು ಮತ್ತೊಮ್ಮೆ ಬರುವಾಗ ಗೆಳೆಯ ನಾಯಿಗಳನ್ನು ಕರೆದುಕೊಂಡು ಬರುವುದನ್ನೂ ಕಾಣಬಹುದು.

ಆದುದರಿಂದ ವಿಚಾರಗಳನ್ನು ಪ್ರಕಟಿಸಲು ಪ್ರಾಣಿಗಳು ಸಂಕೇತ ಭಾಷೆಯನ್ನು ಉಪಯೋಗಿಸುತ್ತವೆನ್ನಬಹುದು.

ಮನುಷ್ಯ ಮತ್ತು ಪ್ರಾಣಿಗಳ ಸಂಬಂಧದಲ್ಲಿ ಭಾಷೆಯ ಪಾತ್ರವೇನು? ವಾಸ್ತವದಲ್ಲಿ ಮನುಷ್ಯನಿಗೆ ತೀರ ಸಮೀಪವಾಗಿರುವ ಮೇಲ್ಮಟ್ಟದ ಪ್ರಾಣಿಗಳು ನಮ್ಮ ಭಾಷೆಯನ್ನು ಕೆಲಮಟ್ಟಿಗೆ ಅರ್ಥಮಾಡಿಕೊಳ್ಳಬಲ್ಲವು. ಕೆಲವೊಂದು ಶಬ್ದಗಳ ಸರಿಯಾದ ಅರ್ಥವನ್ನು ಅವು ಗ್ರಹಿಸಬಲ್ಲವು. ನಾವು ಅವುಗಳೊಡನೆ ಮಾತಾಡಿದರೆ



ಜ್ಞಾನವಿಲ್ಲವೆ



ಎಲಿನಾ ಕುವರೆಲಿ

ಪ್ರಾಣಿಗಳಿಗೆ ತುಂಬ ಸಂತೋಷ ಎಂಬುದನ್ನು ನಾವು ತಿಳಿದಿರಬೇಕು. ಅವಕ್ಕೆ ನಮ್ಮ ಸ್ನೇಹ ಇಷ್ಟವಾಗಿದೆ.

ನನ್ನ ಅತ್ತೆಯ ಹತ್ತಿರ ಒಂದು ಗ್ರೇಹೌಂಡ್ ನಾಯಿಯಿತ್ತು. ಅದು ತುಸು ಗಂಭೀರ ಪ್ರಕೃತಿಯದು. ತನ್ನ ಒಡೆಯ ಮತ್ತು ಒಡತಿಯರನ್ನುಳಿದು ಮತ್ತಾರ ಎದುರೂ ಅದು ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಿರಲಿಲ್ಲ. ಹೊರಗೆ ತಿರುಗಾಡಿ ಬರುವುದು ಅದಕ್ಕೆ ಮೆಚ್ಚಿಗೆಯಾಗಿದ್ದರೂ ಅದು ನನ್ನ ತಾಯಿಯ ಜೊತೆ ಕೂಡ ಹೊರಬೀಳುತ್ತಿರಲಿಲ್ಲ. ಒಂದು ದಿನ ನನ್ನ ಅತ್ತೆಯ ಪ್ರಕೃತಿ ಚೆನ್ನಾಗಿರಲಿಲ್ಲ. ಅವಳು ನನ್ನ ತಾಯಿಗೆ "ನನಗೆ ಮೈ ಚೆನ್ನಾಗಿಲ್ಲ. ಎಲ್ಸಿ(ನಾಯಿ) ಯನ್ನು ಅಡ್ಡಾಡಿಸಿಕೊಂಡು ಬರುತ್ತೀಯಾ ?" ಎಂದಳು. ಅದನ್ನು ಕೇಳಿದ ಎಲ್ಸಿ ತಕರಾರಿಲ್ಲದೆ ನನ್ನ ತಾಯಿಯ ಜೊತೆ ಅಡ್ಡಾಡಲು ಹೊರಟಿತು.

ಇನ್ನೊಂದು ಸಂಗತಿ ಹೇಳುತ್ತೇನೆ. ನನ್ನ ಕುಟುಂಬದಲ್ಲಿ ನಡೆದಿರದಿದ್ದರೂ ಪ್ರತ್ಯಕ್ಷದರ್ಶಿಯೊಬ್ಬ ಹೇಳಿದ ಸಂಗತಿ ಇದು: ಒಬ್ಬ ಬೇಟೆಗಾರ ತನ್ನ ಮುದಿನಾಯಿ ಮತ್ತು ಗೆಳೆಯರೊಡನೆ ಬೇಟೆಗೆ ಹೋಗಿದ್ದಾಗ "ಈ ನಾಯಿ ಮುಪ್ಪಾಯಿತು. ಇನ್ನು ಇದನ್ನು ಗುಂಡಿಕ್ಕಿ ಕೊಲ್ಲಬೇಕಾಗಿದೆ" ಎಂದನು. ಅದನ್ನು ಕೇಳಿದ ನಾಯಿ ಅಲ್ಲಿಂದ ಪಲಾಯನ ಹೇಳಿಬಿಟ್ಟಿತು. ಅದರ ಒಡೆಯ ಪುನಃ ಅದನ್ನು ಕಾಣಲಿಲ್ಲ.



ಈ ಉದಾಹರಣೆಗಳಿಂದ ನಮ್ಮ ಶಬ್ದಗಳಿಗೆ ನಾವು ಮಾಡಿಕೊಳ್ಳುವ ಅರ್ಥವನ್ನೆ ಪ್ರಾಣಿಗಳೂ ಮಾಡಿಕೊಳ್ಳುತ್ತವೆ ಎಂದಾಗುವುದಿಲ್ಲವೆ ?

ಒಂದು ಪತ್ರಿಕೆಯಲ್ಲಿ ಬಂದ ಇನ್ನೊಂದು



ಉದಾಹರಣೆ ಹೇಳುತ್ತೇನೆ. "ನನ್ನ ಅತ್ತೆ ಪ್ರತಿನಿತ್ಯ ತನ್ನ ನಾಯಿಯನ್ನು ಒಂದು ಬುಟ್ಟಿಯಲ್ಲಿ ಮಲಗಿಸಿ ಕಂಬಳಿ ಹೊಚ್ಚಿ 'ಹಾಂ. ಇನ್ನು ಡೆನಿಗೆ ಚಳಿಯಾಗುವುದಿಲ್ಲ' ಎನ್ನುತ್ತಿದ್ದಳು. ಒಂದು ರಾತ್ರಿ ಅವಳ ಸಂಬಂಧಿಕನೊಬ್ಬ ಅವಳ ಮನೆಗೆ ಬಂದಾಗ ಅಗ್ಗಿಷ್ಟಿಕೆಯ ಬಳಿ ಕುಳಿತು ಕೈ-ಕಾಯಿಸಿಕೊಳ್ಳುತ್ತ "ಎಂಥ ವಿಪರೀತ ಚಳಿ"

ಎಂದ. ಡನಿ ಮೆಲ್ಲಗೆ ಅಲ್ಲಿಂದೆದ್ದು ಹೋಯಿತು. ತಿರುಗಿ ಬಂದಾಗ ಅದು ತನ್ನ ಕಂಬಳಿಯನ್ನು ತಂದಿತ್ತು.

ಸೂಕ್ಷ್ಮವಾಗಿ ನಿರೀಕ್ಷಿಸುವವರಿಗೆ ಪ್ರಾಣಿಗಳಲ್ಲಿ ಗೆಳೆತನದ ಲಕ್ಷಣಗಳು ಧಾರಾಳವಾಗಿ ಕಾಣಿಸುವಂತಿದೆ. ಜಿನೇವಾದಲ್ಲಿ ಪ್ರೊಫೆಸರ್ ಕೊಲೊಗ್ರಿಲೊ ಎಂಬವರು ಒಂದು ಗಾಡಿಗೆ ಕಟ್ಟಿದ ಎರಡು ಕುದುರೆಗಳನ್ನು ನೋಡುತ್ತ ನಿಂತಿದ್ದರು. ಆಗ ಒಂದು ಕುದುರೆ ತನ್ನ ಮೊಣಕಾಲನ್ನು (ಬಹುಶಃ ಅಲ್ಲಿ ತುರಿಕೆಯೆದ್ದಿರಬೇಕು.) ನೆಕ್ಕಿಕೊಳ್ಳಲು ಯತ್ನಿಸಿತು. ಆದರೆ ನೊಗವಿದ್ದುದರಿಂದ ಅದಕ್ಕೆ ಅದು ಸಾಧ್ಯವಾಗಲಿಲ್ಲ. ಅದರ ಜೊತೆ ಕುದುರೆ ಅದನ್ನು ನೋಡಿತು. ಕೂಡಲೇ ಒಂದು ವಿಚಿತ್ರ ನಡೆಯಿತು. ಮೊದಲನೆಯ ಕುದುರೆ ತನ್ನ ಮೊಣಕಾಲನ್ನು ಎಷ್ಟು ಸಾಧ್ಯವೋ ಅಷ್ಟು ಎತ್ತರಕ್ಕೆ ಎತ್ತಿ ಹಿಡಿಯಿತು ಎರಡನೆಯದು ತನ್ನ ಕುತ್ತಿಗೆ ಬಗ್ಗಿಸಿ ತುರಿಕೆಯೆದ್ದಿದ್ದ ಆ ಮೊಣಕಾಲನ್ನು ನೆಕ್ಕಿತು. ತುರಿಕೆ ಶಾಂತವಾದೊಡನೆ ಮೊದಲನೆಯ ಕುದುರೆ ಮೊಣಕಾಲನ್ನೂರಿತು. ಮತ್ತು ತನ್ನ ಕೃತಜ್ಞತೆ ಸೂಚಿಸಲೆಂದು ಎರಡನೆಯ ಕುದುರೆಯ ಮೋತಿಗೆ ತನ್ನ ತುಟಿಗಳನ್ನು ಸ್ಪರ್ಶಿಸಿತು.

ಈ ಎರಡು ಕುದುರೆಗಳು ಪರಸ್ಪರರ ಭಾವ ಪ್ರದರ್ಶನಕ್ಕಾಗಿ ಎಂಥ ಸಂಕೇತಗಳನ್ನು ಉಪಯೋಗಿಸಿರಬಹುದು ?

ಸರ್ಕಸ್ಸಿನಲ್ಲಿ ತನ್ನ ಜೊತೆಗಾರನಾಗಿದ್ದ ಸಿಂಹವೊಂದು ಸತ್ತಾಗ ದುಃಖದಿಂದ ಸತ್ತ ಒಂದು ನಾಯಿಯ ವಿಚಾರವನ್ನು ವಿಜ್ಞಾನಿ ಫ್ರೆಡಿಕ್ ಕ್ಲಿವಿಯರ್ ಹೇಳಿದ್ದಾರೆ.

ಪ್ರಾಣಿಗಳ ವಿವೇಕದ ಒಂದು ಘಟನೆಯನ್ನಷ್ಟು ಹೇಳುತ್ತೇನೆ :

ನನ್ನ ಅಜ್ಜ ತನ್ನ ಕುದುರೆಗಾಡಿಯನ್ನು ಒಂದು ದಿನ ಹೊಡೆದುಕೊಂಡು ಹೋಗುತ್ತಿದ್ದಾಗ ಹಾದಿಯಲ್ಲೊಂದೆಡೆ ಕುದುರೆ ತಟ್ಟನೆ ನಿಂತಿತು. ನನ್ನ ಅಜ್ಜ ಮೊದಲು ಮೆಲ್ಲಗೆ " ಹೆಹೇ " ಎಂದ. ಬಳಿಕ ಗಟ್ಟಿಯಾಗಿ ಹೇಳಿದ. ಕುದುರೆ ಕದಲಲಿಲ್ಲ. ಬಾರಕೋಲಿನಿಂದ ಅಜ್ಜ ಎರಡು ಬಿಗಿದ. ಆದರೂ ಕುದುರೆ ಹೆಜ್ಜೆಯೆತ್ತಲಿಲ್ಲ.

" ಥೂ ! ಇದರ ! " ಎಂದು ಅಜ್ಜ ಏನಾಗಿದೆ ನೋಡೋಣ ಎಂದು ಕೆಳಗಿಳಿದ. ಕುದುರೆಯ ಕಾಲುಗಳ ನಡುವೆ ಚಿಕ್ಕ ಕೂಸೊಂದು ಇದ್ದದ್ದು ಅವನಿಗೆ ಕಾಣಿಸಿತು.

ಹೆಗ್ಗಣಗಳೂ ಬುದ್ಧಿವಂತ ಪ್ರಾಣಿಗಳೇ. ಒಂದು ದಿನ ಒಬ್ಬ ಗಣಿ ಕೂಲಿಕಾರ ಕೆಲಸದಿಂದ ಮನೆಗೆ ಮರುಳುತ್ತಿದ್ದಾಗ ಹಾದಿಯಲ್ಲಿ ಎರಡು ಹೆಗ್ಗಣಗಳನ್ನು ಕಂಡ. ಒಂದು ಹುಲ್ಲು ಕಡ್ಡಿಯ ಒಂದು ತುದಿಯನ್ನು ಒಂದು ಹೆಗ್ಗಣವೂ ಇನ್ನೊಂದು ತುದಿಯನ್ನು ಇನ್ನೊಂದು ಹೆಗ್ಗ-ಣವೂ ಕಚ್ಚಿ ಹಿಡಿದಿತ್ತು.

ಆ ಕೂಲಿಕಾರ ತನ್ನ ಕೈಲಿದ್ದ ಕಟ್ಟಿಗೆಯ ತುಂಡೊಂದನ್ನು ಅವುಗಳತ್ತ ಬೀಸಿದ. ಅದು ಒಂದು ಹೆಗ್ಗಣಕ್ಕೆ ಬಡಿದು ಅದು ಸತ್ತಿತು. ಕೂಲಿಕಾರ ಅದರ ಬಳಿ ಹೋಗಿ ನೋಡಿದಾಗ ಆ ಇನ್ನೊಂದು ಹೆಗ್ಗಣ ಓಡಿಹೋಗದೆ ಇನ್ನೂ ಅಲ್ಲಿಯೆ ಬೆಪ್ಪನಂತೆ ನಿಂತಿತ್ತು. 'ಎಲಾ' ಎಂದಾತ ಬಗ್ಗಿ ನೋಡಿದರೆ ಆ ಹೆಗ್ಗಣ ಸಂಪೂರ್ಣ ಕುರುಡಾಗಿತ್ತು. ಅದರ ಸ್ನೇಹಿತ ಅದನ್ನು ಹುಲ್ಲು ಕಡ್ಡಿಯ ಆಧಾರದಿಂದ ನಡೆಸಿಕೊಂಡು ಬಂದಿತ್ತು.

ಪ್ರಾಣಿ ಜಗತ್ತಿನಲ್ಲಿ ಪ್ರೇಮದ ವಿಚಾರವೇನು ? ಪ್ರಾಣಿಗಳ ಪ್ರೇಮದ ಮಾತು ಮಹತ್ವದ್ದಲ್ಲ ಎಂದು ಮೂಗು ಮುರಿಯುವವರಾದರೂ ಪ್ರಾಣಿಗಳಲ್ಲಿ ನಾವು ನಿಜ ಪ್ರೇಮದ ಉದಾಹರಣೆಗಳನ್ನು ಕಾಣಬಹುದಾಗಿದೆ.

ಮನುಷ್ಯರಂತೆ ಪ್ರಾಣಿಗಳಲ್ಲೂ ಪ್ರೇಮವು ಭಾವನೆಗಳ ಮೂಲಕವೇ ಪ್ರದರ್ಶಿತವಾಗುತ್ತದೆ. ಕುದುರೆಗಳನ್ನು ಸಾಕುವುದೇ ವ್ಯವಸಾಯವಾಗಿದ್ದ ಟಿಸಿಯೊ ಎಂಬಾತ ತಮ್ಮ

ಜೀವನವಿಡೀ ಪರಸ್ಪರರನ್ನು ಪ್ರೀತಿಸಿದ ಎರಡು ಕುದುರೆಗಳ ವಿಷಯವನ್ನು ಹೇಳಿದ್ದಾನೆ. ಆದರೂ ಅವುಗಳಲ್ಲಿ ಕಾಮದ ಭಾವನೆಯಿರಲಿಲ್ಲ, ಅವಕ್ಕೆ ಮರಿಗಳು ಹುಟ್ಟಲಿಲ್ಲ. ಪ್ರೇಮಕ್ಕಾಗಿ ಬಲಿದಾನ ಮಾಡುವ ಉದಾಹರಣೆಗಳನ್ನು ಮೀನುಗಳಲ್ಲೂ ಕಾಣಬಹುದು.

ಗಂಡು ಸಾಲ್ಮನ್ ಮೀನು ಹೆಂಡತಿಗೆ ಅತ್ಯಂತ ನಿಷ್ಠವಾಗಿರುತ್ತದೆ. ಹೆಣ್ಣು ಮೀನು ಕೂಡ ತನ್ನ ಪ್ರಿಯಕರ ಸಾಯುವವರೆಗೂ ಇನ್ನೊಂದು ಗಂಡು ಮೀನನ್ನು ಕಣ್ಣೆತ್ತಿ ಕೂಡ ನೋಡುವುದಿಲ್ಲ. ಬಲೆಯಲ್ಲಿ ಸಿಕ್ಕಿಬಿದ್ದಿದ್ದ ತನ್ನ ಪ್ರೇಯಸಿಗಾಗಿ ಹಂಬಲಿಸುತ್ತ ಗಂಡು ಮೀನೊಂದು ಎರಡು ದಿನಗಳವರೆಗೆ ಬಲೆಯ ಸುತ್ತ ಸುಳಿದಾಡಿ ಮೂರನೆಯ ದಿನ ತನ್ನ ಪ್ರೇಯಸಿ ಸಿಕ್ಕು ಬಿದ್ದಿದ್ದ ಬಲೆಯ ಭಾಗದಲೆ ಪ್ರಾಣಬಿಟ್ಟ ದಾಖಲೆಯಿದೆ.

ಬಕಪಕ್ಷಿಗಳು ಮತ್ತು ಸ್ವಾಲೊ ಹಕ್ಕಿಗಳು ಕೂಡ ಏಕಪತ್ನೀ ವ್ರತವನ್ನು ಪಾಲಿಸುತ್ತವೆ. "ಲವ್ ಲ್ಯಾಫ್ ಆಫ್ ಎನಿಮಲ್ಸ್" ಎಂಬ ಪುಸ್ತಕದಲ್ಲಿ ಅಲೆಸಾಂಡ್ರೊ ಕೆನಿಸ್ಟ್ರಿನಿ ಹೀಗೆ ಬರೆದಿದ್ದಾರೆ:

"ಸ್ವಾಲೊ ಹಕ್ಕಿಗಳ ಪ್ರೇಮ ಅದ್ಭುತವಾದದ್ದು. ಗಂಡು ಅಥವಾ ಹೆಣ್ಣು ಹಕ್ಕಿ ಸತ್ತಾಗ ಬದುಕುಳಿದಿರುವ ಹಕ್ಕಿ ಇನ್ನೊಂದು ಹಕ್ಕಿಯನ್ನು ಎಂದೂ ಕೂಡಿಕೊಳ್ಳುವುದಿಲ್ಲ. ಆದ್ದರಿಂದಲೇ ಎಷ್ಟೋ ಗೂಡುಗಳಲ್ಲಿ ದುಃಖಪೂರ್ಣವಾದ ಏಕಾಂತ ಜೀವನವನ್ನು ಸಾಗಿಸುವ ಒಂಟಿ ಹಕ್ಕಿಗಳನ್ನು ಕಾಣಬಹುದು."

ಸಾಮಾನ್ಯವಾಗಿ ಎಲ್ಲ ಕಾಡು ಪ್ರಾಣಿಗಳಲ್ಲೂ ಕುಟುಂಬ ಭಾವನೆಯಿರುತ್ತದೆ. "ಟೆಂಪೊ" ಎಂಬ ನಿಯತಕಾಲಿಕದಲ್ಲಿ ಆನೆಗಳ ವಿಷಯವಾಗಿ ಈ ರೀತಿ ಪ್ರಕಟವಾಗಿತ್ತು. "ಗಂಡಾನೆಗಳು ಪ್ರಣಯಾರಾಧನೆಯನ್ನು ಎಷ್ಟೋ ವಾರಗಳ ವರೆಗೆ ನಡೆಸಿರುತ್ತವೆ. ಇಪ್ಪತ್ತು ವರ್ಷವಾಗುವವರೆಗೂ ಯಾವ ಹೆಣ್ಣಾನೆಯೂ ಪ್ರಿಯಕರನನ್ನು ಸ್ವೀಕರಿಸಲಾರದು. ವಿವಾಹಾನಂತರ ಗಂಡಾನೆ ತನ್ನ ಪ್ರೇಯಸಿಗೆ ತುಂಬ ನಿಷ್ಠವಾಗಿರುತ್ತದೆ. ಮರಿ ಹಾಕುವ ಸಮಯಬಂದಾಗ ಮಾತ್ರವೇ ಗಂಡಾನೆ ಹೆಣ್ಣಾನೆಯಿಂದ ದೂರವಿರುತ್ತದೆ. ಆ ಕಾಲದಲ್ಲಿ ಹೆಣ್ಣಾನೆ ಇನ್ನೊಂದು ಹೆಣ್ಣಾನೆಯನ್ನು ತನ್ನ ಜೊತೆಗಾರ್ತಿಯನ್ನಾಗಿ ಮಾಡಿಕೊಳ್ಳುತ್ತದೆ. ೬೦ ವರ್ಷವಾದ ನಂತರ ಗಂಡಾನೆ ಪ್ರೇಮ ಕಾಮಗಳ ಕಲ್ಪನೆಗಳನ್ನೆಲ್ಲ ಬದಿಗೆ ಸರಿಸುವುದಾದರೂ ಅದರ ಒಂಟಿ ಜೀವನವನ್ನು ಗತಪ್ರೇಮದ ನೆನಹುಗಳು ಮಧುರವನ್ನಾಗಿ ಮಾಡುತ್ತವೆ."

ನಾಯಿಗಳನ್ನು ಬಿಟ್ಟರೆ ಪ್ರಣಯಾರಾಧನೆ ಪ್ರಾಣಿಗಳಲ್ಲಿ ಹುಡುಗಾಟಿಕೆಯ ಮಾತೇನೂ ಆಗಿಲ್ಲ. ಎರಡು ಬೆಕ್ಕುಗಳು ಪ್ರಥಮತಃ ಕೂಡುವ ಮೊದಲು ಗಂಡು ಇಡೀ ಎರಡು ದಿನಗಳ ವರೆಗೆ ಹೆಣ್ಣಿನ ಮನವೊಲಿಸಲು ಹೆಣಗಬೇಕಾಗುತ್ತದೆ. ಹೆಣ್ಣು ಬೆಕ್ಕುಗಳು ಹೆಣ್ಣಾನೆಗಳಂತೆ ಪತಿವ್ರತೆಯರಾಗಿರದಿದ್ದರೂ ಕಂಡೊಡನೆ ಗಂಡು ಬೆಕ್ಕಿನ ಕೊರಳಿಗೆ ತೆಕ್ಕೆ ಬೀಳುವುದಿಲ್ಲ.


ಅಲನ್ ಡೇವೊ ಹೇಳುತ್ತಾರೆ:

"ಕೆಳ ತರಗತಿಯ ಪ್ರಾಣಿಗಳಲ್ಲೂ ಪ್ರಣಯಾರಾಧನೆಯ ಸಮಯದಲ್ಲಿ ಕಾಣಿಕೆಗಳನ್ನೊಪ್ಪಿಸುವ ಪರಿಪಾಠವಿದೆ. ಬೇಸಿಗೆಯ ಕಾಲದಲ್ಲಿ ಹೆಚ್ಚಾಗಿ ಕಣ್ಣಿಗೆ ಬೀಳುವ ಒಂದು ಪುಟ್ಟ ಹಕ್ಕಿ ಪ್ರೇಮಪಾಶದಲ್ಲಿ ಸಿಲುಕಿದಾಗ ರುಚಿಕಟ್ಟಾದ ಆಹಾರವನ್ನು ತನ್ನ ಪ್ರೇಯಸಿಯ ಬಾಯಲ್ಲಿಡುತ್ತದೆ. ಅಂಟಾರ್ಕ್ಟಿಕ್‌ನಲ್ಲಿ ಪೆಂಗ್ವಿನ್ ಹಕ್ಕಿಗಳು ಸುಂದರವಾದ ನುಣುಪು ಕಲ್ಲನ್ನು ತಮ್ಮ ಪ್ರೇಯಸಿಯರ ಪಾದಗಳ ಬಳಿ ಇಡುತ್ತವೆ.

ಒಂದು ಜಾತಿಯ ಗುಬ್ಬಿ ಚೆರಿ ಅಥವಾ ಮತ್ತಾವುದಾದರೂ ಪುಟ್ಟ ಹಣ್ಣನ್ನು ತನ್ನ ಪ್ರೇಯಸಿಯ ಬಾಯಲ್ಲಿಡುತ್ತದೆ. ತನಗೆ ಆ ಗಂಡು ಒಪ್ಪಿಗೆಯಾದರೆ ಮಾತ್ರ ಹೆಣ್ಣು ಹಕ್ಕಿ ಆ ಹಣ್ಣನ್ನು ಸ್ವೀಕರಿಸುತ್ತದೆ. ಸ್ವೀಕರಿಸಿದಾ

ಗಲೂ ಅದು ಆ ಹಣ್ಣನ್ನು ತಿನ್ನುವುದಿಲ್ಲ. ಮರಳಿ ಗಂಡಿನ ಬಾಯಿಗೆ ಕೊಡುತ್ತದೆ. ಒಂದು ಟೊಂಗೆಯ ಮೇಲೆ ಆ ಎರಡು ಪುಟ್ಟ ಹಕ್ಕಿಗಳು ಒಂದು ಹಣ್ಣನ್ನು ಈ ಚುಂಚಿನಿಂದ ಆ ಚುಂಚಿಗೆ ಸಾಗಿಸುತ್ತ ಕುಳಿತಿರುವ ದೃಶ್ಯ ಮನೋಹರ ವಾಗಿರುತ್ತದೆ.

ಕೆಲವು ಹಕ್ಕಿಗಳು ಸುಂದರವಾದ ಗೂಡುಗ ಳನ್ನು ಕಟ್ಟಿ ಆ ಮನೆಗಳಿಗೆ ಯಜಮಾನಿಯರಾ ಗಲು ಹೆಣ್ಣು ಹಕ್ಕಿಗಳನ್ನು ಆಮಂತ್ರಿಸುತ್ತವೆ. ಒಂದು ಜಾತಿಯ ಹಕ್ಕಿಗಳ ಕಣ್ಣು ನೀಲಿಯಾಗಿ ರುತ್ತವೆ. ಅದಕ್ಕೆಂದೇ ಆ ಜಾತಿಯ ಗಂಡು ಹಕ್ಕಿಗಳು ನೀಲಿ ಬಣ್ಣದ ಕಲ್ಲುಗಳು, ನೀಲಿ ಬಣ್ಣದ ಕಾಡು ಬಾರಿ ಹಣ್ಣುಗಳೇ ಮುಂತಾದವ- ನ್ನು ಕಾಣಿಕೆಯೆಂದು ತರು ತ್ತವೆ.



ಪ್ರೇಮ ಕಾಮವಷ್ಟೇ ಅಲ್ಲ, ಸಾಹಚರ್‍ಯದ ಜೀವ ನದ ಆನಂದವನ್ನು ಮನುಷ್ಯ ರಂತೆ ಪ್ರಾಣಿಗಳೂ ಅನುಭ ವಿಸುತ್ತವೆ. ನಿಷ್ಠೆ, ಪ್ರೇಮ, ಮೃದುಮಧುರಭಾವ ಎಲ್ಲ- ವೂ ಅವುಗಳ ಜೀವನದಲ್ಲಿರು ತ್ತವೆ.

ಕಾನಡಾದ ಉತ್ತರ ಭಾಗದ ಅಡವಿಗಳಲ್ಲಿ ಬಲೆ ಹಾಕಿ ಪ್ರಾಣಿಗಳನ್ನು ಹಿಡಿಯುವ ಲಾಂಗ್ ಜೋ ಎಂಬಾತನಿದ್ದಾನೆ. ಒಂದು ದಿನ ಅವನ ಬಲೆಯಲ್ಲಿ ಒಂದು ಹೆಣ್ಣು ಕರಡಿ ಸಿಕ್ಕಿಬಿದ್ದಿತ್ತು. ಆತ ಅಲ್ಲಿಗೆ ಬಂದಾಗ ಗಂಡು ಕರಡಿ ಹೆಣ್ಣು ಕರಡಿಯನ್ನಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳು ತ್ತಿರುವುದನ್ನು ಕಂಡ. ತೋಳ ಮತ್ತು ನರಿ ಗಳು ಸಾಯುವ ವರೆಗೂ ಜೊತೆಯಾಗಿ ಬಾಳು ತ್ತವೆ. ನಾಯಿಗಳಲ್ಲೂ ಇಂಥ ನಿಷ್ಠಾವಂತ ಜೀವನವನ್ನು ಕಾಣಬಹುದು. ಈಗ ಒಂದೆರಡು ವರ್ಷಗಳ ಹಿಂದೆ ಹೆಣ್ಣು ನಾಯಿಯೊಂದು ಒಂದು ಕೊರಕಲಲ್ಲಿ ಬಿತ್ತು. ಆ ನಾಯಿಯನ್ನು ಹುಡುಕಿ ಪಾರು ಮಾಡಿಕೊಂಡು ತರಲು ಹತ್ತು ದಿನಗಳು ಹಿಡಿದವು. ಅಲ್ಲಿಯ ವರೆಗೂ ಅದರ ಪ್ರಿಯಕರನಾಗಿದ್ದ ನಾಯಿ ತನಗಿತ್ತ ಆಹಾರ ದಲ್ಲಿ ತುಸುವನ್ನೆ ತಿಂದು ಉಳಿದದ್ದನ್ನು ಒಯ್ದು ಆ ಕೊರಕಲಲ್ಲಿ ಚೆಲ್ಲುತ್ತಿತ್ತು.

ಲಂಡನ್ನಿನಲ್ಲಿ ವಿಮಾನ ದಾಳಿಗಳಾಗುತ್ತಿ ದ್ದಾಗ ಜೋನ್ ಎಂಬ ನಾಯಿ ವಿಮಾನ ದಾಳಿಯ ಸೂಚನೆ ಕೊಡುವ ಗಂಟೆ ಬಾರಿಸಿದಾಗಲೆಲ್ಲ ಕುಂಯಿಗುಡುತ್ತ ಹೋಗಿ ತನ್ನ ಚಾಪೆಯ ಮೇಲೆ ಮಲ ಗುತ್ತಿತ್ತು. ಆಗ ಅದರ ಜೊತೆಗಾರನಾದ ಡಾರ್ಬಿ ಎಲ್ಲಿದ್ದರೂ ಓಡಿ ಬಂದು ಜೋನಳ ಮೈಮೇಲೆ ಅದರ ರಕ್ಷಣೆ ಮಾಡಲೆಂಬಂತೆ ಬಿ- ದ್ದುಕೊಳ್ಳುತ್ತಿತ್ತು. ಒಮ್ಮೆ ಅವಿದ್ದ ಮನೆ ಕುಸಿದು ಬಿದ್ದಾ ಗ ಮಣ್ಣನ್ನು ತೋಡಿದ ಮೇಲೆ ಅವೆರಡೂ ಈ ಸ್ಥಿತಿ ಯಲ್ಲಿ ಸಿಕ್ಕವು. ಡಾರ್ಬಿ ಸತ್ತಿದ್ದರೂ ಅದರ ಕೆಳಗಿದ್ದ ಜೋನ್ ರಕ್ಷಿತವಾಗಿತ್ತು.

ಪ್ರಾಣಿಗಳ ಚರ್‍ಯೆಗೆ ಮಾನವರ ಚರ್‍ಯೆಗಳಂ- ತೆಯೆ ಅರ್ಥ ಹಚ್ಚಿ ತಪ್ಪು ಮಾಡುವ ಸಂಭವ ವಿರುವುದೇನೂ ಸುಳ್ಳಲ್ಲ. ಆದರೆ ಅದರಂತೆ ಪ್ರಾಣಿಗಳ ಚರ್‍ಯೆಗಳಿಗೆ ಏನೂ ಅರ್ಥವಿಲ್ಲ ಎಂಬ ತಪ್ಪು ಗ್ರಹಿಕೆ ಮಾಡುವುದೂ ಅಷ್ಟೇ ಸಂಭವ ನೀಯವಾಗಿದೆ.

ಪ್ರಾಣಿಗಳಲ್ಲಿ ಮಾತೃತ್ವ ಭಾವನೆಯ ಬೆಳವಣಿ ಗೆಯನ್ನು ಸಹಜವಾಗಿ ಗುರುತಿಸಬಹುದು. ಅವು

ಗಳಲ್ಲಿ ಕೂಡ ದತ್ತಕ ತೆಗೆದುಕೊಳ್ಳುವ ಪರಿಪಾಠವಿದೆ. ಕಾಡು ಕುದುರೆಗಳ ಹಿಂಡಿನಲ್ಲಿ ಯಾವುದಾದರೂ ಹೆಣ್ಣು ಕುದುರೆ ಸತ್ತರೆ ಅದರ ಮರಿಯನ್ನು ಉಳಿದ ಹೆಣ್ಣು ಕುದುರೆಗಳು ದತ್ತಕ ಸ್ವೀಕರಿಸಿ ತಾಯಿಯಂತೆಯೆ ಅದನ್ನು ಜೋಪಾನ ಮಾಡುವವು. ಬಂಜೆ ಕುದುರೆಗಳು ಇತರ ಕುದುರೆಗಳ ಮರಿಗಳನ್ನು ಪ್ರೀತಿಸಿ ಅವು ತಮ್ಮನ್ನು ತಾಯಿಯಂತೆಯೆ ಕಾಣಲು ಪ್ರಯತ್ನಿಸುವ ವಿಷಯವನ್ನು ಅರಿಸ್ಟಾಟಲ್ ಹೇಳಿದ್ದಾನೆ.

ವಿಜಾತೀಯ ಮರಿಗಳನ್ನು ಕೂಡ ಪ್ರಾಣಿಗಳು ದತ್ತಕ ತೆಗೆದುಕೊಳ್ಳುತ್ತವೆ. ಅವುಗಳಲ್ಲಿ ದಯಾಭಾವವಿರುತ್ತದೆ. ಜಿಯಾರ್ಜಿಯೊ ಅಸನ್ ಒಂದು ಅತ್ಯಂತ ಕುತೂಹಲಕಾರಿಯಾದ ಸಂಗತಿಯನ್ನು ಹೇಳಿದ್ದಾನೆ:

"ಪಾತದಿಂದ ಕಾಲು ಹೆಚ್ಚು ಕಡಿಮೆ ನಿಷ್ಪ್ರಯೋಜಕವಾದ ಹುಂಜವೊಂದನ್ನು ಅದರ ಜೊತೆ ಕೋಳಿಗಳು ತುಂಬ ಪೀಡಿಸುತ್ತಿದ್ದವು. ಅದು ಹೇಗೊ ಆ ಹುಂಜಕ್ಕೆ ಒಂದು ನಾಯಿಯ ಸಮೀಪ ಕುಳಿತು ತನ್ನನ್ನು ರಕ್ಷಿಸಿಕೊಳ್ಳುವ ಯೋಚನೆ ಹೊಳೆಯಿತು. ಇತರ ಕೋಳಿಗಳು ಅಲ್ಲಿಯೂ ಅದನ್ನು ಪೀಡಿಸಲು ಬಂದಾಗ ನಾಯಿ ಅವುಗಳನ್ನೋಡಿಸಿತು.

"ಆಮೇಲೆ ಆ ಹುಂಜ ಈ ನಾಯಿ ಇನ್ನು ತನ್ನ ರಕ್ಷಕ ಎಂದು ತಿಳಿದುಕೊಂಡು ಆ ನಾಯಿಯ ಪೆಟ್ಟಿಗೆಯ ಅಡಿಯಲ್ಲಿ (ಆ ಪೆಟ್ಟಿಗೆಯನ್ನು ನಾಲ್ಕು ಚಿಕ್ಕ ಕಂಬಗಳ ಮೇಲೆ ಇಟ್ಟಿದ್ದರು.) ತನ್ನ ಬಿಡಾರ ಹೂಡಿತು. ಆಗಾಗ ಮೋರೆ ಹೊರಗೆ ಹಾಕಿ ತನ್ನ ರಕ್ಷಕನನ್ನು ಅಭಿವಂದಿಸಲೆಂಬಂತೆ ಅದನ್ನು ನೋಡುತ್ತಿತ್ತು: ತನ್ನ ಆಹಾರದ ಬಟ್ಟಲಲ್ಲಿ ಬಾಯಿಹಾಕಲು ಆ ಹುಂಜಕ್ಕೆ ನಾಯಿ ಅವಕಾಶ ಕೊಡುತ್ತಿತ್ತು. ಎಲ್ಲವನ್ನೂ ತಿನ್ನದೆ ಒಂದಿಷ್ಟನ್ನು ಆ ಹುಂಜಕ್ಕಾಗಿ ಉಳಿಸತೊಡಗಿತು. ಆದರೆ ಮತ್ತಾವ ಪ್ರಾಣಿಗೂ ತನ್ನ ಬಟ್ಟಲಲ್ಲಿ ಬಾಯಿಹಾಕಲು ನಾಯಿ ಬಿಡುತ್ತಿರಲಿಲ್ಲ.

"ಮಳೆಗಾಲದಲ್ಲಿ ಒಂದು ದಿನ ಆ ಬಟ್ಟಲನ್ನು ಪೆಟ್ಟಿಗೆಯೊಳಗೆ ಇಟ್ಟಾಗ ನಾಯಿ ತನಗೆ ಬೇಕಾದಷ್ಟನ್ನು ತಿಂದು ಉಳಿದದ್ದನ್ನು ಕೆಳಗೆ ಚೆಲ್ಲಿತು. ಪೆಟ್ಟಿಗೆಯಲ್ಲಿ ಬಟ್ಟಲಿಟ್ಟಾಗಲೆಲ್ಲ ಅದು ಈ ರೀತಿ ಮಾಡಲು ತಪ್ಪಲಿಲ್ಲ. ಕೆಲವು ಸಲ ಬಟ್ಟಲನ್ನೆ ಕೆಳಗುರುಳಿಸಿದರೆ ಕೆಲವು ಸಲ ಬಾಯಲ್ಲಿ ರೊಟ್ಟಿಯ ತುಣುಕನ್ನು ಹಿಡಿದು ಕೆಳಗೆ ಉಗುಳುತ್ತಿತ್ತು."

ಕೆಲಸ, ಆಟ, ಪ್ರೇಮ, ಸಂತತಿಯ ಜೋಪಾನ; ಪ್ರಾಣಿಗಳ ಜೀವನವೂ ಮನುಷ್ಯರ ಜೀವನದಂತೆಯೆ ಪೂರ್ಣವಾಗಿದೆ.

ಪ್ರಾಣಿಗಳು ಯಾವಾಗಲೂ ಚಟುವಟಿಕೆಯ ಜೀವನ ನಡೆಸುವಂತೆ ಕಂಡರೂ ಅವು ನಿಷ್ಕ್ರಿಯವಾಗಿರುವ ಸಂದರ್ಭಗಳೂ ಇವೆ. ಅವುಗಳ ಕಣ್ಣು ತೆರೆದಿರುವುದಾದರೂ ವಿಚಾರಮಗ್ನವಾಗಿರುತ್ತವೆ. ಅದೇನು ವಿಶ್ರಾಂತಿಯೆ? ಯೋಚನೆಯೆ? ಯಾರು ಹೇಳಬೇಕು?

ನಾಯಿಗಳು ಸ್ತಬ್ಧವಾಗಿರುವಾಗ ಊಹಾಪ್ರಪಂಚದಲ್ಲಿ ವಿಹರಿಸುತ್ತಿರಬೇಕು. ನಿದ್ದೆ ಮಾಡುತ್ತಿರುವಾಗಲೂ ಅವು ಮೈ ಝಾಡಿಸುತ್ತವೆ. ಅವುಗಳ ಭಾವನಾಪೂರ್ಣವಾದ ಚಟುವಟಿಕೆಯ ಜೀವನದ ಪ್ರಭಾವ ನಿದ್ದೆಯಲ್ಲೂ ಕಾಣಿಸುತ್ತಿರಬೇಕು.

ಆದರೆ ಬೆಕ್ಕುಗಳು ಹಾಗಲ್ಲ. ಅವು ಶಿಲಾಪ್ರತಿಮೆಗಳಂತೆ ಕುಳಿತಿರುವಾಗ ಅವುಗಳ ಕಣ್ಣುಗಳು ನಿಶ್ಚಲವಾಗಿದ್ದರೂ ಅವು ಎಚ್ಚರವಾಗಿರುತ್ತವೆ. ಅಂಥ ನಿಷ್ಕ್ರಿಯ ಸ್ಥಿತಿಯಲ್ಲಿರುವಾಗ ಕೂಡ ಅವು ಸರ್ರನೆ ನಿಮಿಷಾರ್ಧದಲ್ಲಿ ಚಟುವಟಿಕೆ ತೋರುತ್ತದ. ಅವುಗಳಿಗೆ ಮನುಷ್ಯನಿಗೆ ಸುಲಭ ಸಾಧ್ಯವಲ್ಲದ ಏಕಾಗ್ರಚಿತ್ತ ಮತ್ತು ಸಂಪೂರ್ಣ ವಿಶ್ರಾಂತಿ ಪಡೆಯುವ ಕಲೆ ಅವಗತವಿರಬೇಕು. ★

Socrates and the Animals ಪುಸ್ತಕದಿಂದ

ನಗೆಮಲ್ಲಿಗೆ

ಒಂದು ಉರಿಬಿಸಿಲಿನ ಮಧ್ಯಾಹ್ನದ ಹೊತ್ತಿಗೆ ಮುದುಕನೊಬ್ಬ ರಸ್ತೆಯ ಮಧ್ಯ ಮೂರ್ಛೆಗೊಂಡು ಬಿದ್ದ. ಅವನ ಸುತ್ತಲೂ ಜನ ಸೇರಿ ಒಬ್ಬೊಬ್ಬರು ಒಂದೊಂದು ಸೂಚನೆ ಕೊಡುತ್ತಾ ಗಲಾಟೆ ಎಬ್ಬಿಸ ತೊಡಗಿದರು.

ಓರ್ವ ಮುದುಕಿ, "ಅವನಿಗೊಂದು ಲೋಟ ಲಿಂಬೆ ಶರಬತ್ತು ಕುಡಿಸಿ. ಸರಿ ಹೋಗುತ್ತೆ" ಎಂದು ಸೂಚಿಸಿದಳು.

"ಸ್ವಲ್ಪ ಗಾಳಿ ಬರಲು ಎಡೆ ಬಿಡಿ." ಎಂದು ಕೆಲವರೆಲ್ಲಾ ಸೂಚಿಸಿದರು.

"ಶರಬತ್ತು ತರಿಸಿ ಕೊಡಿ" ಎಂದಳು ಮುದುಕಿ.

"ಅವನನ್ನು ಆಸ್ಪತ್ರೆಗೆ ಒಯ್ಯೋಣ" ಎಂದರು ಮತ್ತೆ ಕೆಲವರು.

"ಒಂದು ಲೋಟ ಲಿಂಬೆ ಶರಬತ್ತು ಕುಡಿಸಿ, ಸರಿಯಾಗುತ್ತದೆ." ಆ ಮುದುಕಿ ಪುನ: ಹೇಳಿದಳು.

ಗೊಂದಲ ಜಾಸ್ತಿಯಾಗುತ್ತಾ ಬರುತ್ತಿತ್ತು. ಆಗ ಆ ಬಡಪ್ರಾಣಿ ಒಮ್ಮೆಲೆ ಎದ್ದು ಕುಳಿತ.

"ನೀವೆಲ್ಲರೂ ಸ್ವಲ್ಪ ಬಾಯಿ ಮುಚ್ಚಿಕೊಂಡು ಆ ಮುದುಕಿ ಏನು ಹೇಳುತ್ತಿದೆಯೆಂದು ಕೇಳುತ್ತೀರಾ?" ಎಂದಾತ ಕೂಗಿಕೊಂಡ.

— ಸಚ್ಚಿದಾನಂದ ಹೆಗಡೆ

ನ್ಯಾಯಾಧೀಶ—"ಇವರಿಬ್ಬರೂ ಕುರ್ಚಿಗಳನ್ನು ಹಿಡಿದು ಹೊಡೆದಾಡ್ತಾ ಇದ್ದರು ಎಂದು ಹೇಳ್ತೀಯಲ್ಲಾ, ನೀನ್ಯಾಕಯ್ಯ ನೋಡ್ತಾ ಸುಮ್ಮನಿಂತಿದ್ದೆ?"

ಸಾಕ್ಷಿ— ಮಹಾಸ್ವಾಮಿ, ಇನ್ನೇನು ಮಾಡಲಿ, ಅಲ್ಲಿ ಬೇರೊಂದು ಕುರ್ಚಿ ಇರಲಿಲ್ಲ.

— ಎನ್. ವಿ. ಬಾಲಸುಬ್ರಮಣ್ಯಂ

*

ಬಹಳ ವರ್ಷಗಳಾದ ನಂತರ ಆ ಇಬ್ಬರು ಹಳೆಯ ಸ್ನೇಹಿತರು ಭೆಟ್ಟಿಯಾದರು.

ಒಬ್ಬ ತನ್ನ ಸ್ನೇಹಿತನನ್ನು ಕೇಳಿದ— "ನಾನೀಗ ಒಬ್ಬ ಬರಹಗಾರನಾಗಿರುವದು ನಿನಗೆ ಗೊತ್ತೇನು?"

"ಓ ಹಾಗೇನು?" ಸ್ನೇಹಿತನು ಸಂತೋಷವನ್ನು ಸೂಚಿಸಿ, ವಿಚಾರಿಸಿದ, "ಈಗಾಗಲೇ ಏನಾದರೂ ಮಾರಾಟವಾಗಿದೆಯೇನು?"

"ಓಹೋ" ಎಂದ ಆ ಬಡ ಗ್ರಂಥಕರ್ತ,—"ನಮ್ಮ ಅಪ್ಪನಿಂದ ಬಂದ ಮನೆ, ನಮ್ಮಣ್ಣ ಕೊಟ್ಟ ಗಡಿಯಾರ, ಹಾಗೂ ಆಕೆಯ ತೌರುಮನೆಯಿಂದ ಬಂದ ಫರ್ನೀಚರು ಎಲ್ಲಾ ಮಾರಾಟವಾಗಿ ಹೋಯಿತು!"

— ಸಿ. ಮಾಲಿನಿ ವಾಮನರಾವ

*

"ನೀನು ದೊಡ್ಡ ಸರ್ವಜ್ಞ ಅಂತ ಕೊಚ್ಚಿಕೊಳ್ಳುತ್ತೀಯಲ್ಲ! ಹೆಂಗಸರು ವರ್ಷದ ಯಾವ ತಿಂಗಳಿನಲ್ಲಿ ಅತ್ಯಂತ ಕಡಿಮೆ ಮಾತಾಡುತ್ತಾರೆ? ಹೇಳು ನೋಡೋಣ."

"ಅದೇನು ಮಹಾ! ಎಲ್ಲರಿಗೂ ಗೊತ್ತು. ಫೆಬ್ರವರಿ ತಿಂಗಳಿನಲ್ಲಿ."

— ಪಿ. ಶಾಂತಾರಾಮ

ವಿಖ್ಯಾತ ನಾಟಕಕಾರ ಬರ್ನಾರ್ಡ್‌ಶಾ ಹಾಜರಿದ್ದ ಒಂದು ಸಾಹಿತ್ಯ ಕೂಟದಲ್ಲಿ ಇಂಗ್ಲಿಷ್ ಭಾಷೆಯ ಭವಿಷ್ಯದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ಶಾ ಮಹಾಶಯರಿಗೆ ಸ್ವಲ್ಪ ಅಸ್ವಸ್ಥವಿತ್ತು. ಇಂಗ್ಲೀಷಿನ ಭವಿಷ್ಯದ ಬಗ್ಗೆ ಮಾತಾಡುವ ಸರದಿ ಬಂದಾಗ ಶಾ ಹೇಳಿದ್ದು :

"ಇಂಗ್ಲಿಷ್ ಸಾಹಿತ್ಯದ ಆಧಾರ ಸ್ತಂಭ ಶೇಕ್ಸ್‌ಪಿಯರ್ ಎಂದೊ ಸತ್ತುಹೋದ. ಮಿಲ್ಟನ್ ಮಹಾಕವಿಯೂ ತೀರಿಹೋದ. ಈಗ ನನಗೂ ಆಗಾಗ್ಗೆ ಅನಾರೋಗ್ಯವಾಗುತ್ತಿದೆ. ಅಂದ ಮೇಲೆ ಇಂಗ್ಲೀಷಿನ ಭವಿತ್ಯವನ್ನು ನೀವೇ ಕಲ್ಪಿಸಿಕೊಳ್ಳಬಲ್ಲಿರಿ !"

*

ತರುಣಿ— ಒಂದೇ ಒಂದು ಸಾಹಸದ ಕಾರ್ಯವನ್ನೂ ಮಾಡದ ನಿಮ್ಮನ್ನು ನಾನು ಹೇಗೆ ಲಗ್ನವಾಗಲಿ ?

ತರುಣ— ಅಂದರೆ? ಈ ವಿಪರೀತ ತುಟ್ಟಿಯ ದಿನಗಳಲ್ಲಿ ನಾನು ಮದುವೆಯಾಗಬಯಸುತ್ತಿರುವುದು ಸಾಹಸದ ಕಾರ್ಯವಲ್ಲದಿದ್ದರೆ ಇನ್ನಾವುದು ಸಾಹಸದ ಕಾರ್ಯವೆನಿಸೀತು ?

*

"ಅಲ್ಲಾ ಕಣ್ಣಿನ ಡಾಕ್ಟರನಾಗುತ್ತೇನೆಂದು ಅನ್ನುತ್ತಿದ್ದ ನಿಮ್ಮ ಮಗ ಹಲ್ಲಿನ ಡಾಕ್ಟರ್ ಹೇಗಾದ? ಏಕಾದ ?"

"ಹಲ್ಲಿನ ಡಾಕ್ಟರರ ಉತ್ಪನ್ನ ಕಣ್ಣಿನ ಡಾಕ್ಟರರ ಉತ್ಪನ್ನಕ್ಕಿಂತ ಹೆಚ್ಚಾಗಿರುತ್ತದೆ ಎಂದು ಅವನ ಅಭಿಪ್ರಾಯ. ಏಕೆಂದರೆ ನೋಡಿ, ಒಬ್ಬನಿಗೆ ಇರುವುದು ಎರಡೇ ಕಣ್ಣಾದರೂ ಹಲ್ಲುಗಳು ಮಾತ್ರ ಮೂವತ್ತೆರಡು ಇರುತ್ತವೆ."

*

ಕಾಫಿ ಹೊಟೆಲಿನಲ್ಲಿ ಉಪಹಾರ ಮಾಡುತ್ತಲಿದ್ದ ಇಬ್ಬರ ನಡುವೆ ರಾಜಕಾರಣದ ಚರ್ಚೆ ಎದ್ದು ವಾತಾವರಣ ಕಾವೇರಿತು. ಅವರು ಏರುದನಿಯಲ್ಲಿ ಉದ್ರೇಕದಿಂದ ಮಾತಾಡುವುದನ್ನು ಕೇಳಿ ಇನ್ನು ಕೈಗೆ ಕೈ ಹತ್ತಿದರೇನುಗತಿಯೆಂದುಕೊಂಡ ಮ್ಯಾನೇಜರ್ ಅಲ್ಲಿ ಬಂದು, "ಮಹಾಸ್ವಾಮಿಗಳೇ, ರಾಜಕಾರಣವನ್ನು ಅದರ ಪಾಡಿಗೆ ಬಿಟ್ಟು ನೀವು ದೋಸೆಯನ್ನು ಮುಗಿಸುವ ವಿಚಾರ ಮಾಡುವುದು ಒಳ್ಳೇದಲ್ಲವೆ ?" ಎಂದ.

ಚರ್ಚಾಳುಗಳಲ್ಲಿ ಒಬ್ಬ ರೇಗಿ, "ಬರೇ ತಿನ್ನುವುದು ಕುಡಿಯುವದರಲ್ಲೇ ಮುಳುಗಿದ್ದರೆ ಮನುಷ್ಯನಿಗೂ ಮೃಗಗಳಿಗೂ ಏನಯ್ಯ ಭೇದ ?" ಎಂದು ಕೂಗಿದ.

ಮ್ಯಾನೇಜರ್ ಹೇಳಿದ: "ಇದೆ ಸ್ವಾಮಿ. ಮೃಗ ತಿಂದು ಕುಡಿದು ಬಿಲ್ ಕೊಡುವುದಿಲ್ಲ. ನೀವು ಕೊಡಬೇಕಾಗುತ್ತೆ."



—ಶ್ರೀಕಾಂತ ನಾಡಿಗ

ಲಂಚದ ಪ್ರಪಂಚ

ಕೆ. ಎಂ. ಮುನಶಿ

ಶೇಕ್ಸಪಿಯರನ ಒಂದು ನಾಟಕದಲ್ಲಿ ಒಂದು ಪಾತ್ರವು ಒಂದು ಸಮಂಜಸವಾದ ಪ್ರಶ್ನೆಯನ್ನು ಕೇಳುತ್ತದೆ: "ಮೋಹದಲ್ಲಿ ಕೆಡವುವವನು ಹೆಚ್ಚು ಪಾಪಿಯೊ ಅಥವಾ ಮೋಹದಲ್ಲಿ ಸಿಲುಕಿಕೊಳ್ಳುವವನು ಹೆಚ್ಚು ಪಾಪಿಯೊ?" ನಾನಿಲ್ಲಿ ಮೋಹಕ್ಕೆ ತುತ್ತಾಗುವವರ ವಿಚಾರವನ್ನು ಪ್ರಸ್ತಾಪಿಸಲಿದ್ದೇನೆ; ಅಧಿಕಾರ ಮತ್ತು ಮೇಲಿನ ಸ್ಥಾನದಲ್ಲಿರುವವರ ವಿಚಾರ ಚರ್ಚಿಸಲಿದ್ದೇನೆ.

ನಮ್ಮ ಅಧಿಕಾರಿಗಳಲ್ಲಿ ಅನೇಕರು ಬುದ್ಧಿವಂತರೂ ಕಷ್ಟಪಟ್ಟು ದುಡಿಯುವವರೂ ಆಗಿದ್ದಾರೆ. ತಮ್ಮ ನಿತ್ಯವ್ಯವಹಾರದಲ್ಲಿ ಅವರು ಪ್ರಾಮಾಣಿಕರಾಗಿದ್ದಾರೆ. ಅವರಲ್ಲನೇಕರು ಧಾರ್ಮಿಕ ಪ್ರವೃತ್ತಿಯವರಿದ್ದಾರೆ. ಆದರೂ ಇತ್ತೀಚೆಗೆ ತೀರ ಉನ್ನತ ಸ್ಥಾನದಲ್ಲಿರುವವರನ್ನು ಬಿಟ್ಟರೆ ಉಳಿದ ಸರಕಾರೀ ಅಧಿಕಾರಿಗಳಲ್ಲಿ ಲಂಚ-ರುಷುವತ್ತಿನ ಪ್ರಮಾಣ ಪರಮಾವಧಿಗೇರಿದೆ.

ನನಗೆ ತಿಳಿದಿರುವ ಕೆಲ ವಿಶಿಷ್ಟ ದೃಷ್ಟಾಂತಗಳನ್ನಿಲ್ಲಿ ಹೇಳುತ್ತೇನೆ.

ಮಾರಾಟಕರ ಶಾಖೆಯಲ್ಲಿ ಲಂಚಕ್ಕೆ ತುಂಬಾ ಅವಕಾಶವಿದೆ. ನನ್ನ ಪರಿಚಯದ ಒಬ್ಬಾತ ತನ್ನ ಮಾರಾಟಕರದ ಲೆಕ್ಕ ನಿರ್ಧರಿಸಿಕೊಳ್ಳಲು ಕಚೇರಿಗೆ ಹೋದ. ಮೈತುಂಬ ಕೆಲಸವಿರುವ ಆತನನ್ನು ಕಚೇರಿಯಲ್ಲಿ ಆ ದಿನವಿಡೀ ಕಾಯಿಸಿ ಬಳಿಕ ಮುಂದಿನ ವಾರ ಬರಬೇಕೆಂದು ಅಧಿಕಾರಿ ತಿಳಿಸಿದ. ಆ ಮೇಲೆ ಆದಿತ್ಯವಾರ ಆ ಅಧಿಕಾರಿ ಆ ವ್ಯವಹಾರಸ್ಥನ ಮನೆಗೆ ಹೋಗಿ ಅವನಿಗೆ ಆದ ತೊಂದರೆಗಳಿಗಾಗಿ ತನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡ. ಮತ್ತು ತನ್ನ ಸಂಸಾರದ ತಾಪತ್ರಯಗಳನ್ನು ಅವನೆದುರು ತೋಡಿಕೊಂಡ. ತನ್ನ ಹೆಂಡತಿ ತುಂಬಾ ಕಾಯಿಲೆ ಬಿದ್ದಿದ್ದಳೆಂದೂ ತನಗೆ ಹಣದ ಅಡಚಣಿ ತುಂಬಾ ಇರುವುದೆಂದೂ ಹೇಳಿದ. ಆ ವ್ಯವಹಾರಸ್ಥನಿಗೆ ಮಾರಾಟಕರ ಕಚೇರಿಗೆ ಎಡತಾಕುತ್ತ ಸಮಯ ಕಳೆದುಕೊಳ್ಳುವುದು ಅನುಕೂಲವಾಗಿರಲಿಲ್ಲ. ಅವರಿಬ್ಬರಲ್ಲಿ ಒಪ್ಪಂದವಾಯಿತು. ಮರುದಿನ ಆತ ಕಚೇರಿಗೆ ಹೋದಾಗ ಅವನ ಕೆಲಸ ಮರುಕ್ಷಣದಲ್ಲಿ ಆಯಿತು.

ಒಬ್ಬ ವಕೀಲರು ಒಂದು ಮಹತ್ವದ ಕ್ರಿಮಿನಲ್ ಖಟ್ಲೆಯನ್ನು ನಡೆಸುತ್ತಿದ್ದರು. ಅವರ ಪಕ್ಷಕಾರ ತಾನು ಬರೆದು ತಂದಿದ್ದ ಕೆಲ ಪ್ರಶ್ನೆಗಳನ್ನು ಪೋಲೀಸ್ ಸಾಕ್ಷಿದಾರರಿಗೆ ಕೇಳಬೇಕೆಂದು ವಕೀಲರಿಗೆ ಒತ್ತಾಯಿಸಿದ. ಇಂಥ

" ಭಾರತ ಜ್ಯೋತಿ " ಯಿಂದ

ಪ್ರಶ್ನೆಗಳನ್ನು ಕೇಳಿದರೆ ಕೆಲಸ ಕೆಟ್ಟೀತು ಎಂದು ವಕೀಲರು ಎಷ್ಟು ಹೇಳಿದರೂ ಪಕ್ಷಕಾರ ಕೇಳಲಿಲ್ಲ. ವಕೀಲರು ನಿರುಪಾಯರಾಗಿ ಪ್ರಶ್ನೆಗಳನ್ನು ಕೇಳಿದರು. ಆಶ್ಚರ್ಯ! ಪಕ್ಷಕಾರನು ನಿರೀಕ್ಷಿಸಿದ ಪವಾಡವಾಯಿತು. ಪೋಲೀಸ್ ಸಾಕ್ಷಿಗಳ ಉತ್ತರದಿಂದ ಪ್ರತಿವಾದಿ ಪಕ್ಷಕ್ಕೇ ಜಯವಾಯಿತು. ಇದು ನಿತ್ಯ ನಡೆಯುವ ಮಾತು.

ಉದ್ಯೋಗ ವಿನಿಮಯ ಕಚೇರಿಯಲ್ಲಿ ಕಾರಕೂನನ ಕೈ ಬೆಚ್ಚಗೆ ಮಾಡುವ ವರೆಗೂ ಅರ್ಜಿಗಳು ಮುಟ್ಟಬೇಕಾದವರನ್ನು ಮುಟ್ಟುವುದೇ ಇಲ್ಲ. ಈ ದಕ್ಷಿಣೆ ಕೆಲವು ಸಲ ಅನೇಕ ಅಧಿಕಾರಿಗಳಲ್ಲಿ ಹಂಚಲ್ಪಡುತ್ತದೆ.

ಸಹಕಾರಿ ಸಂಘಗಳಲ್ಲಿ ಸಾಲ ಪಡೆಯುವಾಗ, ರೇಲ್ವೆಗಳಲ್ಲಿ ವಾಗೀನುಗಳನ್ನು ದೊರಕಿಸುವಾಗ ಕೈಬೆಚ್ಚಗೆ ಮಾಡದೆ ಗತಿಯಿಲ್ಲ ಎಂಬ ಮಾತು ಸರ್ವವಿದಿತವಾದದ್ದು.

ಮೊದಮೊದಲು ಈ ಒಳ ವ್ಯವಹಾರ ಅಧಿಕಾರಿ ವರ್ಗದ ಕೆಳಮಟ್ಟದಲ್ಲಿ ಗುಟ್ಟಾಗಿ ನಡೆಯುತ್ತಿತ್ತು. ಈಗಲೋ ಇದು ಅನಿವಾರ್ಯವೆಂದಾದ, ನಿಸ್ಸಂಕೋಚವಾದ, ಬಹಿರಂಗ ಕಳ್ಳಪೇಟೆಯಾಗಿಬಿಟ್ಟಿದೆ.

ಒಂದು ಪರಮಿಟ್ಟೋ, ಲೈಸನ್ಸೋ ಸಿಕ್ಕಿದರೆ ಸಿಕ್ಕವನಿಗೆ ತುಂಬಾ ಲಾಭವಾಗುವಂತಿರುತ್ತದೆ. ಬರುವ ಲಾಭದಲ್ಲಿ ಒಂದಿಷ್ಟು ಕೊಟ್ಟು ಬೇಗನೆ ಕೆಲಸಮಾಡಿಸಿಕೊಂಡರೆ ಹಾನಿಯೇನೂ ಇಲ್ಲವೆಂದು ಅರ್ಜಿದಾರ ತಿಳಿಯುತ್ತಾನೆ. ಅಧಿಕಾರಿಗಳ ಕೈಯಲ್ಲಿರುವ ಅಧಿಕಾರಬಲದಿಂದ ಅವರು ತಕ್ಕಡಿಯನ್ನು ಎತ್ತಬೇಕತ್ತ ಹೊರಳಿಸಬಲ್ಲರಾದ್ದರಿಂದ ಜನರು ನಿರುಪಾಯರಾಗಿರುತ್ತಾರೆ. ಏಕೆಂದರೆ ಅವರ ವ್ಯವಹಾರದಲ್ಲಿ ಕೆಲವು ಸಲ ಒಂದೇ ಒಂದು ದಿನದ ವಿಲಂಬವೂ ಅಪಾರ ನಷ್ಟಕ್ಕೆ ಕಾರಣವಾಗುತ್ತದೆ.

ನನಗೆ ಗೊತ್ತಿರುವ ಒಬ್ಬ ಗೃಹಸ್ಥರು ಒಮ್ಮೆ ಭಾರಿ ಬೆಲೆಯ ಉಪಕರಣಗಳನ್ನು ಸರಕಾರಕ್ಕೆ ನೇರವಾಗಿ ಮಾರಿದರು. ಕರಾರು ಪತ್ರ ಸಿದ್ಧವಾಯಿತು. ಈ ವ್ಯವಹಾರಕ್ಕೆ ಸಂಬಂಧಪಟ್ಟ ಶಾಖೆಯ ಅಧಿಕಾರಿಯೊಬ್ಬ ಈ ಗೃಹಸ್ಥರ ಬಳಿಗೆ ಬಂದು ತಮ್ಮ ಕಮೀಶನ್ ಕೇಳಿದ. ಹೇಗೂ ವ್ಯಾಪಾರ ಗಿಟ್ಟಿದೆಯಲ್ಲ ಎಂಬ ಧೈರ್ಯದಿಂದ ಆ ಗೃಹಸ್ಥರು ಕಮೀಶನ್ ಕೊಡಲು ನಿರಾಕರಿಸಿದರು. ಮುಂದೆ ಕೆಲ ದಿನಗಳಲ್ಲಿ ಅವರು ಅದರ ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಯಿತು. ಈ ವ್ಯವಹಾರ ಕ್ರಮಬದ್ಧವೆ? ಎಂಬ ಪ್ರಶ್ನೆ ಎದ್ದಿತು. ಮೊದಲು ಇದ್ದಿರದ ತಾಂತ್ರಿಕ ಪ್ರಶ್ನೆಗಳು ತಲೆಯೆತ್ತಿದವು. ವ್ಯವಹಾರ ಸರಳಮಾಡಿಕೊಳ್ಳುವ ಮೊದಲು ಆ ಗೃಹಸ್ಥರಿಗೆ ೪೦,೦೦೦ ರೂಪಾಯಿ ನಷ್ಟವಾಯಿತು. ಪ್ರತಿಯೊಬ್ಬ ಚತುರ ವ್ಯಾಪಾರಿಗೂ ಇಂಥ ತೊಂದರೆಗಳು ಬಾರದಂತೆ ನೋಡಿಕೊಳ್ಳುವ ಹಾದಿ ಗೊತ್ತಿರುತ್ತದೆ.

ಉನ್ನತ ಅಧಿಕಾರಿಗಳ ಮರ್ಜಿ ಸಂಪಾದಿಸುವ ಕಲೆ ದೊಡ್ಡ ದೊಡ್ಡ ವ್ಯವಹಾರ ನಡೆಸುವವರಿಗೆ ಗೊತ್ತಿರುತ್ತದೆ. ಈ ಉನ್ನತ ಅಧಿಕಾರಿಗಳಿಂದ ಆಗಬೇಕಾದ ಕೆಲಸವನ್ನು ಅವರು ಒಂದು 'ಸರಪಳಿಯ' ಮೂಲಕ ಮಾಡಿಸಿಕೊಳ್ಳುತ್ತಾರೆ. 'ಅ' 'ಬ' ನಿಗೆ ಒಂದಿಷ್ಟು ಹಣ ಕೊಟ್ಟು ಕೆಲಸ ಮಾಡಿಕೊಡಲು ಹೇಳುತ್ತಾನೆ. 'ಬ' 'ಕ' ನಿಗೆ ಹೇಳುತ್ತಾನೆ. ಈ 'ಕ' ನಿಗೆ ಆ ಉನ್ನತ ಅಧಿಕಾರಿಯ ಅಥವಾ ಮಂತ್ರಿಯ ನಿಕಟ ಪರಿಚಯವಿರುತ್ತದೆ. ಈ ಚಕ್ರ ಸರಿಯಾಗಿ ತಿರುಗಿ ಕೆಲಸವಾಗುತ್ತದೆ. 'ಈ ಚಕ್ರ' ಮತ್ತು ಅದರ 'ಶಕ್ತಿ' ಯನ್ನು ಎಲ್ಲ ವ್ಯವಹಾರಸ್ಥರೂ ಬಲ್ಲರು.

ಹೊಸದಿಲ್ಲಿಯಲ್ಲಿ ಇಂಥ ಕೆಲಸಗಳನ್ನು ಮಾಡಿಕೊಡುವ ಪ್ರಸಿದ್ಧ ದಲಾಲಿಗಳೇ ಇದ್ದಾರೆ. ಇವರು ವಿಲಾಸಪ್ರಿಯರಾದ ಅಧಿಕಾರಿಗಳಿಗೆಂದು ರಾತ್ರಿ ಮೇಜವಾನಿಗಳನ್ನು ಮಾಡಿಸುತ್ತಾರೆ. ಸೊಗಸಾದ ತಿಂಡಿ ಪಾನೀಯಗಳ ಪ್ರಭಾವದಲ್ಲಿ ಅಧಿಕಾರಿಗಳು ಅನುಗ್ರಹ ಪ್ರವೃತ್ತಿಯವರಾಗು

ತ್ತಾರೆ. ಈಗಿನ ಕಾಲದಲ್ಲಿ ಸ್ವಂತ ಖರ್ಚಿನಿಂದ ಇಂಥ ಉತ್ತಮ ಆಹಾರ-ಪಾನೀಯಗಳನ್ನು ದೊರಕಿಸುವುದೆಂದರೆ ಅಸಾಧ್ಯವೇ ಆಗಿರುವುದರಿಂದ ಪುಕ್ಕಟೆಯಾಗಿ ದೊರೆಯುವಾಗ ಇವುಗಳ ಮೋಹವನ್ನು ನಿಯಂತ್ರಿಸುವುದು ಕಠಿಣವಾಗುತ್ತದೆ. ಹೆಣ್ಣಿನ ಮೋಹವಿರುವ ಅಧಿಕಾರಿಗಳಿಗೆ ಸುಂದರ ತರುಣಿಯನ್ನು ಒದಗಿಸುವ ತಂಡವೊಂದಿದೆಯೆಂಬುದೂ ಈ ಬಗೆಯ ವ್ಯವಹಾರ ಮಾಡುವವರಿಗೆ ಗೊತ್ತಿದೆ. ಕನಕ-ಕಾಮಿನಿಯರ ಈ ಮೋಹಜಾಲದಲ್ಲಿ ಎಂಥೆಂಥವರು ಸಿಲುಕುತ್ತಾರೆಂದು ತಿಳಿದಾಗ ನನಗೆ ಆಶ್ಚರ್ಯಾಘಾತವಾಯಿತು.

ಇದರಲ್ಲಿ ದುಃಖದ ಮಾತೆಂದರೆ ನಮ್ಮ ಅನೇಕ ಅಧಿಕಾರಿಗಳು ಉಳಿದೆಲ್ಲ ವಿಷಯಗಳಲ್ಲೂ ಅತ್ಯಂತ ಸಭ್ಯ ಗೃಹಸ್ಥರಾಗಿರುವುದು. ಅವರ ಪತನಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಮೊದಲನೆಯದೆಂದರೆ ಅವರ ಸಂಬಳದಲ್ಲಿ ಏರಿಕೆಯಾದ ಪ್ರಮಾಣಕ್ಕೂ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಗೂ ಅಜಗಜಾಂತರವಿದೆ. ಇನ್ನು ಐದು ವರ್ಷಗಳಲ್ಲಿ ನಿವೃತ್ತನಾಗಬೇಕಾದ ಅಧಿಕಾರಿಯೊಬ್ಬನಿದ್ದಾನೆ ಎಂದುಕೊಳ್ಳಿ. ತುಟ್ಟಿಯ ಮೂಲಕ ಅವನಿಗೆ ಮೊದಲಿನಿಂದಲೂ ರೂಢಿಯಾಗಿರುವ ಜೀವನ ಮಟ್ಟವನ್ನು ಕಾಯ್ದುಕೊಳ್ಳುವುದು ಕಠಿಣವಾಗುತ್ತದೆ. ಮಿತವ್ಯಯದ ಹೆಸರನ್ನೆ ಈತ ಕೇಳಿದವನಲ್ಲ. ಅವನ ಒಬ್ಬ ಮಗ ಇಂಗ್ಲಂಡಿನಲ್ಲಿ ಕಲಿಯುತ್ತಿದ್ದಾನೆ. ಇನ್ನೊಬ್ಬ ಸ್ಥಾನಿಕ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾನೆ. ವರದಕ್ಷಿಣೆಯಿರಲಿ ಬಿಡಲಿ, ಅವನ ಅಂತಸ್ತಿಗನುಗುಣವಾಗಿ ಅವನ ಮೂವರು ಹುಡುಗಿಯರ ಮದುವೆಯಾಗಬೇಕಾದರೆ ತಲಾ ರೂ. ೫೦,೦೦೦ ಬೇಕೇಬೇಕು. ಹೀಗಿರುವಾಗ ವಿಶೇಷ ಕಷ್ಟವಿಲ್ಲದೆ ಬರುವ ಲಕ್ಷ್ಮಿಯನ್ನಾತ ತಿರಸ್ಕರಿಸಿದರೆ ಅದು ತುಸು ಅತಿಮಾನುಷವೇ ಸರಿ.

ಎರಡನೆಯ ಕಾರಣವೆಂದರೆ ಯಾವುದೇ ಉಪಾಯದಿಂದ ಇತರರಿಗಿಂತ ಮೊದಲಿಗೇ ತಮ್ಮ ಕೆಲಸ ಮಾಡಿಸಿಕೊಳ್ಳಬೇಕೆಂಬ ವ್ಯವಹಾರಸ್ಥರ ಹಂಬಲ. ಅವರ ಕೈಯಲ್ಲಿ ಕಳ್ಳಪೇಟೆಯಿಂದ ಬಂದ ವಿಪುಲ ಹಣವಿರುತ್ತದೆ. ಹನಿ ಕೊಟ್ಟು ಹಳ್ಳ ಪಡೆಯಲು ಅವರೇಕೆ ಹಿಂಜರಿಯಬೇಕು? ಅಧಿಕಾರಿವರ್ಗ ಮಾತ್ರವಲ್ಲ. ಮಂತ್ರಿಗಳ ಮೇಲೂ ಇವರ ಜೇಡರ ಬಲೆ ಪಸರಿಸಿರುತ್ತದೆ. ಅಧಿಕಾರಿಗಳಿಗೆ, ಮಂತ್ರಿಪರಿವಾರದವರಿಗೆ ಸೇವೆ ಸಲ್ಲಿಸಲು ಇವರು ಸಿದ್ಧರಾಗಿರುತ್ತಾರೆ. ಅವರು ನೇರವಾಗಿ ವೈಯಕ್ತಿಕ ಪ್ರತಿಫಲ ಕೇಳುವುದಿಲ್ಲ; ಆದರೆ ತಮ್ಮ ಬೇಳೆ ಕೂಡಲೆ ಬೇಯುವಂತೆ ವಾತಾವರಣ ನಿರ್ಮಿಸಿಕೊಳ್ಳುತ್ತಾರೆ.

ಮಂತ್ರಿಗಳಲ್ಲಿ ಲಂಚಖೋರತನ ತುಂಬಾ ಇದೆಯೆಂದು ಬಹಳಷ್ಟು ಮಾತು ಕೇಳಿ ಬರುತ್ತಿದೆ. ಆದರೆ ಸಂಬಧಪಟ್ಟವರು ಯೋಗ್ಯ ವಿಚಾರ ಮಾಡದೆ ಏನಾದರೂ ಕೆಲಸ ಮಾಡುವುದರಿಂದ ಹುಟ್ಟಿಕೊಂಡ ತಪ್ಪು ಕಲ್ಪನೆ ಇದು ಎಂದು ನನಗನಿಸುತ್ತದೆ.

ಕೇಂದ್ರ ಮತ್ತು ರಾಜ್ಯಗಳಲ್ಲಿಯ ಅನೇಕ ಮಂತ್ರಿಗಳನ್ನು ನಾನು ಬಲೆ. ಅಧಿಕಾರ ಸ್ಥಾನದಲ್ಲಿ ಇನ್ನೂ ಇರಬೇಕೆಂದು ಅವರು ಬಯಸಿದರೂ —ಯಾರು ತಾನೇ ಬಯಸುವುದಿಲ್ಲ, ಹೇಳಿ! —ಸ್ವಾತಂತ್ರ್ಯ ಪ್ರಾಪ್ತಿಗಾಗಿ ಯಾವ ಧ್ಯೇಯ-ನಿಷ್ಠೆಗಳಿಂದ ಅವರು ದುಡಿದರೊ ಆ ಧ್ಯೇಯ ನಿಷ್ಠೆಗಳು ಅವರಲ್ಲಿನ್ನೂ ಇವೆ. ಸ್ವತಃ ಲಂಚ ಪಡೆದು ಅನ್ಯಾಯದ ಅನುಗ್ರಹವನ್ನು ನೀಡುವ ವ್ಯಕ್ತಿಗಳಲ್ಲ ಇವರು. ಆದರೆ ಸಾಹಸಿಗಳೂ ಚಪಲರೂ ಆದ ವ್ಯವಹಾರಸ್ಥರು ಇವರ ಆಪ್ತವರ್ಗವನ್ನು ಮೋಹಜಾಲದಲ್ಲಿ ಕೆಡವಿಕೊಳ್ಳುತ್ತಾರೆ. ಮಂತ್ರಿಗೇ ಸ್ವತಃ ಇದರ ಪತ್ತೆಯಿರುವುದಿಲ್ಲ. ಆದರೆ ಜನರಿಗೆ ಮಂತ್ರಿಯ ಆಪ್ತರಲ್ಲೊಬ್ಬ ಒಮ್ಮೆಲೆ ಶ್ರೀಮಂತನಾದದ್ದು ಕಣ್ಣಲ್ಲಿ ಚುಚ್ಚುತ್ತದೆ. ಮಂತ್ರಿಯೇ ಲಂಚಖೋರ ಎಂದು ಅವರಾಡಿಕೊಳ್ಳುತ್ತಾರೆ. 'ಸಡಿಲು

ಸ್ವಭಾವ'ವನ್ನು ಕೋರ್ಟಿನಲ್ಲಿ ಸಿದ್ಧ ಮಾಡುವುದು ಕಠಿಣವಾಗುತ್ತದೆ. ಆಡಳಿತಾತ್ಮಕ ವಿಚಾರಣೆಯಲ್ಲೂ ಅದು ಸಿದ್ಧವಾಗುವುದಿಲ್ಲ. ಅವರ ಕೃಪೆ ಪಡೆದವರು ಮಾತು-ಮಾತಿನಲ್ಲಿ ಈ ವಿಚಾರ ಹೇಳಿದರೂ ಅಧಿಕೃತವಾಗಿ ದೂರು ಅಥವಾ ಸಾಕ್ಷಿ ಹೇಳಲು ಖಂಡಿತ ಬರುವುದಿಲ್ಲ. ಬಂದರೆ ಅವರ ಜೀವನೋಪಾಯಕ್ಕೇ ಸಂಚಕಾರ ತಾನೆ.

"ಶ್ರೀರಾಮನ ಹೆಂಡತಿ ಸಂದೇಹಾತೀತಳಾಗಿರಬೇಕು" ಎಂಬ ಖಚಿತಾಭಿಪ್ರಾಯ ಸಾರ್ವಜನಿಕರಲ್ಲಿರುವುದರಿಂದಲೇ ಮಂತ್ರಿಗಳ ಲಂಚಖೋರತನದ ಬಗ್ಗೆ ಇಷ್ಟೆಲ್ಲ ಮಾತುಗಳು ಕೇಳಿ ಬರುತ್ತವೆ. ಆದರೆ ತನ್ನ ಪಕ್ಷಕ್ಕೆ ನಿಷ್ಠನಾಗಿರುವ ಮಂತ್ರಿಯು ಆ ಪಕ್ಷದ ವರಿಷ್ಠರ ಮಟ್ಟಿಗೆ ಯಾವ ತಪ್ಪನ್ನೂ ಮಾಡಲಾರದ "ಅರಸ" ನಂತಿರುತ್ತಾನೆಂದು ಈ ಜನ ಅರಿಯರು.

ಪಂಜಾಬ ಸರಕಾರ ನೇಮಿಸಿದ "ಕಾವಲು" ಸಮಿತಿಯ ಅಧ್ಯಕ್ಷರಾದ ಶ್ರೀರಾಮಶರ್ಮರು ಇತ್ತೀಚೆಗೆ ಒಬ್ಬ ಮಂತ್ರಿಯ ದುರ್ನಡತೆಯ ಬಗ್ಗೆ ತಮಗೆ ಸಾಕಷ್ಟು ಆಧಾರಗಳು ದೊರೆತಿವೆ ಎಂದು ಹೇಳಿದರು. ಅವರ ಮಾತು ನಂಬಬಹುದಾದರೆ, ಮುಖ್ಯ ಮಂತ್ರಿಗಳಲ್ಲಿ ಇಷ್ಟೆಲ್ಲ ಆಧಾರವಿದ್ದರೂ ಆ ಮಂತ್ರಿಯ ಮೇಲೆ ಏನೂ ಕ್ರಮ ಕೈಕೊಳ್ಳಲು ಸಾಧ್ಯವಾಗಲಿಲ್ಲ. ಇದು ತೀರ ಶೋಚನೀಯವಾದುದು.

ಮಂತ್ರಿಗಳ ಮೇಲೆ ಆಪಾದನೆಗಳು ಬಂದಾಗ ನಿಷ್ಪಕ್ಷಪಾತ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳದಿರುವುದು, ಇಂಥ ಸಂದರ್ಭಗಳಲ್ಲಿ ಪಕ್ಷದ ಹಿತವನ್ನಷ್ಟೇ ಗಣಿಸುವುದು, ತಪ್ಪಿತಸ್ಥರನ್ನು ದಂಡಿಸಿ ಧರ್ಮಭಯದ ವಾತಾವರಣ ನಿರ್ಮಿಸಲು ತಪ್ಪುವುದು— ಇದರಿಂದಲೇ ಮಂತ್ರಿಗಳ ಲಂಚಖೋರತನದ ಮಾತು ಹಬ್ಬುವುದಕ್ಕೆ ಅವಕಾಶವಾಗಿದೆ. ಹೊಣೆಗಾರ ವರಿಷ್ಠರ ಈ ದೌರ್ಬಲ್ಯದಿಂದ ಉನ್ನತ ಸ್ಥಾನದವರ ಅನೀತಿಯ ಅವ್ಯವಹಾರಗಳ ಬಗ್ಗೆ ಎಲ್ಲರೂ ದೋಷಿಗಳು ಎಂಬ ಭಾವ ಜನರಲ್ಲಿ ಉಂಟಾಗುವಂತಾಗಿದೆ.

ಇತರ ಅನೇಕ ದೇಶಗಳನ್ನು ನೋಡಿದಾಗ ನಮ್ಮ ಮಂತ್ರಿಗಳ ಅಕ್ರಮಗಳು ಬಲು ಕಡಿಮೆ ಎನ್ನಲಡ್ಡಿಯಿಲ್ಲ. ಕೆಲ ದೇಶಗಳಲ್ಲಿ ಮಂತ್ರಿಗಳ ಕರ್ತವ್ಯಚ್ಯುತಿಗೆ ಕಾರಣವಾಗುವ ಸ್ತ್ರೀವ್ಯಾಮೋಹ ಜಾಡ್ಯ ಸುದೈವದಿಂದ ಭಾರತದಲ್ಲಿಲ್ಲ. ಉನ್ನತ ಸ್ಥಾನದ ಅಧಿಕಾರಿಗಳು ಇನ್ನೂ ಒಂದಿಷ್ಟು ಬಿಗಿಯಾಗಿ, ನಿಷ್ಪಕ್ಷಪಾತವಾಗಿ ಆಡಳಿತ ಸೂತ್ರಗಳನ್ನು ಹಿಡಿದರೆ ಈಗಿರುವ ಲಂಚ-ರುಷುವತ್ತುಗಳ ಪ್ರಮಾಣ ಎಷ್ಟೋ ಕಡಿಮೆಯಾದೀತು.

ದುರ್ದೈವದಿಂದ ನಮ್ಮ ದೇಶದಲ್ಲಿ ನಮ್ಮ ಸರಕಾರವು, ನಮ್ಮ ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ನಮ್ಮ ಮಂತ್ರಿಗಳು, ಉನ್ನತ ಅಧಿಕಾರಿಗಳು, ರಾಜಕೀಯ ಧುರೀಣರ ಕೈಯಲ್ಲಿ ಅಪಾರ ಅಧಿಕಾರ ಬರುವಂತೆ ಮಾಡಿದೆ.

ದೇಶದ ಈ ನೈತಿಕ ಪತನವನ್ನು ತಡೆಗಟ್ಟಲು ಅನೇಕ ಕ್ರಮಗಳನ್ನು ಕೈಕೊಳ್ಳಬಹುದು. ಲಂಚ ಮತ್ತು ಕಳ್ಳಪೇಟೆ ವಿಚಾರಗಳಲ್ಲಿ ಪ್ರಬಲ ಅಲ್ಪಸಂಖ್ಯಾಕ ಪಕ್ಷದ ನಾಯಕರು ಸಂಧಾನವನ್ನೊಲ್ಲದ ನಿಷ್ಠುರ ಖಂಡಿತ ಪಟ್ಟನ್ನು ಹಿಡಿಯಬಹುದು. ತಾವು ಸ್ವತಃ ಸರಳ ಜೀವನವನ್ನು ಬಾಳಿ ಅವರು ತಮ್ಮ ನಿಲುವೆಯನ್ನು ಬಲಪಡಿಸಿಕೊಳ್ಳಬಹುದು. ಇದರಿಂದ ಸಹಜವಾಗಿಯೇ ಸಾರ್ವಜನಿಕಾಭಿಪ್ರಾಯ ಬಲಗೊಳ್ಳುವುದು.

ಇನ್ನೊಂದು ಮಾತೆಂದರೆ ವರಿಷ್ಠರು ಲಂಚ-ರುಷುವತ್ತುಗಳ ಪ್ರಕರಣಗಳನ್ನು ಕೇಳಿಕೊಳ್ಳಲು ಸದಾ ಸಿದ್ಧರಿರಬೇಕು. ಇವುಗಳನ್ನು ಬೆಳಕಿಗೆ ತರುವವರಿಗೆ ಸಾಕಷ್ಟು ಸಂರಕ್ಷಣೆಯನ್ನು ಒದಗಿಸಬೇಕು. ಆರೋಪಗಳು ಅಸ್ಪಷ್ಟವಾಗಿದ್ದರೂ ಆರೋಪ ಬೇಕಾದಂಥ ಶ್ರೇಷ್ಠನ ಮೇಲೆ ಬಂದಿದರೂ ಆರೋಪ ಬಂದಾಗ ಅದು ನಿಜವೇ ಸುಳ್ಳೇ

ಎಂದು ಕೂಲಂಕಷವಾಗಿ, ಪ್ರಾಮಾಣಿಕವಾಗಿ ವಿಚಾರಿಸಬೇಕು.

ದುರ್ದೈವದಿಂದ ಈ ಎರಡೂ ಬಗೆಯ ಕ್ರಮಗಳು ನಮ್ಮಲ್ಲಿಲ್ಲ.

ಆದರೆ, ಹೆಚ್ಚೆಚ್ಚು ಹದಗೆಡುತ್ತಿರುವ ನೀತಿಮತ್ತೆಯನ್ನು ಸುಧಾರಿಸುವುದು ನೈತಿಕ ಅಧಃಪತನಕ್ಕೆ ಕಾರಣವಾಗುವಂಥ ಪರಿಸ್ಥಿತಿಯನ್ನು ಸುಧಾರಿಸುವುದರಿಂದ ಮಾತ್ರವೇ ಸಾಧ್ಯ ಎಂಬುದನ್ನು ಮರೆಯಲಾಗದು. ಇಂಥ ಪರಿಸ್ಥಿತಿ ನಮ್ಮಲ್ಲಿ ಉಂಟಾಗಿರುವುದಕ್ಕೆ ಮೊದಲನೆಯದಾಗಿ ನಮ್ಮ ಅವಸರದ ಔದ್ಯಮೀಕರಣವು ಕಾರಣವಾಗಿದೆ. ತಕ್ಕ ಪ್ರಮಾಣದಲ್ಲಿ ಉತ್ಪಾದನೆಯನ್ನು ಪಡೆಯದೆ ಕೋಟಿಗಟ್ಟಲೆ ಹಣವನ್ನು ಉದ್ದಿಮೆಗಳಲ್ಲಿ ಸುರಿದಿರುವುದು, ಸಾಧ್ಯಾಸಾಧ್ಯಗಳ ಮತ್ತು ದಕ್ಷ ನೌಕರವರ್ಗ ಸಾಕಷ್ಟು ಇದೆಯೊ ಇತ್ಯಾದಿಗಳ ಪರಿವೆಯಿಲ್ಲವೆ ಯೋಜನೆಗಳಲ್ಲಿ ಸಾರ್ವಜನಿಕ ಹಣವನ್ನು ಸೂರೆಗೈಯುತ್ತಿರುವುದು ಇವುಗಳಿಂದ ಅತಿಪ್ರಸರಣವುಂಟಾಗಿದ್ದು ಜನರ ಉತ್ಪನ್ನ ವೆಚ್ಚಗಳಲ್ಲಿ ತೀರ ಹೊಂದಿಕೆಗೆಟ್ಟು ಹೋಗಿದೆ.

ಅತಿಪ್ರಸರಣವೇ ಅನೀತಿಯ ರಾಕ್ಷಸ ಪರಿವಾರ. ಬೆಲೆಯೇರಿಕೆ, ಕಳ್ಳಪೇಟೆ, ಅತಿಯಾದ ಕರಭಾರ— ಇವು ಸರಳ ಜೀವನದ ಧ್ಯೇಯದ ಬುಡಕಟ್ಟನ್ನೆ ಅಲ್ಲಾಡಿಸಿ ಅತ್ಯಾಶೆ, ಅನೀತಿಗಳಿಗೆ ದಾರಿ ತೆರೆದು ಕೊಟ್ಟಿವೆ. ಹಣದ ಮಾತು ಬಂತೆಂದರೆ ಎಂಥವನೂ ಪ್ರಾಮಾಣಿಕನಾಗಿರಲಾರ ಎನ್ನುವ ಪರಿಸ್ಥಿತಿ ಬಂದಿದೆ.

ಮೂರನೆಯ ಮಾತೆಂದರೆ ನೈತಿಕ ಮತ್ತು ಆತ್ಮಿಕ ಪ್ರಚಾರಕ ಚಟುವಟಿಕೆಗಳ ಅಭಾವ. ನೈತಿಕ ಮತ್ತು ಧಾರ್ಮಿಕ ಶಿಕ್ಷಣಗಳು ಅಲಕ್ಷಿಸಲ್ಪಡುತ್ತಿವೆ. ತರುಣ ಪೀಳಿಗೆಯಲ್ಲಿ ಒಂದು ಧ್ಯೇಯಸಾಧನೆಯ ಮನೋವೃತ್ತಿಯನ್ನು ಹುಟ್ಟಿಸುವುದು ಧುರೀಣರಿಂದಾಗುತ್ತಿಲ್ಲ. ಹಿಂಸೆ-ವಿಲಾಸಗಳ ಸಂಪ್ರದಾಯವನ್ನು ಪ್ರಸರಿಸುವ ಸಿನೇಮಾಗಳಿಗೆ ಸರ್ವಸ್ವಾತಂತ್ರ್ಯವಿದೆ. ಧಾರ್ಮಿಕ, ನೈತಿಕ ಮತ್ತು ತಾತ್ವಿಕ ಪ್ರಭಾವವನ್ನು ಬೀರಲು ಖಾಸಗಿ ಸಂಸ್ಥೆಗಳಿಗೆ ಸೌಲಭ್ಯಗಳು ನಿರಾಕರಿಸಲ್ಪಡುತ್ತಿವೆ.

ನಾವೀಗ ತೆರವಾದ ನೀತಿಯ ಸ್ಥಾನದ ಮೇಲೆ ತಾಂತ್ರಿಕ ವ್ಯವಸ್ಥೆಯೊಂದನ್ನು ಕಟ್ಟಲು ಹೊರಟಿದ್ದೇವೆ. ನಾವೀಗ ಜಾಗ್ರತರಾಗದಿದ್ದರೆ ನಾವು ಒಳ್ಳೆಯದಾದದ್ದನ್ನು ಕಟ್ಟುವ ಮೊದಲೇ ನಮ್ಮಲ್ಲಿದ್ದ ಕಿಂಚಿತ್ ಒಳ್ಳೆಯದನ್ನೂ ಕಳೆದುಕೊಳ್ಳುವ ಸ್ಥಿತಿ ಬರುವುದು ಖಂಡಿತ. *

ಹಣವೇ ಪವಿತ್ರವೆನ್ನುವವನಿಗೆ ಗುರು ಮತ್ತು ಬಂಧುಗಳಿಲ್ಲ. ಕಾಮಾಂಧನಿಗೆ ಭಯ, ನಾಚಿಕೆ ಇಲ್ಲ. ವಿದ್ಯಾರ್ಥಿಗೆ ಸೌಖ್ಯ, ನಿದ್ರೆ ಇಲ್ಲ. ಸಾಧಕನಿಗೆ ರುಚಿ, ಕಾಲ ಇಲ್ಲ.


* *

ವೇಶ್ಯೆಯ ಸಹವಾಸ ಮಾಡಿದವರು ಎಷ್ಟು ಜನರಿಲ್ಲ? ವಿದ್ಯಾರಾಧಕರು ಎಷ್ಟು ಜನರಿಲ್ಲ? ಆದರೆ ಅವರಲ್ಲಿಯೂ, ಇವರಲ್ಲಿಯೂ ಹೃದಯವನ್ನರಿತವರು ಇಬ್ಬರೊ, ಮುವ್ವರೋ.

* *

ಸಜ್ಜನರು ತಮಾಷೆಯಲ್ಲಿ ಆಡಿದ ಮಾತಾದರೂ ಅವು ಶಿಲಾಕ್ಷರಗಳಾಗುವುವು. ದುರ್ಜನರು ಪ್ರಮಾಣ ಮಾಡಿ ನುಡಿದರೂ, ಅವು ನೀರಿನ ಮೇಲೆ ಬರೆದಂತಾಗುವುವು.

—ಸಂಗ್ರಹ: ತತ್ಪುರುಷ



ಈ ಹಿಂದೂ ದೇವಾಲಯದ ಮೇಲೆ ಕೈಮಾಡಲು
ಬಿಳಿಯರೂ ಅಂಜುತ್ತಾರೆ

ಉಂಬಿಲೋಡ ರಹಸ್ಯಮಯ ದೇವಾಲಯ

"ಟಿಟ್‌ಬಿಟ್ಸ್" ನಿಂದ

ದಕ್ಷಿಣ ಆಫ್ರಿಕದ ಉಂಬಿಲೊ ನದಿಯ ದಂಡೆಯ ಮೇಲೊಂದು ಹಿಂದೂ ದೇವಾಲಯ ಎದೆ. ೯೨ ವರ್ಷಗಳ ಹಿಂದೆ ಕಟ್ಟಲ್ಪಟ್ಟ ಈ ದೇವಾಲಯ ಇಂದು ಅತ್ಯಂತ ಜೀರ್ಣಾವಸ್ಥೆಯಲ್ಲಿದ್ದು ಅದರಲ್ಲಿ ಮತ್ತು ಅದರ ಸುತ್ತಮುತ್ತ ವಿಷಸರ್ಪಗಳನ್ನು ಬಿಟ್ಟರೆ ಮತ್ತಾವ ಜೀವ ವಸತಿಯೂ ಇಲ್ಲ. "ಟೆಂಪಲ್ ಆಫ್ ದ ಸ್ಪಿಯರ್" (ಭರ್ಚಿಯ ದೇವಾಲಯ) ಎಂದು ಹೆಸರಿರುವ ಈ ದೇವಾಲಯದ ಸಮೀಪಕ್ಕೆ ಆಫ್ರಿಕದ ಮೂಲ ನಿವಾಸಿಗಳೇ ಆಗಲಿ, ಬಿಳಿಯರೇ ಆಗಲಿ—ಒಬ್ಬರೂ ಸುಳಿಯುವುದಿಲ್ಲ. ಈ ದೇವಾಲಯವೆಂದರೆ ಅಷ್ಟು ಭಯ ಜನರಿಗೆ. ೧೯೦೫ರಲ್ಲಿ ಉಂಬಿಲೊ ನದಿಗೆ ಬಂದ ಮಹಾಪೂರದಲ್ಲಿ ಸತ್ತ ೫೦೦ ಜನರಪ್ರೇತಾತ್ಮಗಳು ಈ ದೇ-ವಾಲಯದಲ್ಲಿ ವಾಸವಾಗಿರುವವೆಂದೂ ದೇವಾಲಯದ ಸಮೀಪ ಹೋಗುವವರು ಅಥವಾ ಅದನ್ನು ಕೆಡಹಲು ಪ್ರಯತ್ನಿಸುವವರು ಖಂಡಿತ ಪ್ರಾಣ-ಕ್ಕೆರವಾಗುವರೆಂದೂ ಹಿಂದುಗಳು ನಂಬುತ್ತಾರೆ.

ಜನರ ಈ ಭಯಕ್ಕೆ ಕಾರಣವಿಲ್ಲದಿಲ್ಲ. ಅದಕ್ಕೆ ಪ್ರಮಾಣವನ್ನು ಅ-ಹಿಂದುಗಳು ಕೂಡ ಮನಗಂಡಿದ್ದಾರೆ.

ಕೆಲ ಸಮಯದ ಹಿಂದೆ ಈ ದೇವಾಲಯವನ್ನು ಕೆಡಹುವ ಕಾರ್ಯದಲ್ಲಿ ಮಗ್ನರಾಗಿದ್ದ ಮೂವರಿಗೆ ಒಮ್ಮೆಲೆ ವಿಪರೀತ ಜ್ವರ ಬಂತು. ಅವರನ್ನು ಪರೀಕ್ಷಿಸಿದ ಡಾಕ್ಟರರಿಗೆ ಆ ಜ್ವರದ ಲಕ್ಷಣಗಳ ಅರ್ಥವೇ ಆಗಲಿಲ್ಲ. ಆಧುನಿಕ ವೈದ್ಯಶಾಸ್ತ್ರಕ್ಕೆ ಪರಿಚಿತವಾದ ಬೇನೆಯ ಲಕ್ಷಣವೊಂದೂ ಇರಲಿಲ್ಲ ರೋಗಿಗಳಲ್ಲಿ. ಜೀವನ-ಮರಣಗಳ ಹೋರಾಟದಲ್ಲಿದ್ದ ಆ ಜನರನ್ನು ಉಳಿಸುವ ಮಾರ್ಗ ಡಾಕ್ಟರರಿಗೆ ತಿಳಿಯಲಿಲ್ಲ. ಅವರು ಜ್ವರದ ಪ್ರಖರ ತಾಪವನ್ನು ಇಳಿಸಲು ತಮಗೆ ಗೊತ್ತಿದ್ದ ಉಪಾಯಗಳನ್ನೆಲ್ಲವನ್ನೂ ಮಾಡಿದರು. ಜ್ವರ ೧೦೦-೧೦೩ ಡಿಗ್ರಿಗಳ ನಡುವೆ ಹೊಯ್ದಾಡುತ್ತಿತ್ತು.

ಆಗ ಈ ರೋಗಿಗಳನ್ನಿಟ್ಟಿದ್ದ ದರ್ಬಾನಿನ ಎಡಿಂಗ್ಟನ್ ಆಸ್ಪತ್ರೆಗೆ ಹಿಂದೂ ಸಾಧುವೊಬ್ಬ ಬಂದ. "ನಾನು ಈ ಜನರನ್ನು ಗುಣಪಡಿಸಬಲ್ಲೆ. ಆದರೆ ನೀವು ಇವರನ್ನುಗುಣಪಡಿಸಲಾರಿರಿ. ನಿಮ್ಮ ಬಳಿ ಇವರಿಗೆ ಕೊಡಬೇಕಾದ ಔಷಧಿಯೇಇಲ್ಲ," ಎಂದ ಆ ಸಾಧು ಆಸ್ಪತ್ರೆಯ ಡಾಕ್ಟರರಿಗೆ.

"ಇವರಿಗೆ ಕೊಡುವ ಔಷಧಿಯೆ ಇಲ್ಲವೆಂದ ಮೇಲೆ ನೀನು ಇವರನ್ನು ಗುಣಪಡಿಸುವುದಾದರೂ ಹೇಗೆ?" ಡಾಕ್ಟರರು ಕೇಳಿದರು.

"ಈ ಜನ ಈ ದೇವಾಲಯಕ್ಕೆ ಮತ್ತೆಂದೂ ಬರುವುದಿಲ್ಲವೆಂದೂ ಅದನ್ನು ಕೆಡಹಲು ಪ್ರಯತ್ನಿಸುವುದಿಲ್ಲವೆಂದೂ ಆಣೆ ಮಾಡಿದರೆ ನಾಳೆಯೊಳಗಾಗಿ ಇವರು ಗುಣಹೊಂದುತ್ತಾರೆ," ಸಾಧು ಹೇಳಿದ.

ಸಾಧುವಿನ ಈ ಮಾತು ಅಂಧಶ್ರದ್ಧೆಯ ಬಡಬಡಿಕೆ ಎಂದು ಡಾಕ್ಟರರು ತಿಳಿದಿದ್ದರು. ಆದರೂ ಸಾಧು ರೋಗಿಗಳನ್ನು ನೋಡಿದರೆ ಏನೂ ತೊಂದರೆಯಿರಲಿಲ್ಲ. ಗುಣವಾಗದಿದ್ದರೆ ಹೋಯಿತು. ಕೆಡುಕಂತೂ ಆಗುವಂತಿರಲಿಲ್ಲ. ಆ ರೋಗಿಗಳನ್ನು ಉಳಿಸಿಕೊಳ್ಳಲು ಡಾಕ್ಟರರು ಮುಳುಗುವವನು ಹುಲ್ಲುಕಡ್ಡಿಯನ್ನಾದರೂ ಹಿಡಿಯುವಂತೆ ಯಾವ ಉಪಾಯವನ್ನಾದರೂ ಮಾಡಿನೋಡಲು ಸಿದ್ಧರಾಗಿದ್ದರು.

ಸಾಧು ರೋಗಿಗಳ ಬಳಿಗೆ ಹೋದ. ಪ್ರತಿಯೊಬ್ಬರ ದೇಹದ ಮೇಲ್ಗಡೆ ಒಂದು ಸಂಕೇತ ಮಾಡಿ "ದೇವಾಲಯಕ್ಕೆ ತಿರುಗಿ ಬರುವುದಿಲ್ಲ. ಅದನ್ನು ಕೆಡವಲು ಯತ್ನಿಸುವುದಿಲ್ಲ ಎಂದು ಆಣೆ ಮಾಡುವಿರಾ?" ಎಂದು ಕೇಳಿದ. ರೋಗಿಗಳು ಆಣೆ ಮಾಡಿದರು. "ನಾಳೆ ಇವರಿಗೆ ಗುಣವಾಗುತ್ತದೆ" ಎಂದು ಹೇಳಿ ಸಾಧು ಹೊರಟುಹೋದ.

ಯಾರೂ ಆತನ ಮಾತು ನಂಬಲಿಲ್ಲ. ಆದರೆ ಅಂದು ರಾತ್ರಿ ರೋಗಿಗಳಿಗೆ ಚೆನ್ನಾಗಿ ನಿದ್ದೆ ಬಂತು. ಬೆಳಿಗ್ಗೆ ನೋಡಿದಾಗ ಅವರಿಗೆ ಜ್ವರವಿರಲಿಲ್ಲ. ಅವರು ಸಂಜೆ ತಮ್ಮ ತಮ್ಮ ಮನೆಗಳಿಗೆ ಹೋದರು.

ಸಾಧು ಏನು ಮಾಡಿದ, ಹೇಗೆ ಗುಣಪಡಿಸಿದ ಎಂಬುದು ಇನ್ನೂ ನಿಗೂಢ ರಹಸ್ಯವಾಗಿಯೇ ಉಳಿದಿದೆ. ಆತ ರೋಗಿಗಳನ್ನು ಸ್ಪರ್ಶಿಸಿರಲಿಲ್ಲ. ಅವರಿಗೆ ಏನನ್ನೂ ಕುಡಿಸಿರಲಿಲ್ಲ.

ಇದು ಕೇವಲ ಮೂಢನಂಬಿಕೆಯ ಕಥೆಯಲ್ಲ. ಕಳೆದ ಐವತ್ತು ವರ್ಷಗಳಲ್ಲಿ ಆ ದೇವಾಲಯಕ್ಕೆ ಹೋಗಿ ಬಂದವರೆಲ್ಲ ಒಂದು ವಿಚಿತ್ರ ರೋಗಕ್ಕೆ ತುತ್ತಾಗಿದ್ದಾರೆ. ಡಾಕ್ಟರರಿಗೆ ಆ ರೋಗದ ಅರ್ಥ ಕೂಡ ಆಗಿಲ್ಲ. ದೇವಾಲಯದ ಬಳಿ ಅದರ ಫೋಟೋ ತೆಗೆಯಲು ಹೋಗುವ ಧೈರ್ಯ ಕೂಡ ಈಗ ಯಾರಿಗೂ ಇಲ್ಲ.

೪೦ ವರ್ಷಗಳ ಹಿಂದೆ ಈ ದೇವಾಲಯದ ಚಿತ್ರವೊಂದನ್ನು ಒಬ್ಬ ಬರೆದಿದ್ದ. ದರ್ಬಾನಿನ ಒಬ್ಬಾಕೆ ಇತ್ತೀಚೆಗೆ ಅದನ್ನು ಕೊಂಡಳು ಆ ನಿಮಿಷದಿಂದ ಅವಳ ಮನೆಯಲ್ಲಿ ಚಮತ್ಕಾರಿಕ ಘಟನೆಗಳು ಜರುಗತೊಡಗಿದವು. ಹಲಗೆಗಳ ಮೇಲಿಟ್ಟಿದ್ದ ಸಾಮಾನುಗಳು ತಮ್ಮಷ್ಟಕ್ಕೆ ಕೆಳ

ಗುರುಳಿ ಬೀಳುತ್ತಿದ್ದವು, ಬಾಗಿಲುಗಳು ತಂತಾನೆ ತೆರೆದು ಮುಚ್ಚುತ್ತಿದ್ದವು. ಕಡೆಗೊಂದು ದಿನ ಆ ಹೆಣ್ಣುಮಗಳು ಕಾಲುಜಾರಿ ಬಿದ್ದಳು. ಕಾಲು ಗಂಟು ಮುರಿಯಿತು. ಅವಳು ಆ ಚಿತ್ರವನ್ನು ಆ ಕ್ಷಣದಲ್ಲಿ ಮನೆಯಿಂದ ಹೊರಗೆ ಕಳಿಸಿದಳು. ಮನೆ ಶಾಂತವಾಯಿತು. ಅವಳ ಕಾಲು ನೆಟ್ಟಗಾಯಿತು.

ದರ್ಬಾನಿನಿಂದ ಕೆಲವೇ ಮೈಲು ದೂರದಲ್ಲಿ ಉಂಬಿಲೊ ನದಿಯ ದಂಡೆಯಮೇಲೆ ಈ ದೇವಾಲಯವಿದೆ. ೧೮೬೯ ರಲ್ಲಿ ಉಂಬಿಲೊ ನದಿಯಲ್ಲಿ ಈಸುತ್ತಿದ್ದ ಕೆಲವು ಹಿಂದುಗಳಿಗೆ ಒಂದು ಮಡು ಕಾಣಿಸಿತು. ಅದರಲ್ಲಿ ದಕ್ಷಿಣ ಆಫ್ರಿಕೆಯಲ್ಲಿ ಎಂದೂ ಯಾರೂ ನೋಡಿರದಂಥ ಒಂದು ಹಳೆಯ ತುಕ್ಕು ಹಿಡಿದ ಭರ್ಚಿ ಸಿಕ್ಕಿತು.

ಇಲ್ಲೊಂದು ದೇವಾಲಯ ಕಟ್ಟಬೇಕು ಎಂದೇ ಈ ಭರ್ಚಿ ಸಿಕ್ಕಿದ್ದರ ಸಂಕೇತ ಎಂದು ಧಾರ್ಮಿಕರಾದ ಆ ಹಿಂದುಗಳು ತಿಳಿದರು. ಅವರು ಅಲ್ಲಿ "ಶ್ರೀ ಅಂಬಾಳನರ್ ಆಲಯಂ" ದೇವಾಲಯವನ್ನು ಕಟ್ಟಿದರು.

೧೯೦೩ ರಷ್ಟೊತ್ತಿಗೆ ಅನೇಕಾನೇಕ ಹಿಂದುಗಳು ಈ ದೇವಾಲಯಕ್ಕೆ ಬರತೊಡಗಿದ್ದರು. ಬಂದ ಜನ ದೇವಾಲಯದಲ್ಲಿ ಹಿಡಿಸುತ್ತಿರಲಿಲ್ಲ. ನಾತಾಳದಲ್ಲಿಯ ಅತಿ ಶ್ರೀಮಂತರಲ್ಲಿ ಒಬ್ಬನಾದ ಪಾತರ್ ನಾಯಡು ಎಂಬಾತ ಹಳೆಯ ದೇವಾಲಯವನ್ನು ಕೆಡವಿಸಿ ಹೊಸ ದೇವಾಲಯವನ್ನು ಕಟ್ಟಿಸಿದ. ೧೯೦೫ ರಲ್ಲಿ ಒಂದು ದಿನ ನೂರಾರು ಹಿಂದುಗಳು ದೇವಾಲಯದಲ್ಲಿ ಭಜನೆ ಮಾಡುತ್ತಿದ್ದಾಗ ಉಂಬಿಲೊ ನದಿಗೆ ಮಹಾಪೂರ ಬಂದು ನೀರಿನಲ್ಲಿ ಕೊಚ್ಚಿಕೊಂಡು ಬಂದ ಹಳದಿ ಮಣ್ಣಿನ ಕೆಸರು ದೇವಾಲಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ರಾಶಿಯಾಗಿ ಬಿದ್ದಿತು. ನೀರಿನ ರಭಸಕ್ಕೆ ದೇವಾಲಯದ ಗೋಡೆಗಳು ಕುಸಿದವು. ಸುಮಾರು ೫೦ ಜನ ಸತ್ತರು.

ಪಾತರ್ ನಾಯಡು ಮತ್ತೊಮ್ಮೆ ಹಣ ಕೊಟ್ಟು ಹೊಸ ದೇವಾಲಯವನ್ನು ಕಟ್ಟಿಸಿದ. ಇದನ್ನು ಕೂಡ ಭರ್ಚಿಯ ದೇವಾಲಯ ಎಂದೇ ಕರೆದರು. ನಾತಾಳದ ಹಿಂದುಗಳಿಗೆ ಇದು ಕ್ಷೇತ್ರಸ್ಥಾನವಾಗಿತ್ತು. ಇಲ್ಲಿ ಅದ್ಭುತ ಸಂಗತಿಗಳು ಜರಗುತ್ತಿದ್ದವು. ಒಮ್ಮೆ ಜನ ಬೆಂಕಿಯ ಮೇಲೆ ನಡೆದು ಹೋಗುವುದನ್ನು ಕೆಲ ಬಿಳಿಯರು ನೋಡುತ್ತ ನಿಂತಾಗ ಮೂವರು ಯುರೋಪಿಯನ್ ಹುಡುಗಿಯರು ತಮ್ಮ ಬೂಟು ಕಳಚಿ ಧಗಧಗಿಸುತ್ತಿದ್ದ ಕೆಂಡದ ರಾಶಿಯ ಮೇಲೆ ನಡೆದು ಹೋದರು. ಅವರಿಗೆ ಏನೇನೂ ಅಪಾಯವಾಗಲಿಲ್ಲ.

ಆದರೆ ೧೯೩೯ ರಲ್ಲಿ ನಗರಾಭಿವೃದ್ಧಿಗಾಗಿ ಸ್ಥಳ ಬೇಕೆಂದು ನಾತಾಳದ ಅಧಿಕಾರಿಗಳು ಹಳೆಯ ದೇವಾಲಯದ ಜೀರ್ಣಾವಶೇಷಗಳನ್ನು ಕೆಡವಿಸಲು ಅಪ್ಪಣೆ ಮಾಡಿದರು: ಹೊಸ ದೇವಾಲಯವನ್ನೂ ಕೆಡವಿಸಲಾಗುವುದೆಂದೂ ಬೇರೆ ಸ್ಥಳದಲ್ಲಿ ಸಾರ್ವಜನಿಕ ವೆಚ್ಚದಿಂದ ಮತ್ತೊಂದು ದೇವಾಲಯವನ್ನು ಕಟ್ಟಿಸಿಕೊಡಲಾಗುವುದೆಂದೂ ಹಿಂದುಗಳಿಗೆ ತಿಳಿಸಲಾಯಿತು.

ತಮ್ಮ ಪವಿತ್ರಸ್ಥಾನವನ್ನು ನಾಶಗೊಳಿಸಬಾರದೆಂದು ಹಿಂದುಗಳು ಹೇಳಿದ್ದನ್ನು ಸರಕಾರ ಕೇಳಲಿಲ್ಲ. ಆದರೆ ದೇವಾಲಯ ಕೆಡುವಲು ಹೋದ ಕೆಲಸಗಾರರಿಗೆ ಅಜ್ಞಾತ ಬೇನೆಯೊಂದು ಬಾಧಿಸತೊಡಗಿತು. ಬೇನೆ ಬೀಳದವರು ಅಪಘಾತಕ್ಕೀಡಾದರು. ಯಾವ ಹಿಂದುವೂ ಅಲ್ಲಿ ಕೆಲಸಕ್ಕೆ ಬರಲು ಒಪ್ಪಲಿಲ್ಲ. ಕೆಲ ದಿನಗಳ ಮೇಲೆ ಝೂಲು ಕೆಲಸಗಾರರು ಕೂಡ ಕೆಲಸ ಮಾಡಲು ನಿರಾಕರಿಸಿದರು.

ನಿರುಪಾಯವಾಗಿ ಸರಕಾರ ಕೆಲಸವನ್ನು ನಿಲ್ಲಿಸಬೇಕಾಯಿತು. ಇಂದು ಆ ದೇವಾಲಯದ ಭಯ ಎಷ್ಟು ಇದೆಯೆಂದರೆ ಅದನ್ನು ಕೆಡಹುವ ಕೆಲಸ ಮಾಡುವುದಂತಿರಲಿ, ಅದರ ಸಮೀಪಕ್ಕೆ ಹೋಗುವ ಧೈರ್ಯ ಕೂಡ— ಆತ ಬಿಳಿಯನೇ ಇರಲಿ, ಕರಿಯನೇ ಇರಲಿ–ಒಬ್ಬರಿಗೂ ಇಲ್ಲ. ★

ಎಲ್ಲ ಆಟಗಾರರ ಕನಸೂ ಇಲ್ಲಿ ಪಟ್ಟ ಗೆಲ್ಲುವುದನ್ನು ಕುರಿತಾಗಿದೆ

ಟೆನಿಸಿನ ಕಾಶಿ: ವಿಂಬಲ್ಡನ್

ಗಂಗಾಧರ

ಬ್ರಿಟಿಶ್ ರಾಜಕುಲದ ರತ್ನಾಭರಣಗಳನ್ನೆಷ್ಟು ಜತನವಾಗಿ ಕಾಯುವರೋ ಅಷ್ಟೇ ಜತನವಾಗಿ ಬ್ರಿಟನ್ನಿನಲ್ಲಿ ಕಾಯಲ್ಪಡುವ ಇನ್ನೊಂದು ಪದಾರ್ಥವೆಂದರೆ ವಿಂಬಲ್ಡನ್ ಟೆನ್ನಿಸ್ ಕೋರ್ಟ್. ಇದು ಟೆನಿಸ್ ಆಟಗಾರರ ಕಾಶಿ. ಕಾಶಿಯಲ್ಲಿ ಜಯಭೇರಿ ಹೊಡೆದ ಪಂಡಿತನಿಗೆ ಅಖಿಲ ಭಾರತದಲ್ಲಿ ಮನ್ನಣೆ ದೊರೆತಂತೆ ವಿಂಬಲ್ಡನ್ನಿನಲ್ಲಿ ಗೆದ್ದಾತ ಟೆನಿಸ್ ಪ್ರಪಂಚದ ಚಕ್ರವರ್ತಿಯಾಗುತ್ತಾನೆ.

ಲಂಡನ್ನಿನ ಉಪನಗರವೊಂದರಲ್ಲಿ ೧೩೪ ಅಡಿ ಉದ್ದ ೭೨ ಅಡಿ ಅಗಲವಾದೊಂದು ಬಯಲಿದೆ. ಟೆನಿಸ್ ರಾಜಧಾನಿ ಪದವನ್ನು ಈ ಬಯಲು ಪಡೆದು ಇನ್ನೂ ೭೫ ವರ್ಷವಾಗುತ್ತದಷ್ಟೇ. ಆದರೆ ಅದರ ಕಥೆ ಮತ್ತೂ ಹದಿಮೂರು ಶತಮಾನ ಹಿಂದೆ ಹೋಗುತ್ತದೆ. ಕೆಂಟಿನ ಅರಸ ಎಥೆಲ್‌ಬರ್ಟನಿಗೂ ವೆಸೆಕ್ಸಿನ ಅರಸ ಕೆನ್ಲಿನ್ನನಿಗೂ ಕ್ರಿ. ಶ. ೫೬೮ ರಲ್ಲಿ ಕದನವಾಗಿ ಎರಡನೆಯವನು ಗೆದ್ದ ಬಯಲು ಇದೇ ಅಂತೆ. ನಾಲ್ಕು



ಸುತ್ತಲೂ ಗೋಡೆಗಳಿರುವ ಈ ಬಯಲು ಈಗ ವರ್ಷಕ್ಕೊಮ್ಮೆ ಆತುರ, ನಿರೀಕ್ಷೆ, ಆಶೆ, ನಿರಾಶೆ, ಕೀರ್ತಿ ಮುಂತಾದವುಗಳ ಕೇಂದ್ರವಾಗುತ್ತದೆ. ಪ್ರತಿ ವರ್ಷದ ಜೂನ್ ತಿಂಗಳಲ್ಲಿ ಕೇವಲ ಹನ್ನೆರಡು ದಿನಗಳ ವರೆಗೆ ನಡೆಯುವ ಅಂತಾರಾಷ್ಟ್ರೀಯ ಟೆನಿಸ್ ಪಂದ್ಯಗಳಿಗಾಗಿ ಈ ಬಯಲನ್ನು ಅಣಿಯಾಗಿಡಲು ವರ್ಷದ ಉಳಿದೆಲ್ಲ ಕಾಲದಲ್ಲಿ ಅದರ ಆರೈಕೆಯನ್ನು ಬಹು ಜಾಗ್ರತೆಯಿಂದ ಮಾಡಲಾಗುತ್ತದೆ.

ಈ ಬಯಲಿನ ಕೇಂದ್ರ ಕೋರ್ಟಿನಲ್ಲಿ ಆಡುವ ಭಾಗ್ಯ ತನಗೆ ದೊರೆಯಲೆಂದೇ ಜಗತ್ತಿನಲ್ಲಿಯ ಎಲ್ಲ ಮಹತ್ವಾಕಾಂಕ್ಷಿ ತರುಣ ಟೆನಿಸ್ ಆಟಗಾರರು ಬಯಸುತ್ತಾರೆ. ವಿಂಬಲ್‌ಡನ್ ಪಂದ್ಯಗಳಲ್ಲಿ ಅಂಥ ಮಹತ್ವವೇನು ಎಂದು ಕೇಳಿದಾಗ ೧೯೩೦ ರ ಸುಮಾರಿಗೆ ಅಮೇರಿಕದ ಪ್ರಸಿದ್ಧ ಟೆನಿಸ್ ಆಟಗಾರ್ತಿ ಹೆಲೆನ್ ಜೆಕೊಬ್ಸ್ "ಅದು ಜಾಗತಿಕ ಪಟ್ಟವನ್ನೀಯುವ ಸ್ಥಾನ," ಎಂದಿದ್ದಳು.

ಆದರೆ ಅಮೇರಿಕ ಮತ್ತು ಇನ್ನುಳಿದ ಟೆನಿಸ್ ಆಡುವ ದೇಶಗಳು ವಿಂಬಲ್‌ಡನ್ ಪಂದ್ಯಗಳು ಜಾಗತಿಕ ಪಂದ್ಯಗಳು ಎನ್ನುವುದಕ್ಕೆ ವಿರೋಧ ಮಾಡಿದ್ದರಿಂದ ವಿಂಬಲ್‌ಡನ್ ಪಂದ್ಯಗಳು ಇಂದು ಜಾಗತಿಕ ಪಂದ್ಯಗಳೆಂದು ಕರೆಯಿಸಿಕೊಳ್ಳಲ್ಪಡುವುದಿಲ್ಲ. ಆದರೆ, "ದ ಲಾನ್ ಟೆನಿಸ್ ಚ್ಯಾಂಪಿಯನ್‌ಶಿಪ್ಸ್" ಎಂದು ಹೆಸರಿಟ್ಟುಕೊಂಡು ವಿಂಬಲ್‌ಡನ್ ತನ್ನ ಮೂಲ ಉದ್ದೇಶವನ್ನು ಅಂದರೆ ಜಾಗತಿಕ ಪಂದ್ಯದ ಸ್ಥಾನವನ್ನು-ಅನಧಿಕೃತವಾಗಿ—ಉಳಿಸಿಕೊಂಡಿದೆ.

ವಿಂಬಲ್‌ಡನ್ ಬಯಲಿನಲ್ಲಿ ೧೭ 'ಕೋರ್ಟ್ಸ್' ಗಳಿವೆ "ಸೆಂಟರ್ ಕೋರ್ಟ್" ಮತ್ತು ಹೆಚ್ಚು ಕಡಿಮೆ ಅಷ್ಟೇ ಪ್ರಸಿದ್ಧವಾದ ನಂ. ೧. ಕೋರ್ಟನ್ನು ಬ್ರಿಟಿಶ್ ರಾಜ್ಯದ ಮುತ್ತು-ರತ್ನಾದಿ ಖಜಾನೆಯನ್ನು ಕಾಯುವಷ್ಟೇ ಎಚ್ಚರದಿಂದ ಕಾಯುತ್ತಾರೆ. ಈ ಕೋರ್ಟಿನ 'ಟರ್ಫ್' (ಹುಲ್ಲು) ನ ಮೇಲೆ ಯಾರೊಬ್ಬರೂ ಕಾಲಿಡಲಾರರು. ಈ ಹುಲ್ಲು ಅತ್ಯುತ್ತಮ ವೆಲ್ವೆಟ್ಟಿನಷ್ಟೇ ಮೃದುವೂ ನಯವೂ ಆಗಿದೆಯೆಂದು ಬಯಲಿನ ಮೇಲ್ವಿಚಾರಣೆ ನೋಡಿಕೊಳ್ಳುವವರು ಹೇಳುತ್ತಾರೆ. ಪಂದ್ಯಗಳು ಮುಗಿದೊಡನೆಯೆ ಮುಂದಿನ ಪಂದ್ಯಗಳಿಗಾಗಿ ಬಯಲನ್ನು ಸಿದ್ಧಗೊಳಿಸುವ ಕಾರ್ಯ ಆರಂಭವಾಗುತ್ತದೆ. ಹುಲ್ಲನ್ನು ಸಮಾನಾಂತರದಲ್ಲಿ ಕೊಯ್ದು, ನೀರುಣಿಸಿ, ಏರು ತಗ್ಗುಗಳಾಗದಂತೆ ನೋಡಿಕೊಂಡು ಆಟಕ್ಕೆ ಹದಿನಾರಾಣೆ ಅನುಕೂಲವಾಗುವಂತೆ ಮಾಡುವುದೇನೂ ಸುಲಭವಲ್ಲ.

ಹುಲ್ಲುಕೊಯ್ಯಲು ಕೈಯಂತ್ರವನ್ನು ಉಪಯೋಗಿಸುತ್ತಾರೆ. ನೆಲದ ಮೇಲೆ ಹುಲ್ಲು $\frac{1}{8}$ ಇಂಚು ಎತ್ತರವಿರುವಂತೆ ಕೊಯ್ಯುತ್ತಾರೆ.

೧೮೭೭ ರಲ್ಲಿ ವಿಂಬಲ್‌ಡನ್ ಪಂದ್ಯ ಮೊದಲ ಬಾರಿ ನಡೆದಾಗ ಕೇವಲ ೨೦೦ ಜನ ನೋಡಿದ್ದರು. ಆಗಿನ ಪ್ರವೇಶ ಶುಲ್ಕ ತಲಾ ೧೪ ಸೆಂಟ್ ಇತ್ತು. ಆಗ ಲಾನ್ ಟೆನಿಸ್ ಹೊಚ್ಚ ಹೊಸ ಆಟವಾಗಿತ್ತು. ಅದಕ್ಕಿಂತ ಮೂರೇ ವರ್ಷ ಹಿಂದೆ ವಾಲ್ಟರ್ ವಿಂಗ್‌ಫೀಲ್ಡನೆಂಬ ಇಂಗ್ಲಿಷ್ ಸೈನ್ಯಾಧಿಕಾರಿ ಈ ಆಟವನ್ನು ಆವಿಷ್ಕಾರ ಮಾಡಿದ್ದ. ೧೯೦೭ ರ ವರೆಗೆ ವಿಂಬಲ್‌ಡನ್‌ನಲ್ಲಿ ಬ್ರಿಟಿಶ್ ಜನರಷ್ಟೇ ಪಂದ್ಯವಾಡುತ್ತಿದ್ದರು. ಆದರೆ ೧೯೧೩ ರೊಳಗೆ ಲಾನ್ ಟೆನಿಸ್ ಆಟ ಜಗತ್ತಿನ ಎಲ್ಲ ಖಂಡಗಳಿಗೂ ವಿಸ್ತರಿಸಿತ್ತು. ಈ ಪಂದ್ಯ ಈಗಷ್ಟು ಜನಪ್ರಿಯವಾಗಿದೆಯೆಂಬುದು ಕಳೆದ ವರ್ಷ ಈ ಪಂದ್ಯಗಳನ್ನ ೩,೫೦,೦೦೦ ಜನರು ನೋಡಿದರು ಎಂಬ ಮಾತಿನಿಂದ ತಿಳಿಯುವಂತಿದೆ. ೧೮೭೭ರಲ್ಲಿ ೨೨ ಜನ ಆಟಗಾರರು ಪಂದ್ಯಗಳಲ್ಲಿ ಭಾಗವಹಿಸಿದ್ದರೆ ಕಳೆದ ವರ್ಷ ೩೬ ದೇಶಗಳ ೪೭೧ ಜನ ಆಟಗಾರರು ಭಾಗವಹಿಸಿದ್ದರು.

ಇಂಗ್ಲಂಡಿನ ಕ್ರೊಕೆಟ್ ಕ್ಲಬ್ ಹಣದ ಅಡಚಣಿಯಲ್ಲಿ ಸಿಲುಕಿದಾಗ ಈ ಬಗೆಯ ಟೆನಿಸ್ ಪಂದ್ಯಗಳನ್ನು ಏರ್ಪಡಿಸುವ ವಿಚಾರ ಹುಟ್ಟಿತು

ಎಂದು ಹೇಳುತ್ತಾರೆ. ಇದು ಹೇಗೇ ಇರಲಿ, ಈಗಿನ ಪಂದ್ಯಗಳು "ಆಲ್ ಇಂಗ್ಲಂಡ್ ಲಾನ್ ಟೆನಿಸ್ ಆ್ಯಂಡ್ ಕ್ರೊಕೆಟ್ ಕ್ಲಬ್" ನಿಂದಲೇ ನಡೆಸಲ್ಪಡುತ್ತಿವೆ. ಇಂದಿನ ವಿಂಬಲ್‌ಡನ್ ಕೋರ್ಟನ್ನು ನಿರ್ಮಿಸಲು (೧೯೨೨) ರೂಪಾಯಿ ೧೮,೫೦,೦೦೦ ವೆಚ್ಚ ಬಂತು. ವಿಂಬಲ್‌ಡನ್ ಪಂದ್ಯಗಳಿಂದ ವರ್ಷಕ್ಕೆ ೪,೨೦,೦೦೦ ರೂಪಾಯಿಗಳ ಉತ್ಪನ್ನವಾಗುತ್ತದೆ ಎಂಬ ಅಂದಾಜಿದ್ದರೂ ಖರ್ಚು ಕೂಡ ವಿಪರೀತವಾಗಿದೆಯೆನ್ನುವುದು ಸುಳ್ಳಲ್ಲ. ವರ್ಷದುದ್ದಕ್ಕೂ ಬಯಲನ್ನು ಸುಸ್ಥಿತಿಯಲ್ಲಿಡುವುದರ ಜೊತೆಗೆ ಪಂದ್ಯಗಳ ಕಾಲದಲ್ಲಿ ಪ್ರೇಕ್ಷಕರನ್ನು ಒಳಗೆ ಬಿಡಲು ೨೦೦ ಜನ ದ್ವಾರಪಾಲಕರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಪಂದ್ಯಗಳ ನಿರೀಕ್ಷಣೆಗಾಗಿ ೧೪೦ ಅಂಪಾಯರರು ಬೇಕಾಗುತ್ತಾರೆ. ಪಂದ್ಯಗಳಿಗಾಗಿ ಉಪಯೋಗಿಸಲ್ಪಡುವ ೧೦,೦೦೦ ಟೆನಿಸ್ ಚೆಂಡುಗಳನ್ನು ಅವು ಬಯಲನ್ನು ದಾಟಿ ಹೋದಾಗ ಹೆಕ್ಕಿ ತರುವುದಕ್ಕಾಗಿ ೬೦ ಹುಡುಗರನ್ನು ನೇಮಿಸಬೇಕಾಗುತ್ತದೆ. ಪ್ರತಿಯೊಂದು ಚೆಂಡನ್ನೂ ತೂಕ ಮಾಡಿ ಅದನ್ನು ಆಡಲು ತೆಗೆದುಕೊಳ್ಳುವ ವರೆಗೆ ಮಂಜುಗಡ್ಡೆಯ ಪೆಟ್ಟಿಗೆಯಲ್ಲಿಟ್ಟಿರುತ್ತಾರೆ.

ವಿಂಬಲ್‌ಡನ್ ಪಂದ್ಯಗಳಲ್ಲಿ ಭಾಗ ವಹಿಸುವವರ ಉಡುಪಿನ ಫ್ಯಾಶನ್ ಕಥೆ ಶ್ಲೀಲಾಶ್ಲೀಲ ಕಲ್ಪನೆಗಳ ಪರಿವರ್ತನೆಯ ಕಥೆಯೇ ಆಗಿದೆ. ಒಂದು ಕಾಲದಲ್ಲಿ ಪಾದಗಳ ಗಂಟಿಗೆ ಸ್ವಲ್ಪ ಮೇಲಕ್ಕಿದ್ದ ಲಂಗ ಹಾಕಿಕೊಂಡು ಶ್ರೀಮತಿ ಬೀಮಿಶ್ ಎಂಬವಳು ಆಟದ ಬಯಲಿಗೆ ಇಳಿದಾಗ ಜನಕ್ಕೆ ಆಘಾತವಾಗಿತ್ತು. ೧೯೨೫ ರಲ್ಲಿ ಜಾನ್ ಹೆನಿಸಿ ಎಂಬಾತ ತಿಳಿ ಕಂದುಬಣ್ಣದ ಪಟ್ಟೆಯುಳ್ಳ ಇಜಾರ ಹಾಕಿಕೊಂಡು ಆಟಕ್ಕೆ ಬಂದಾಗ "ಬಿಳಿ ಇಜಾರ ಹಾಕಿಕೊಂಡು ಬನ್ನಿ" ಎಂದು ವ್ಯವಸ್ಥಾಪಕರು ಅಪ್ಪಣೆ ಮಾಡಿದರು. ೧೯೩೩ ರಲ್ಲಿ ಅರ್ಧ ಚಲ್ಲಣ ತೊಟ್ಟು ಆಡಲು ಹೆಲೆನ್ ಜೆಕೊಬ್ ಎಂಬಾಕೆಗೆ ಅನುಮತಿ ನಿರಾಕರಿಸಲ್ಪಟ್ಟಿತು. ಇಂದು ಗಂಡಸರು ಅರ್ಧ ಚಡ್ಡಿ ಮತ್ತು ಹೆಂಗಸರು ಒಳಗೆ ಫ್ರಿಲ್‌ಚಲ್ಲಣ ಮತ್ತು ಫ್ರಾಕ್ ಧರಿಸಿ ಆಡುತ್ತಾರ— ಇವು ಮೊಣಕಾಲಿನ ವರೆಗೂ ಇರುವುದಿಲ್ಲ. ಇಂಗ್ಲಂಡಿನಲ್ಲಿ ಈ ಪಂದ್ಯ ನೋಡಲು ಬರಲಾರದಷ್ಟು ದೊಡ್ಡ ಮನುಷ್ಯರು ಯಾರೂ ಇಲ್ಲ.

"ಅಖಿಲ ಇಂಗ್ಲಂಡ್ ಕ್ಲಬ್" ನ ಅಧ್ಯಕ್ಷಳಾಗಿರುವ ಸುಂದರಿ ಡಚೆಸ್ ಆಫ್ ಕೆಂಟರು ವಿಂಬಲ್‌ಡನ್ ಪಂದ್ಯಗಳು ನಡೆಯುವಾಗ ಸದಾ ಹಾಜರಿರುತ್ತಾರೆ. ಎರಡನೇ ಎಲಿಝಾಬೆಥ್ ರಾಣಿ ೧೯೫೭ ರಲ್ಲಿ ಒಮ್ಮೆ ಮಾತ್ರ ಪಂದ್ಯಗಳನ್ನು ನೋಡಲು ಹೋಗಿದ್ದಳು. ಆ ಸಲದ ಪುರುಷರ ಡಬಲ್ಸಿನಲ್ಲಿ ಅಮೇರಿಕೆಯ ಗಾರ್ಡನರ್ ಮುಲೊಯ್ ಮತ್ತು ಬಜ್ ಪ್ಯಾಟಿ ಚ್ಯಾಂಪಿಯನ್‌ಶಿಪ್ ಪಡೆದರು. ಹನ್ನೊಂದು ವರ್ಷಗಳ ಹಿಂದೆ ಇದೇ ಮುಲೊಯ್ ಒಂದು ವನಭೋಜನ ಸಮಾರಂಭದಲ್ಲಿ ಆಗಿನ್ನೂ ರಾಜಕುಮಾರಿಯಾಗಿದ್ದ ಎಲಿಝಾಬೆಥ್‌ಳಿಗೆ "ಇದೇನು? ನಿಮ್ಮನ್ನೊಮ್ಮೆಯೂ ವಿಂಬಲ್‌ಡನ್‌ನಲ್ಲಿ ಕಾಣುವುದಿಲ್ಲವಲ್ಲ! ಟಿಕೆಟ್ ಸಿಗದ್ದಕ್ಕೆ ನಿಮಗೆ ಬರಲಾಗದಿದ್ದರೆ ನಾನು ಟಿಕೆಟ್ ತೆಗೆಸಿ ಕೊಡುತ್ತೇನೆ, ಬೇಕಾದರೆ" ಎಂದು ಹೇಳಿದ್ದನು. ಎಲಿಝಾಬೆಥ್‌ಳ ತಂದೆ ಆರನೇ ಜಾರ್ಜರು ೧೯೨೬ ರಲ್ಲಿ ಪುರುಷರ ಡಬಲ್ಸ್ ಪಂದ್ಯದಲ್ಲಿ ಆಡಿದ್ದರು. ಆದರೆ ಮೊದಲನೆ ಸುತ್ತಿನಲ್ಲಿಯೆ ಈ ಜೊತೆ ಸೋತಿತ್ತು.

ವಿಂಬಲ್‌ಡನ್ ಪಂದ್ಯಗಳ ದೀರ್ಘ ಇತಿಹಾಸದಲ್ಲಿ ಪ್ರೇಕ್ಷಕರು ಗೊಂದಲ ಹಾಕಿದ್ದೆಂದರೆ ಒಂದೇ ಸಲ ೧೯೨೭ ರಲ್ಲಿ. ರಾಣಿ ಮೇರಿ ಆಟ ನೋಡಲು ಬಂದಾಗ ಸ್ಪರ್ಧಾಳುಗಳಲ್ಲೊಬ್ಬಳಾದ ಫ್ರಾನ್ಸಿನ ಸುಝಾನೆ ಲೆಂಗ್ಲೆನ್ನಳು ಆಡಲು ನಿರಾಕರಿಸಿದಳು. ರಾಜಕುಲಕ್ಕೆ ಅವಮಾನ ಮಾಡಿದ್ದಕ್ಕಾಗಿ ಅವಳು ಮುಂದೆ ಆಡಲು ಬಂದಾಗ ಜನ ಅವಳನ್ನು ಗೇಲಿಮಾಡಿ ಗಲಾಟೆ

ಎಬ್ಬಿಸಿದರು. ಇದೇ ರಾಣಿ ಮೇರಿ ಮತ್ತೊಮ್ಮೆ ಆಟ ನೋಡಲು ಬಂದಾಗ ಕ್ಯಾಲಿಫೋರ್ನಿಯದ ಡಾನ್ ಬಜ್ ಮತ್ತು ಜರ್ಮನಿಯ ಬ್ಯಾರನ್ ಗ್ರೆಟ್‌ಫಿಡ್ ವಾನ್ ಕ್ರಾನನ್ನರಲ್ಲಿ ಉಪಾಂತ್ಯ ಪಂದ್ಯ ನಡೆದಿತ್ತು. ರಾಣಿ ಬಂದೊಡನೆ ಜನರೆಲ್ಲ ಎದ್ದು ನಿಂತರು. ಬಜ್ ಹೊಡೆದ ಚಂಡನ್ನು ಹಾಗೆಯೆ ಬಿಟ್ಟು ರ್ಯಾಕೆಟ್ಟನ್ನು ಕೆಳಕ್ಕೆ ಚೆಲ್ಲಿ ವಾನ್ ಕ್ರಾನನ್ ಸಲಾಮು ಕೊಡುವವನಂತೆ ನಿಂತ. ಹಾಗೆಯೆ ಮಾಡಿದ ಬಜ್ ಜೊತೆಗೆ ಕೈಬೀಸಿದ. ಹೀಗೆ ಮಾಡುವುದು ಸಂಪ್ರದಾಯ ವಿರುದ್ಧವಾದ್ದರಿಂದ ಜನ ಏನಾಗುತ್ತದೋ ಎಂದು ಅಸ್ವಸ್ಥರಾದರು. ಆದರೆ ರಾಣಿ ಏನೂ ಮಾಡಲಿಲ್ಲ. ಏನೂ ಹೇಳಲಿಲ್ಲ.

ಮುಂದೆ ಒಂದು ವರ್ಷದ ನಂತರ ಬಜ್ ರಾಣಿಯನ್ನು ಭೆಟ್ಟಿಯಾದಾಗ ರಾಣಿ "ನೀವು ನನ್ನತ್ತ ಕೈಬೀಸಿದ್ದನ್ನು ನಾನು ಕಾಣಲಿಲ್ಲ. ಕಂಡಿದ್ದರೆ ನಾನೂ ಪ್ರತಿಯಾಗಿ ಕೈಬೀಸುತ್ತಿದ್ದೆ" ಎಂದಳು. ಕೈಬೀಸಿದ್ದ ವಿಚಾರವನ್ನು ಅವಳು ಪತ್ರಿಕೆಯಲ್ಲಿ ಓದಿ ತಿಳಿದಿದ್ದಳು. ರಾಣಿಯ ಈ ಉದ್ಗಾರಕ್ಕೆ ಉತ್ತರ ಕೊಡುವಾಗ ಬಜ್ ತನ್ನ ಗೌಪ್ಯವನ್ನು ಕಾಯ್ದಿಟ್ಟುಕೊಂಡೇ ಉತ್ತರವಿತ್ತ. ನಿಜವಾಗಿ ಎಂದರೆ ಆತ ಕೈಬೀಸಿರಲಿಲ್ಲ. ಬೆವೆತ ತನ್ನ ಕೈಯನ್ನು ಹಣೆಗೆ ತಿಕ್ಕಿ ಒರೆಸಿಕೊಳ್ಳುವ ಚಟವಿದ್ದ ಆತ ರಾಣಿ ಬಂದಾಗಲೂ ಹಾಗೆಯೆ ಅಭ್ಯಾಸ ಬಲದಿಂದ ಮಾಡಿದ್ದ. ಜನ ಮಾತ್ರ ಆತ ಅಸಭ್ಯರಂತೆ ಕೈಬೀಸಿದ ಎಂದು ತಿಳಿದುಕೊಂಡಿದ್ದರು.

ವಿಂಬಲ್‌ಡನ್ ಪಂದ್ಯಗಳಲ್ಲಿ ಚ್ಯಾಂಪಿಯನ್ ಆದವನಿಗೆ (ವಿಂಬಲ್‌ಡನ್ ಪಂದ್ಯ ಇದು ವರೆಗೂ ಅಮೆಚ್ಯೂರರ ಪಂದ್ಯವಾಗಿದೆ.) ಪ್ರೊಫೆಶನಲ್ ಆಗುವ ಅವಕಾಶ ಬಾಗಿಲಲ್ಲೆ ಕಾದಿರುತ್ತದೆ. ಪ್ರೊಫೆಶನಲ್ ಆದವರಿಗೆ ಲಕ್ಷ್ಮಿಯೂ ಪ್ರಸನ್ನಳಾಗುತ್ತಾಳೆ. (ಎರಡು ಸಲ ಚ್ಯಾಂಪಿಯನ್‌ಶಿಪ್ ಪಡೆದ ಆಸ್ಟ್ರೇಲಿಯದ ಲ್ಯೂ ಹೋಡ್ ಪ್ರೊಫೆಶನಲ್ ಆಗಿ ಐದು ಲಕ್ಷ ರೂಪಾಯಿ ಗಳಿಸಿದ.)

ಸೋತವರಿಗೆ ಮುಂದಿನ ವರ್ಷ ಪ್ರಯತ್ನ ಮಾಡಬಹುದಲ್ಲ ಎಂಬ ಸಮಾಧಾನ ಸಹಾಯಕ್ಕೆ ಬರುತ್ತದೆ. ಸೋತವರಿಗೂ ಗೆದ್ದವರಿಗೂ ಕೂಡಿಯೆ ಹಿತೋಪದೇಶ ಹೇಳುವ ಒಂದು ಮಾತು ಸೆಂಟರ್ ಕೋರ್ಟಿನ ಬಾಗಿಲ ಮೇಲೆ ಬರೆಯಲ್ಪಟ್ಟಿದೆ:

"ಸೋಲು ಗೆಲುವು ಎಂಬ ಎರಡೂ ಮಿಥ್ಯಾವಾದಿಗಳನ್ನು ನೀವು ಸಮಭಾವದಿಂದ ನೋಡಬಲ್ಲಿರಾದರೆ. . . . ಸರಿ."

ನಿಜ. ವಿಜಯಲಕ್ಷ್ಮಿ ವ್ಯಕ್ತಿಗಾಗಲಿ ದೇಶಕ್ಕಾಗಲಿ ಪತಿವ್ರತೆಯಾಗಿ ಉಳಿಯಲಿಲ್ಲ. ೧೯೦೭ ರಲ್ಲಿ ಆಸ್ಟ್ರೇಲಿಯದ ನಾರ್ಮನ್ ಬ್ರೂಕ್ಸ್ ವಿಂಬಲ್‌ಡನ್ ಪಟ್ಟವನ್ನು ಪಡೆದ ಪ್ರಥಮ ವಿದೇಶೀಯನಾಗಿದ್ದ. ಅಂದಿನಿಂದ ಬ್ರಿಟನ್ನಿಗೆ ಟೆನಿಸ್ ಸಾರ್ವಭೌಮತ್ವ ದೊರೆತದ್ದು ವಿರಳವೇ. ೧೯೨೦ ರಲ್ಲಿ ಅಮೇರಿಕದ ಟಿಲ್‌ಡನ್ ವಿಂಬಲ್‌ಡನ್ ಪಟ್ಟವನ್ನು ಆಸ್ಟ್ರೇಲಿಯನ್ನರಿಂದ ಕಸಿದುಕೊಂಡ. ಅಂದಿನಿಂದ ಆಸ್ಟ್ರೇಲಿಯ, ಅಮೇರಿಕ, ಫ್ರಾನ್ಸ್, ಮತ್ತು ಈಚೆಗೆ ದಕ್ಷಿಣ ಅಮೇರಿಕದ ಆಟಗಾರರು ಹೆಚ್ಚಾಗಿ ವಿಂಬಲ್‌ಡನ್ ಪಟ್ಟವನ್ನು ತಮ್ಮೊಳಗೆ ಕೈಬದಲಿಸಿಕೊಂಡಿದ್ದಾರೆ. ವಿಂಬಲ್‌ಡನ್ ಸೆಮಿಫೈನಲ್ಸ್ ವರೆಗೆ ಬಂದ ಭಾರತೀಯರೆಂದರೆ ಕೃಷ್ಣನ್ ಒಬ್ಬರೇ. ಆದರೆ ಕಳೆದ ವರ್ಷದಂತೆ ಈ ವರ್ಷವೂ ಅವರು ಆ ನಿಟ್ಟಿನಲ್ಲಿ ಸೋತರು.

ವಿಂಬಲ್‌ಡನ್ನಿನಲ್ಲಿ ಪ್ರೊಫೆಶನಲ್ಸ್‌ರಿಗೂ ಅವಕಾಶವಿರಬೇಕು ಎಂದು ಕೆಲ ದೇಶಗಳ ಸೂಚನೆಯಿದೆ. ಈ ಸಲದ ಸ್ಟಾಕ್‌ಹೋಲ್ಮ್‌ನ ಅಂತಾರಾಷ್ಟ್ರೀಯ ಲಾನ್‌ಟೆನಿಸ್ ಫೆಡರೇಶನ್ನಿನ ಸಭೆಯಲ್ಲಿ ಈ ಬಗ್ಗೆ ನಿರ್ಧಾರವಾಗಲಿದೆ. ಹಾಗಾದರೆ ಮಾತ್ರ ಭಾರತದ ರಾಮನಾಥ ಕೃಷ್ಣನ್ನರು ಚ್ಯಾಂಪಿಯನ್ನರಾಗುವ ಆಶೆ ಇಲ್ಲವಾದಂತೆಯೇ ಸರಿ. *

ನಿಮ್ಮನ್ನು ಜನ ಮೆಚ್ಚುತ್ತಾರೆಯೆ?

ಎನ್. ಶ್ರೀಕಂಠಸ್ವಾಮಿ

ನೀವು ಅನೇಕ ವೇಳೆ ನಿಮ್ಮ ಬಗ್ಗೆ ಜನಗಳ ಅಭಿಪ್ರಾಯವೇನು ಎಂಬುದನ್ನು ತಿಳಿಯಲು ಪ್ರಯತ್ನಪಟ್ಟಿರಬಹುದು. ನೀವು ತಿಳಿದುಕೊಂಡಿರುವಷ್ಟು ನೀವು ಒಳ್ಳೆಯವರೂ ಬುದ್ಧಿವಂತರೂ ಆಗಿಲ್ಲದಿರಬಹುದು. ಈ ಕೆಳಗೆ ಕೊಟ್ಟಿರುವ ಪ್ನಶ್ನೆಗಳನ್ನು ಪ್ರಾಮಾಣಿಕವಾಗಿ ಉತ್ತರಿಸಿ. ಕೊನೆಯಲ್ಲಿ ಕೊಟ್ಟಿರುವ ಉತ್ತರಗಳಿಗೆ ತಾಳೆ ನೋಡಿ. ಆಗ ಗೊತ್ತಾಗುತ್ತದೆ, ನೀವು ಜನಗಳ ಕಣ್ಣಿಗೆ ಹೇಗೆ ಕಾಣುತ್ತೀರಿ ಮತ್ತು ಅವರ ಅಭಿಪ್ರಾಯವೇನೆಂದು.

೧. ನಿಮ್ಮ ಗೆಳೆಯರು ಸಂತೋಷ ಕೂಟಗಳನ್ನು ಏರ್ಪಡಿಸಿದಾಗ—
   (ಅ) ನಿಮಗೆ ಮುಂಚಿತವಾಗಿ ತಿಳಿಸದೆ ಕೊನೆಯ ಗಳಿಗೆಯಲ್ಲಿ ಹೇಳಿದರೆ ಸಾಕೆಂದು ಸುಮ್ಮನಿರುತ್ತಾರೊ?...
   (ಆ) ನಿಮ್ಮನ್ನೇ ಜಾಗ, ಕಾಲಗಳ ವಿಚಾರದಲ್ಲಿ ವಿಚಾರಿಸುತ್ತಾರೊ? ....
   (ಇ) ಕಾಲ ಮತ್ತು ಜಾಗಗಳನ್ನು ಗೊತ್ತುಮಾಡಿ ನಿಮ್ಮನ್ನು ಆಮಂತ್ರಿಸುತ್ತಾರೊ? ....

೨. ನಿಮ್ಮನ್ನು ಕಂಡರೆ ಮಕ್ಕಳು—
   (ಅ) ಅಣಕಿಸುತ್ತಾರೊ?....
   (ಆ) ಹೆದರುತ್ತಾರೋ?..
   (ಇ) ಬೇಗ ಹೊಂದಿಕೊಳ್ಳುತ್ತಾರೋ?..

೩. ನೀವು ನಿಮ್ಮ ಸ್ನೇಹಿತರ ಜೊತೆಯಲ್ಲಿ ಜಗಳ ಕಾದು ಮನಸ್ತಾಪಗೊಂಡಿರುವಾಗ—
   (ಅ) ನೀವೇ ಮೊದಲು ಸ್ನೇಹಿತರಲ್ಲಿ ಕ್ಷಮೆ ಕೇಳುತ್ತೀರೋ? ..
   (ಆ) ನಿಮ್ಮ ಸ್ನೇಹಿತರೇ ಕೇಳುತ್ತಾರೋ?..
   (ಇ) ನಿಮ್ಮ ತಪ್ಪಿದ್ದಾಗ ನೀವೂ ಅವರ ತಪ್ಪಿದ್ದಾಗ ಅವರೂ ಕ್ಷಮೆ ಕೇಳುವಿರೊ?..

೪. ಜನರು ನಿಮ್ಮ ಅಭಿಪ್ರಾಯ ಕೇಳಲು—
   (ಅ) ಎಂದೂ ಬರುವುದಿಲ್ಲವೊ? ....
   (ಆ) ಕೆಲ ವೇಳೆ ಬರುತ್ತಾರೋ? ..
   (ಇ) ಅನೇಕ ವೇಳೆ ಬರುತ್ತಾರೋ?..

೫. ನೀವು ಬೀದಿಯಲ್ಲಿ ಹೋದಾಗ ಜನಗಳು—
   (ಅ) ಯಾವಾಗಲೂ ನಿಮ್ಮನ್ನು ನಿಲ್ಲಿಸಿ ಹರಟೆ ಹೊಡೆಯುತ್ತಾರೋ? ..
   (ಆ) ಹರಟೆಗೆ ಬರುವುದೇ ಇಲ್ಲವೋ?..
   (ಇ) ಕೆಲವೊಮ್ಮೆ ಮಾತ್ರ ಹರಟೆ ಹೊಡೆಯುತ್ತಾರೋ? .

೬. ನೀವು ಜನರನ್ನು ಸಂಧಿಸಿದಾಗ—
   (ಅ) ಯಾವಾಗಲೂ ಅವರೇ ಮಾತಾಡುತ್ತಾರೋ? ..
   (ಆ) ನೀವೇ ಮಾತಾಡಿಸುತ್ತೀರೋ?
   (ಇ) ಅವರು ಕೆಲ ವೇಳೆ, ನೀವು ಕೆಲವೇಳೆ ಮಾತಾಡುತ್ತೀರೋ ....


ಹಳದಿ
LUX
Yellow
ಹಸುರು
LUX
Green
ನೀಲಿ
LUX
Blue
ನಸುಗೆಂಪು
LUX
Pink
ಕಾಮನಬಿಲ್ಲಿನ ನಾಲ್ಕು
ಬಣ್ಣಗಳಲ್ಲಿ ನನ್ನ ಲಕ್ಸ್
-ಹೌದು, ಬಿಳಿಬಣ್ಣದಲ್ಲಿ
ಕೂಡ ಇದೆ'
ಎಂದು ಅನ್ನುತ್ತಾಳೆ
ಎಂ. ಎನ್. ರಾಜಂ
LTS. 82-X29 KN
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

೭. ನಿಮ್ಮ ಮೇಲಧಿಕಾರಿಗಳು ನಿಮಗೆ ಕೆಲಸ ಹೇಳಬೇಕಾದಾಗ—

(ಅ) ಅಪ್ಪಣೆ ಕೊಡುತ್ತಾರೊ? ....

(ಆ) ಆ ಕೆಲಸದ ಬಗ್ಗೆ ನಿಮ್ಮ ಅಭಿಪ್ರಾಯ ಕೇಳುತ್ತಾರೊ? ....

(ಇ) ಆ ಕೆಲಸ ಮಾಡಲು ಹಸನ್ಮುಖದಿಂದ ಹೇಳುತ್ತಾರೊ? ....

೮. ನೀವು ಸಾಲಿನಲ್ಲಿ ನಿಂತಿರುವಾಗ ನಿಮ್ಮ ಹಿಂದೆ ನಿಂತವರು ನಿಮ್ಮ ಮುಂದೆ ಬಂದು ನಿಂತರೆ—

(ಅ) ನೀವು ಸುಮ್ಮನಿರುತ್ತೀರೋ? ....

(ಆ) ಅವರಿಗೆ ಹಿಂದೆ ನಿಲ್ಲಲು ಹೇಳುತ್ತೀರೋ? ....

(ಇ) ನೀವು ಸುಮ್ಮನೆ ಅವರ ಮುಂದೆ ಹೋಗಿ ನಿಲ್ಲುತ್ತೀರೋ? ....

೯. ನೀವು ಅಂಗಡಿಗೆ ಹೋದಾಗ ಅಲ್ಲಿಯ ಕೆಲಸಗಾರರು—

(ಅ) ನಿಮ್ಮನ್ನು ಕಾಯಿಸುತ್ತಾರೋ? ...

(ಆ) ತತ್‌ಕ್ಷಣ ಸಾಮಾನುಗಳನ್ನು ಕೊಡುತ್ತಾರೊ? . . .

(ಇ) ಆಯಾ ಅಂಗಡಿಯವರ ಮೇಲೆ ಹೊಂದಿರುತ್ತದೊ? . . . .

ಈಗ ಪ್ರತಿ ಪ್ರಶ್ನೆಯಲ್ಲಿಯೂ (೧) "ಆ" ಕ್ಕೆ ನೀವು ಕೊಡುವ ಉತ್ತರ "ಹೌದು" ಎಂದಿದ್ದರೆ ಅಂಥ ಪ್ರತಿಯೊಂದು "ಹೌದು" ಗೆ ೩ ಗುಣಗಳನ್ನು (೨) "ಇ" ಕ್ಕೆ ನೀವು ಕೊಡುವ ಉತ್ತರ "ಹೌದು" ಎಂದಿದ್ದರೆ ಅದಕ್ಕೆ ೨ ಗುಣಗಳನ್ನು (೩) "ಅ" ಕ್ಕೆ ಉತ್ತರ "ಹೌದು" ಎಂದಾಗಿದ್ದಲ್ಲೆಲ್ಲ ೧ ಗುಣವನ್ನೂ ಹಾಕಿರಿ.

ನಿಮಗೆ ೨೧ ರಿಂದ ೨೭ ಗುಣ ಬಿದ್ದರೆ ಜನರಿಗೆ ನಿಮ್ಮ ಮೇಲೆ ಬಹಳ ಗೌರವ, ಏನೋ ಒಂದು ತರದ ಭಯ ಕೂಡ; ನಿಮ್ಮಿಂದ ಸಾಧ್ಯವಾದಷ್ಟು ದೂರ ಇರಲು ಯತ್ನಿಸುತ್ತಾರೆ.

೧೪ ರಿಂದ ೨೦ ರ ವರೆಗೆ ಗುಣ ಬಿದ್ದರೆ ನಿಮ್ಮನ್ನು ಜನ ಮೆಚ್ಚುತ್ತಾರೆ ನೀವು ಎಲ್ಲರಿಗೂ ಬೇಕಾದ ಜನ. ನಿಮ್ಮನ್ನು ನಂಬುತ್ತಾರೆ. ನಿಮ್ಮ ಸಲಹೆಗಳಿಗೆ ಬೆಲೆ ಕೊಡುತ್ತಾರೆ.

೧೪ ಕ್ಕಿಂತ ಕಡಿಮೆ ಗುಣವಿದ್ದರೆ ನೀವು ನಿಷ್ಪ್ರಯೋಜಕರೆಂದು ಜನರ ಭಾವನೆ. ಹೇಳಿದ ಹಾಗೆ ಕೇಳುತ್ತೀರಿ. ಆದರೆ ಒಂದು ಒಳ್ಳೇ ಗುಣ ಇದೆ. ಯಾವಾಗಲೂ ಗೊಣಗುವುದಿಲ್ಲ. ★

ವಯಸ್ಸಾದರೇ ಬುದ್ಧಿ ಪರಿಪಕ್ವವಾಗುವುದು. ಶ್ರೀಗಂಧದ ಗಿಡ ಸಣ್ಣದಿದ್ದಾಗ ಸುವಾಸನೆ ಬೀರುವುದಿಲ್ಲ.

* *

ಪತಿವ್ರತೆಯ ಕುಚಗಳು, ಹುಲಿಯ ಉಗುರುಗಳು, ವೀರನ ಕೈಯಲ್ಲಿನ ಖಡ್ಗ, ಲೋಭಿಯ ದುಡ್ಡು, ಇವೆಲ್ಲವೂ ಅವರು ಸತ್ತ ನಂತರವೇ ದೊರಕುವುವು.

* *

ಹೆಂಡತಿ– ಹಣ ಮಾತಾಡುತ್ತದೆ ಎನ್ನುತ್ತಾರೆ, ನಿಜವೆ?

ಗಂಡ– ನಿಜ.

ಹೆಂಡತಿ– ಹಾಗಿದ್ದರೆ ಆಫೀಸಿಗೆ ಹೋಗುವಾಗ ಮನೆಯಲ್ಲಿ ಒಂದಿಷ್ಟು ಹಣ ಇಟ್ಟು ಹೋಗಿ. ಮನೆಯಲ್ಲಿ ಒಬ್ಬಳೆ ಇದ್ದು ಬೇಜಾರಾಗುತ್ತದೆ.

ಮದ್ದಾನೆಯೊಡನೆ ಸೆಣಸಾಟ

ಒಂದು ಅಪಾಯಕರ ಆಟದ ರೋಮಾಂಚಕ ವಿವರಣೆ

ಕೃ. ರಾ. ದೇಸಾಯಿ

ಬಯಲಿನಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಿರುವ ಮದಗಜವನ್ನು ಭರ್ಚಿಯಿಂದ ಚುಚ್ಚಿ ರೊಚ್ಚಿಗೆಬ್ಬಿಸುವುದು, ಅದರ ಸೊಂಡಿಲಿನ ಹತ್ತಿರ ಅರಿವೆಯನ್ನು ಅಲ್ಲಾಡಿಸಿ ಅದು ತಮ್ಮ ಮೇಲೆ ಕೋಪಾತಿರೇಕದಿಂದ ನುಗ್ಗಿಬರುವಂತೆ ಮಾಡುವುದು, ಸಿಟ್ಟಿಗೆದ್ದು ಮನುಷ್ಯರನ್ನು ಕೊಲ್ಲಲು ಧಾವಿಸುತ್ತಿರುವ ಆನೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಬಯಲಿನಲ್ಲಿ ಅಲ್ಲಲ್ಲಿ ರಚಿಸಿರುವ ಬುರುಜುಗಳಲ್ಲಿ ಹೊಕ್ಕು ಅದರ ಇನ್ನೊಂದು ಮಗ್ಗಲಿಂದ ಹೊರಬಿದ್ದು ಪುನಃ ಆನೆಯನ್ನು ಕೆಣಕುವುದು- ಈ ಸಾಹಸದ ಆಟಕ್ಕೆ "ಸಾಠ-ಮಾರಿ" ಎಂದು ಹೆಸರಿದೆ.

ಆನೆಗೆ ಮದವೇರಿದಾಗ ಮಾತ್ರವೇ ಸಾಠ-ಮಾರಿ ಆಟವನ್ನಾಡುವರು. ಸಾಮಾನ್ಯವಾಗಿ ಆನೆಗಳಿಗೆ ಮದವೇರುವುದು ಮಾರ್ಚ್, ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ. ಆನೆಯ ಎರಡೂ



ಕಿವಿಗಳ ಮೇಲ್ಭಾಗದಲ್ಲಿ ಮಸ್ತಕದ ವರೆಗೆ ಹೋಗುವ ಎರಡು ಸಣ್ಣ ರಂಧ್ರಗಳಿವೆ. ಈ ರಂಧ್ರಗಳಿಂದ ಜೇನುತುಪ್ಪದಂಥ ಜಿಡ್ಡು-ಪದಾರ್ಥ ಹೊರಗೆ ಹರಿಯತೊಡಗಿದರೆ ಆನೆಗೆ ಮದವೇರಿದೆ ಎಂದು ತಿಳಿಯುತ್ತಾರೆ. ಮದವೇರಿದಾಗ ಆನೆ ಸಿಡುಕಿನ ಸ್ವಭಾವದ್ದಾಗುತ್ತದೆ ಆಗ ಅದು ತನ್ನ ಮಾವುತ, ಒಡೆಯ ಯಾರನ್ನೂ ಗುರುತಿಸುವುದಿಲ್ಲ. ಮದವೇರಿದ ಆನೆ ತುಂಬ ಅಪಾಯಕಾರಿಯಾಗಿರುತ್ತದೆ.

ಸಾಠಮಾರಿ ಆಟಕ್ಕಾಗಿ ಮದವೇರಿರುವ ಆನೆಯನ್ನು ಸುತ್ತಲೂ ಗೋಡೆಯಿರುವ ಬಯಲಲ್ಲಿ ತಂದು ಬಿಟ್ಟು ಬಾಗಿಲನ್ನು ಅದು ಮುರಿಯದಂತೆ ಗರ್ಡರ್ಸ್ ಹಾಕಿ ಭದ್ರವಾಗಿಸುತ್ತಾರೆ. ಮದವೇರಿದ ಆನೆಗೆ ತುಂಬ ಪೌಷ್ಟಿಕವಾದ ಆಹಾರವನ್ನು ಕೊಡುವುದು ವಾಡಿಕೆ. ಹೀಗೆ ಪೌಷ್ಟಿಕ ಆಹಾರವನ್ನು ಕೊಟ್ಟರೆ ಮಾತ್ರ ಆನೆ ಮುಂದೆ ಸಶಕ್ತವಾಗಿ ಉಳಿದು ದೀರ್ಘಾಯುಷಿಯಾಗುತ್ತದೆ. ಆನೆಯ ಮದ ಸುಮಾರು ನಾಲ್ಕು ತಿಂಗಳ ಕಾಲವಿದ್ದು ಮಳೆಗಾಲ ಆರಂಭವಾದೊಡನೆ ಇಳಿಯತೊಡಗುತ್ತದೆ.

ಬಡೋದೆಯ ಮಹಾರಾಜ ಕೈ. ಸರ್ ಸಯಾಜಿರಾವ್ ಅವರು ಬಡೋದೆಯಲ್ಲಿ, ಆಮೇಲೆ ಕೊಲ್ಹಾಪುರದ ಛತ್ರಪತಿ ಕೈ. ರಾಜರ್ಷಿ ಶಾಹು ಮಹಾರಾಜರು ಕೊಲ್ಹಾಪುರದಲ್ಲಿ ಆನೆಯ ಸಾಠಮಾರಿ ಆಟವನ್ನಾರಂಭಿಸಿದರು. ಇದಕ್ಕಾಗಿಯೆ ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಸಾಠಮಾರಿ ಬಯಲುಗಳನ್ನು ಕಟ್ಟಿಸಿದರು. ಈ ಬಯಲುಗಳಿಗೆ "ಆಗಡ" ಎಂಬ ಹೆಸರಿದ್ದು ಕೊಲ್ಹಾಪುರ, ರುಕಡಿ, ಸೋನ್ನಳಿ, ರಾಧಾನಗರಿ, ಶೇಡಬಾಳ ಮತ್ತು ರಾಯಬಾಗಗಳಲ್ಲಿ "ಆಗಡ"ಗಳು ಕಟ್ಟಲ್ಪಟ್ಟವು. ಕೊಲ್ಹಾಪುರದಲ್ಲಿ ರಾವಣೇಶ್ವರ ಕೆರೆಯ ಮಗ್ಗಲಲ್ಲಿ ಇರುವ 'ಆಗಡ' (ಈಗ ಶಾಹೂ ಸ್ಟೇಡಿಯಂ) ವೇ ಇವುಗಳಲ್ಲಿ ದೊಡ್ಡದು.

"ಆಗಡ"ದ ಸುತ್ತ ಇರುವ ಗೋಡೆ ಅತಿ ಗಟ್ಟಿಯಾದ ಕಲ್ಲುಗಳಿಂದ ಕಟ್ಟಲ್ಪಟ್ಟು ೨೦ ಅಡಿ ಎತ್ತರದ್ದಾಗಿರುತ್ತದೆ. ಬಯಲಿನಲ್ಲಿ ಅಲ್ಲಲ್ಲಿ ಎಂಟು ಅಡಿ ಎತ್ತರದ ಬುರುಜುಗಳನ್ನು ಕಟ್ಟುತ್ತಾರೆ ಈ ಬುರುಜುಗಳಿಗೆ ಮೇಲ್ಭಾವಣಿಯಿರುವುದಿಲ್ಲ. ಒಬ್ಬನೇ ಒಬ್ಬ ಮನುಷ್ಯ ಒಳಗೆ ಪ್ರವೇಶಿಸಲು ಬರುವಂಥ ಬಾಗಿಲು ಇದಕ್ಕಿರುತ್ತದೆ.

ಆನೆ ಈ ಮಾರ್ಗದಿಂದ ಒಳಗೆ ಹೋಗಲಾರದು. ಆದರೆ ಬುರುಜಿನ ಮೇಲಿಂದ ಸೊಂಡಿಲನ್ನು ಒಳಗಿಳಿಸಿ ಒಳಗಿರುವ ಮನುಷ್ಯನನ್ನು ಮೇಲಕ್ಕೆತ್ತಿಕೊಳ್ಳಲು ಅದಕ್ಕೆ ಬರುತ್ತದೆ. ಆನೆಯನ್ನು ಪೀಡಿಸಿ, ಅದು ಮೈಮೇಲೇರಿ ಬಂದಾಗ ಅದರಿಂದ ಪಾರಾಗಲು ಮನುಷ್ಯ ಬುರುಜಿನೊಳಗೆ ಓಡುತ್ತಾನೆ. ಅವನನ್ನು ಬೆನ್ನಟ್ಟಿ ಬಂದ ಆನೆ ಒಳಗೆ ಹೋಗಲಾರದೆ ಮೇಲಿನಿಂದ ಸೊಂಡಿಲನ್ನು ಇಳಿಸಿ ಅವನನ್ನು ಹಿಡಿಯುವ ಪ್ರಯತ್ನ ಮಾಡುತ್ತದೆ. ಒಳಗೆ ಹೋದ ಮನುಷ್ಯ ಹೊಕ್ಕ ಬಾಗಿಲಿಂದಲೇ ತಿರುಗಿಬಂದು ಆನೆಯ ಕಾಲ ಕೆಳಗೆ ನುಸುಳಿ ಹೊರಬಿದ್ದು ಅಥವಾ ಬುರುಜಿನ ಇನ್ನೊಂದು ಬದಿ ಇರುವ ಬಾಗಿಲಿಂದ ಹೊರಬಿದ್ದು ಬಂದು ಮತ್ತೆ ಆನೆಯನ್ನು ಪೀಡಿಸತೊಡಗುತ್ತಾನೆ. ಒಳಗೆ ಹೋದಾತ ಆನೆಯ ಮುಖದೆದುರು ಇರುವ ಬಾಗಿಲಿಂದ ಎಂದೂ ಹೊರಬೀಳುವುದಿಲ್ಲ. ಎಡ ಅಥವಾ ಬಲ ಬದಿಯ ಬಾಗಿಲಿಂದಲೇ ಹೊರಬೀಳುತ್ತಾನೆ. ಏಕೆಂದರೆ ಆನೆ ಒಮ್ಮೆಲೆ ಒಂದು ಪಕ್ಕಕ್ಕೆ ಹೊರಳಲಾರದು. ಎದುರಿನ ಬಾಗಿಲಿಂದ ಹೊರಗೆ ಬಿದ್ದರೆ ಆನೆಯ ಕೈಗೆ ಸಿಕ್ಕಿಬೀಳುವ ಸಂಭವವಿರುತ್ತದೆ. ಆನೆ ಮನುಷ್ಯನಿಗಿಂತಲೂ ಎಷ್ಟೋ ಪಟ್ಟು ಅಧಿಕ ವೇಗದಿಂದ ನಡೆಯಬಲ್ಲದು. ಅಂತೆಯೆ ಬುರುಜನ್ನು ವೃತ್ತಾಕಾರವಾಗಿ ಕಟ್ಟಿ ಅದಕ್ಕೆ ಮುಂದೆ, ಹಿಂದೆ, ಅಕ್ಕ-ಪಕ್ಕದಲ್ಲಿ ನಾಲ್ಕು ಕಿರಿದಾದ ಬಾಗಿಲು

ಗಳನ್ನು ಇಟ್ಟಿರುತ್ತಾರೆ. ಬಯಲಿನ ಸುತ್ತ ಇರುವ ಗೋಡೆಗಳಲ್ಲಿಯೂ ಆನೆಯಿಂದ ರಕ್ಷಿಸಿಕೊಳ್ಳಲೆಂದು ಇದೇ ಮಾದರಿಯ ಬಾಗಿಲುಗಳನ್ನು ಇಟ್ಟಿರುತ್ತಾರೆ.

ಬೆನ್ನಟ್ಟಿ ಬರುವ ಆನೆಯಿಂದ ರಕ್ಷಿಸಿಕೊಳ್ಳಲು ಮನುಷ್ಯ ಬುರುಜಿನೊಳಗೆ ಓಡುವಾಗ ಮೊದಲು ತಾನು ಒಳ ಹೊಕ್ಕು ಆ ಮೇಲೆ ಭರ್ಚಿಯನ್ನು ಒಳಗೆಳೆದುಕೊಳ್ಳುತ್ತಾನೆ. ಭರ್ಚಿಯನ್ನು ಮುಂದೆ ಹಿಡಿದುಕೊಂಡು ಪ್ರವೇಶಿಸಿದರೆ ಗಡಿಬಿಡಿಯಲ್ಲಿ ಅದು ಆತಂಕವನ್ನೊಡ್ಡಬಹುದಾಗಿದೆ. ಸಾಠಮಾರಿ ಆಟದಲ್ಲಿ ಇದೊಂದು ಅಗತ್ಯವಾದ ತಂತ್ರವಾಗಿದೆ. ಇದರಂತೆ ಇನ್ನೂ ಒಂದು ಮಾತನ್ನು ಆಟಗಾರ ನೆನಪಿಡಬೇಕಾಗುವುದು. ಆನೆಯ ಎದುರು ನಿಂತು ಅರಿವೆಯನ್ನು ಅಲ್ಲಾಡಿಸುವಾಗ ಆತ ಅದರ ಸೊಂಡಿಲಿಗೆ ನಿಲುಕದಷ್ಟು ದೂರವಿರಬೇಕಾಗುವುದು. ಓಡುವ ಆನೆಗೂ ತನಗೂ ಇರುವ ಈ ಅಂತರವನ್ನು ಸದಾ ಕಾಯ್ದುಕೊಳ್ಳುವುದೇ ಸಾಠಮಾರಿ ಆಟಗಾರನ ಕೌಶಲ್ಯ. ಈ ಅಂತರವನ್ನು ಕಾಯ್ದುಕೊಂಡಿರುವವರೆಗೆ ಅವನಿಗೆ ಯಾವ ಗಂಡಾಂತರವೂ ಇಲ್ಲ.

ಸಾಠಮಾರಿಗಾಗಿ ಹದಿನೈದು ಜನರ ಒಂದು ತಂಡ ಬೇಕಾಗುತ್ತದೆ. ಈ ಹದಿನೈದು ಜನರಲ್ಲಿ ಎಂಟು ಜನ ಭರ್ಚಿಯವರು. ಇಬ್ಬರು ಅರಿವೆಯವರು, ಇಬ್ಬರು ಇಕ್ಕಳದವರು, ಇಬ್ಬರು ಹಿಲಾಲಿನವರು, ಒಬ್ಬ ಬಂದೂಕುಧಾರಿ ಇರುತ್ತಾರೆ. ಇವರೆಲ್ಲರೂ ಸಮವಸದಲ್ಲಿರುತ್ತಾರೆ. ಚೂಡಿದಾರಪೈಜಾಮಾ, ಪೈಲವಾನರು ತೊಡುವಂಥ ಶರ್ಟು, ಕಿಸೆಗಳಿಗೆ ಕಪ್ಪು ಅಂಚು ಇರುವ ಜಾಕೀಟು, ತಲೆಗೆ ಪೇಟಾ ಇವೇ ಇವರ ಸಮವಸ್ತ್ರ. ಭರ್ಚಿಯವರು ಆನೆಯನ್ನು ಇರಿದು, ಅರಿವೆಯವರು ಅರಿವೆಯನ್ನು ಆನೆಯ ಎದುರು ಅಲ್ಲಾಡಿಸಿ ಅದನ್ನು ರೊಚ್ಚಿಗೆಬ್ಬಿಸುತ್ತಾರೆ. ಅರಿವೆಯವರು "ವಸ್ತಾದ"ರು, ಅಂದರೆ ಈ ಆಟಗಾರರ ಶಿಕ್ಷಕರೇ ಆಗಿರುವುದು ಹೆಚ್ಚು. ಇಕ್ಕಳದವರು, ಬಂದೂಕಿನವ ಮತ್ತು ಹಿಲಾಲಿನವರು ಆಟಗಾರರನ್ನು ಆನೆಯಿಂದ ರಕ್ಷಿಸುವುದಕ್ಕಾಗಿ ಇರುತ್ತಾರೆ. ಅರಿವೆಯವನನ್ನು ಆನೆ ಅಟ್ಟಿಕೊಂಡು ಬಂದಾಗ ಆತನಿಗೆ ಬುರುಜಿನೊಳಗೆ ಪ್ರವೇಶಿಸುವುದು ಸಾಧ್ಯವಾಗದೆ ಆತ ಆನೆಯ ಕೈಗೆ ಸಿಗುವ ಪ್ರಸಂಗ ಬಂದರೆ ಇಕ್ಕಳದವರು ತಮ್ಮ ಸ್ಪ್ರಿಂಗಿನ ಇಕ್ಕಳದಿಂದ ಆನೆಯ ಹಿಂಗಾಲುಗಳನ್ನು ಹಿಡಿಯುವರು. ಹಿಲಾಲಿನವ ಹಿಲಾಲನ್ನು ಹೊತ್ತಿಸಿ ಆನೆಯ ಎದುರು ಹೊಗೆ ತುಂಬುವಂತೆ ಮಾಡುವನು. ಬಂದೂಕಿನವ ಹುಸಿಗುಂಡು ಹಾರಿಸಿ ಆನೆಯನ್ನು ಹೆದರಿಸುವನು. ಇವೆಲ್ಲವುಗಳಿಂದ ಆನೆಯ ಕೈಯಿಂದ ಅರಿವೆಯವ ಪಾರಾಗಲು ಸಾಧ್ಯವಾಗುವುದು.

ಇಲ್ಲಿ ಉಪಯೋಗಿಸುವ ಭರ್ಚಿ ತುಂಬ ಗಟ್ಟಿಯಾದ ಕಟ್ಟಿಗೆಯದಿರುತ್ತದೆ. ತುದಿಗೆ ಕಬ್ಬಿಣದ ಮುಖ ಕೂಡ್ರಿಸಿರುವ ಈ ಭರ್ಚಿ ಕಲ್ಲಿನಂಥ ಗಟ್ಟಿ ಪದಾರ್ಥದ ಮೇಲೆ ಪ್ರಹಾರ ಮಾಡಿದಾಗ ಕೂಡ ಮಣಿಯುವುದೇ ವಿನಾ ಮುರಿಯುವುದಿಲ್ಲ.

ಉಪಯೋಗಿಸುವ ಅರಿವೆ ಮೂರು ಅಡಿ ಅಗಲ, ಐದಾರು ಅಡಿ ಉದ್ದದ ಯಾವುದಾದರೂ ಬಣ್ಣದ ರೇಶಿಮೆ ಅರಿವೆಯಾಗಿರುತ್ತದೆ.

ಹಿಲಾಲೆಂದರೆ ಹೊಗೆಯೆಬ್ಬಿಸುವ ಮದ್ದು ಇರುವ ಒಂದು ಉಪಕರಣ. ಈ ಮದ್ದಿಗೆ ಬೆಂಕಿ ಹತ್ತಿಸಿದಾಗ ವಿಪರೀತ ಹೊಗೆಯೆದ್ದು ಆನೆಗೆ ಮುಂದಿರುವುದು ಏನೂ ಕಾಣಿಸದಂತಾಗುತ್ತದೆ.

ಇಕ್ಕಳ ಅಡಿಗೆ ಮನೆಯಲ್ಲಿ ಒಲೆಯ ಮೇಲಿನ ಪಾತ್ರೆಗಳನ್ನು ಇಳಿಸಲು ಉಪಯೋಗಿಸುವ ಇಕ್ಕಳದ ಮಾದರಿಯದೇ ಇರುತ್ತದೆ. ಆದರೆ ಆನೆಯ ಕಾಲುಗಳನ್ನು ಹಿಡಿಯಬಹುದಾದಷ್ಟು ದೊಡ್ಡದಿರುತ್ತದೆ. ಹಿಡಿಕೆಯಲ್ಲಿ ಸ್ಪ್ರಿಂಗ್ ಇರುತ್ತದೆ. ಇಕ್ಕಳಕ್ಕೆ ಹರಿತವಾದ ಹಲ್ಲುಗಳು ಇರುತ್ತವೆ.

ಬಂದೂಕಿನ ಸಪ್ಪಳಕ್ಕೆ ಆನೆ ತುಂಬ ಅಂಜುವುದರಿಂದ ಪ್ರಸಂಗದಲ್ಲಿ ಅದನ್ನು ಅಂಜಿಸಲೆಂದು

ಬಂದೂಕಿನವನೂ ಇರುತ್ತಾನೆ.

ಸಾಠಮಾರಿ ನಡೆಯುವ ದಿನ ಬಯಲಿನಲ್ಲಿ ಒಂದೇ ಒಂದು ಸಣ್ಣ ಕಲ್ಲು ಕೂಡ ಇರದಂತೆ ಸ್ವಚ್ಛ ಮಾಡಿರುತ್ತಿದ್ದರು. ಆನೆಯನ್ನು ಪೀಡಿಸಿ ಓಡುವಾಗ, ಕಲ್ಲಿನ ಮೇಲೇನಾದರೂ ಕಾಲು ಇಟ್ಟು ಜಾರಿ ಮನುಷ್ಯ ಕೆಳಗೆ ಬಿದ್ದನೆಂದರೆ ಅವನ ಗತಿ ಮುಗಿದಂತೆಯೆ. ಆದ್ದರಿಂದ ಬಹು ದಕ್ಷತೆಯಿಂದ ಬಯಲನ್ನು ಉಡುಗಿ ಸ್ವಚ್ಛ ಮಾಡುತ್ತಿದ್ದರು.

ಕೈ. ಶಾಹು ಮಹಾರಾಜರು ಸಾಠಮಾರಿಗಾಗಿ "ಪಿಲ ಖಾನಾ" ಎಂಬ ಹೆಸರಿನಿಂದ ಒಂದು ಸ್ವತಂತ್ರ ಖಾತೆಯನ್ನೇ ನಿರ್ಮಿಸಿದ್ದರು. ಆನೆಯ ಸಕಲ ವ್ಯವಸ್ಥೆಯನ್ನು ಈ ಖಾತೆ ನೋಡಿಕೊಳ್ಳುತ್ತಿತ್ತು. ಸಾಠಮಾರಿ ಆಟಗಾರರ ಊಟೋಪಚಾರ, ಅರಿವೆ ಅಂಚಡಿಗಳ ವ್ಯವಸ್ಥೆಯನ್ನು ಮಾಡುತ್ತಿತ್ತು. ಅವರ ಸಂಬಳವನ್ನು ಅವರ ಮನೆಯವರಿಗೆ ಮುಟ್ಟಿಸುತ್ತಿದ್ದರು. ಸಾಠಮಾರಿ ಆಟದ ದಿನ ೧೧ ಗಂಟೆಗೆ ಅವರಿಗೆ ಅವರ ಇಷ್ಟ ಭೋಜನವನ್ನು ಮಾಡಿಸುತ್ತಿದ್ದರು. ಆ ಮೇಲೆ ೨-೨॥ ತಾಸು ವಿಶ್ರಾಂತಿ ಪಡೆದು ಆಟಗಾರರು ತಂತಮ್ಮ ಧರ್ಮಕ್ಕನುಗುಣವಾಗಿ ಪರಮಾತ್ಮನನ್ನು ಪ್ರಾರ್ಥಿಸಿಕೊಂಡು ಸಮವಸ್ತ್ರ ಧರಿಸಿ ಶಸ್ತ್ರ ಸಜ್ಜಿತರಾಗಿ ಕಣಕ್ಕಿಳಿಯುತ್ತಿದ್ದರು.

ಮಹಾರಾಜರು ಬಯಲಿಗೆ ಬಂದ ಮೇಲೆ ಆಟ ಆರಂಭವಾಗುತ್ತಿತ್ತು.

ಎಂಥೆಂಥ ಮಹಾ ವೃಕ್ಷಗಳನ್ನೂ ಉರುಳಿಸಬಲ್ಲ ಪ್ರಚಂಡ ಶಕ್ತಿಯ ಆನೆಗೆ ಚಿಕ್ಕ ಪುಟ್ಟ ಬುರುಜಗಳ ಹಂಗೇನು ಎನಿಸುವುದು ಸಹಜವಾದರೂ ಇಲ್ಲಿ ಒಂದು ಗುಟ್ಟಿದೆ. ಆನೆ ಒಂದು ಡಿಕ್ಕಿ ಹೊಡೆದರೆ ಇವು ಉರುಳಿ ಬೀಳಬಹುದು ನಿಜ. ಆದರೆ ತಾನು ಡಿಕ್ಕಿಹೊಡೆದಾಗ ತನ್ನ ದಂತ ಮುರಿದು ಹೋದೀತೆಂಬ ಭಯದಿಂದ ಆನೆ ಬುರುಜಿಗೆ ಡಿಕ್ಕಿಹೊಡೆಯುವುದಿಲ್ಲ. ಆನೆಯ ಈ ದೌರ್ಬಲ್ಯವೇ ಬುರುಜುಗಳಲ್ಲಿ ಹೊಕ್ಕ ಮನುಷ್ಯನನ್ನು ರಕ್ಷಿಸುತ್ತದೆ. ಮತ್ತೆ ಸಾಠಮಾರಿ ಆಟಗಾರರು ಆನೆಗೆ ಒಂದು ನಿಮಿಷವೂ ಯೋಚಿಸುವ ಅವಕಾಶ ಸಿಗದಂತೆ ಪೀಡಿಸುವುದರಿಂದ ಅದು ಹುಚ್ಚು ಆವೇಶದಿಂದ ಪೀಡಿಸುವವರನ್ನು ಕೊಲ್ಲಲೆತ್ನಿಸುವುದೇ ವಿನಾ ಯೋಜಿತ ರೀತಿಯಿಂದಲ್ಲ.

ಆನೆ ಮತ್ತು ಆಟಗಾರರು ದಣಿದು ಸುಣ್ಣವಾಗುವವರೆಗೆ ಆಟ ನಡೆಯುತ್ತಿತ್ತು.

ಸಾಮಾನ್ಯವಾಗಿ ಈ ಆಟದಲ್ಲಿ ಮನುಷ್ಯ ಬಲಿಯಾದದ್ದು ಬಹುಕಡಿಮೆ. ಆದರೂ ಒಮ್ಮೆ ಒಂದು ದುರ್ಘಟನೆ ನಡೆಯಿತು. ಕೊಲ್ಹಾಪುರದಿಂದ ನಾಲ್ಕು ಮೈಲು ದೂರದಲ್ಲಿರುವ ಸೋನಕಳಿ ರಜಪೂತವಾಡಿಯಲ್ಲಿ ಸಾಠಮಾರಿ ನಡೆಯಿತು. ಅಲ್ಲಿ ಮೌಲಾ ಬಕ್ಷ ಎಂಬ ಆನೆಗೆ ಮದವೇರಿತ್ತು. ಸಾಠಮಾರಿ ಆಟ ಮುಗಿಯುತ್ತ ಬಂದಿತ್ತು. ಆಟ ನಿಲ್ಲಿಸುವ ಬಿಗಿಲು ಊದಿದರು. ಆಟಗಾರರು ಸಮೀಪದ ಹಾದಿಯಿಂದ ಬಯಲಿನ ಹೊರಗೆ ಬರತೊಡಗಿದರು. ವಸ್ತಾದ ಶದ್ದಿ ಬಾದಶಾಹ ಕೂಡ ಇತರರ ಜೊತೆಯಲ್ಲಿ ಹೊರ ಬರುತ್ತಲಿದ್ದ. ಅಂದು ಆತ ಮೌಲಾ ಬಕ್ಷನನ್ನು ತುಂಬ ಪೀಡಿಸಿದ್ದ.

ಮಂದಗತಿಯಿಂದ ಹೊರಟಿದ್ದ ಶದ್ದಿ ಬಾದಶಾಹನನ್ನು ಕಂಡು ಅವನ ಮೇಲೆ ರೊಚ್ಚಿಗೆದ್ದಿದ್ದ ಆನೆ ಓಡಿಬಂತು. ಆನೆಯ ಪಾದಗಳು ಮೃದುವಾಗಿರುವುದರಿಂದ ಅದು ಓಡಿದರೂ ಹೆಜ್ಜೆಯ ಸಪ್ಪಳ ಕೇಳಿಸುವುದಿಲ್ಲ. ಆನೆ ತೀರ ಸಮೀಪ ಬಂದರೂ ಶದ್ದಿ ಬಾದಶಾಹನಿಗೆ ಅದರ ಸುಳಿವು ಹತ್ತಲಿಲ್ಲ. ಆದರೆ ಆನೆಯನ್ನು ನೋಡಿದವರು "ಆನೆ ಬಂತು ವಸ್ತಾದ" ಎಂದು ಕೂಗಿದರು. ಶದ್ದಿ ಬಾದಶಾಹ ಆನೆ ಎಲ್ಲಿ ಎಂದು ನೋಡಲು ತಿರುಗಿನಿಂತ.

ಅದೇ ಪ್ರಮಾದವಾಯಿತು. ಆತ ತಿರುಗಿ ನೋಡದೆ ಮುಂದೆ ಓಡಿ ಬುರುಜನ್ನು ಹೊಕ್ಕಿದ್ದರೆ ಉಳಿದುಕೊಳ್ಳುತ್ತಿದ್ದ. ಆದರೆ ತಿರುಗಿ ನೋಡಿದ ಆ ಒಂದು ಕ್ಷಣ ಸಾಕಾಯಿತು. ಆನೆ ತನ್ನ


ಸೊಂಡಿಲಿನಿಂದ ಅವನನ್ನು ಸುತ್ತಿ ಮೇಲೆತ್ತಿತು.

ಮತ್ತೆ ಬಿಗಿಲು ಊದಿತು. ಎಲ್ಲ ಸಾಠಮಾರಿ ಆಟಗಾರರೂ ಮತ್ತೆ ಓಡಿ ಬಂದರು. ಅವರು ಭರ್ಚಿಯಿಂದಿರಿದು, ಇಕ್ಕಳ ಬೀಸಿ ಹಿಲಾಲು ಹೊತ್ತಿಸಿ ಬಂದೂಕು ಹಾರಿಸಿ ಕೋಲಾಹಲ ವೆಬ್ಬಿಸಿದರು. ಹೆದರಿದ ಆನೆಯ ಸೊಂಡಿಲಿಂದ ವಸ್ತಾದನನ್ನು ಹೊರತೆಗೆದರು.

ಆದರೆ ಆನೆಯ ಸೊಂಡಿಲಿನ ಬಲವಾದ ಅಪ್ಪುಗೆಯಿಂದ ಶದ್ದಿ ಬಾದಶಾಹನ ಎದೆಯ ಎಲುವು ಮುರಿದಿದ್ದವು. ಆತ ದವಾಖಾನೆಯಲ್ಲಿ ಪ್ರಾಣ ನೀಗಿದ.

ಸಾಠಮಾರಿ ಆಟ ಧೀರರ ಆಟ. ಆದರೆ ಈಗ ಅದು ಗತಕಥೆಯಾಗಿದೆ. ಮನುಷ್ಯನ ಪೌರುಷವನ್ನು ಹೆಚ್ಚಿಸುವ ಇಂಥ ಆಟಗಳು ಸ್ವತಂತ್ರ ಭಾರತದಲ್ಲಿ ನಡೆಯುವುದು ಅಗತ್ಯವಿದೆ. *

" ಕಿರ್ಲೋಸ್ಕರ " ದಿಂದ



ನಾಯಿಯ ಬುದ್ಧಿ

ಆತ ತನ್ನ ನಾಯಿಮರಿಗೆ ಆಹಾರವನ್ನು "ಬೇಡಲು" ತರಬೇತಿ ಕೊಡುತ್ತಿದ್ದ. ಮಾಂಸದ ತುಂಡನ್ನು ನಾಯಿಗೆ ನಿಲುಕದಷ್ಟು ಎತ್ತರದಲ್ಲಿ ಹಿಡಿದು ತಾನು "ಬೊಗಳಿ" ತೋರಿಸಿ ಅನಂತರ ಮಾಂಸವನ್ನು ಅದಕ್ಕೆ ಕೊಡುತ್ತಿದ್ದ.

ಒಂದು ವಾರ ಹೀಗೆ ತರಬೇತಿ ಕೊಟ್ಟ ಮೇಲೆ ಒಂದು ದಿನ ಆತ ಮಾಂಸವನ್ನು ನಾಯಿಗೆ ನಿಲುಕದಂತೆ ಹಿಡಿದು ಅದಕ್ಕೆ ಬೊಗಳಲು ಅವಕಾಶವಿತ್ತು ನಿಂತುಕೊಂಡ. ಆದರೆ ಶ್ವಾನ ಬೊಗಳಲಿಲ್ಲ. ಎಷ್ಟೋ ಹೊತ್ತು ಕಾದ ನಂತರವೂ ಬೊಗಳಿಕೆ ಬಾರದಿರಲು ದಯಾಳುವಾದ ಯಜಮಾನ ಮಾಂಸವನ್ನು ಹಾಗೆಯೇ ನಾಯಿಯ ಮುಂದೆ ಇಟ್ಟ.

ಆಗ ಬಂತು ಆಘಾತ. ನಾಯಿ ಮಾಂಸವನ್ನು ಮುಟ್ಟಲಿಲ್ಲ. ಯಜಮಾನ ಬೊಗಳಲೆಂದು ಅದು ಕಾದು ಕುಳಿತಿತು.

— ಟಿಟ್ ಬಿಟ್ಸ್

*

ಸಿಗಾರ್ ಭಕ್ತನೊಬ್ಬ ಸಿಗಾರಿನಂಗಡಿಯಲ್ಲಿ ಒಂದು ಸಿಗಾರ್ ಕೊಂಡು ಹೊರಗೆ ಹೋಗಿ ಸೇದತೊಡಗಿದವನೇ ಮರಳಿ ಬಂದು, "ಏನು ಸಿಗಾರ್ ಕೊಟ್ಟಿದ್ದೀರಿ. ಭಯಂಕರ ಹೊಲಸು!" ಎಂದು ಕೂಗಾಡಿದ.

ಅಂಗಡಿಗಾರ ಶಾಂತ ಸ್ವರದಿಂದ ಉತ್ತರಿಸಿದ: "ಇಲ್ಲಿ ನೋಡಿ ಸ್ವಾಮಿ, ನಿಮ್ಮ ಹತ್ತಿರ ಇರೋದು ಒಂದು ಸಿಗಾರ್. ಅದಕ್ಕೇ ನೀವು ಇಷ್ಟು ರೇಗಾಡಿದರೆ ಸಾವಿರಾರು ಈ ದರಿದ್ರ ಸಿಗಾರ್ ಇಟ್ಟುಕೊಂಡ ನಾನು ಎಷ್ಟು ಕೂಗಾಡಬೇಕು ಹೇಳಿ!"



ಗಂಡನಿಗೆ ಸುಖವಾಗಲೆಂದು ಹೆಂಡತಿ-
ಹೆಂಡತಿಗೆ ಸುಖವಾಗಲೆಂದು ಗಂಡ

ಮೇಣಬತ್ತಿಯ ಪ್ರಕಾಶ

ಗ. ರಾ. ಟಕೇಕರ

ನನ್ನ ಪತಿ! ಪಾಪ ! ಹೊರಗಿನ ಕೋಣೆಯಲ್ಲಿರುವ ಮಂಚದ ಮೇಲೆ ಜೀರ್ಣವಾದ ಅವರ ದೇಹ ತೆಪ್ಪಗೆ ಬಿದ್ದುಕೊಂಡಿದೆ. ನಿಜವಾಗಿಯೆಂದರೆ, ಅವರಿಗೆ ಯಾವ ಬಗೆಯ ಸದ್ದು, ಗಡಿಬಿಡಿ ಸಹನವಾಗುವುದಿಲ್ಲ. ಸೂಜಿ ಬಿದ್ದಷ್ಟು ಸಪ್ಪಳವಾದರೂ ಅವರು ಬೆಚ್ಚಿ ಏಳುತ್ತಾರೆ, ಗಡಿಬಿಡಿಸಿ ಹೋಗುತ್ತಾರೆ. ಅವರಿಗೆ ತೊಂದರೆಯಾಗಬಾರದು, ಸ್ವಾಸ್ಥ್ಯ ಲಭಿಸಬೇಕು ಎಂದು ನಾನು ನನ್ನ ಎಲ್ಲ ಚಲನವಲನಗಳನ್ನು, ವ್ಯವಹಾರವನ್ನು ಬಲು ಎಚ್ಚರಿಕೆಯಿಂದ, ಶಾಂತ ರೀತಿಯಿಂದ ನಡೆಸಬೇಕಾಗುತ್ತದೆ. ಈಗ ನಾನು ಸಂಜೆಯ ಅಡಿಗೆಗೆ ತೊಡಗಿದ್ದೇನೆ. ಅಡಿಗೆ ಮನೆಯಲ್ಲಿಯ ನನ್ನ ಈ ಕೆಲಸವನ್ನು ಅತ್ಯಂತ ಶಾಂತರೀತಿಯಲ್ಲಿ ನಾನು ಮಾಡಬೇಕಾಗಿದೆ.

ಇನ್ನು ತುಸು ಹೊತ್ತಿನಲ್ಲಿ ನನ್ನ ಅಡಿಗೆ ಮುಗಿಯುವುದು. ಊಟದ ಪದಾರ್ಥಗಳನ್ನೆಲ್ಲ ಒಂದು

'ಎಡ್ವರ್ಡ್ ವೆಲಿನ್' ರ ಕಥೆಯ ಆಧಾರದಿಂದ

ತಾಟಿನಲ್ಲಿಟ್ಟುಕೊಂಡು ನಾನು ಅವರ ಹಾಸಿಗೆಯ ಒಳಿಗೆ ಹೋಗುವೆನು-ಒಂದಿಷ್ಟೂ ಸದ್ದಾಗದಂತೆ ಬಹು ಮೆಲ್ಲಗೆ ಹೆಜ್ಜೆಯಿಡುತ್ತ. ನನ್ನ ಆಗಮನದಿಂದ ಬೇನೆಯಿಂದ ಕಾಂತಿಗೆಟ್ಟ ಅವರ ಮುಖದಲ್ಲಿ ಸಮಾಧಾನದ ಗೆರೆಗಳು ಮೂಡುವವು. ಮೇಣಬತ್ತಿಯ ಮಂದ ಪ್ರಕಾಶದಲ್ಲಿ ಮಂದಹಾಸದಿಂದ ಬೆಳಗಿದ ಅವರ ಮುಖವನ್ನು ಕಂಡು ನನಗೆ ಎಷ್ಟೊಂದು ಸಮಾಧಾನವಾಗುತ್ತದೆ ಎಂದು ಹೇಳಲಿ? ಹಾಂ! ಒಳ್ಳೇ ನೆನಪಾಯಿತು. ಮನೆಯಲ್ಲಿರುವ ಕಡ್ಡಿಪೆಟ್ಟಿಗೆಗಳು ತೀರಿವೆ. ತರಬೇಕು. ಅವಿಲ್ಲದೆ ಹೇಗೆ ಸಾಗಬೇಕು? ಛೆ! ನಡೆದೀತು ಎಂದರೇನು, ನಡೆಯುವುದೇ ಇಲ್ಲ.

ಕಡ್ಡಿಪೆಟ್ಟಿಗೆ ಇಲ್ಲದೆ ನಡೆಯುವುದೇ ಇಲ್ಲ ಅಂದರೆ ಅವರಿಗೆ ಧೂಮಪಾನದ ಚಟವಿದೆ ಎಂದೇನೂ ನಾನು ಹೇಳುತ್ತಿಲ್ಲ. ನನಗೂ ಆ ಚಟವಿಲ್ಲ. ಅವರ ಈಗಿನ ಜಡ್ಡಿನ ಅವಸ್ಥೆಯಲ್ಲಿ ಅವರು ಬೀಡಿ ಸಿಗರೇಟು ಸೇದುವುದು ಸಾಧ್ಯವೇ ಇಲ್ಲ. ನನ್ನ ಮಟ್ಟಿಗೆ ಆ ಪ್ರಶ್ನೆಯೆ ಉದ್ಭವಿಸುವುದಿಲ್ಲ ಹಿಂದಕ್ಕೆ ನಾನಿನ್ನೂ ತರುಣಿಯಾಗಿದ್ದಾಗ ಧೂಮಪಾನ ಮಾಡಬೇಕೆಂಬ ಸಾಹಸಿ ವಿಚಾರ ನನ್ನಲ್ಲಿ ಆಗೊಮ್ಮೆ ಈಗೊಮ್ಮೆ ಮೂಡುತ್ತಿತ್ತು. ಆದರೆ ಸ್ತ್ರೀಯರಾದ ನಮಗೆ ಈ ಚಟದ ವಿಷಯದಲ್ಲಿ ಅಷ್ಟೊಂದು ಸ್ವಾತಂತ್ರ್ಯವಿಲ್ಲ. ಅಂತೇ ನಾನು ಧೂಮಪಾನದ ಮೋಹಕ್ಕೆ ಬೀಳಲಿಲ್ಲ. ಈಗಂತೂ ನನಗೆ ವಯಸ್ಸಾಗಿ ಹೋಗಿದೆ. ಮನದ ಚಾಪಲ್ಯ ಮೊದಲಿನಂತೆ ಉಳಿದಿಲ್ಲ. ಅಂದಮೇಲೆ ಕೇವಲ ಪುರುಷರ ಚಟವಾದ ಧೂಮಪಾನದ ಚಟ ನನ್ನನ್ನೆಂತು ಆಕರ್ಷಿಸೀತು? ಹೀಗಿರುವಾಗ ನಡುವೆಯೆ ಕಡ್ಡಿಪೆಟ್ಟಿಗೆಯ ನೆನಪು ಈಕೆಗೆ ಹೇಗೆ ಬಂತು ಎಂದು ನೀವು ಯೋಚಿಸಬಹುದು.

ಹೇಳಲೇ, ನಿಜ ನುಡಿಯಲೇ? ನೀವು ನಗಬಹುದು. ಆದರೆ ಹೇಳಿಯೇ ಬಿಡುತ್ತೇನೆ. ಇವರ ಆರೋಗ್ಯ ಕೆಟ್ಟಂದಿನಿಂದ ಇವರಿಗೆ ಪ್ರಖರ ಬೆಳಕು ಸಹನವಾಗುವುದಿಲ್ಲ. ನನಗೂ ಪ್ರಖರ ಬೆಳಕಿನಲ್ಲಿ ಮುಪ್ಪಿನಿಂದ ಮತ್ತು ಬೇನೆಯಿಂದ ಬಾಡಿ ಒಣಗಿರುವ ಅವರ ಮುಖವನ್ನು ಕಂಡರೆ ಹೇಗೆಹೇಗೊ ಆಗುತ್ತದೆ. ಎಷ್ಟೋ ಸಲ ಅವರ ಮುಖದ ಆ ನಿಸ್ತೇಜ ಕಳೆ ನನಗೆ ಅತ್ಯಂತ ಅಸಹ್ಯವೆನಿಸುವುದು. ಅಂತೆಯೆ ನಾನು ಮನೆಯಲ್ಲಿ ಪ್ರಖರ ಬೆಳಕಿನ ದೀಪಗಳನ್ನು ಉಪಯೋಗಿಸಬಾರದೆಂದು ನಿರ್ಣಯಿಸಿ ಮಂದಪ್ರಕಾಶ ಕೊಡುವ ಮೇಣಬತ್ತಿಯನ್ನುರಿಸಲು ನಿರ್ಧರಿಸಿದೆ. ಮೇಣಬತ್ತಿಯ ಪ್ರಕಾಶದಿಂದ ಕಣ್ಣಿಗೆ ತೊಂದರೆಯಾಗುವುದಿಲ್ಲ, ಇಷ್ಟೇ ಅಲ್ಲ, ನೋಡಲು ಮನಸ್ಸಿರದ ಚಿಕ್ಕ ಪುಟ್ಟ ಕುಂದುಗಳು ಕಾಣಿಸುವುದೇ ಇಲ್ಲ. ಕಳೆದ ಐವತ್ತು ವರ್ಷಗಳಲ್ಲಿ-ಎಷ್ಟು ಬೇಗ ಕಳೆದುಹೋಯಿತು ಈ ಕಾಲ!- ಕಾಲಪುರುಷ ನಮ್ಮಿಬ್ಬರ ಮುಖದ ಮೇಲೆ ಬರೆದ ಗೆರೆಗಳು ಒಬ್ಬರೊಬ್ಬರ ಕಣ್ಣಿಗೆ ಬಿದ್ದು ಇಬ್ಬರ ಮನಸ್ಸೂ ದುಃಖಕ್ಕೀಡಾಗಬಾರದು ಎಂಬುದೇ ನನ್ನ ಉದ್ದೇಶ. ಅದಕ್ಕಾಗಿಯೆ ಮೇಣಬತ್ತಿಯ ಪ್ರಕಾಶದ ಯೋಜನೆ ಮಾಡಿದ್ದು. ಮತ್ತು ಮೇಣಬತ್ತಿಯನ್ನು ಹೊತ್ತಿಸಲು ಮೇಲಿಂದ ಮೇಲೆ ಬೇಕಾಗುವ ಕಡ್ಡಿಪೆಟ್ಟಿಗೆಗಳ ಅಭಾವ ಅನಿಸಬಾರದೆಂದು ನಾನು ಜಾಗರೂಕಳಾಗಿರುತ್ತೇನೆ.

ನೋಡಿ! ಇಷ್ಟು ಜಾಗ್ರತೆಯನ್ನು ನಾನು ವಹಿಸಿದರೂ ಇಂದು ರಾತ್ರಿಗೆ ಸಾಲುವಷ್ಟು ಕಡ್ಡಿಗಳು ಕೂಡ ಉಳಿದಂತಿಲ್ಲ. ಹೌದು. ಒಂದು ಮಾತು ಹೇಳುವುದು ಉಳಿದೇ ಹೋಯಿತು. ಈಗ ಕೆಲ ದಿನಗಳಿಂದ ಕಡ್ಡಿಪೆಟ್ಟಿಗೆಗಳ ಉಪಯೋಗವನ್ನು ನಾನು ಇನ್ನೊಂದು ರೀತಿಯಲ್ಲೂ ಮಾಡಿಕೊಳ್ಳುತ್ತಿದ್ದೇನೆ.

ಕಡ್ಡಿಪೆಟ್ಟಿಗೆಯಲ್ಲಿರುವ ಕಡ್ಡಿಗಳ ತುದಿಗೆ ಲೇಪಿಸಿರುವ ಗಂಧಕ ಮಿಶ್ರಿತ ವಸ್ತುವನ್ನು ಕೆರೆದು ತೆಗೆದು ನನ್ನ ಪತಿಯ ಔಷಧಿಯಲ್ಲಿ ನಾನು ನಿತ್ಯವೂ ಬೆರೆಸುತ್ತಿದ್ದೇನೆ.

ಎಲಾ! ಎಂಥ ದುಷ್ಟ ಹೆಂಗಸು! ಪತಿಘಾತಕಿ!

ಎಂದು ನೀವನ್ನಬಹುದು. ಪ್ರತ್ಯಕ್ಷ ಗಂಡನ ಔಷಧಿಯಲ್ಲಿ ಗಂಧಕದಂಥ ವಿಷವನ್ನು ಬೆರೆಸುವುದೆಂದರೆ ಒಂದೇ ಇವಳಿಗೆ ಹುಚ್ಚುಹಿಡಿದಿರಬೇಕು, ಇಲ್ಲವೆ ಗಂಡನ ಬಗ್ಗೆ ಅತ್ಯಂತ ತಿರಸ್ಕಾರವೆನಿಸುತ್ತಿರಬೇಕು ಎಂದು ನಿಮಗನಿಸಿರಬಹುದು. ಆದರೆ ಇಲ್ಲ. ಖಂಡಿತವಾಗಿಯೂ ಹಾಗಿಲ್ಲ. ಇಲ್ಲಿ ನೋಡಿ. ಕಡ್ಡಿಗಳ ಮೇಲಿನ ಗಂಧಕವನ್ನು ಕೆರೆಯುತ್ತಿರುವಾಗ ನನ್ನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯುತ್ತಿದೆ. ಛೆ! ಎಂಥ ವಿಚಿತ್ರ ಹೆಂಗಸು ಎಂದು ಮತ್ತೆ ನಿಮಗೆ ಸಂಶಯ ಬಂತಲ್ಲವೇ? ಗಂಡ ಬೇಗನೆ ಸಾಯಲಿ ಎಂದು ಅವನ ಔಷಧಿಯಲ್ಲಿ ಗಂಧಕವನ್ನು ಬೆರೆಸುವ ಈ ರಾಕ್ಷಸಿ ಅವನ ಮೃತ್ಯುವಿನ ಪೂರ್ವಸಿದ್ಧತೆ ಮಾಡುತ್ತಿರುವಾಗ ಅಳುತ್ತಾಳೆ! ವ್ಹಾ, ಮೊಸಳೆ ಕಣ್ಣೀರು! ಆದರೆ ತಡೆಯಿರಿ, ಹೀಗೆ ತಪ್ಪು ಕಲ್ಪನೆ ಮಾಡಿಕೊಳ್ಳಬೇಡಿ. ನನ್ನದು ಮೊಸಳೆಯ ಕಣ್ಣೀರಲ್ಲ. ನಟನೆಯಲ್ಲ. ಮೋಸವಲ್ಲ. ಡಾಕ್ಟರ್ ಜನರು ಮಾಡುತ್ತಾರಲ್ಲ, ಹಾಗೆ " kind cruelty " ದಯಾಮಯ ಕ್ರೌರ್ಯ. ಅವರ ಕಷ್ಟಗಳನ್ನು ನಾನು ನೋಡಲಾರೆ. ಈ ಯಾತನೆಗಳಿಂದ ಅವರನ್ನು ಆದಷ್ಟು ಬೇಗ ಮುಕ್ತರನ್ನಾಗಿ ಮಾಡಬೇಕೆಂದು ಈ ಚಾಂಡಾಲಕರ್ಮವನ್ನು ಗೈಯುತ್ತಿದ್ದೇನೆ. ಅವರ ಔಷಧಿಯಲ್ಲಿ ವಿಷ ಬೆರೆಸುತ್ತಿದ್ದೇನೆ. ಅವರ ದೇಹ ಬೇಗನೆ ಯಾತನಾಮುಕ್ತವಾಗಲಿ ಎಂದು ಈ ರೀತಿ ಜಗತ್ತಿಗೆ ಹೊರತಾದ ಕಾರ್ಯ ಮಾಡುತ್ತಿದ್ದೇನೆ.

ಈ ವಿಷಯದಲ್ಲಿ ಬೇಕಷ್ಟು ಯೋಚಿಸಿ ನಿರ್ಧಾರಕ್ಕೆ ಬಂದಿದ್ದೇನೆ.

ಮತ್ತೇನು ಮಾಡಲಿ, ಹೇಳಿ? ಕಣ್ಣೀರನ್ನು ತಡೆದರೂ ನಿಲ್ಲುವುದಿಲ್ಲ. ಪತಿಯ ಮೇಲಿನ ಪ್ರೇಮದಿಂದ, ಅವರಿಗೆ ಸುಖವಾಗಬೇಕೆಂದು ನಾನು ಕಟ್ಟಿರುವ ನಿರ್ಧಾರದ ಒಡ್ಡು ಈ ಕಣ್ಣೀರಿನ ಅವಿರತ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದೀತು. ಛೆ! ಛೆ! ಹಾಗಾಗಕೂಡದು. ಈ ಕಣ್ಣೀರನ್ನು ತಡೆಗಟ್ಟಬೇಕು, ನಿಲ್ಲಿಸಲೇಬೇಕು.

ನಾನೇನಾದರೂ ತಪ್ಪುತ್ತಿದ್ದೇನೆಯೆ? ಯೋಚಿಸಿ ನೋಡಿದೆ. ತುಂಬ ವಿಚಾರ ಮಾಡಿದೆ. ನಾನು ತಪ್ಪುಮಾಡುತ್ತಿರುವೆನೆಂದು ನನಗೇನೂ ಅನಿಸುವುದಿಲ್ಲ. ಯಾವ ಕೆಲಸವನ್ನು ಇನ್ನು ಕೆಲ ಕಾಲದಲ್ಲಿ ನಿಸರ್ಗವೇ ಮಾಡಲಿದೆಯೊ ಅದನ್ನು ನಾನು ಮಾಡಿದೆನೆಂದು ತಪ್ಪೇನಾಯಿತು? ಅವರಿಗೆ ವಯಸ್ಸಾಗಿದೆ. ಅದರಲ್ಲೂ ಈ ಪ್ರಾಣಹಿಂಡುವ ಬೇನೆ. ಈಗಿದ್ದರೂ ಇನ್ನೊಂದು ನಿಮಿಷಕ್ಕೆ ಇಲ್ಲ ಎನ್ನುವ ಸ್ಥಿತಿ. ಅವರ ಈ ಒದ್ದಾಟವನ್ನು ನಾನಿನ್ನು ನೋಡಲಾರೆ.

ಕಣ್ಣೀರನ್ನು ತಡೆದುಕೊಂಡು ನಗುಮುಖದಿಂದ ಹೊರಗಿನ ಕೋಣೆಗೆ ಹೋಗುವೆ. ಅಳುಮೋರೆಯಿಂದ ಅವರೆದುರು ಹೋಗುವ ಧೈರ್ಯ ನನಗಿಲ್ಲವೇ ಇಲ್ಲ. ಈಗಿನ ಸ್ಥಿತಿಯಲ್ಲಿ ನಗುಮುಖದಿಂದ ಅಡ್ಡಾಡುವ ಈ ನಾಟಕವನ್ನು ಯಶಸ್ವಿಯಾಗಿ ಆಡುವುದು ಎಷ್ಟು ಕಠಿಣ, ಬಲ್ಲಿರಾ? ಆದರೆ ನಾನು ಅದನ್ನು ಸಾಧಿಸುತ್ತಿದ್ದೇನೆ.

ಈಗ ಅವರ ಊಟದ ವೇಳೆಯಾಯಿತು. ಅಡಿಗೆಯನ್ನು ತಾಟಿನಲ್ಲಿ ಬಡಿಸಿದಂತಾಯಿತು. "ಹಂ! ನಡಿ. ಕಣ್ಣೀರನ್ನು ತಡೆದು ಹೆಜ್ಜೆಯಿಡು ನಗುಮೊಗದಿಂದ ಹೋಗಿ ನಾಲ್ಕು ತುತ್ತು ಅವರಿಗೆ ಉಣಿಸಬೇಕು. ಔಷಧಿ ಕುಡಿಸಬೇಕು. ರಾತ್ರಿಯ ಔಷಧ ಅವರ ಕೈಗೆ ಎಟಕುವಂತೆ ಮೇಜಿನ ಮೇಲಿಡಬೇಕು" ಎಂದು ಮನಸ್ಸಿಗೆ ಆಜ್ಞೆ ಮಾಡಿದೆ.

ಕೈಯಲ್ಲಿ ತಾಟು ತಡೆದುಕೊಂಡ ನನ್ನ ನಗುಮುಖದ ಮೂರ್ತಿ, ಹೊರಗಿನ ಕೋಣೆಯಲ್ಲಿ ಕಾಲಿಡುತ್ತಿದೆ.

*

ಎಷ್ಟು ಮೆಲ್ಲಗೆ ಹೆಜ್ಜೆಯಿಡುತ್ತ ಅವಳು ಕೋಣೆಯೊಳಗೆ ಬರುತ್ತಿದ್ದಾಳೆ! ನೆಲಕ್ಕೆ ಊರಿದ ಪಾದಗಳನ್ನೆತ್ತದೆ ಹಾಗೆಯೆ ಸರಿಸು-

ತ್ತಲೇ ಬರುತ್ತಿರುವಂತೆ ಅನಿಸಿತು. ಕ್ಷಣಕ್ಷಣಕ್ಕೆ ಸಮೀಪ ಬರುತ್ತಿರುವ ಮತ್ತು ಹೆಚ್ಚು ಸ್ಪಷ್ಟವಾಗುತ್ತಿರುವ ಅವಳ ಮುಖವನ್ನು ನಾನು ಕಣ್ಣಲ್ಲಿ ಕಣ್ಣಿಟ್ಟು ನೋಡತೊಡಗುತ್ತೇನೆ. ಎಲಾ! ಕ್ರೂರ ಕಾಲಪುರುಷನು ಅವಳ ಮುಖದ ಮೇಲೂ ತನ್ನ ಅಚ್ಚು ಒತ್ತಿಬಿಟ್ಟಿದ್ದಾನೆ. ನಿಜವಾಗಿ ಅವಳು ಮೊದಲು ಎಷ್ಟು ಸುಂದರಳಾಗಿ ಕಾಣಿಸುತ್ತಿದ್ದಳು. ಈಗ—?

ಈ ಜೀವನ! ಇದೆಂಥ ಜೀವನ? ಎಲ್ಲವೂ ವಿಪರೀತವೇ. ಜೀವನವನ್ನು ಬಾಳುವುದು ಯಾತಕ್ಕಾಗಿ? ಮೃತ್ಯುವಿನ ಬಾಯಿಗೆ ಬೀಳಲು ತಾನೇ? ಛೆ! ಹಾಗೆಂದು ಹೇಗೆ ಹೇಳುವುದು? ಮೃತ್ಯು ಎಂದರಾದರೂ ಏನು? ಈ ಜೀವನವಸ್ತ್ರವನ್ನು ಬಿಸುಟು ಎರಡನೆಯ ಜೀವನವಸ್ತ್ರವನ್ನು ತೊಡುವುದೇ ಅಲ್ಲವೆ? ಆದರೆ ಈ ತತ್ವಜ್ಞಾನ ಎರಡನೆಯವರಿಗೆ ಹೇಳಲು ಚೆನ್ನಾಗಿದೆಯೆ ವಿನಾ ಸ್ವತಃ ಅನುಭವಿಸಲು ಕಷ್ಟದ್ದಾಗಿದೆ.

ನನಗೆ ಕಷ್ಟವಾಗಬಾರದು, ಶಾಂತಿ ಸಮಾಧಾನ ಸಿಗಬೇಕು ಎಂದು ಅವಳ ಒದ್ದಾಟ. ಈಗ ನನಗೆ ಅವಳ ಈ ಪ್ರಯತ್ನದಿಂದ ಸುಖವೆನಿಸುತ್ತದೆ. ಅದೇ ಕೆಲ ತಿಂಗಳ ಹಿಂದೆ ನನಗೆ ತೊಂದರೆಯಾಗಬಾರದೆಂದು ಅವಳು ಮಾಡುವ ಪ್ರಯತ್ನಗಳೆಲ್ಲ ಅವಳ ನಟನೆಯೆಂದು ನಾನು ತಿಳಿಯುತ್ತಿದ್ದೆ. ಆದರೆ ಈಗ? ನನ್ನ ಸದ್ಯದ ಸ್ಥಿತಿಯಲ್ಲಿ ನನ್ನ ಬಾಹ್ಯೇಂದ್ರಿಯಗಳು ಊನವಾದರೂ ಮನಸ್ಸಿನ ವಿಚಾರಗಳ ತಾಕಲಾಟ ಮಾತ್ರ ತ್ವರಿತ ಗತಿಯಿಂದ ನಡೆಯುತ್ತಿದೆ. ಈ ಮಾನಸಿಕ ಮಂಥನದಿಂದ ಒಂದು ವಿಚಾರ ಮುಖ್ಯವಾಗಿ ನನಗ ತಿಳಿದಿದೆ. ನನ್ನ ಮೇಲೆ ಅವಳು ಮನಃಪೂರ್ವಕವಾಗಿ ಪ್ರೇಮ ಮಾಡುತ್ತಾಳೆನ್ನುವುದೇ ಆ ವಿಚಾರ. ಮೊದಲು ಅವಳ ನಟನೆಯಂತೆ ಕಾಣಿಸುತ್ತಿದ್ದುದು ಈಗ ನನ್ನಂಥ ಅಸಹಾಯ ಅವಸ್ಥೆಯಲ್ಲಿರುವ ಗಂಡನ ಮೇಲೆ, ಸ್ವತಃ ಅಸಹಾಯಳಾಗಿದ್ದರೂ ಪ್ರೇಮಮಾಡುವ, ಸಾಧ್ವಿಯ, ವ್ಯರ್ಥವಾಗಿದ್ದರೂ ಬಲಶಾಲಿಯಾದ ಪ್ರಯತ್ನವೆಂದು ಅನಿಸುತ್ತದೆ.

ಪಾಪ! ಅವಳದೇನು ದೋಷ? ನನ್ನ ಈ ಬೇನೆಯಲ್ಲಿ ಅವಳು ಅತ್ಯಂತ ಸಣ್ಣಪುಟ್ಟ ವಿಷಯಗಳಲ್ಲೂ ಎಷ್ಟು ಜಾಗ್ರತೆ ತೆಗೆದುಕೊಳ್ಳುತ್ತಾಳೆ! ಹಾಗೆ ಮಾಡುವಾಗ ಅವಳ ಅವಸ್ಥೆ ಮಾತ್ರ ಕರುಣಾಸ್ಪದವಾಗಿರುತ್ತದೆ. ತನ್ನ ಮುಖದ ಮೇಲೆ ತನ್ನ ಕರುಣಾಪೂರ್ಣಸ್ಥಿತಿಯ ಗುರುತೊಂದನ್ನೂ ತೋರಿಸಬಾರದೆಂದು ಅವಳು ಮಾಡುವ ಪ್ರಯತ್ನ ನನಗೆ ಕಾಣಿಸುತ್ತದೆ. ತೀರ ಸ್ಪಷ್ಟವಾಗಿ ಕಂಡು ಎದೆಯ ಆಳದಲ್ಲಿ ಚುಚ್ಚುತ್ತದೆ. ಆದರೆ ಇವೆಲ್ಲ ಇರುವುದೇ ಹೀಗೆ-ಹೀಗೆಯೆ ನಡೆಯತಕ್ಕದ್ದು. ಆಯುಷ್ಯದ ಕೊನೆಯಲ್ಲಿ ಅತಿ ವೇಗದಿಂದ ಓಡುವ ಮಾನವಜೀವನದ ಸಮತೋಲವನ್ನು ಕಾಯ್ದುಕೊಳ್ಳುವ ಪ್ರಯತ್ನಗಳು ಹೀಗೆಯೆ ಕರುಣಾಸ್ಪದವಾಗಿ, ಅಸಹಾಯವಾಗಿ ಇರತಕ್ಕವು.

ಆದರೆ ಈ ರೀತಿ ನನ್ನ ಮತ್ತು ಅವಳ ಕಷ್ಟ ಬಹುಕಾಲ ಇರಬಾರದು ಎಂದು ನಾನು ನಿರ್ಧಾರ ಮಾಡಿದ್ದೇನೆ. ನಾನು ಈ ನಿರ್ಧಾರ ಮಾಡಿದಂದಿನಿಂದ ನನ್ನ ಮನಸ್ಸಿಗೆ ಏನೋ ಒಂದು ಬಗೆಯ ಶಾಂತಿ ಲಭಿಸಿದೆ. ಮನಸ್ಸಿನ ನಿರ್ಧಾರದ ಕೋಟೆಯನ್ನು ಭೇದಿಸಿ ಒಳನುಗ್ಗುವುದು ಅಸಂತೋಷ, ಸಿಟ್ಟು ಮುಂತಾದವುಗಳ ಗಾಳಿಗೂ ಸಾಧ್ಯವಾಗುತ್ತಿಲ್ಲ. ಹೀಗಾದದ್ದು ತುಂಬ ಒಳ್ಳೆಯದಾಯಿತು. ಅವಳಿಗೆ ಸುಖವಾಗಬೇಕು ಎಂಬುದೇ ನನ್ನ ನಿರ್ಧಾರದ ಹಿಂದಿರುವ ಉದ್ದೇಶ. ನನ್ನ ಈ ನಿರ್ಧಾರದಿಂದ ನನಗೆ ಸಿಗುವ ಸಮಾಧಾನ ಅಪ್ರತಿಮವಾದದ್ದು. ನನ್ನ ಕೊನೆಯ ಕ್ಷಣಗಳು ಸುಖದಿಂದ ಕಳೆಯಬೇಕೆಂದು ಅವಳು ತನ್ನ ದುಃಖದ ವಿಚಾರವನ್ನೂ ಮಾಡದೆ ನನ್ನ ಸುಖದ ವಿಚಾರವನ್ನೇ ಮಾಡುತ್ತಿರುವುದು ಅದಕ್ಕೆ ಕಾರಣವಾಗಿದೆ. ಪರಸ್ಪರರಲ್ಲಿಯ ಪ್ರೇಮ ವ್ಯವಹಾರದಲ್ಲಿ ಇದೊಂದು

ಕೊಡಕೊಳ್ಳುವ ವಿಚಾರವಾಗಿದೆ.

ಈ ಬಗೆಯ ವಿಚಾರಗಳು ಮನದಲ್ಲಿ ಸುಳಿಯುತ್ತಿರುವಾಗ ನನಗೆಷ್ಟು ಸಮಾಧಾನವಾಗುತಿದೆ! ಬರೀ ಸಮಾಧಾನವಲ್ಲ. ಅದರಿಂದ ಮನಸ್ಸಿಗೆ ಒಂದು ವಿಶಿಷ್ಟ ಬಲ ಬಂದಿದೆ. ಮೃತ್ಯುವನ್ನು ಆಲಿಂಗಿಸಿಕೊಳ್ಳುವ ಶಕ್ತಿ ನನಗೆ ಬಂದಿದೆ. ಆಶ್ಚರ್ಯವೆಂದರೆ ನನ್ನ ಈ ಜಡ್ಡಿನಲ್ಲಿ ಅವಳು ತಯಾರಿಸುವ ನಿತ್ಯದ ಅಡಿಗೆ ಕೂಡ ನನಗೆ ಬಲು ಸವಿಯೆನಿಸಹತ್ತಿದೆ. ನನಗಾಗಿಯೆ ಎಂದು ಅವಳು ಯೋಜಿಸಿರುವ ಈ ಮೇಣಬತ್ತಿಯ ಪ್ರಕಾಶ— ಅಹಾ! ಎಷ್ಟು ಸೌಮ್ಯ ಮತ್ತು ಶೀತಲ!

ಮೇಣಬತ್ತಿಯ ಈ ಸೌಮ್ಯ ಪ್ರಕಾಶವನ್ನು ಕಂಡಾಗ ನನಗೆ ಈ ಮೇಣಬತ್ತಿಯನ್ನು ಅವಳಿಗೆ ಹೋಲಿಸಿ ನೋಡುವ ಮೋಹ ಉಂಟಾಗುತ್ತಿದೆ. ಈ ಮೇಣಬತ್ತಿ ಹೇಗೆ ತಾನು ಉರಿದು ಸೌಮ್ಯ ಪ್ರಕಾಶವನ್ನು ಬೀರಿ ಸುತ್ತಲಿನ ವಾತಾವರಣವನ್ನು ಬೆಳಗಿಸುವುದೊ, ಸುಖದಾಯಕವಾಗಿ ಮಾಡುವುದೊ, ಹಾಗೆಯೇ ನನಗೆ ಸುಖವಾಗಲೆಂದು ತನ್ನ ಭಾವನೆಗಳನ್ನು, ದುಃಖವನ್ನು ಹತ್ತಿಕ್ಕಿ ಅವಳು ಮಾಡುವ ಪ್ರತಿಯೊಂದು ಕೆಲಸವೂ ನನಗೆ ಸುಖದಾಯಕವಾಗುತ್ತಿದೆ. ಆದ್ದರಿಂದಲೇ ಈ ಅತ್ಯಂತ ಕೋಮಲ ಮತ್ತು ಭಾವನಾತ್ಮಕವಾದ ಹಿನ್ನೆಲೆಯಲ್ಲಿ ನಾನು ಮನಸ್ಸಿನಲ್ಲಿ ಮಾಡಿಕೊಂಡಿರುವ ವಿಪರೀತ ನಿರ್ಧಾರದ ವಿಫಲತೆ ನನಗೆ ಹೆಚ್ಚಾಗಿ ಅನುಭವಕ್ಕೆ ಬರುತ್ತದೆ. ಹೃದಯದ ಆಳವನ್ನು ಇರಿಯುತ್ತದೆ.

ಆದರೆ ಇದು ಹೇಗೇ ಇರಲಿ, ನಾನು ನನ್ನ ಜೀವನದ ಆಟವನ್ನು ಮುಗಿಸಲೇ ಬೇಕಾಗಿದೆ. ನಾನು ಸಾಯಲೇಬೇಕು. ನನ್ನ ಈ ನಿರ್ಧಾರ ಪೂರ್ತಿಯಾಗಬೇಕು- ಆದಷ್ಟು ಬೇಗ.

ಅವಳು ನನ್ನ ಹಾಸಿಗೆಯ ಬಳಿ ಬರುತ್ತಿದ್ದಾಳೆ. ಮೆಲ್ಲಗೆ ಸದ್ದು ಮಾಡದೆ ಬರುತ್ತಿರುವ ಅವಳ ನಗುಮುಖ. ಅವಳ ನಗುವಿಗೆ ಪ್ರತಿಯಾಗಿ ನಾನೂ ಹಸನ್ಮುಖಿಯಾಗಬೇಕು. ಇಲ್ಲದಿದ್ದರೆ ಈ ವ್ಯವಹಾರ ಹೇಗೆ ಮುಗಿದೀತು?

ನನ್ನ ನಿರ್ಧಾರ ದೃಢವಾಗಿದೆ. ಆದ್ದರಿಂದ ಈ ಕೆಲಸವೇನೂ ನನಗೆ ಜಡವೆನಿಸುವುದಿಲ್ಲ.

ಎಲಾ! ಹೌದು! ಒಂದು ಹೇಳುವುದು ಉಳಿದೇ ಹೋಯಿತು. ನನಗೆ ಗುಣವಾಗಬೇಕೆಂದು ಅವಳು ಕೊಡುವ ಔಷಧಿಯನ್ನ ನಾನು ಅವಳ ಕಣ್ಣು ತಪ್ಪಿಸಿ ಮಂಚದ ಮಗ್ಗಲಲ್ಲಿರುವ ಹೂವಿನ ಗಿಡದ ಕುಂಡೆಯಲ್ಲಿ ಚೆಲ್ಲುತ್ತಿರುತ್ತೇನೆ. ದಿನವೂ ಈ ರೀತಿ ಬೀಳುವ ಔಷಧಿಯ ಮೂಲಕ ಕುಂಡೆಯಲ್ಲಿರುವ ಹೂವಿನ ಸಸಿಗಳು ಮಾತ್ರ ಸಾವಿನತ್ತ ಸಾಗುತ್ತಿವೆ. ಆದರೆ ನಾನು ನಿರುಪಾಯನಾಗಿದ್ದೇನೆ. *

ಥಿಯೇಟರುಗಳಲ್ಲಿ ಹಚ್ಚಲೆಂದು "ಇಲ್ಲಿ ಉಗುಳಬೇಡಿರಿ" ಎಂಬ ಬೋರ್ಡುಗಳನ್ನು ಬರೆಯಲು ಕಿರ್ಲೋಸ್ಕರ ನಾಟಕ ಮಂಡಳಿಯ ಒಡೆಯರಾದ ಶಂಕರ ರಾವ್ ಮುಜುಮದಾರರು ಹೇಳಿದ್ದರು. ಆ ಬೋರ್ಡುಗಳು ಬರೆದು ಬರುವಷ್ಟರಲ್ಲಿ ಅವರ ಕಂಪನಿ ಒಡೆದುಹೋಗಿತ್ತು. ಕಂಪನಿಯ ಒಳ್ಳೆಯ ನಟರೆಲ್ಲ ಕಂಪನಿ ಬಿಟ್ಟು "ಗಂಧರ್ವ ಮಂಡಳಿ" ಯನ್ನು ಸ್ಥಾಪಿಸಿದ್ದರು.

ಥಿಯೇಟರಿನಲ್ಲಿ ಅಲ್ಲಲ್ಲಿ ಬೋರ್ಡುಗಳನ್ನು ಹಚ್ಚಿದ ನಂತರ ಉಳಿದಿದ್ದ ಒಂದು ಬೋರ್ಡನ್ನು ಹಿಡಿದುಕೊಂಡು ಬಂದು ಆಳು ಶಂಕರರಾಯರಿಗೆ "ಇದನ್ನು ಎಲ್ಲಿ ಹಚ್ಚಲಿ?" ಎಂದು ಕೇಳಿದ. ಕಂಪನಿ ಒಡೆದದ್ದರಿಂದ ಸಂತಪ್ತರಾಗಿದ್ದ ಶಂಕರ ರಾಯರು "ನನ್ನ ಮೋರೆಗೆ ಹಚ್ಚು. ಕಂಪನಿ ಒಡೆದಿರುವುದರಿಂದ ಜನರು ನನ್ನ ಮೋರೆಯ ಮೇಲೆ ಉಗುಳುವ ಸಂಭವವಿದೆ" ಎಂದರು.

ಸಂಜೆ ವಾಕಿಂಗ್

ಜಿ. ಸುಶೀಲೇಂದ್ರ

ನಮ್ಮ ಯಜಮಾನರಿಗೆ ನನ್ನ ಜೊತೆಯಲ್ಲಿ ಸಂಜೆ ವಾಕಿಂಗ್ ಹೋಗುವುದೆಂದರೆ ಬಹಳ ಪ್ರೀತಿ. ನನಗೋ ಅದು ಇಷ್ಟವೇ ಇಲ್ಲ. ಹಾಯಾಗಿ ಬೆಚ್ಚಗೆ ಮನೆಯಲ್ಲಿ ಕುಳಿತಿರುವುದು ಬಿಟ್ಟು, ಇದೆಲ್ಲಿಯ ಗ್ರಹಚಾರ? ಪ್ರತಿದಿನವೂ ಸಂಜೆ ನಾಲ್ಕು ಮೈಲಿ ನಡೆಯುವುದು ಸಾಮಾನ್ಯವೇ? ಎಂದು ಅನುದಿನವೂ ಸಂಜೆ ಹೊಸಲು ದಾಟಿದಾಗಲೆಲ್ಲಾ ಅಂದುಕೊಳ್ಳುತ್ತೇನೆ. ಆದರೆ ಅವರ ಇಷ್ಟಕ್ಕೆ ವಿರುದ್ಧವಾಗಿ ಹೋಗಲು ನನ್ನ ಮನ ಒಪ್ಪುವುದಿಲ್ಲ. ಅಂದರೆ ನನಗೆ ಅವರನ್ನು ಕಂಡರೆ ದಿಗಿಲು ಎಂಬ ಅರ್ಥವಲ್ಲ; ಅವರಲ್ಲಿ ನನಗಷ್ಟು ಪ್ರೀತಿ, ಗೌರವ ಅಷ್ಟೆ! ನಾನು ಬರುವುದಿಲ್ಲ ಅಂದರೆ, ಅವರ ಮನಸ್ಸು ನೋಯುತ್ತದೋ ಏನೋ ಎಂದು ದಿನವೂ ಇಷ್ಟವಿಲ್ಲದಿದ್ದರೂ ಸಂಜೆ ಅವರೊಡನೆ ತಪ್ಪದೆ ಸಹಗಮನ ಮಾಡಬೇಕಾಗುತ್ತದೆ. ಅವರಿಗೂ ಈ ಹಾಳು ಸಂಜೆ ವಾಕಿಂಗ್ ಇಲ್ಲದೇ ಹೋದರೆ ರಾತ್ರಿ ನಿದ್ರೆಯೇ ಬರುವುದಿಲ್ಲವಂತೆ! ಯಾವ ಮಹಾರಾಯ ಕಲಿಸಿದನೋ ಅವರಿಗೆ ಈ ದುರಭ್ಯಾಸ! ಅವರು ಬೇಕಾದ್ದನ್ನೇ ಬಿಟ್ಟಾರು, ಆದರೆ ಈ ಸಂಜೆ ವಾಕಿಂಗ್ ಮಾತ್ರ ಬಿಡಲ್ಲ.

ಎಷ್ಟೋ ದಿವಸ, ನಾನು ಬಂದ ಹೊಸದರಲ್ಲಿ ಸಂಜೆ ಅವರೊಡನೆ ವಾಕಿಂಗ್ ಹೋಗುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಅನೇಕ ದಿನ, ಸಂಜೆ ಅವರು ಆಫೀಸ್‌ನಿಂದ ಬಂದು ಕಾಫಿ ಕುಡಿದ ಮೇಲೆ, ವಾಕಿಂಗ್ ಹೊರಡಲು ಸಿದ್ಧರಾಗುವ ಹೊತ್ತಿಗೆ ಅವರ ಕಣ್ಣೆದುರಿಗಿರದೇ ಮಲಗುವ ಮನೆಯಲ್ಲೋ, ಉಗ್ರಾಣದಲ್ಲಿಯೋ ಹೋಗಿ ಕುಳಿತುಬಿಡುತ್ತಿದ್ದೆ. ಎದುರಿಗಿದ್ದರೆ ತಾನೇ ಕರೆಯುತ್ತಾರೆ ಎಂದು ಯೋಚಿಸಿ ಹಾಗೆ ಮಾಡುತ್ತಿದ್ದೆ. ಆದರೆ ಅವರು ಅಲ್ಲಿಗೇ ಹುಡುಕಿಕೊಂಡು ಬಂದು ಕರೆಯುತ್ತಿದ್ದರು. ಒಂದೆರಡು ಸಂಜೆ, ಅವರು ಆಫೀಸ್‌ನಿಂದ ಬರುವ ಹೊತ್ತಿಗೆ ಸರಿಯಾಗಿ, ಅಕ್ಕಪಕ್ಕದ ಸ್ನೇಹಿತೆಯರ ಮನೆಗೆ ಹೊರಟುಹೋಗುತ್ತಿದ್ದೆ. ಆದರೆ ಆಗಲೂ ಅವರು ಬಿಡಲಿಲ್ಲ. ಆಳನ್ನು ಕಳಿಸಿ, ನನ್ನನ್ನು ಹುಡುಕಿಸಿ ಕರೆಯುತ್ತಿದ್ದರು.

ನಾನು ಬಂದ ಹೊಸದರಲ್ಲಿ ಒಂದು ದಿವಸ, ನನಗೆ ತುಂಬಾ ಬೇಸರವಾಗಿ, "ಇಂದು ಏನೇ ಆಗಲಿ ಅವರೊಡನೆ ವಾಕಿಂಗ್ ಹೋಗುವುದಿಲ್ಲ," ಎಂದು ನಿರ್ಧರಿಸಿ ರೇಡಿಯೋ ರೂಮಿನಲ್ಲಿ, ಸೋಫಾದಲ್ಲಿ ನಿದ್ದೆಮಾಡುತ್ತಿರುವಂತೆ ಕಣ್ಣು ಮುಚ್ಚಿಕೊಂಡು ಕುಳಿತುಬಿಟ್ಟೆ. ಅವರು ಬಂದು ನೋಡಿದರೆ ನಿದ್ದೆ ಬಂದಿದೆ ಅಂದುಕೊಂಡಾದರೂ ನನ್ನನ್ನು ಬಿಟ್ಟು ಹೋಗಲಿ ಎಂದುಕೊಂಡು. ಅವರು ವಾಕಿಂಗ್ ಹೊರಡಲು ಸಿದ್ಧರಾಗಿ, ನನಗಾಗಿ ಕಾದು ಎರಡು ನಿಮಿಷ ವರಾಂಡದಲ್ಲಿ ನಿಂತಿದ್ದರು. ನಾನು ಹೋಗಲೇ ಇಲ್ಲ. ಒಂದೆರಡು ಸಾರಿ ಅಲ್ಲಿಂದಲೇ ಕೂಗಿದರು. ನಾನು ಕೇಳಿಸಲಿಲ್ಲವೆಂಬಂತೆ ಸುಮ್ಮನಿದ್ದೆ-

ಅವರು ಒಳಗೆ ಬಂದು ಕೂಗಿದಾಗಲೂ ನಾನು ಕಣ್ಣು ತೆರೆಯಲಿಲ್ಲ. ಅವರಿಗೂ ರೇಗಿತು, ಅಂತ ಕಾಣುತ್ತೆ. ಹತ್ತಿರ ಬಂದು, ನನ್ನ ಬೆನ್ನಿನ ಮೇಲೆ ಕೈಯಿಟ್ಟು ಅಲುಗಾಡಿಸಿದರು. ನಾನು ಪ್ರತಿಭಟಿಸಿದೆ. ಮರುಮಾತಾಡದೆ ನಾನೇನು ಎಳೆಯ ಮಗುವೋ ಎಂಬಂತೆ ನನ್ನನ್ನು ಎರಡು ಕೈ-ಯಲ್ಲೂ ಎತ್ತಿಕೊಂಡು, ವಾಕಿಂಗ್ ಹೊರಟೇ ಬಿಟ್ಟರು. ನನಗೇ ಬಹಳ ನಾಚಿಕೆಯಾಯಿತು. ನನ್ನ ಸ್ನೇಹಿತರು ಯಾರಾದರೂ ನೋಡಿದರೆ ಏನು ಗತಿ ಎಂದುಕೊಂಡು ಅವರ ಕೈಯಿಂದ ತಕ್ಷಣ ಕೆಳಕ್ಕೆ ಧುಮುಕಿ ಮರುಮಾತಾಡದೇ ಅವರೊಡನೆ ವಾಕಿಂಗ್ ಹೊರಟೆ.

ಅಂದಿನಿಂದ ಇಂದಿನವರೆಗೂ ಮಳೆ ಬರಲಿ, ಬಿರುಗಾಳಿ ಬೀಸಲಿ, ಏನೇ ಬರಲಿ ಅವರೊಡನೆ ಸಂಜೆ ವಾಕಿಂಗ್ ಮಾತ್ರ ತಪ್ಪಿದ್ದಲ್ಲ. ಈಗ್ಗೆ ಒಂದು ವರ್ಷದ ಹಿಂದೆ ಒಂದು ದಿನ ನನಗೆ ತುಂಬಾ ಬೇಸರವಾಗಿ ಹೋಯಿತು. ಸಂಜೆ ಹಾಯಾಗಿ ನನ್ನ ಸ್ನೇಹಿತೆಯರೆಲ್ಲಾ ಒಟ್ಟಾಗಿ ವಾಕಿಂಗ್ ಹೋಗುವವರಿದ್ದರು. ನಾನು ಮಾತ್ರ ಅವರುಗಳೊಡನೆ ಹೋಗುವುದು ಬಿಟ್ಟು, ಯಜಮಾನರೊಡನೆ ಹೋಗುವುದೆಂದರೆ ಯಾರಿಗಾದರೂ ಬೇಜಾರು ಬರುವುದಿಲ್ಲವೇ? ಆದ್ದರಿಂದ ಅಂದು ಬೆಳಗಿನಿಂದ ಏನೋ ಕಾಹಿಲೆಯಾಗಿರುವ ಹಾಗೆ ನಟಿಸಲು ಪ್ರಾರಂಭಿಸಿದೆ. ಮಾಮೂಲಿನಂತೆ ಬೆಳಗ್ಗೆ ತಿಂಡಿ ತಿನ್ನಲಿಲ್ಲ.

ಮಧ್ಯಾಹ್ನ ಊಟ ಮಾಡಲೇ ಇಲ್ಲ. ಬಡಿಸಿದ್ದ ಅನ್ನವೆಲ್ಲಾ ಹಾಗೆಯೇ ಬಿಟ್ಟು ಮಧ್ಯಾಹ್ನವೆಲ್ಲಾ ತುಂಬಾ ಆಯಾಸವಾಗಿರುವ ಹಾಗೆ ಸೋಫಾದ ಮೇಲೆ ಮಲಗಿಬಿಟ್ಟಿದ್ದೆ. ಸಂಜೆ ಐದು ಘಂಟೆಯಾಯಿತು. ಅವರು ಆಫೀಸ್‌ನಿಂದ ಬಂದರು. ಕಾರ್ ಬಂದ ಶಬ್ದ ಕೇಳಿಸಿತು. ಬೂಟ್ಸ್ ಶಬ್ದ ಸಹ ಕೇಳಿಸಿತು. ದಿನವೂ ಅವರು ಬರುವ ಹೊತ್ತಿಗೆ, ನಾನು ಹಸನ್ಮುಖಿಯಾಗಿ ವರಾಂಡದಲ್ಲಿಯೇ ಅವರನ್ನು ಎದುರುಗೊಳ್ಳುತ್ತಿದ್ದೆ. ಆದರೆ ಇಂದು ಮನಸ್ಸು ಗಟ್ಟಿ ಮಾಡಿ ಮಲಗಿಯೇ ಇದ್ದೆ. ಬಂದವರೇ ನೆಟ್ಟಗೆ ರೂಮಿನೊಳಗೆ ಬರುತ್ತಾರೆ ಎಂದುಕೊಂಡಿದ್ದೆ. ಆದರೆ ಅವರು ಒಳಗೆ ಬರಲೇ ಇಲ್ಲ. ವರಾಂಡದಲ್ಲಿ ನಿಂತಿದ್ದ ಜವಾನನನ್ನು ನನ್ನ ಆರೋಗ್ಯದ ಬಗ್ಗೆ ವಿಚಾರಿಸಿದರು. ನಾನು ಮಧ್ಯಾಹ್ನ ಊಟ ಮಾಡಲೇ ಇಲ್ಲ, ಮಧ್ಯಾಹ್ನದಿಂದ ಸುಮ್ಮನೆ ಸುಸ್ತಾಗಿ ಮಲಗಿದ್ದೇನೆ ಎಂಬ ವರದಿಯನ್ನು ಅವನು ಒಪ್ಪಿಸಿದ. ಅವರು ಮರುಮಾತಾಡದೆಯೇ ಹಾಗೆಯೇ ಹಿಂತಿರುಗಿ ಹೋಗಿ ಕಾರಿನಲ್ಲಿ ಕುಳಿತು, ಡ್ರೈವರ್‌ಗೆ ಏನೋ ಹೇಳಿದರು. ಅವನು ಕಾರನ್ನು ಬಿಟ್ಟುಕೊಂಡು ಹೊರಟು ಹೋದ.

ಸದ್ಯ ಇವತ್ತು ಕಾರಿನಲ್ಲೇ ಎಲ್ಲಿಯೋ ಹೊರಟುಹೋದರು; ಸಂಜೆ ವಾಕಿಂಗ್ ತಪ್ಪಿತು ಎಂದು ನಾನು ಸಂತೋಷಪಟ್ಟೆ. ಯಾರಾದರೂ ಸ್ನೇಹಿತೆಯರ ಮನೆಗೆ ಹೋಗಿ ಅವರೊಡನೆ ಹಾಯಾಗಿ ಸಂಜೆಯೆಲ್ಲಾ ನಾಲ್ಕು ರಸ್ತೆ ಅಡ್ಡಾಡಿಕೊಂಡು ಬರೋಣ ಎಂದುಕೊಂಡೆ. ಅವರು ಹೋಗಿ ಹತ್ತು ನಿಮಿಷವಾಗಿರಬಹುದು. ಮತ್ತೆ ಕಾರು ಬಂದ ಶಬ್ದ ಕೇಳಿ ನನಗೆ ಗಾಬರಿಯಾ-ಯಿತು. ನಾನು ಹಿಂದಿನಂತೆಯೇ ಕಣ್ಮುಚ್ಚಿ ಮಲಗಿಕೊಂಡೆ. ಅವರು ಕಾರಿಳಿದು ರೂಮಿ-ನೊಳಕ್ಕೆ ಬಂದರು, ನಾನು ಕಣ್ಣು ಬಿಟ್ಟು ನೋಡಿದೆ. ಅವರು ಡಾಕ್ಟರ್ ಸಮೇತ ಬಂದಿ-ದ್ದರು. ಆ ಡಾಕ್ಟರೋ, ಥೇಮ್ಸ್ ನದಿ ನೀರು ಕುಡಿದು ಬಂದವರು, ಮನಶ್ಶಾಸ್ತ್ರ ಅರಿ-ಯದ ಪೆಚ್ಚು. ಕಾಹಿಲೆ ಅಂದರೆ ಅದಕ್ಕೆ ಔಷ-ಧಿಯೇ ಪರಿಹಾರ ಎಂದು ಅವರ ವಾದ. ಬಂದವರೇ ಆ ವೈದ್ಯರು ನನ್ನ ನಾಡಿ ನೋಡಿ, ನಾಲಿಗೆ ತೆಗೆಸಿ ನೋಡಿ, ಅಜೀರ್ಣ ಎಂದು ಗೊಣಗಿದರು. ನಾನು ಸುಮ್ಮನಿದ್ದೆ. ಡಾಕ್ಟರ್ ಯಜ-ಮಾನರ ಕಡೆ ತಿರುಗಿ "ಅಜೀರ್ಣದಿಂದ ಹೀಗಾಗಿದೆ ಅಷ್ಟೆ. ಹಾಲು ಹೊರತು ಇನ್ನು ಏನೂ

ಆಹಾರ ಕೊಡಬೇಡಿ. ಆ ಮೇಲೆ ಆಳನ್ನು ಕಳುಹಿಸಿ. ಒಂದು ಎಣ್ಣೆ ಕಳಿಸುತ್ತೇನೆ. ಅದನ್ನು ರಾತ್ರಿ ಕೊಡಿ. ಬೆಳಿಗ್ಗೆ ಹೊತ್ತಿಗೆ ಎಲ್ಲಾ ಸರಿ ಹೋಗುತ್ತೆ" ಎಂದು ಹೇಳಿ ಹೊರಟುಹೋದರು.

ಹಿಂದೆ ಒಂದು ಸಲ ಅವರು ಕೊಡುವ ಆ ಎಣ್ಣೆ ಕುಡಿದಿದ್ದೆ. ಆದು ಸಾಕ್ಷಾತ್ ಬೇವಿನ ರಸವೇ. ಇನ್ನು ಮತ್ತೆ ಅದನ್ನು ಎಲ್ಲಿ ಕುಡಿಯ ಬೇಕಾದೀತೋ ಎಂದು ಹೆದರಿ, ಡಾಕ್ಟರ್ ಹೊರಟುಹೋದ ತಕ್ಷಣ ನಾನು ಕಾಹಿಲೆ ವಾಸಿ ಯಾದವಳಂತೆ ಎದ್ದು ಕುಳಿತೆ. ಯಜಮಾನರು ತಂದುಕೊಟ್ಟ ಹಾಲು ಕುಡಿದು, ಎದ್ದು ಓಡಾಡ ಲಾರಂಭಿಸಿದೆ. ಅವರು ಆಳನ್ನು ಕರೆದು, "ನೋಡಿದೆಯಾ ಆ ಡಾಕ್ಟರ್ ಕೈಗುಣ! ಅವರು ಬಂದು ನೋಡಿದ ಮಾತ್ರಕ್ಕೆ ಎಲ್ಲಾ ಸರಿಹೋ-ಯಿತು. ನೀನೇನೂ ಇನ್ನು ಹೋಗಿ ಎಣ್ಣೆ ತರಬೇಡ," ಎಂದು ಹೇಳಿ ವಾಕಿಂಗ್ ಹೊರ ಡಲು ಸಿದ್ಧರಾದರು. ನಾನು ವಿಧಿಯಿಲ್ಲದೆಯೇ ಆ ಡಾಕ್ಟರನ್ನು ಮನಸ್ಸಿನಲ್ಲಿಯೇ ಬೈಯುತ್ತಾ ಅವರೊಡನೆ ವಾಕಿಂಗ್ ಹೊರಟೆ.

ಇಷ್ಟೆಲ್ಲಾ ಆದರೂ, ಈಚೆಗೆ ನಾಲ್ಕು ವರ್ಷ ಗಳಿಂದ ನನಗೆ ವರ್ಷಕ್ಕೆ ಒಂದು ದಿನ ಸಂಜೆ ಬಿಡುವು ದೊರೆಯುತ್ತದೆ. ಅದೇ ಜನವರಿ ಮೂವತ್ತನೆಯ ತಾರೀಖು, ಸರ್ವೋದಯದ ದಿವಸ. ನಮ್ಮ ಯಜಮಾನರು ಆಫೀಸ್‌ನಲ್ಲಿ ಟೇಬಲ್ ಕೆಳಗೆ ಕಾಣಿಕೆ ಸ್ವೀಕರಿಸುವ ಪದ್ಧತಿ ಯನ್ನಿಟ್ಟುಕೊಂಡಿರುವವರಾದರೂ ನಿಜವಾ-ಗಿಯೂ ಗಾಂಧೀಭಕ್ತರು. ಹೊರಗಡೆ ಮಾತ್ರ ವಲ್ಲ, ಮನೆಯಲ್ಲೂ ಖಾದಿ ಉಡ್ತಾರೆ. ಜನವರಿ ೩೦ ರಂದು ಪೂರ್ತಿ ಉಪವಾಸ ಮಾಡಿ, ದಿನ ವೆಲ್ಲಾ ರೇಡಿಯೋ ಮುಂದೆ ಕುಳಿತು ಭಜನೆ ಕೇಳುತ್ತಿರುತ್ತಾರೆ. ಆದ್ದರಿಂದ ಅಂದು ಮಾತ್ರ ನನಗೆ ಪೂರ್ಣ ಸ್ವತಂತ್ರ.

ಆದರೆ ಮೊನ್ನೆ ಜನವರಿ ೩೦ ರಂದು ಅದಕ್ಕೂ ಕಲ್ಲು ಬಿತ್ತು. ಗಾಂಧಿ ಹೆಸರಿನಲ್ಲಿ ಓಟು ಕೇಳಿ ದ್ದರೂ ಹಾಳು ಸರ್ಕಾರದವರು ಗಾಂಧಿ ಸತ್ತ ದಿವಸ ಕಛೇರಿಗೆ ರಜಾ ಕೊಡಲೇ ಇಲ್ಲ. ಅಂದು ಉಪವಾಸವೇ ಆಫೀಸ್‌ಗೆ ಹೋಗಿ ಸಂಜೆ ಕೊಂಚ ಕೋಪವಾಗಿಯೇ ಮನೆಗೆ ಬಂದರು. ಕಛೇರಿಯಲ್ಲಿ ಏನಾಗಿತ್ತೊ ಏನೋ ಅಥವಾ ಉಪವಾಸ ಮಹಿಮೆಯೋ, ಅಂತೂ ಮರೆತು, ಮಾಮೂಲಿನಂತೆ ಕಾಫಿ ತಿಂಡಿ ತಂದುಕೊಟ್ಟ ಅಡಿಗೆಯವನ ಮೇಲೆ ಭಯಂಕರವಾಗಿ ರೇಗಿ ದರು. ಆ ಮೇಲೆ ರೇಡಿಯೋ ಮುಂದೆ ರಾಮ ಭಜನೆ ಕೇಳುತ್ತಾ ಕುಳಿತರು. ನಾನೂ ಅವರ ಪಕ್ಕದಲ್ಲಿಯೇ ಸೋಫಾದಲ್ಲಿ ಕುಳಿತಿದ್ದೆ. ರಾಮ-ನಾಮದ ಮಹಿಮೆಯೋ ಏನೋ ಅವರ ಕೋಪ ಕೊಂಚ ಇಳಿದ ಹಾಗೆ ಕಾಣುತ್ತಿತ್ತು. ಅವರು ತಮ್ಮ ಬಲಗೈಯನ್ನು ನನ್ನ ಭುಜದ ಮೇಲೆ ಇಟ್ಟು ಕಣ್ಣು ಮುಚ್ಚಿ ಹಾಡು ಕೇಳುತ್ತಿದ್ದರು. ನಾನು ಹೇಗಾದರೂ ಮಾಡಿ ಅವರಿಗೆ ಅರಿವಾಗದಂತೆ ಎದ್ದು ಹೋಗಬೇಕು ಎಂದುಕೊಂಡೆ. ಆದರೆ ನನ್ನ ಮೈಮೇಲೆ ಅವರ ಕೈ ಇದ್ದೇ ಇತ್ತು. ಅವರು ಕಣ್ಣು ಮುಚ್ಚಿ ಕುಳಿತುಕೊಂಡದ್ದರಿಂದ ಹೇಗೂ ನಿದ್ದೆ ಮಾಡಿದ್ದಾರೆ ಎಂದುಕೊಂಡು, ಸರಕ್ಕನೆ ಸೋಫಾದಿಂದ ಕೆಳಗಿಳಿದು ಬಾಗಿಲು ಕಡೆ ಹೊರಟೆ. ಆದರೆ ಅವರಿಗೆ ತಕ್ಷಣ ಎಚ್ಚರ ವಾಗಿ ಹೋಯಿತು. ರೇಗಿತೋ ಏನೋ! "ದಿನಾ ನಿನಗೆ ಇಷ್ಟು ಹೊತ್ತಿಗೆ ಸರಿಯಾಗಿ ವಾಕಿಂಗ್ ಹೋಗಿ ಅಭ್ಯಾಸ. ಒಂದು ದಿನ ಸಂಜೆ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳಲು ಆಗುವುದಿಲ್ಲವೇ? ತಾಳು ನಿನಗೆ ಬುದ್ಧಿ ಕಲಿಸು ತ್ತೇನೆ" ಎಂದು ರೇಗುತ್ತಾ ಎದ್ದುಹೋಗಿ ಎಂದೂ ಉಪಯೋಗಿಸದೇ ಇದ್ದ ಕುತ್ತಿಗೆಗೆ ಕಟ್ಟುವ ಸರಪಳಿಯನ್ನು ತಂದು ನನ್ನ ಕುತ್ತಿಗೆಗೆ ಕಟ್ಟಿ ಸೋಫಾದ ಕಾಲಿಗೆ ಕಟ್ಟಿಹಾಕಿಹಾಕಿಯೇ ಬಿಟ್ಟರು. ನಾನು ತಾನೆ ಇನ್ನೇನು ಮಾಡಲಿ? "ಸಬ್‌ಕೊ ಸನ್ಮತಿ ದೇ ಭಗವಾನ್" ಎಂದು ಅವರ ಕಾಲಬಳಿ ಮುದುರಿ ಮಲಗಿದೆ. ★

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧. ಏಕವಾಕ್ಯತೆ

(ಅ) ಒಮ್ಮತ (ಆ) ಹಟಮಾರಿತನ (ಇ) ಒಂದೇ ವಾಕ್ಯದಲ್ಲಿ ಮುಗಿಯುವ ಕವಿತೆ (ಈ) ಖಂಡತುಂಡ

೨. ಏಕತ್ರ

(ಅ) ಕೊಡೆ (ಆ) ಒಂದೆ ಕಡೆ (ಇ) ನಂಬಿಕೆ (ಈ) ಒಮ್ಮನಸ್ಸು

೩. ದ್ವಿಧಾಭಾವ

(ಅ) ಕಡಿಮೆ ತರಗತಿ (ಆ) ದ್ವೇಷ (ಇ) ಎರಡು ಕಾಲಿನ ಪ್ರಾಣಿ (ಈ) ನಿರ್ಧಾರ ಮಾಡಲಾರದಿರುವುದು

೪. ದ್ವಯಾರ್ಥ

(ಅ) ಇಮ್ಮಡಿ ಕಷ್ಟ (ಆ) ದೇವರ ಹಣ (ಇ) ಎರಡರ್ಥದ (ಈ) ಧನಸಹಾಯ

೫. ಛವಿ

(ಅ) ಒಂದು ರೋಗ (ಆ) ಬಣ್ಣ (ಇ) ತೂತು (ಈ) ನೆರಳು

೬. ಅನುಕಂಪ

(ಅ) ಹೆದರಿಕೆ (ಆ) ದಯೆ (ಇ) ಹಿಂಬಾಲಿಸುವಿಕೆ (ಈ) ನಕಲಿ

೭. ಪ್ರಕೃತ

(ಅ) ಪ್ರಸಿದ್ಧ (ಆ) ಪೂರ್ವಜನ್ಮದ ಕರ್ಮ (ಇ) ಸದ್ಯದ (ಈ) ಶರೀರ

೮. ರುಂದ್ರ

(ಅ) ಪ್ರಚಂಡ (ಆ) ಅಳುವ (ಇ) ಸಿಟ್ಟಿಗೆದ (ಈ) ಅಡಚಣಿಯೊಡ್ಡುವ

೯. ಆಶಂಸೆ

(ಅ) ತೆಗಳಿಕೆ (ಆ) ಹಾಸಿಗೆ (ಇ) ಸಂದೇಹ (ಈ) ಕೋರಿಕೆ

೧೦. ಸಂಗತ

(ಅ) ಯುದ್ಧ (ಆ) ಬಿಗಿ (ಇ) ಅಪಾಯ (ಈ) ಕೂಡಿಬಂದ

೧೧. ನೃಶಂಸ

(ಅ) ಕ್ರೂರ (ಆ) ಪ್ರಜಾಪ್ರಿಯ (ಇ) ಗಂಡಸು (ಈ) ಅರಸ

೧೨. ಆಕುಂಚನ

(ಅ) ತುಂಬ ಹಣವುಳ್ಳ (ಆ) ಹಿಗ್ಗುವಿಕೆ (ಇ) ಕುಗ್ಗುವಿಕೆ (ಈ) ಎಳೆಯುವುದು

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧. **ಏಕವಾಕ್ಯತೆ** (ಅ) ಒಮ್ಮತ,ಐಕ್ಯಮತ್ಯ; ಯಾವುದಾದರೂ ಮಾತಿನ ಅರ್ಥದ ಬಗ್ಗೆ ಒಂದೇ ಅಭಿಪ್ರಾಯ. ಉದಾ—ರಾಮನ ಸಚ್ಚಾರಿತ್ರದ ಬಗ್ಗೆ ಪ್ರಜೆಗಳಲ್ಲಿ ಏಕವಾಕ್ಯತೆಯಿತ್ತು. [ಸಂ. ಏಕ = ಒಂದು, ವಾಕ್ಯ = ಮಾತು]

೨. **ಏಕತ್ರ** (ಅ) ಒಂದೇ ಕಡೆ, ಒಂದೇ ಸ್ಥಳದಲ್ಲಿ. ಉದಾ— ಈ ಸಂಬಂಧದ ಎಲ್ಲ ವಿವರಗಳನ್ನು ಏಕತ್ರ ಸೇರಿಸಲಾಗಿದೆ. [ಸಂ. ಏಕ = ಒಂದು, ತ್ರ ಇದು ಸ್ಥಾನವಾಚಿ]

೩. **ದ್ವಿಧಾಭಾವ** (ಈ) ನಿರ್ಧಾರ ಮಾಡಲಾರದಿರುವುದು, ಹಾಗೋ ಹೀಗೋ ಎಂಬ ಸಂದೇಹ, ಇಮ್ಮನಸ್ಸು; ಎರಡು ಬಗೆ. [ಸಂ. ದ್ವಿಧಾ= ಎರಡು ತರ]

೪. **ದ್ವಯಾರ್ಥ** (ಇ) ಎರಡರ್ಥದ ಎರಡು ಉದ್ದೇಶಗಳುಳ್ಳ; ಅರ್ಥ ಸ್ಪಷ್ಟವಿಲ್ಲದ. ಉದಾ—ದ್ವಯಾರ್ಥದ ಮಾತುಗಳಿಂದ ಮನನೋಯಿಸಿದ ಅಂದರೆ ತೋರಿಕೆಗೆ ಸರಳವೆಂದು ಕಂಡರೂ ಒಳಗೆ ಬೇರೊಂದರ್ಥವುಳ್ಳ ಮಾತಾಡಿ ನೋಯಿಸಿದ. [ಸಂ. ದ್ವ್ಯರ್ಥ]

೫. **ಛವಿ** (ಆ) ಬಣ್ಣ, ಮೈಬಣ್ಣ, ಕಾಂತಿ, ಪ್ರಕಾಶ, ಚೆಲುವು; ತೊಗಲು [ಸಂ.]

೬. **ಅನುಕಂಪ** (ಆ) ದಯೆ, ಕರುಣೆ; ಸಹಾನುಭೂತಿ. [ಸಂ.]

೭. **ಪ್ರಕೃತ** (ಇ) ಸದ್ಯದ, ಈಗ ವಿಚಾರದಲ್ಲಿರುವ ವಿಷಯ, ಪ್ರಸ್ತುತ; ಈಗಿನ ಸಮಯ; ಸ್ವಾಭಾವಿಕ, ಸಹಜ. ಉದಾ-ಪ್ರಕೃತದಲ್ಲಿ ನಿನಗೆ ಸಾಲ ಸಿಗಲಾರದು. [ಸಂ. ಪ್ರಕೃತ = ಪ್ರಾರಂಭಿಸಿದ್ದು]

೮. **ರುಂದ್ರ** (ಅ) ಪ್ರಚಂಡ, ಬಹಳ ದೊಡ್ಡ, ಭಾರಿ, ಮಹಾ [ಸಂ.?]

೯. **ಆಶಂಸೆ** (ಈ) ಕೋರಿಕೆ, ಬಯಕೆ, ಇಷ್ಟ; ಆಶೆ; ಘೋಷಣೆ, ಹೇಳಿಕೆ. ಉದಾ—ನನ್ನ ಶುಭಾಶಂಸೆಗಳನ್ನು ಅವನಿಗೆ ತಿಳಿಸಿರಿ. [ಸಂ. ಆ = ತುಂಬಾ, ಶಂಸೆ = ಹೊಗಳಿಕೆ]

೧೦. **ಸಂಗತ** (ಈ) ಕೂಡಿ ಬಂದ, ಸೇರಿದ; ಜೋಡಾದ, ಸಂಬಂಧಿಸಿದ; ಸಭೆಗೂಡಿದ; ಯೋಗ್ಯವಾದ, ಸರಿಯಾದ. (ಅಸಂಗತ=ಸಂಬಂಧವಿರದ) [ಸಂ.]

೧೧. **ನೃಶಂಸ** (ಅ) ಕ್ರೂರ, ದುಷ್ಟ, ಕಿಡಿಗೇಡಿ, ಕಾಡುವವ. [ಸಂ. ನೃ = ಮನುಷ್ಯರನ್ನು, ಶಂಸ = ನೋಯಿಸುವವ]

೧೨. **ಆಕುಂಚನ** (ಇ) ಕುಗ್ಗುವಿಕೆ; ಬಗ್ಗುವಿಕೆ. [ಸಂ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ ,,	....	ಉತ್ತಮ
೧೧—೧೨ ,,	...	ಅತ್ಯುತ್ತಮ

ಬೀಬೀ ನಾಚ್ಚಿಯಾರ್

ಶ್ರೀಸ್ವಾಮಿ

ಮ್ಲೇಚ್ಛಳೊಡನೆ ನನ್ನ ದೇವ! ಇದೇನು ದೃಶ್ಯ? ಯೋಚನೆಗಳಿಂದ ನನ್ನ ತಲೆ ಕೆಟ್ಟು ಹೋಗಿದೆಯೋ? ಪುನಃ ಅದೇ ದೃಶ್ಯ! ದೇವ, ಇದೇನು! ನಿನಗೆ ಶ್ರೀದೇವಿ ಇರಲಿಲ್ಲವೇ? ಭೂದೇವಿ ಇರಲಿಲ್ಲವೇ?— ಮ್ಲೇಚ್ಛಳು! ಆದರೂ ಇವಳ ಮುಖದಲ್ಲಿ ಎಂತಹ ಕಳೆಯಿದೆ. ನಾನು ಕಂಡಿದ್ದ ಲಕ್ಷ್ಮೀದೇವಿಯ ಮುಖವೇ ಇವಳದೂ! ಆದರೆ ಉಡುಪೋ ಮ್ಲೇಚ್ಛರಮಣಿಯರು ಧರಿಸುವಂತಹದು. ವಿಚಿತ್ರ!

'ಇನ್ನೂ ಸೊಗಸಿನ ದೃಶ್ಯವಿದು. ಎಷ್ಟು ವರ್ಷಗಳಿಂದ ಅಲ್ಲಿ ನೆಲಸಿರುವೆ, ಸ್ವಾಮಿ? ನಿನ ಮೇಲೆ ಬೆಟ್ಟದಂತೆ ಬೆಳೆದಿರುವ ಹುತ್ತ. ಇಲ್ಲಿಯೂ ಫಣಿಶಯನ ನೀನು! ಹುತ್ತದ ಮೇಲೆ ನಿನ್ನ ಅನನ್ಯ ಭಕ್ತೆ—ತುಲಸಿ! ಗಿಡವೆಷ್ಟು ಸೊಗಸಾಗಿ ಬೆಳೆದಿದೆ!

'ಇದೇನು! ಈ ಕಪಿಲಧೇನುವು ತನ್ನಷ್ಟಕ್ಕೆ ತಾನೇ ಈ ಹುತ್ತದ ಮೇಲೆ ಹಾಲು ಸುರಿಸಿ ಹೋಗುತ್ತಿದೆ? ಇದು ಅದರ ದೇವನ ಸೇವೆ. ನೀನೇ ಧನ್ಯೆ ಗೋಮಾತೆ!

'ದೇವಾ! ನಿನಗೆ ಎಲ್ಲೆಲ್ಲಿಯೂ ಸೇವಕರು. ನಾನು ಪಾಪಿ! ನನ್ನ ಸುಖವನ್ನು ಬಯಸಿ ನಿನ್ನನ್ನು ದೂರಿದೆ; ಕ್ಷಮಿಸು. ನಿನಗೆ ಸರಿಯಾದ ನೆಲೆ ಸಿಕ್ಕುವ ವರೆಗೂ ನಾನು ನನ್ನ ಸುಖವನ್ನು ಬಯಸೆನು. ಅಲ್ಲಿ ಆ ಕರಿಕಾಳ ಚೋಳ—ಆ ವೈಷ್ಣವದ್ವೇಷಿ—ನನ್ನನ್ನು ತನ್ನ ರಾಜ್ಯದಿಂದ ಓಡಿಸಿದ... ಹೋಗಲಿ ಆ ಮಾತು. ನಿನ್ನನ್ನು ಒಂದು ಸ್ಥಳದಲ್ಲಿ ನೆಲೆಗೊಳಿಸಬೇಕು. ಹೇಗೆ? ನಾನು ಕಡುಬಡವ. ಅಹುದು! ಎಲ್ಲರೂ ಜಾತಿಯಿಂದ ಬೇರೆ ಇಟ್ಟಿರುವ ಹೊಯಿಸಲರ ಬೆಟ್ಟಿದೇವನಿರುವನು—ಎಂದು ನೀನು ಹಿಂದೆ ಹೇಳಿದ್ದುದು ಸರಿಯಾಗಿ ನೆನಪಿದೆ; ಅವನನ್ನು ನಿನ್ನ ಮಾತಿನಂತೆಯೇ ವೈಷ್ಣವನನ್ನಾಗಿ ಮಾಡಲೋಸುಗವೇ ಹೊರಟೆ; ಈ ಬೆಟ್ಟದ ಬಳಿ ಬರುವಲ್ಲಿ ಕತ್ತಲಾದುದರಿಂದ ಈ ಶಿಥಿಲ ದೇವಾಲಯದಲ್ಲಿ ಮಲಗಿದೆ. ಸರಿ, ಅದೇ ಕಡೆಯ ಮಾರ್ಗ. ಅವ



ನನ್ನ ವೈಷ್ಣವನನ್ನಾಗಿ ಮಾಡುತ್ತೇನೆ; ಅವನ ಸಹಾಯದಿಂದ ನಿನ್ನ ಸೇವೆಯನ್ನು ತೃಪ್ತಿಯಾಗುವ ತನಕ ಮಾಡುತ್ತೇನೆ. ಏನು, ದೇವ ಕಣ್ಮರೆಯಾದ! ಇದೇನು ಈ ಕಾಂತಿ! ಕಣ್ಣು ಚುಚ್ಚುತ್ತಿರುವ ಸೂರ್ಯರಶ್ಮಿ?' ಎನ್ನುತ್ತಾ ಮಲಗಿದ್ದ ರಾಮಾನುಜಾಚಾರ್ಯರು ಕಣ್ಣುಗಳನ್ನುಜ್ಜಿಕೊಳ್ಳುತ್ತಾ ಎದ್ದು ಕುಳಿತು, ಆಗ ತಾನೆ ಉದಯಿಸಿ ತನ್ನ ಕದಿರುಗಳನ್ನು ಎಲ್ಲೆಲ್ಲಿಯೂ ಎರಚುತ್ತಿದ್ದ ಪ್ರಭಾಕರನಿಗೆ ನಮಸ್ಕಾರ ಮಾಡಿ ಬಲಗಡೆ ತಿರುಗಿದರು.

ನಿರ್ಜನವಾದ ಅರಣ್ಯ. ಅಲ್ಲಲ್ಲಿ ಕಿಲಕಿಲ ಧ್ವನಿ ಮಾಡುತ್ತಿದ್ದ ಪಕ್ಷಿಗಳ ನಿನಾದವಲ್ಲದೆ ಮತ್ತೆ ಯಾವ ಶಬ್ದವೂ ಇಲ್ಲ. ಆಚಾರ್ಯರು ಮಲಗಿದ್ದ ದೇವಾಲಯದ ಮುಂದಿದ್ದ ದೊಡ್ಡ ಹುತ್ತವನ್ನು ಕಂಡು, 'ನಾನು ಕಂಡದ್ದು ಕನಸನ್ನೋ ಇಲ್ಲವೆ ದೇವನ ನೈಜ ಸ್ಥಿತಿಯನ್ನೋ? ಹುತ್ತದ ಮೇಲೆ ಪುಷ್ಕಲವಾಗಿ ಬೆಳೆದಿರುವ ತುಲಸಿಯ ಗಿಡ! ಹೀಗೆ ಹುಲುಸಾಗಿ ಬೆಳೆದಿರುವ ತುಲಸಿಯ ಗಿಡವನ್ನು ನನ್ನ ಜೀವನದಲ್ಲಿ ನಾನೆಲ್ಲಿಯೂ ನೋಡಿಲ್ಲ! ಹುತ್ತದ ಬಳಿಗೆ ಗೋವೊಂದು ಬರುತ್ತಿದೆ. ಅದರದು ಏನು ಸೊಗಸಾದ ಕಪಿಲವರ್ಣ. ನಾನು ಕನಸಿನಲ್ಲಿ ಕಂಡ ಗೋವೇ ಇದು! ಆಶ್ಚರ್ಯ!' ಎನ್ನುತ್ತಾ ಹುತ್ತದ ಕಡೆಯೇ ದೃಷ್ಟಿಸಿ ನೋಡಿದರು. ಗೋವು ಹುತ್ತದ ಮಗ್ಗುಲಿಗೆ ಬಂದು, ಅದರ ಮೇಲೆ ಹಾಲು ಸುರಿಸಿ ಹೊರಟು ಹೋಯಿತು. 'ದೇವಾ! ನಿನ್ನ ಮಾಯೆ ಊಹಿಸಲಸಾಧ್ಯ. ನಿನ್ನ ಭೃತ್ಯನಾದ ನನ್ನಿಂದ ಸೇವೆ ಮಾಡಿಸಿಕೊಳ್ಳಲು ಮೊದಲೇ ನನಗೆ ಆಜ್ಞೆ ಮಾಡಿದೆ. ನಾನು ಪುಣ್ಯವಂತ, ದೇವಾ!' ಎನ್ನುತ್ತಾ ಹುತ್ತಕ್ಕೆ ತಾವು ಕುಳಿತಲ್ಲಿಯೇ ನಮಸ್ಕಾರ ಮಾಡಿ, ಆಮೇಲೆ ಕೆಳಗೆ ಹಾಸಿಕೊಂಡಿದ್ದ ಉತ್ತರೀಯವನ್ನು ಮೈಮೇಲೆ ಹಾಕಿಕೊಂಡು, ಹುತ್ತದ ಬಳಿಗೆ ಬಂದು ಕೈಜೋಡಿಸಿಕೊಂಡು ನಿಂತರು.

ಭುಜದ ಮೇಲೆ ನೇಗಿಲುಗಳನ್ನು ಹೊತ್ತುಕೊಂಡು, ಕೈಯಲ್ಲಿ ಗುದ್ದಲಿ-ಹಾರೆಗಳನ್ನು ಎತ್ತಿಕೊಂಡು, ಎತ್ತುಗಳೊಡನೆ ಹೊಲ ಊಳಲು ಹುತ್ತದ ಬಳಿಯಲ್ಲಿದ್ದ ದಾರಿಯಲ್ಲಿ ಆದಿಕರ್ಣಾಟಕರಿಬ್ಬರು ಬರುತ್ತಿದ್ದರು. 'ಅಯ್ಯಾ, ಇಲ್ಲಿ ಸ್ವಲ್ಪ ಬನ್ನಿ' ಎಂದು ಆಚಾರ್ಯರು ನಮ್ರಭಾವದಿಂದ ಅವರನ್ನು ಕರೆದರು.

ಆದಿಕರ್ಣಾಟಕರಿಬ್ಬರೂ ಆಚಾರ್ಯರ ಮುಖವನ್ನು ದೃಷ್ಟಿಸಿ ನೋಡಿದರು.

'ಈರಾ, ಅವರ ಮುಖದಲ್ಲಿ ಏನು ಕಳೆ ಇದೆಯೋ!'

'ಹೌದಪ್ಪಾ; ಸ್ವಾಮಿಗಳ ಕಳೆ ಇದೆ.'

ಇಬ್ಬರೂ ಆಚಾರ್ಯರ ಬಳಿ ಬಂದರು; ಅವರನ್ನು ನಮಸ್ಕರಿಸಿದರು.

'ಅಜ್ಜಪ್ಪ, ನಿನ್ನ ಹೆಸರೇನು? ಈತ ಯಾರು?' ಎಂದು ಆಚಾರ್ಯರೇ ಮೊದಲು ಕೇಳಿದರು.


'ಸ್ವಾಮಿ, ಮರಿಯ ಎಂದು ನನ್ನ ಕರೀತಾರೆ. ಈತ ನನ್ನ ಮಗ ಈರ' ಎಂದು ಮುದುಕನು ಹೇಳಿದನು. ಅವರಿಬ್ಬರೂ ಆಚಾರ್ಯರಿಂದ ಸ್ವಲ್ಪ ದೂರ ಸರಿದರು.

'ಇರಲಿ ಬನ್ನಿರಪ್ಪ ಹತಿರಕ್ಕೆ.'

'ಸ್ವಾಮಿ. ನಾವು ಪಂಚಮರು. ಬುದ್ಧೀ, ನಿಮ್ಮನ್ನು ನೋಡಿದರೆ ಬ್ರಾಹ್ಮಣರಂತಿದ್ದೀರಿ.'

'ಪಂಚಮನಾದರೂ ಎಂಥ ಆಚಾರವಂತನಿವನು!' ಎಂದುಕೊಂಡು, 'ಮುದುಕಪ್ಪ, ಈ ಹುತ್ತದ ಬಳಿ ಎಂತಹ ಆಶ್ಚರ್ಯ!' ಎಂದು ಆಚಾರ್ಯರು ಹೇಳಿದರು.

'ಹೌದು ಬುದ್ಧೀ; ನನ್ನ ಬೂದುಬಣ್ಣದ ಹಸು ನಿತ್ಯ ಕಟ್ಟಿದ್ದ ಹಗ್ಗವನ್ನು ಕಿತ್ತುಕೊಂಡು ಬೆಳಿಗ್ಗೆ ಅಷ್ಟು ಹೊತ್ತಿಗೇನೇ ಹೋಗುತ್ತಿತ್ತು ಪುನಃ ಅದು ಮನೆಗೆ ಬಂದಾಗ ಹಾಲು ಕೊಡುತ್ತಲೇ ಇರಲಿಲ್ಲ. ಹೀಗೆ ನಿತ್ಯವೂ ಅದು ಹೋಗಲು ಏನು ಕಾರಣ—ಎಂದು ತಿಳಿಯೋಕೆ ಅದರ


LIFEBUOY
SOAP

ಹಿಂದೆ ಒಂದು ದಿನ ಹೋದೆ. ಅದು ಈ ಹುತ್ತದ ಹತ್ತಿರಕ್ಕೆ ಬಂದು, ಇದರ ಮೇಲೆ ಹಾಲು ಸುರಿಸಿತು. ಅದರ ಕೆಲಸವನ್ನು ನೋಡಿ, "ನೀನೂ ದೇವನ ಸೇವಕ" ಎಂದುಕೊಂಡು ಅದನ್ನು ಅಂದಿನಿಂದ ಕಟ್ಟಿಹಾಕೋದನ್ನು ಬಿಟ್ಟುಬಿಟ್ಟೆ. "ಈ ಹುತ್ತದಲ್ಲಿ ದೇವರಿದೆ. ಹಿಂದೆ ತುರುಕರ ದೊರೆಯೊಬ್ಬ ಬಂದು ದೇವಸ್ಥಾನ ಕೆಡವಿ, ಕಂಚಿನ ದೇವರನ್ನು ಎತ್ತಿಕೊಂಡು ಹೋದ. ಮೂರ್ತಿಯ ಚೆಂದಾನ ನೋಡಿ, ಒಡೆಯಲು ಮನಸ್ಸು ಬಾರದೆ ಕಲ್ಲ ದೇವರನ್ನು ಹಾಗೆಯೇ ಬೀಸಾಡಿ ಬಿಟ್ಟನಂತೆ. ಅದೇ ಈ ಹುತ್ತದಲ್ಲಿದೆ" ಎಂದು ನಮ್ಮ ತಾತಂದಿರು ಹಿಂದೆ ಹೇಳುತ್ತಿದ್ದರು, ಬುದ್ಧೀ" ಎಂದು ಮರಿಯ ಹೇಳಿದನು.

'ನೀವೆಲ್ಲಾ ಸ್ವಲ್ಪ ಸಹಾಯ ಮಾಡಿದರೆ ಈಗ ಹಾಳಾಗಿರುವ ಈ ದೇವಸ್ಥಾನವನ್ನು ಕಟ್ಟಿಸಿ, ದೇವನನ್ನು ಪ್ರತಿಷ್ಠೆ ಮಾಡುತ್ತೇನೆ'

'ನಾವು ಎಷ್ಟು ಸಹಾಯ ಮಾಡಿದರೆ ತಾನೆ ಏನು ಬುದ್ಧೀ; ದೇವಸ್ಥಾನದ ಪ್ರಾಕಾರಕ್ಕೆ ಬರೋದಕ್ಕೂ ನಮಗೆ ಯೋಗ್ಯತೆ ಇಲ್ಲ!'

'ಯೋಗ್ಯತೆ ಇಲ್ಲದೆ ಏನು, ಮರಿಯ! ಉತ್ಸವ ಕಾಲದಲ್ಲಿ ಮೂರು ದಿನವಾದರೂ ನೀವೆಲ್ಲಾ ದೇವಸ್ಥಾನದೊಳಕ್ಕೆ ಬರುವಂತೆ ಮಾಡುತ್ತೇನೆ. ಎಲ್ಲರ ಹೃದಯದಲ್ಲಿಯೂ ಇರುವ ದೇವ ಒಬ್ಬನೇ.'

'ನನ್ನೊಡೆಯಾ! ಬ್ರಾಹ್ಮಣರಲ್ಲೆಲ್ಲಾ ನಮ್ಮ ಜನಾನ ನೋಡಿ ನೀವೊಬ್ಬರೇ ಹೀಗೆ ಹೇಳಿದ್ದು. ನಮ್ಮ ಜನಕ್ಕೆಲ್ಲಾ ಹೇಳ್ತೀನಿ; ಏನು ಕೆಲಸ ಮಾಡಬೇಕಾದರೂ ನಾವು ಸಿದ್ಧರಿದ್ದೇವೆ.'

'ನಾನು ಇಂದು ಹಳೆಬೀಡಿಗೆ ಹೋಗಿ ದೊರೆಯನ್ನು ನೋಡಿ ಬರುತ್ತೇನೆ. ನನ್ನ ಕನಸಿನಲ್ಲಿ ದೇವ "ನಾನು ಇಲ್ಲಿ ಇದ್ದೇನೆ"ಂದು ಹೇಳಿದ್ದಾನೆ. ಇದೂ ಅಲ್ಲದೆ ನಿಮ್ಮ ಅಜ್ಜಂದಿರು ಇಲ್ಲಿ ವಿಗ್ರಹವಿದೆಯೆಂದು ಹೇಳುತ್ತಿದ್ದರು—ಎಂದು ನೀನೂ ಹೇಳುತ್ತೀಯೇ. ಆದುದರಿಂದ ಈ ಹುತ್ತದಲ್ಲಿ ದೇವರಿದ್ದೇ ಇದೆ. ಇದನ್ನು ಅಗೆದು ವಿಗ್ರಹವನ್ನು ತೆಗೆದಿಟ್ಟರೆ. ದೊರೆಯ ಸಹಾಯದಿಂದ ದೇವಾಲಯವನ್ನು ಕಟ್ಟಿಸುತ್ತೇನೆ.'

೨

ಹನ್ನೆರಡನೆಯ ಶತಮಾನದ ಆದಿಭಾಗ. ಭಾರತಕ್ಕೆಲ್ಲಾ ಒಬ್ಬ ಸಾರ್ವಭೌಮನಿಲ್ಲದ ಕಾಲ. ಎಲ್ಲೆಲ್ಲಿಯೂ ದಂಗೆಗಳು. ಪ್ರತಿಯೊಂದು ಪ್ರಾಂತ್ಯವೂ ಸ್ವತಂತ್ರ ರಾಜ್ಯ. ಇಂತಹ ಕಾಲದಲ್ಲಿಯೂ ಘಜನಿ, ಪಂಜಾಬ್ ಮತ್ತು ದೆಹಲಿ ಇವುಗಳನ್ನು ಘಜನಿ ಮಹಮೂದನ ಮೊಮ್ಮಗ ಅಹಮ್ಮದ್‌ಷಹನು ಆಳುತ್ತಿದ್ದನು. ಘಜನಿ ಮಹಮೂದನು ಭಾರತವನ್ನು ಜಯಿಸಿ, ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದುದು ಪಂಜಾಬ್ ಮತ್ತು ದೆಹಲಿ ಮಾತ್ರ.

ಅಹಮ್ಮದ್ ಷಹನು ಪ್ರಕೃತಿಪ್ರೇಮಿ; ರಾಜಋಷಿ, ಘಜನಿಯಲ್ಲಿ ತನ್ನ ಪ್ರತಿನಿಧಿಯಾಗಿ ತನ್ನ ತಮ್ಮ ಆದಿಲ್‌ಷಹನನ್ನಿಟ್ಟಿದನು. ತನ್ನ ಪ್ರಕೃತಿಪ್ರೇಮವನ್ನು ಈಡೇರಿಸಿಕೊಳ್ಳಲೋಸುಗವೇ ಆತನು ದೆಹಲಿಯಲ್ಲಿ ನಿಂತನು. ತನ್ನ ಅರಮನೆಯನ್ನು ದೆಹಲಿಯಲ್ಲಿ ಯಮುನಾ ತೀರದಲ್ಲಿ ಕಟ್ಟಿಸಿದ್ದನು. ಅರಮನೆಯ ಹಿಂಭಾಗದಲ್ಲಿಯೆ ಯಮುನೆಯ ಸೋಪಾನಗಳು. ಆ ಮೆಟ್ಟಿಲುಗಳ ಪಕ್ಕದಲ್ಲಿ, ಯಮುನೆಯ ಬಲದಡದ ಮೇಲೆಯೇ ರಾಜೋದ್ಯಾನ. ಅರಮನೆಯ ಹಿಂಭಾಗದಲ್ಲಿದ್ದ ಚಂದ್ರಮಹಲೇ ಬಾದಷಹನ ಏಕಮಾತ್ರ ಪುತ್ರಿಯಾದ ಮಮ್‌ತಾಜಳದು. ಅದರಲ್ಲಿ ಆಕೆ, ಆಕೆಯ ಸೋದರಮಾವನ ಮಗಳು ನೂರ್‌ಬೇಗಂ, ಮತ್ತು ಪಾದಷಹನ ಹಿಂದೂ ಮಂತ್ರಿಯ ಮಗಳೂ ಮಮ್‌ತಾಜಳ ಸಖಿಯೂ ಆದ ಸುಭದ್ರೆ, ಇವರು ವಾಸವಾಗಿರುತ್ತಿದ್ದರು.

ಚೈತ್ರಮಾಸದ ಹುಣ್ಣಿಮೆಯ ಸಾಯಂಕಾಲ ಮಮ್‌ತಾಜಳೂ ಆಕೆಯ ಇಬ್ಬರು ಗೆಳತಿಯರೂ ಯಮುನೆಯ ಮೆಟ್ಟಲುಗಳ ಮೇಲೆ ಕುಳಿತು ನೀರಿ

ನಲ್ಲಿ ಕಾಲುಗಳನ್ನಿಟ್ಟುಕೊಂಡು ಕೈಗಳಿಂದ ನೀರನ್ನು ಎರಚುತ್ತಲಿದ್ದರು. ಸೂರ್ಯನು ಆಗ-ತಾನೆ ಮುಳುಗುತ್ತಿದ್ದನು. ಪ್ರಕೃತಿ ಸೌಂದರ್ಯವನ್ನು ಅನುಭವಿಸುತ್ತಿದ್ದ ಎಲ್ಲರೂ ಮೌನವಾಗಿದ್ದರು. ಸ್ವಲ್ಪ ಹೊತ್ತಾದ ಮೇಲೆ ಮಮ್ತಾ-ಜಳೇ, 'ಭದ್ರಾ! ನಿನ್ನೆ ಒಂದು ಕನಸನ್ನು ಕಂಡೆ' ಎಂದು ನಸುನಗೆಯಿಂದ ಹೇಳಿದಳು.

'ಯಾವುದೇ ಅದು?' ಎಂದು ಸಖಿಯರಿ-ಬ್ಬರೂ ಹೇಳಿದರು.

'ಅದನ್ನು ಕೇಳಿ ನೀವಾರೂ ನಗಕೂಡದು.

'ಇಲ್ಲ: ಹೇಳು ತಾಜ್. ನಿನ್ನ ಸೋದರಿಯರೆ ನಾವೆಂದು ತಿಳಿ' ಎಂದು ಸುಭದ್ರೆ ಹೇಳಿದಳು.

'ಭದ್ರಾ! ಹಿಂದುಗಳಲ್ಲೆಲ್ಲಾ ನಿನ್ನನ್ನು ನಾನು ಬಹಳ ಮೆಚ್ಚಿದ್ದೇನೆ. ಅದೇನೋ ನೋಡು, ನನ್ನ ತಾಯಿಯಲ್ಲಿಯೂ ಇಲ್ಲದ ಪ್ರೇಮ ನನಗೆ ನಿನ್ನ ಮೇಲಿದೆ. ನನ್ನ ಆಸೆಗಳನ್ನೆಲ್ಲಾ ಈಡೇರಿಸುವುದರಲ್ಲಿ ನೀನು ಮೊದಲನೆಯವಳು. ಏನು ಸೊಗಸಾಗಿ ನನ್ನ ಚೆಲುವನನ್ನು ಸಿಂಗರಿಸುವೆಯೋ ನೀನು! ಆತ ನನ್ನ ಎರಡನೆಯ ಹೃದಯ, ನೂರ್. ನನ್ನ ಚೆಲುವ, ನೀವಿಬ್ಬರು ಇಷ್ಟು ಮಾತ್ರ ನನ್ನೊಡನಿದ್ದರೆ ನನಗೆ ಈ ಪ್ರಪಂಚದಲ್ಲಿ ಮತ್ತೇನೂ ಬೇಡ.'

'ನಮ್ಮ ಮೂವರಿಗಿಂತ ಇನ್ನೂ ಪ್ರೇಮವನ್ನು ಹೊಂದುವವನು ಬಂದಿದ್ದಾನೆ' ನೂರ್ ಬೇಗಂ ಹಾಸ್ಯ ಧ್ವನಿಯಿಂದ ಹೇಳಿದಳು.

'ಯಾರೆ ಅದು ಹೊಸದಾಗಿ ಬಂದಿರುವವರು?'

'ನಿನಗೆ ಗೊತ್ತಿಲ್ಲವೇನೇ? ತಾಜ್, ನೀನು ಭದ್ರೆಗೆ ಅದನ್ನು ಹೇಳಲಿಲ್ಲವೇ?........

'ಬೆಳಿಗ್ಗೆ ತುರ್ಕಿ ದೇಶದ ಸುಲ್ತಾನ್ ಬಂದಿದ್ದನೇ.'

'ಅವನಿಗೆ ಪಾದಷಹರು ಏನು ಹೇಳಿದರು?'

'ಪಾದಷಹರು ಮಮ್ಮೂನ ಕೇಳಿದರು. "ನಾನು ಯಾರನ್ನೂ ಮದುವೆಯಾಗುವುದಿಲ್ಲ, ಈಗ" ಎಂದು ಕಣ್ಣೀರು ಸುರಿಸುತ್ತಾ ಇವಳು ತಂದೆಗೆ ಹೇಳಿದಳು. "ನನ್ನ ಮಗಳಿಗೆ ಇನ್ನೂ ಒಂದು ವರ್ಷ ಮದುವೆ ಮಾಡುವುದಿಲ್ಲ" ಎಂದು ಪಾದಷಹರು ಸುಲ್ತಾನನಿಗೆ ಹೇಳಿದರು.'

'ಇಷ್ಟೇನೆ! ಅವನಂತಹರು ಎಷ್ಟು ಜನ ಬಂದು ಈ ವೇಳೆಗೆ ಮಮ್ಮೂನ ಕೇಳಿ ಹೋದರೋ! ಆ ಮಾತು ಹೋಗಲಿ! ನಿನ್ನ ಕನಸೇನು, ಅದನ್ನೇ ಬಿಟ್ಟೆಯಲ್ಲ, ತಾಜ್!' ಎಂದು ಸುಭದ್ರೆ ಹೇಳಿದಳು.

'ಅದನ್ನು ಕೇಳಿ ನೀವು ನಗುತ್ತೀರಿ' ಎಂದು ದನಿ ತೆಗೆದು ತಾಜ್ ಹೇಳಿದಳು.

'ಇಲ್ಲ ಹೇಳೆ ಅಂದರೆ' ಎಂದು ನೂರ್ ಬೇಗಂ ಓರೆಗಣ್ಣಿನಿಂದ ಮಮ್ತಾಜಳನ್ನು ನೋಡುತ್ತಾ ಹೇಳಿದಳು.

'ಒಂದು ದಿನ ರಾತ್ರಿ ನಾನೊಬ್ಬಳೇ ಈ ಮೆಟ್ಟಲುಗಳ ಮೇಲೆ ಕುಳಿತಿದ್ದೇನೆ. ಯಮುನೆಯು ಹರಿಯುವ ಧ್ವನಿಯಲ್ಲದೆ ಮತ್ತೆ ಯಾವ ಶಬ್ದವೂ ಇಲ್ಲ. ಪೂರ್ಣ ಚಂದ್ರನು ಪ್ರಕೃತಿಯನ್ನೆಲ್ಲಾ ತನ್ನ ಅಮೃತ ಕಿರಣಗಳಿಂದ ತುಂಬಿದ್ದ. ನಾನು ತಲೆಬಗ್ಗಿಸಿಕೊಂಡೇ ಎರಡೂ ಕೈಗಳಿಂದ ನೀರನ್ನು ಯಮುನೆಯಲ್ಲಿ ಚೆಲ್ಲುತ್ತಾ, ಉದ್ಭವಿಸುವ ಅಲೆಗಳನ್ನು ನೋಡುತ್ತಿದ್ದೆ. ಆಗ ಹಿಂದಿನಿಂದ ಬಂದು ಯಾರೋ ನನ್ನ ಕಣ್ಣು ಮುಚ್ಚಿದರು. "ಭದ್ರೇ! ಭದ್ರೇ! ಕಣ್ಣು ಬಿಡೆ!" ಎಂದೆ. ಉತ್ತರವೇ ಇಲ್ಲ. "ನೂರ್! ನೂರ್! ನಿನಗಲ್ಲವೇನೆ ಹೇಳುವುದು, ಕೈತೆಗೆಯೆ" ಎಂದು ಕೂಗಿದೆ. ಆಗ ನಗುವ ಧ್ವನಿಯಿಂದ ನನ್ನ ಚೆಲುವ, "ನಾನೆ ಮಮ್ಮ—ಅಯ್ಯೋ ಮುಗ್ಧೆ. ಕೈಮುಟ್ಟಿದೊಡನೆಯೇ ನನ್ನನ್ನು ತಿಳಿಯಲಾಗಲಿಲ್ಲವೆ?" ಎಂದು ನಸುನಗೆಯಿಂದ ಹೇಳಿದ. ನಾನು ತಲೆ ಎತ್ತಿ ಆತನ ಕಡೆಗೆ ನೋಡಿದೆ. ಏನು ಉಡುಪಿನ ವೈಚಿತ್ರ್ಯ! ಆತ ತಿಳಿಹಳದಿಯ ಚೀನಾಂಬರವನ್ನು ಉಟ್ಟಿದ್ದ; ನಡುವಿಗೆ ಹಸಿರು ರೇಷ್ಮೆಯ ವಸ್ತ್ರವನ್ನು ಬಿಗಿದಿದ್ದ. ಭುಜದ ಮೇಲೆ

ರಕ್ತಾಂಬರ ಒಪ್ಪುತ್ತಿದೆ. ನವಿಲುಗರಿಯಿಂದ ಕೂಡಿದ್ದ ತಲೆಯ ಮುಡಿಗೆ. ಕೈಯಲ್ಲಿ ಚಿನ್ನದ ಕೊಳಲು; ಕಾಲಲ್ಲಿ ಬಂಗಾರದ ಗೆಜ್ಜೆ. "ಮುಮ್ತಾ, ನನ್ನ ನೀನು ಎಂದಾದರೂ ಹೀಗೆ ಸಿಂಗರಿಸಿದ್ದೆಯಾ ?" ಎಂದು ಕೇಳಿದ. "ಇಲ್ಲ ನಾಳೆ ಸಿಂಗರಿಸುತ್ತೇನೆ" ಎಂದು ಉತ್ತರ ಕೊಟ್ಟೆ. "ನೋಡು ನೀನೂ ಬೇರೆ ತರದ ಉಡುಪನ್ನು ಹಾಕಿಕೊಳ್ಳಬೇಕು" ಎಂದು ನಸುನಗೆಯಿಂದ ನುಡಿದ. "ಹೇಗಿರಬೇಕು ಹೇಳು" ಎಂದು ನಾನೂ ನಸುನಗೆಯಿಂದ ಕೇಳಿದೆ. "ಕಾಶ್ಮೀರದ ಗುಲಾಬಿಯ ಸೂಕ್ಷ್ಮಾಂಬರವನ್ನುಡು. ಮೇಘ ವರ್ಣದ ರಾಕೆಯನ್ನು ತೊಡು. ಕಿವಿಯಲ್ಲಿ ಓಲೆಗಳಿರಲಿ. ಗಂಟು ಹಾಕಿದ ತಲೆಯಲ್ಲಿ ಮಲ್ಲಿಗೆಯ ಹೂವನ್ನು ಮುಡಿದುಕೋ. ಇವೆಲ್ಲದರ ಮೇಲೂ ನಿನ್ನ ಜರತಾರಿಯ ಬುರುಕಿ ಬರಲಿ." ಎಂದು ಹೇಳಿದ. "ಹಾಗೆಯೇ ಮಾಡುತ್ತೇನೆ" ಎಂದೆ. "ನಾಳೆ ರಾತ್ರಿ ಬರುತ್ತೇನೆ. ನಾನು ಹೇಳಿದ್ದು ನೆನಪಿದೆಯೋ ?" ಎಂದು ನಗುತ್ತಾ ಹೇಳಿ ಕಣ್ಮರೆಯಾದ, ಎಂದು ಮಮ್ತಾಜಳು ಹೇಳಿ, 'ಭದ್ರೆ ! ಭದ್ರೆ ! ನನ್ನ ದೇವ ಹೇಳಿದಂತೆ ನನ್ನನ್ನೂ ನನ್ನ ಚೆಲುವನನ್ನೂ ಸಿಂಗರಿಸು. ದೇವ ನಿನಗೆ ಸಿಂಗರಿಸುವ ವಿದ್ಯೆ ಕಲಿಸಿದ್ದಾನೆ. ನನಗೆ ಸಿಂಗರಿಸುವುದಾಗಲಿ ಸಿಂಗರಿಸಿಕೊಳ್ಳುವುದಾಗಲಿ ಬರುವುದಿಲ್ಲ' ಎಂದು ಒಂದು ತೆರದ ದೈನ್ಯದಿಂದ ಮಮ್ತಾಜ್ ಹೇಳಿದಳು.

'ನಿನ್ನ ರೂಪಿನ ಮುಂದೆ ಯಾವ ಸಿಂಗಾರ ತಾನೆ ಬೇಕು, ತಾಜ್ ! ನಾನು ಗಂಡಸಾಗಿದ್ದರೆ–' ಎಂದು ಸುಭದ್ರೆ ಮಮ್ತಾಜಳನ್ನು ಓರೆಗಣ್ಣಿನಿಂದ ನೋಡುತ್ತಾ ಹೇಳಿದಳು.

'ಆಗ ನಿನ್ನನ್ನು ನಾನು ಮದುವೆಯಾಗುತ್ತಿದ್ದೆನೇ, ಭದ್ರೆ!' ಎಂದು ನೂರ್ ಬೇಗಂ ನಸುನಗೆಯಿಂದ ನುಡಿದಳು.

'ಭದ್ರಾ ! ಆಗಲೇ ರಾತ್ರಿಯಾಗುತ್ತ ಬಂದಿತು. ಇನ್ನು ಸ್ನಾನಮಾಡಿ ಹೋಗೋಣ. ನಾನು ನೂರ್ ಅರಮನೆಗೆ ಹೋಗಿ ಒಂಬತ್ತು ಗಂಟೆಗೆ ಚಂದ್ರ ಮಹಲಿಗೆ ಬರುತ್ತೇನೆ. ಅಷ್ಟರ ವೇಳೆಗೆ ನೀನು ಚೆಲುವನನ್ನು ಸಿಂಗರಿಸಿರಬೇಕು.'

'ಇದೇನು ಇವಳು ಸುಮ್ಮನೆ ಹೀಗೆಲ್ಲಾ ಹೇಳುತ್ತಿದ್ದಾಳೆ! ದೇವ ಇವಳ ಬಳಿ ಬರುವನೇ? ತನ್ನನ್ನು ಮಹಮ್ಮದೀಯ ರಾಧೆಯಂತೆ ಸಿಂಗರಿಸಬೇಕಂತೆ! .... ನನಗೆ ಯಾಕೆ ಆ ಯೋಚನೆ ದೇವಾ ! ನಿನ್ನ ಮಾಯೆ ಏನೋ ನಂಬಿದವರಾರು? ಎಂತಹ ಸುಲ್ತಾನನು ಬಂದರೂ ವರಿಸೆನೆನ್ನುತ್ತಾಳೆ. ನಿನ್ನ ವಿಗ್ರಹವನ್ನು ಒಂದು ನಿಮಿಷವೂ ಬಿಟ್ಟಿರಳು' ಎಂದು ಯೋಚಿಸುತ್ತಾ ಸುಭದ್ರೆ ನೀರಿನಲ್ಲಿಳಿದಳು.

ಸ್ನಾನ ಪೂರೈಸಿದ ಮೇಲೆ ಮೂವರೂ ಅರಮನೆಯ ಹತ್ತಿರ ಬಂದರು. ಮಮ್ತಾಜ್ ಮತ್ತು ನೂರ್‌ಬೇಗಂ ಅರಮನೆಯೊಳಕ್ಕೆ ಹೋದರು. ಸುಭದ್ರೆ ಚೆಲುವದೇವನನ್ನು ಸಿಂಗರಿಸಲು ಚಂದ್ರಮಹಲಿಗೆ ಬಂದಳು.

೩

ರಾತ್ರಿ ಒಂಭತ್ತು ಗಂಟೆಯಾಯಿತು. ಸುಭದ್ರೆ ಚೆಲುವನನ್ನೂ ಮಮ್ತಾಜಳ ಕೊಠಡಿಯನ್ನೂ ಸಿಂಗರಿಸಿ, ನವಾಬನಂದಿನಿಯ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದಳು ; ಸ್ವಲ್ಪ ಹೊತ್ತಾದ ಮೇಲೆ ಮಮ್ತಾಜಳು ನೂರ್‌ಬೇಗಂಳೊಡನೆ ತನ್ನ ಕೊಠಡಿಗೆ ಬಂದು, ಅದನ್ನು ನೋಡಿ 'ಭಲೆ ಸುಭದ್ರಾ ! ಅಲಂಕಾರ ಮಾಡುವುದರಲ್ಲಿ ನಿನಗೆ ಮೊದಲ ಬಹುಮಾನ ಕೊಡಬೇಕು' ಎಂದಳು.

'ನಿನ್ನ ಗಂಡ ಇದನ್ನು ಮೆಚ್ಚಿ ನಿನಗೆ ಮೊದಲ ಬಹುಮಾನ ಕೊಟ್ಟರೆ, ಆಮೇಲೆ ನನಗೆ ಇದಕ್ಕೆ ಎರಡನೆಯ ಬಹುಮಾನ ಕೊಡು' ಎಂದು ನಗುತ್ತಾ ಸುಭದ್ರೆ ಉತ್ತರ ಕೊಟ್ಟಳು.

'ಗಂಡ ಯಾರೆ ? ಈ ದಿನ ಬೆಳಿಗ್ಗೆ ಬಂದಿದ್ದ ಸುಲ್ತಾನನೇ ?' ಎಂದು ನೂರ್ ಬೇಗಂ ನಡುವೆ ಮಾತು ಹಾಕಿದಳು.

'ಯಾವೋನೇ ಸುಲ್ತಾನ್? ಅವನ ಹೆಸರನ್ನು ನನ್ನ ಬಳಿ ಎತ್ತಬೇಡ. ಇನ್ನು ಮೇಲೆ ಅವನ ಹೆಸರನ್ನು ನನ್ನ ಬಳಿ ಎತ್ತಿದರೆ ನಿನ್ನನ್ನೇ ಅವನಿಗೆ ಕೊಡುತ್ತೇನೆ, ನೋಡು' ಎಂದು ದರ್ಪದಿಂದ ಮುಮ್‌ತಾಜ್ ಹೇಳಿದಳು.

'ಹಾಗಾದರೆ ಅವನು ಪಕ್ಕದಲ್ಲಿಯೇ ಇರುವವನಲ್ಲ?' ಎಂದು ಸುಭದ್ರೆ ಹೇಳುತ್ತಾ ನಕ್ಕಳು.

ಮುಮ್‌ತಾಜಳು ಮುಖದಲ್ಲಿ ಮುಗುಳು ನಗೆ ಸೂಸಿ, 'ಎಲ್ಲಿ ಭದ್ರಾ, ನನ್ನ ಚೆಲುವನನ್ನು ತೆಗೆ' ಎಂದಳು.

'ನನ್ನ-ದೊಂದು-ಬಯಕೆ-ತಾಜ್' ಎಂದು ಸುಭದ್ರೆ ರಾಗ ತೆಗೆದು ಹೇಳಿದಳು.

'ನಿನ್ನ ಬಯಕೆ ಏನೇ ಇರಲಿ ಭದ್ರಾ! ಅದನ್ನು ಈಡೇರಿಸಿಕೊಡುತ್ತೇನೆ.'

'ನಿನ್ನನ್ನು ಅಲಂಕರಿಸಿದ ಮೇಲೆ ಚೆಲುವನ ಬಳಿ ನಿನ್ನನ್ನು ಕುಳ್ಳಿರಿಸುತ್ತೇನೆ ಅಪ್ಪರವರೆಗೂ ಮಂಚದ ಪರದೆಯನ್ನು ತೆರೆಯಬೇಡ. ಚೆಲುವನನ್ನು ಸಿಂಗರಿಸಿ ಮಂಚದ ಮೇಲೆ ಕುಳ್ಳಿರಿಸಿದ್ದೇನೆ.'

ಸುಭದ್ರೆ ನೂರ್ ಬೇಗಂ ಇಬ್ಬರೂ ಸೇರಿ, ಮುಮ್‌ತಾಜಳನ್ನು ಅವಳ ಚೆಲುವನ ಇಷ್ಟದಂ-ತೆಯೇ ಸಿಂಗರಿಸಿದರು.

ಮುಮ್‌ತಾಜಳು ಹಾಸಿಗೆಯ ಮೇಲಿದ್ದ ಚೆಲುವನ ಬಳಿ ಕುಳಿತಳು. ಸುಭದ್ರೆ ಆಗ ಅವಳ ಮುಖವನ್ನು ನೋಡಿ ನಕ್ಕಳು. ನೂರ್‌ಬೇಗಂ ಅಲಮಾರಿನಲ್ಲಿದ್ದ ಚಿನ್ನದ ತಟಿಯಲ್ಲಿ ಮಾಡಿಟ್ಟ ಆರತಿಯನ್ನು ತಂದಳು. ಸುಭದ್ರೆಯು ಚೆಲುವ ಮತ್ತು ಮುಮ್‌ತಾಜ್ ಇಬ್ಬರಿಗೂ ಎರಡು ಹೂ ಮಾಲೆಗಳನ್ನು ಹಾಕಿದಳು. ನೂರ್ ಮತ್ತು ಸುಭದ್ರೆ ದಂಪತಿಗಳಿಗೆ ಆರತಿಯನ್ನು ಬೆಳಗಿದರು.

ಆಗ ನೂರ್‌ಬೇಗಂ, 'ಏನು ಸುಭದ್ರಾ, ಗಂಡ ಹೆಂಡತಿಗಿಂತ ಚಿಕ್ಕವ!' ಎಂದು ಹೇಳಿದಳು.

'ಹೌದೇ; ನಾನು ನಿನಗೆ ಹಿಂದೆಯೇ ಹೇಳಿರಲಿಲ್ಲವೇ ನಮ್ಮ ಕೃಷ್ಣ ರಾಧೆಗಿಂತ ಚಿಕ್ಕವ ಎಂದು.'

'ನೆನಪಿಗೆ ಬಂತು! ನೆನಪಿಗೆ ಬಂತು! ಹಾಗಾದರೆ ಚೆಲುವ ಕೃಷ್ಣ; ತಾಜ್ ರಾಧೆ; ನೀನು ಸುಭದ್ರಾ!'

ಮುಮ್‌ತಾಜಳು ಚೆಲುವ ಮೂರ್ತಿಯನ್ನು ಅಪ್ಪಿ ಮುದ್ದಿಟ್ಟಳು!

ಸುಭದ್ರೆ 'ಇನ್ನು ನಾವು ಬರುತ್ತೇವೆ, ತಾಜ್, ನಿನ್ನ ಚೆಲುವನನ್ನು ನಾಳೆ ಬಿಟ್ಟಿರಲು ಅಪ್ಪಣೆ ಕೇಳು. ಬೆಳಗಿನಲ್ಲಿಯೇ ನಾವೆಲ್ಲಾ ಅಮೃತ ಮಹಲಿಗೆ ಹೋಗಬೇಕು' ಎಂದಳು.

೪

ಮಾರನೆಯ ದಿನ ಬೆಳಿಗ್ಗೆ ಸೂರ್ಯೋದಯವಾಗಿ ಸ್ವಲ್ಪ ಹೊತ್ತಾಗಿತ್ತು: ಅರಮನೆಯ ತನ್ನ ಬೈಠಕ್‌ಖಾನೆಯಲ್ಲಿ ನವಾಬ್ ಅಹಮದ್‌ಷಹನು ಕೆನ್ನೆಯ ಮೇಲೆ ಕೈಯಿಟ್ಟುಕೊಂಡು, ತಲೆ ಬಗ್ಗಿಸಿಕೊಂಡು ಯೋಚಿಸುತ್ತಾ ಕುಳಿತಿದ್ದನು. ಆಗ ಅವನ ವಜೀರ ಆಲಂಷಹನು ಅಲ್ಲಿಗೆ ಬಂದು, 'ಪಾದಷಹ! ಸುಲ್ತಾನರು ಇಂದು ತುರ್ಕಿಗೆ ಪ್ರಯಾಣ ಬೆಳೆಸಿದರು' ಎಂದನು;

'ಹೂಂ!' ಎಂದು ತಲೆಯನ್ನು ಮೇಲಕ್ಕೆತ್ತಿ, ವಜೀರನ ಮುಖವನ್ನು ನೋಡಿ, ಪಕ್ಕದಲ್ಲಿದ್ದ ಆಸನವನ್ನು ವಜೀರನಿಗೆ ಕುಳಿತುಕೊಳ್ಳೆಂದು ಪಾದಷಹನು ತೋರಿಸಿದನು. ವಜೀರನು ಕುಳಿತು, 'ಪಾದಷಹ! ಸುಮ್ಮನೆ ಯೋಚನೆ ಮಾಡಿ ಪ್ರಯೋಜನವೇನು? ನಿಮ್ಮ ಮಗಳಿಗೆ ಎಂದು ಮನಸ್ಸು ಬರುತ್ತದೆಯೋ ಅಂದು ಮದುವೆ ಮಾಡಿಕೊಳ್ಳಲಿ' ಎಂದನು.

'ಹಾಗಲ್ಲ ಆಲಂಷಹ; ತುರ್ಕಿಯ ಸುಲ್ತಾನ! ಅವನಂತಹ ಐಶ್ವರ್ಯವಂತ, ರೂಪವಂತ, ವಿದ್ಯಾವಂತ, ಬಲವಂತ ಈ ಪ್ರಪಂಚದಲ್ಲಿಯೇ ಇಲ್ಲ. ಇಂತಹವನು ನನ್ನಂಥ ದೀನನ ಮಗಳನ್ನು ಕೇಳಲು ಬಂದರೆ ಆಕೆ ಕೊಡುವ ಉತ್ತರವೇನು? ಮುಖ್ಯ ಇಲ್ಲ ನಮಗೆ ಸುಲ್ತಾನನನ್ನು ಅಳಿಯ-

ನನ್ನಾಗಿ ಮಾಡಿಕೊಳ್ಳುವ ಪುಣ್ಯ. ಸುಲ್ತಾನ ರೂಪವಂತ— ಎಂದು ತಾಜಳಿಗೆ ಹೇಳಿದರೆ "ನನ್ನ ಕೈ ಹಿಡಿಯುವವನು ಅವನಿಗಿಂತ ರೂಪವಂತ, ಅವನಿಗಿಂತ ಐಶ್ವರ್ಯವಂತ, ಬಲವಂತ" ಎನ್ನುತ್ತಾಳೆ. ಯಾರೋ ಆತ ಆ ಅಲ್ಲಾನೇ ಬಲ್ಲ!' ಎಂದು ನಿಟ್ಟುಸಿರನ್ನು ಬಿಡುತ್ತಾ ಪಾದಷಹನು ಹೇಳಿದನು. ವಜೀರನು ಯಾವ ಉತ್ತರವನ್ನು ಕೊಡದೆ ಸುಮ್ಮನಿದ್ದನು.

'ನೋಡು ಆಲಂಷಹ. ನಮ್ಮಜ್ಜ ಈ ದೇಶದ ಎಲ್ಲಾ ವಿಗ್ರಹಗಳನ್ನೂ ಕೊಳ್ಳೆ ಹೊಡೆದು ತಂದನಷ್ಟೆ. ಅವುಗಳಲ್ಲಿ ಒಂದನ್ನು ತನ್ನ ಚಿಕ್ಕಂದಿನಲ್ಲಿ —ತಾಜ್ ಆಟದ ಗೊಂಬೆಗಾಗಿ ಕೇಳಿ ತೆಗೆದುಕೊಂಡಳು. ಅದರ ಹೆಸರೇನು? ಓ, ನೆನಪಿಗೆ ಬಂತು; ಚೆಲುವನಂತೆ! ಅದರ ಹೆಸರು ಅನ್ವರ್ಥನಾಮ. ಆಲಂಷಹ! ಯಾವುದನ್ನೂ ಲಕ್ಷಿಸದೆ ವಿಗ್ರಹಗಳನ್ನೆಲ್ಲಾ ಛೇದಿಸಿದ ನಮ್ಮಜ್ಜ ಮಹಮೂದಷಹನ ಹೃದಯವನ್ನು ಸಹ ಕರಗಿಸಿ ತನ್ನ ಪಾಡು ಗಟ್ಟಿಯಾಗುವಂತೆ ಮಾಡಿಕೊಂಡಿದೆ ಆ ವಿಗ್ರಹ! ಅದೊಂದಿದ್ದರೆ ತಾಜಳಿಗೆ ಸಾಕು. ವಯಸ್ಸಾದ ಹುಡುಗಿ. ಅನ್ಯಾಯವಾಗಿ ಯೌವನವನ್ನು ಮರಳುಗಾಡಿನಲ್ಲಿ ಬಿದ್ದ ಮಳೆಯಂತೆ ಕಳೆಯುತ್ತಿದ್ದಾಳೆ' ಎಂದು ಪಾದಷಹನು ಹೇಳಿದನು.

ಆಗ ಆಳೊಬ್ಬನು ಬಂದು ಮೊಳಕಾಲೂರಿ ಪಾದಷಹನನ್ನು ನಮಸ್ಕರಿಸಿ, 'ಪಾದಷಹ! ದಕ್ಷಿಣ ದೇಶದಿಂದ ಬ್ರಾಹ್ಮಣನೊಬ್ಬನು ತಮ್ಮನ್ನು ನೋಡಬೇಕೆಂದು ಬಂದಿದ್ದಾನೆ' ಎಂದು ಹೇಳಿದನು.

'ಈಗ ನೋಡಲಾಗುವುದಿಲ್ಲ ಎಂದು ಆತನಿಗೆ ಹೇಳು.'

'ಅಪ್ಪಣೆ ಖಾವಂದ್' ಎಂದು ಪುನಃ ಪಾದಷಹನನ್ನು ನಮಸ್ಕರಿಸಿ ಆಳು ಹೊರಟು ಹೋದನು.

'ಪಾದಷಹ! ಈ ದಿನ ಘಜನಿಯಿಂದ ಕಾಗದ ಬಂದಿದೆ' ಎಂದು ವಜೀರನು ಹೇಳಿದನು.

'ಏನೆಂದು?'

'ಅಲ್ಲಿ ಗಲಭೆ ಬಹಳವಂತೆ. ನಿಮ್ಮ ತಮ್ಮಂದಿರು ನಿಮ್ಮನ್ನು ಸೈನ್ಯ ಸಮೇತ ತಕ್ಷಣ ಬರಹೇಳಿದ್ದಾರೆ.'

'ಆಗಲಿ ಮಧ್ಯಾಹ್ನ ಸೈನ್ಯದೊಡನೆ ಘಜನಿಗೆ ಹೊರಡೋಣ, ಆಲಂಷಹ!'

ಆಗ ಪುನಃ ಅದೇ ಆಳು ಪ್ರವೇಶಿಸಿ ಪಾದಷಹನನ್ನು ನಮಸ್ಕರಿಸಿ, ದೈನ್ಯದಿಂದ "ಖಾವಂದ, ಅವರೊಡನೆ ಒಂದು ನಿಮಿಷ ಮಾತಾಡಿ ಹೊರಟು ಹೋಗುತ್ತೇನೆ. ಅವರಿಗೆ ನನ್ನ ಸಲಾಂಗಳನ್ನು ಹೇಳಿ, ದಕ್ಷಿಣ ದೇಶದಿಂದ ಬಂದಿದ್ದೇನೆಂದು ಹೇಳು" ಎಂದು ಬ್ರಾಹ್ಮಣನು ನನ್ನನ್ನು ಪೀಡಿಸಿದನು, ಪಾದಷಹ' ಎಂದನು.

'ಆಗಲಿ ಆತನನ್ನು ಬರಹೇಳು.'

ಸ್ವಲ್ಪ ಹೊತ್ತಾದ ಮೇಲೆ ಆಳು ಬ್ರಾಹ್ಮಣನನ್ನು ಕರೆದುಕೊಂಡು ಪಾದಷಹನ ಮುಂದೆ ಬಿಟ್ಟು, ನೆಲಮುಟ್ಟಿ ಸಲಾಂ ಮಾಡಿ ಹಿಂಜರಿದನು.

ಪಾದಷಹನು 'ನಿಮ್ಮ ಹೆಸರೇನು?' ಎಂದು ಬ್ರಾಹ್ಮಣನನ್ನು ಕೇಳಿದನು.

'ಪಾದಷಹ! ದೀರ್ಘ ಆಯುಷ್ಯವಂತನಾಗಿರು. ನನ್ನನ್ನು ರಾಮಾನುಜ ಎಂದು ಕರೆಯುವರು.'

'ನನ್ನಿಂದೇನಾಗಬೇಕು?'

'ನನ್ನ ದೇವಮೂರ್ತಿ ನಿಮ್ಮ ಬಳಿ ಇದೆ. ಅದನ್ನು ದಯಪಾಲಿಸಬೇಕು, ಪಾದಷಹ!'

'ಪಕ್ಕದ ಕೊಟಡಿಯಲ್ಲಿ ವಿಗ್ರಹಗಳೆಲ್ಲಾ ಬಿದ್ದಿವೆ. ನಿಮ್ಮ ದೇವರಾವುದೋ ಅದನ್ನು ತೆಗೆದುಕೊಂಡು ಹೋಗಿ. ಆಲಂಷಹ! ಇವರನ್ನು ಪಕ್ಕದ ಕೊಟಡಿಗೆ ಕರೆದುಕೊಂಡು ಹೋಗಿ ವಿಗ್ರಹಗಳನ್ನು ತೋರಿಸಿ.'

'ಅಪ್ಪಣೆ ಖಾವಂದ' ಎಂದು ಆಲಂಷಹನು ಪಾದಷಹನಿಗೆ ಹೇಳಿ, ರಾಮಾನುಜಾಚಾರ್ಯ

ರೊಡನೆ ಪಕ್ಕದ ಕೊಟಡಿಗೆ ಹೋದನು.

ಅವರಿಬ್ಬರೂ ಪುನಃ ಪಾದಷಹನ ಬಳಿಗೆ ಬಂದರು. ವಜೀರನು ಅಲ್ಲಿ ವಿಗ್ರಹವಿಲ್ಲವೆಂದು ಪಾದಷಹನಿಗೆ ತಿಳಿಸಿದನು. 'ಆದರೆ: ನಮ್ಮಲ್ಲಿ ಆ ವಿಗ್ರಹವಿಲ್ಲ' ಎಂದು ಪಾದಷಹನು, ಆಚಾರ್ಯರಿಗೆ ಹೇಳಿದನು.

ಆಚಾರ್ಯರು ಸ್ವಲ್ಪ ಹೊತ್ತು ಯೋಚಿಸಿ, 'ಪಾದಷಹ! ಅದು ನಿಮ್ಮ ಮಗಳ ಬಳಿ ಇದೆ' ಎಂದು ನಿಧಾನವಾಗಿ ನಮ್ರಭಾವದಿಂದ ಪಾದ ಷಹನಿಗೆ ಹೇಳಿದರು.

'ನಿಮಗೆ ಹೇಗೆ ಗೊತ್ತು?' ಎಂದು ಪಾದ-ಷಹನು ಕಣ್ಣುಗಳನ್ನು ಕೆಂಪು ಮಾಡಿಕೊಂಡು ಹೇಳಿದನು.

'ಖಾವಂದ! ಬಡವನ ಮೇಲೆ ಕೋಪ ಬೇಡ. ನನ್ನ ದೇವ ಕನಸಿನಲ್ಲಿ ಬಂದು ತಾನು ನಿಮ್ಮ ಮಗಳ ಬಳಿ ಇರುವುದಾಗಿ ಹೇಳಿದ.'

'ಹಾಗೋ! ಏನು ನಿಮ್ಮ ವಿಗ್ರಹದ ಹೆಸರು?.... ಹಾಳು ಮರೆತೇ ಹೋಗುತ್ತೆ.. ಹೋ ಚೆಲುವ ಎಂದೋ?'

'ಹೌದು ಪಾದಷಹ! ಅದು ನನ್ನ ಶಲ್ವ-ಪುಳ್ಳೆ.'

'ಏನು, ವಿಗ್ರಹಕ್ಕೆ ಜೀವವಿದೆಯೇ? ಈತನ ಕನಸಿನಲ್ಲಿ ಅದು ಹೇಗೆ ಬಂದು ಹೇಳಿತು? ನನ್ನ ಮಗಳು ಅದನ್ನು ಅಷ್ಟು ಪ್ರೀತಿಸಲು ಕಾರಣ ವೇನು? ಅವಳ ಗಂಡ ಅದೇನೋ? ಆ ಕಂಚು! ಏನಾದರೂ ಆಗಿರಲಿ ಅದು. ಆ ಹಾಳು ತೊಲಗಿಹೋದರೆ ನನ್ನ ಮಗಳ ಮನಸ್ಸು ಸರಿ ಯಾದ ಸ್ಥಿತಿಗೆ ಬಂದು, ಸುಲ್ತಾನನನ್ನು ವರಿಸ ಬಹುದು ಎಂದುಕೊಂಡು, 'ಬನ್ನಿ, ನಿಮ್ಮ ವಿಗ್ರಹವನ್ನು ಕೊಡುತ್ತೇನೆ' ಎಂದು ಆಚಾರ್ಯ ರಿಗೆ ಪಾದಷಹನು ಹೇಳಿದನು.

ಮೂವರೂ ಚಂದ್ರಮಹಲಿನಲ್ಲಿದ್ದ ಮಮ್ತಾಜಳ ಕೊಟಡಿಯ ಬಳಿ ಬಂದರು. ಆಗ ಪಾದಷಹನು 'ತಾಜ್ ಎಲ್ಲಿ?" ಎಂದು ಕೊಟಡಿಯ ಬಳಿ ನಿಂತಿದ್ದ ದಾಸಿಯನ್ನು ಕೇಳಿದನು.

'ಅವರು ತಮ್ಮ ಗೆಳತಿಯರೊಡನೆ ಅಮೃತ ಮಹಲಿಗೆ ಹೋಗಿದ್ದಾರೆ. ಖಾವಂದ್' ಎಂದು ದಾಸಿಯು ಹೇಳಿದಳು.

'ಊ! ಬಾಗಿಲು ತೆರೆ.'

'ಯಾರನ್ನೂ ನಾನು ಬರುವ ವರೆಗೂ ಬಿಡ ಬೇಡ ಎಂದು ಅಪ್ಪಣೆ ಕೊಟ್ಟಿದ್ದಾರೆ, ಪಾದ-ಷಹ.'

'ಏನು ನನ್ನನ್ನೂ!'

'ನಿಮ್ಮನ್ನೂ ಸಹ, ಖಾವಂದ್.'

'ಬಾಗಿಲ ತೆರೆಯುವೆಯೋ ಇಲ್ಲವೊ' ಎಂದು ಪಾದಷಹನು ಕಣ್ಣುಗಳಿಂದ ಕಿಡಿಗಳನ್ನು ಸುರಿ ಸುತ್ತಾ ಕೇಳಿದನು.

ದಾಸಿಯ ನಡುಗುವ ಕೈಯಿಂದ ಬೀಗದ ಕೈಯ ಗೊಂಚಲ ನೆಲದ ಮೇಲೆ ಬಿತ್ತು. ಪಾದ-ಷಹನೇ ಅದನ್ನು ಎತ್ತಿಕೊಂಡು ಬಾಗಿಲನ್ನು ತೆಗೆದನು.

ಆಚಾರ್ಯರು ಅಲ್ಲಿದ್ದ ಹಾಸಿಗೆಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಎದ್ದು ಕುಳಿತು, ಎರಡು ಕೈಗಳನ್ನೂ ಜೋಡಿಸಿ, ಚೆಲುವ ಸ್ವಾಮಿಯ ಸ್ತೋತ್ರವನ್ನು ಹಾಡಿದರು. ಮಂಚದ ತೆರೆ ಯನ್ನು ತಳ್ಳಿ ಹದಿನಾರು ವರ್ಷದ ಸುಂದರ ಬಾಲಕನು ನೆಗೆಯುತ್ತಾ ಬಂದು ಆಚಾರ್ಯರ ತೊಡೆಯ ಮೇಲೆ ಕುಳಿತನು. ಬಾಲಕನ ಕಾ-ಲಿನ ಗೆಜ್ಜೆಗಳನ್ನೂ ಸೊಗಸಿನ ಉಡುಪನ್ನೂ ನೋಡಿ, ಆಚಾರ್ಯರು ಸಂತೋಷಸಾಗರದಲ್ಲಿ ಮುಳುಗಿ, ಆತನ ತಲೆಯನ್ನು ಪುತ್ರಪ್ರೇಮದಿಂದ ಆಘ್ರಾಣಿಸುತ್ತಾ, 'ನನ್ನ ಶಲ್ವಪುಳ್ಳೆ! ನನ್ನ ಶಲ್ವ ಪುಳ್ಳೆ!' ಎಂದು ಅಪ್ಪಿಕೊಂಡು ಮುದ್ದಿಟ್ಟರು.

ಈ ದೃಶ್ಯವನ್ನು ಕಣ್ಣಾರೆ ನೋಡುತ್ತಿದ್ದ ಪಾದಷಹನೂ ಆಲಂಷಹನೂ ಸ್ತಂಭೀಭೂತ ರಾದರು. 'ಸತ್ಯವಂತನಾದ ಭಕ್ತನೀತ!' ಎಂದು ಪಾದಷಹನು ಆಲಂಷಹನಿಗೆ ಹೇಳಿ, 'ಆಲಂಷಹ! ಈತನಿಗೆ ಬೇಕಾದ ಎಲ್ಲಾ

ಪ್ರಯಾಣಸನ್ನಾಹಗಳನ್ನೂ ಮಾಡಿಕೊಡು. ನಮ್ಮ ಭಾಂಡಾರದಲ್ಲಿ ಕಾಲು ಭಾಗವನ್ನು ಇವರಿಗೆ ಕೊಟ್ಟು ಕಳುಹಿಸು' ಎಂದನು.

೫

ಆಚಾರ್ಯರು ಚೆಲುವ ಮೂರ್ತಿಯನ್ನು ತೆಗೆದುಕೊಂಡು ಹೋದ ಎರಡನೆಯ ದಿನ ಬೆಳಗಿನಲ್ಲಿ, ಅಮೃತ ಮಹಲಿನ ಉದ್ಯಾನದ ಹಾಸುಗಲ್ಲಿನ ಮೇಲೆ ಮಮ್‌ತಾಜಳು ಚಿಂತಾಕ್ರಾಂತಳಾಗಿ ಕುಳಿತಿದ್ದಳು. ಸುಭದ್ರಾ, ನೂರ್‌ಬೇಗಂ ಅವಳ ಬಳಿಗೆ ಬಂದು, 'ಮಮ್ಮೂ, ಯಾಕೆ ಹೀಗೆ ಯೋಚಿಸುತ್ತಿದ್ದೀಯೆ? ಈ ದಿನ ಸಂಜೆಯೇ ಚಂದ್ರಮಹಲಿಗೆ ಹೊರಟುಬಿಡೋಣ' ಎಂದರು.

'ಭದ್ರಾ, ನಿನ್ನೆಯೇ ಹೋಗಿದ್ದರೆ ಚೆನ್ನಾಗಿತ್ತು' ಎಂದು ನಿರಾಶೆಯಿಂದ ಮಮ್‌ತಾಜಳು ಹೇಳಿದಳು.

'ಅವಳ ಗಂಡನನ್ನು ಪಾಪ ಒಂದು ದಿನ ಕೂಡಾ ಅವಳು ಬಿಟ್ಟಿರಲಾರಳೆ' ಎಂದು ನೂರ್‌ಬೇಗಂ ಹಾಸ್ಯಧ್ವನಿಯಿಂದ ಹೇಳಿದಳು.

ಮಮ್‌ತಾಜಳು ನೂರ್‌ಬೇಗಂಳನ್ನು ದುರುದುರನೆ ನೋಡಿದಳು. ಸ್ವಲ್ಪ ಹೊತ್ತಾದ ಮೇಲೆ, 'ನೂರ್ ನಿನಗೆ ಪರಿಹಾಸ್ಯ; ನನಗೆ ಪ್ರಾಣಸಂಕಟ. ಹೌದು; ಆತನೇ ನನ್ನಿನಿಯ. ನಾವೆಲ್ಲಾ ಆತನ ಭೋಗವಸ್ತುಗಳೇ. ಅಂತಹವನನ್ನು ಬಿಟ್ಟಿರುವುದು ಹೇಗೆ? ಇನ್ನಾದರೂ ಸುಮ್ಮನಿರುವೆಯಾ?' ಎಂದು ಒಂದು ತರದ ದರ್ಪದಿಂದ ಕೂಡಿದ ಕೋಪದಿಂದ ಹೇಳಿದಳು.

'ತಾಜ್, ಯಾಕೆ ಹಾಗೆ ಚಿಂತಿಸುವೆ. ನಿನ್ನ ದೇವ ನಿನ್ನನ್ನು ಬಿಟ್ಟುಹೋಗುವುದಿಲ್ಲ' ಎಂದು ಸುಭದ್ರೆ ಸಮಾಧಾನಪಡಿಸಲು ಹೇಳಿದಳು.

'ಭದ್ರಾ! ನಿನಗೆ ಆತನ ಗುಣ ಗೊತ್ತಿಲ್ಲ. ಭಕ್ತರಿಗೆ ತನ್ನನ್ನೇ ಧಾರೆ ಎರೆದುಕೊಂಡು, ಇನಿಯಳನ್ನು ಬಿಟ್ಟು ಹೋಗುವ ಗುಣ ಆತನದು.'

'ಎಳೆಯ ಹದಿನೇಳು ವರ್ಷದ ಮಹಮದೀಯ ಹುಡುಗಿಯಾದರೂ ನುರಿತ ಹಿಂದೂ ವೇದಾಂತಿಯಂತೆ ಇವಳು ಮಾತನಾಡುವಳು' ಎಂದುಕೊಂಡು, 'ತಾಜ್, ರಾತ್ರಿ ಆತನೇನಾದರೂ ಹೇಳಿದನೇ?' ಎಂದು ಸುಭದ್ರೆ ಕೇಳಿದಳು.

'ಊ ಸುಭದ್ರಾ! "ತಾಜ್, ನಿನ್ನ ಹತ್ತರ ನಾನು ಬಹಳ ದಿನಗಳಿಂದ ಇದ್ದೇನೆ. ಭಕ್ತರೆಲ್ಲಾ ಬಂದು ತಮ್ಮ ಬಳಿ ಇರಬೇಕೆಂದು ನನ್ನನ್ನು ಕೇಳುತ್ತಿದ್ದಾರೆ. ಪ್ರತಿಯೊಬ್ಬರ ಇಷ್ಟಾರ್ಥವನ್ನೂ ಈಡೇರಿಸುವುದು ನನ್ನ ಕರ್ತವ್ಯ. ನನ್ನ ಪ್ರಿಯ ಭಕ್ತ ತಂದೆ ಆಚಾರ್ಯನಾದ ಈ ಬ್ರಾಹ್ಮಣನೊಡನೆ ದಕ್ಷಿಣ ದೇಶದ ಪುಣ್ಯಭೂಮಿಯೊಂದಕ್ಕೆ ಹೋಗುತ್ತೇನೆ. ನನ್ನ ಮೇಲೆ ನಿನಗೆ ಪ್ರೇಮವಿದ್ದರೆ, ಸ್ಸಹಜವಾದ ಪ್ರೀತಿ ಇದ್ದರೆ, ಬಂದು ನನ್ನನ್ನು ಅಲ್ಲಿ ನೋಡು" ಎಂದು ಹೇಳಿದನು.'

'ಏನು! "ಪ್ರೀತಿ ಇದ್ದರೆ ಬಂದು ನೋಡು!" ನಿನ್ನ ತಪಿಸುತ್ತಿರುವ ಹೃದಯವೇದನೆ ಆತನಿಗೆ ಗೊತ್ತಿಲ್ಲವೇ? ಸುಮ್ಮನೆ ಚಿಂತಿಸಬೇಡ, ತಾಜ್, ಖಂಡಿತವಾಗಿಯೂ ನೀನು ಆತನನ್ನು ಚಂದ್ರಮಹಲಿನಲ್ಲಿ ನೋಡುವೆ' ಎಂದಳು.

ಆ ದಿನ ಸಂಜೆಯೇ ಅವರು ಮೂವರೂ ಚಂದ್ರಮಹಲ ಬಳಿಗೆ ಬಂದರು.

ಮಮ್‌ತಾಜಳು ತನ್ನ ಕೊಟಡಿಯ ಬಳಿಗೆ ಬಂದಳು. ತೆರೆದಿರುವ ಕೊಟಡಿಯ ಬಾಗಿಲನ್ನು ನೋಡಿ ಅವಳ ಎದೆ ಝಲ್ಲೆಂದಿತು. ದಾಸಿಯು ಅಲ್ಲಿರಲಿಲ್ಲ. ಕೊಟಡಿಯೊಳಕ್ಕೆ ಓಡಿಬಂದು ಮಂಚದ ಮುಖ ಪರದೆಯನ್ನು ಎಳೆದು ನೋಡಿದಳು. ತನ್ನ ಚೆಲುವ ಮೂರ್ತಿ ಅಲ್ಲಿರಲಿಲ್ಲ! "ಅಯ್ಯೋ! ಚೆಲುವಾ, ನನ್ನನ್ನು ಬಿಟ್ಟು ಹೋದೆಯಾ? ನಾನು ಪಾಪಿ; ನಿನ್ನ ಬಿಟ್ಟು ಏಕೆ ಎರಡು ದಿನ ನಿಂತೆ!" ಎಂದು ಮಂಚದ ಮೇಲೆ ಹೊರಳಾಡುತ್ತಾ ರೋದಿಸಿದಳು.

ಆ ವೇಳೆಗೆ ದಾಸಿಯು ಅಲ್ಲಿಗೆ ಬಂದಳು.

'ಯಾರೆ ಕೊಟಡಿಯೊಳಕ್ಕೆ ಬಂದಿದ್ದವರು ?' ಎಂದು ಮುಮ್ತಾಜಳು ಕಣ್ಣುಗಳಿಂದ ನೀರು ಸುರಿಸುತ್ತಾ ಗದ್ಗದಸ್ವರದಿಂದ ದಾಸಿಯನ್ನು ಕೇಳಿದಳು.

'ಪಾದಷಹರು, ಜಹಾಪನಾ! ಅವರು ವಿಗ್ರಹ ವನ್ನು ಬ್ರಾಹ್ಮಣನೊಬ್ಬನಿಗೆ ಕೊಟ್ಟರು' ಎಂದು ನಡುಗುವ ಧ್ವನಿಯಿಂದ ದಾಸಿ ಹೇಳಿದಳು.

'ಹೂ! ಆ ಬ್ರಾಹ್ಮಣನ ಊರಾವುದು ಬಲ್ಲೆಯಾ ?'

'ಮೇಲುಕೋಟೆ ಎಂದು ಆತ ಹೇಳಿದಂತೆ ನೆನಪು.'

'ಹೌದು; ಆ ಹೆಸರು ನನ್ನ ಕಿವಿಯ ಮೇಲೆ ಹಿಂದೆ ಒಮ್ಮೆ ಬಿದ್ದಿದೆ' ಎಂದುಕೊಂಡು, 'ನೀನು ಹೋಗು' ಎಂದು ದಾಸಿಗೆ ಹೇಳಿದಳು.

'ದೇವಾ! ನೀನು ಹೇಳಿದ ಪ್ರತಿ ಮಾತನ್ನೂ ನಿಜವಾಗಿಯೂ ತಕ್ಷಣ ಮಾಡುವೆಯಲ್ಲಾ! ನನ್ನ ತಂದೆ ತಾಯಿಗಳು ನನಗೆ ಶತ್ರುಗಳು . . . ಸುಮ್ಮನೆ ದುಃಖಿಸಿ ಫಲವೇನು ? . . . ಇಗೋ ನಿನ್ನಲ್ಲಿಗೆ ಬರುವೆನು'—ಎಂದು ಸರ್ರನೆ ಪಕ್ಕದ ಕೊಟಡಿಯೊಳಕ್ಕೆ ಹೋಗಿ, ಅಲ್ಲಿದ್ದ ಕತ್ತಿ ಯೊಂದನ್ನು ಒರೆಯಿಂದ ತೆಗೆದು, ಅದನ್ನೇ ದೃಷ್ಟಿಸಿ ಸ್ವಲ್ಪ ಹೊತ್ತು ನೋಡಿ ಏನನ್ನೋ ಯೋಚಿಸುತ್ತಾ, 'ನಿನ್ನನ್ನು ಹೀಗೆ ಸೇರಿದರೆ ನನ್ನನ್ನು ಮೆಚ್ಚಲಾರೆ. ನಿನ್ನ ಮೂರ್ತಿಯನ್ನು ಮನದಣಿಯೇ ನೋಡಿಯೇ ನಿನ್ನಲ್ಲಿಗೆ ಶಾಶ್ವತ ವಾಗಿ ಬರುವೆನು. ನೀನಲ್ಲದೆ ಮತ್ತಾರು ನನಗೆ ಬೇಕಾದವರು ದೊರೆ!' ಎಂದುಕೊಂಡು ಕತ್ತಿ ಯನ್ನು ಅಲ್ಲಿಯೇ ಬಿಸಾಟು ಹುಚ್ಚಳಂತೆ ತನ್ನಲ್ಲಿ ತಾನೇ ಏನೇನನ್ನೋ ಅಂದುಕೊಳ್ಳುತ್ತಾ ನೆಟ್ಟಗೆ ಕುದುರೆಯ ಲಾಯಕ್ಕೆ ಬಂದಳು. ಕುದುರೆ ಗಳನ್ನು ಒಂದೊಂದನ್ನಾಗಿ ಮೊದಲಿನಿಂದ ನೋಡಿದಳು. ತನಗೆ ಬೇಕಾದುದು ಕಣ್ಣಿಗೆ ಬೀಳದಿರಲು, ಕಣ್ಣೀರು ಸುರಿಸುತ್ತಾ ಗದ್ಗದ ಸ್ವರದಿಂದಲೇ 'ಷಂಷೀರ್! ಷಂಷೀರ್!' ಎಂದು ಕೂಗಿದಳು. ಲಾಯದ ಕೊನೆಯಲ್ಲಿದ್ದ ಬಿಳಿಯ ಕುದುರೆಯೊಂದು ಕಟ್ಟಿದ್ದ ಹಗ್ಗವನ್ನು ಸಹ ಕಿತ್ತುಕೊಂಡು ಒಡತಿಯ ದಾಸನಂತೆ ಬಂದು ನಿಂತಿತು. ಅವಳ ಕಣ್ಣೀರನ್ನು ನೋಡಿ ಅದೂ ತಲೆ ಬಗ್ಗಿಸಿಕೊಂಡಿತು.

ಅವಳು ಅದರ ಬೆನ್ನು ತಟ್ಟುತ್ತಾ, 'ಷಂಷೀರ್! ನೀನು ನನ್ನ ದುಃಖವನ್ನರಿಯೆ. ಈಗಲೋ ರಾತ್ರಿ, ಕಂದಾ! ನನ್ನ ಮನಸ್ಸನ್ನು ತೃಪ್ತಿಪಡಿಸು; ನನ್ನ ದೊರೆಯ ಬಳಿಗೆ ನನ್ನನ್ನು ಕರೆದೊಯ್ಯು' ಎಂದು ಕಣ್ಣೀರು ಸುರಿಸುತ್ತಾ ಹೇಳಿ ಲಾಯದಿಂದ ಹೊರಗೆ ಬಂದು, ಅದರ ಮೇಲೆ ಕುಳಿತು, 'ಷಂಷೀರ್! ಮೇಲುಕೋಟೆ!!' ಎಂದು ಮುಮತಾಜ್‌ಳು ಹೇಳಿದಳು.

೬

ಇಂದು ಮೇಲುಕೋಟೆಯಲ್ಲಿ ಚೆಲುವ ಸ್ವಾಮಿಗೆ ಕುಂಭಾಭಿಷೇಕ. ಜೈನ ಬಿಟ್ಟಿದೇವನು ರಾಮಾನುಜಾಚಾರ್ಯರ ಪ್ರೇರಣೆಯಿಂದ ವೈಷ್ಣವ ವಿಷ್ಣುವರ್ಧನನಾಗಿದ್ದ. ಆ ಹೊಯಿಸ ಲರ ಮಹಾರಾಜನು—ಪರಿವಾರದೊಡನೆ ಈ ನೂತನ ದೇವಾಲಯಕ್ಕೆ ಬಂದಿದ್ದನು. ದಕ್ಷಿಣ ದೇಶದ ಶ್ರೀವೈಷ್ಣವರೆಲ್ಲಾ ನೆರೆದಿದ್ದರು- ಮರಿಯ ಮೊದಲಾದ ಆದಿಕರ್ಣಾಟಕರೂ ನಾಮಧಾ ರಣೆ ಮಾಡಿಕೊಂಡು ಅಂದು ಶ್ರೀವೈಷ್ಣವರ ಜತೆ ಯಲ್ಲಿ ಶ್ರೀವೈಷ್ಣವರಾಗಿದ್ದರು. ದೇವಾಲಯದಲ್ಲಿ ಎಲ್ಲೆಲ್ಲಿ ನೋಡಿದರೂ ವಾದ್ಯಗಳ ರವ, ವೇದ ಘೋಷ ಮತ್ತು ಸಂಗೀತ!—

ಅರ್ಚಕರು ದೇವನನ್ನು ಮಂಗಳಾರತಿಯಿಂದ ಬೆಳಗುತ್ತಿದ್ದರು.

ದೇವನೆದುರಿಗೆ ನಿಂತು ಕೈಮುಗಿಯುತ್ತಿದ್ದ ಎಲ್ಲರೂ ಇದ್ದಕ್ಕಿದ್ದಂತೆಯೇ ಆರ್ತಧ್ವನಿಯೊಂ ದನ್ನು ಕೇಳಿ ದೇವಾಲಯದ ಮುಂದೆ ತಿರುಗಿ ದರು. 'ನನ್ನ ದೊರೆ! ಚೆಲುವಾ!!' ಎಂದು ಕುದುರೆಯ ಮೇಲಿದ್ದಂತೆಯೇ ಕೈಮುಗಿಯುತ್ತಾ

‘ನಿನ್ನಿಷ್ಟದಂತೆಯೇ ದಾಸಿ ಬಂದಿದ್ದೇನೆ. ದೊರೆ! ನಿನ್ನ ಪಾದಗಳಲ್ಲಿ ಸೇರಿಸಿಕೋ!’ ಎಂದು ಹೇಳುತ್ತಾ ದೊಪ್ಪನೆ ಕುದುರೆಯ ಮೇಲಿನಿಂದ ಕೆಳಗೆ ಬಿದ್ದ ಸ್ತ್ರೀಮೂರ್ತಿಯನ್ನು ಎಲ್ಲರೂ ಕಂಡರು. ರಮಣಿಯು ನೆಲದ ಮೇಲೆ ಬಿದ್ದ ಸ್ವಲ್ಪ ಹೊತ್ತಿನಲ್ಲಿಯೇ ಅವಳ ಅಶ್ವವೂ ನೆಲದ ಮೇಲೆ ಬಿದ್ದಿತು!

ಆಚಾರ್ಯರು ಅನನ್ಯಭಕ್ತಿಯಿಂದ ದೇವರನ್ನು ನೋಡುತ್ತಿದ್ದಂತೆಯೇ ಪ್ರಜ್ವಲಿಸುವ ಮಿಂಚಿನ ಕಾಂತಿಯೊಂದು ಬಂದು ದೇವನಲ್ಲಿ ಸೇರಿ ಆತನಲ್ಲಿ ಮೊದಲಿದ್ದ ಕಳೆಯನ್ನು ಇಮ್ಮಡಿ ಮಾಡಿದುದನ್ನು ನೋಡಿ, ದೇವಸ್ಥಾನದ ಮುಂದೆ ತಮ್ಮ ಕಟಾಕ್ಷವನ್ನು ಬೀರಿದರು.

ದೇವನಿಗೆ ಮಹಾಮಂಗಳಾರತಿಯಾಯಿತು. ವೈಷ್ಣವರಲ್ಲಿ ಕೆಲವರು ಕೆಳಗೆ ಬಿದ್ದಿದ್ದ ರಮಣಿಯ ಬಳಿಗೆ ಬಂದರು. ಅವಳನ್ನು ನೋಡಿದ ಅವರಲ್ಲಿ ಕೆಲವರು ‘ಇವಳು ಮ್ಲೇಚ್ಛರಳವಳು! ದೂರ ಹೋಗಿರಿ, ಇನ್ನು ಸ್ನಾನಮಾಡಬೇಕು’ ಎಂದರು.

ಆಚಾರ್ಯರು ಅವಳ ಬಳಿಗೆ ಬಂದು, ಸ್ವಲ್ಪ ಹೊತ್ತು ಮೌನವಾಗಿ ದೃಷ್ಟಿಸಿ ನೋಡಿ, ಯೋಚಿಸುತ್ತಾ ಅವಳನ್ನು ಮುಟ್ಟಿ ನೋಡಿದರು. ಅವಳ ಆತ್ಮನು ಅವಳ ದೇಹವನ್ನು ಬಿಟ್ಟಿದ್ದನು. ಅವರು ಕುದುರೆಯನ್ನೂ ಮುಟ್ಟಿ ನೋಡಿದರು. ಅದೂ ತನ್ನ ಒಡತಿಯ ಗತಿಯನ್ನೇ ಹೊಂದಿತ್ತು. ಗತಿಸಿದ ರಮಣಿಯನ್ನು ಸುಮ್ಮನೆ ದೃಷ್ಟಿಸಿ ನೋಡಿ, ‘ನಾನು ಕನಸಿನಲ್ಲಿ ಕಂಡ ದೇವನ ನಾಚ್ಚಿಯಾರ್! (ತಮಿಳಿನಲ್ಲಿ ನಾಚ್ಚಿಯಾರ್ ಎಂದರೆ ದೇವನ ಪತ್ನಿ ಎಂದು.) ಆ ಬೀಬಿ! ಸುಲ್ತಾನನ ಮಗಳು!’ ಎಂದುಕೊಂಡು, ‘ತಾಯಿ! ದೇವನರಸಿ ನೀನೇ ಪುಣ್ಯವಂತಳು’ ಎಂದು ಆ ಶವಕ್ಕೆ ಕೈಮುಗಿದರು.

ಎಲ್ಲೆಲ್ಲಿಯೂ ಮೌನ. ‘ಮರಿಯಾ!’ ಎಂದು ಆಚಾರ್ಯರು ಗದ್ಗದ ಸ್ವರದಿಂದ ಕೂಗಿದರು.

ಆದಿಕರ್ನಾಟಕದ ಮುಂದಾಳು ಮರಿಯ ಆಚಾರ್ಯರ ಮುಂದೆ ಬಂದು ನಿಂತನು. ‘ಮರಿಯಾ, ಈ ದೇವಾಲಯದ ಮುಂದಿರುವ ಮೂಲೆಯಲ್ಲಿ ಈಕೆಗಾಗಿ ಒಂದು ಗೋರಿ ಮಾಡಬೇಕು.’ ಎಂದು ಆಚಾರ್ಯರು ಹೇಳಿದರು.

ಶ್ರೀ ವೈಷ್ಣವರಲ್ಲಿ ಕೆಲವರು ಆಚಾರ್ಯರ ಮಾತನ್ನು ಕೇಳಿದೊಡನೆಯೇ ಒಬ್ಬರ ಮುಖವನ್ನೊಬ್ಬರು ಅಸಮಾಧಾನ ದೃಷ್ಟಿಯಿಂದ ನೋಡಿದರು. ‘ಮ್ಲೇಚ್ಛರವಳಾದುದರಿಂದ ಇವಳು ದೇವನ ಬಳಿ ಹೂಳಲ್ಪಡಲು ಅರ್ಹಳಲ್ಲವೆಂಬುದು ಇವರ ಭಾವನೆ. ಆಕೆ ದೇವರಲ್ಲಿ ಸೇರಿರುವಳೆಂದು ಇವರಿಗೇನು ಗೊತ್ತು! ಆಗಲಿ. ಇವರ ಮನವನ್ನು ತಾನೇ ಏಕೆ ನೋಯಿಸಬೇಕು? ದೈವದ ಹೃದಯವನ್ನರಿಯದ ಮೂಢರಿವರು! ನನ್ನ ಮತ ಅಭಿವೃದ್ಧಿಯಾಗಬೇಕು. ಇನ್ನೂ ಅದು ಶೈಶವಾವಸ್ಥೆಯಲ್ಲಿದೆ. ಆದುದರಿಂದ ಈ ಶ್ರೀವೈಷ್ಣವರನ್ನು ಅಸಮಾಧಾನ ಪಡಿಸುವುದು ತರವಲ್ಲ’ ಎಂದುಕೊಂಡು, ದೇವನಿಗೆ ಕೈಮುಗಿಯುತ್ತಾ, ‘ಸ್ವಾಮಿ! ನಮ್ಮನ್ನು ಕ್ಷಮಿಸು. ನಾವೆಲ್ಲಾ ಮೂಢರು. ಎಷ್ಟಾದರೂ ಈಕೆ ನಿನ್ನ ನಾಚ್ಚಿಯಾರ್. ಈ ಜೀವವಿಲ್ಲದ ದೇಹವನ್ನು ಎಲ್ಲಿಟ್ಟರೆ ತಾನೆ ಏನು; ಆತ್ಮವೇನೋ ನಿನ್ನಲ್ಲಿ ಐಕ್ಯವಾಗಿದೆ. ನಮ್ಮನು ಕ್ಷಮಿಸು ಭಕ್ತವತ್ಸಲಾ’ ಎಂದು ಕಣ್ಣೀರು ಸುರಿಸುತ್ತಾ ದೇವನಿಗರಿಕೆ ಮಾಡಿ ‘ಮರಿಯಾ!’ ಎಂದು ದೈನ್ಯದಿಂದ ಮತ್ತೊಮ್ಮೆ ಕೂಗಿದರು.

ಮರಿಯ, ‘ಏನು ಗುರುಗಳೆ?’ ಎಂದು ಕೇಳಿದನು.

‘ಮರಿಯಾ, ಇಲ್ಲಿ ಬೇಡ. ಬೆಟ್ಟದ ಬುಡದಲ್ಲಿರುವ ಆ ಎರಡು ಗುಡ್ಡಗಳ ನಡುವೆ ಇರುವ ಭೂಮಿಯಲ್ಲಿ ಈ ಎರಡು ಶವಗಳನ್ನೂ ಹೂಳಲು ಸಿದ್ಧಪಡಿಸು.’

ಸಂಜೆ ಸೂರ್ಯಾಸ್ತದ ಸಮಯ. ಮಮ್ತಾಜಳ—ಇನ್ನು ಮೇಲೆ ಆಚಾರ್ಯರಿಟ್ಟ ‘ಬೀಬೀ

ನಾಚ್ಚಿಯಾರ್' ಎನ್ನುವ ಹೆಸರಿನಿಂದಲೇ ಅವಳ ಹೆಸರನ್ನು ಹೇಳೋಣ— ಕಳೇಬರವನ್ನು ಹೂಳಲು ಮಾಡಿಟ್ಟ ಗೋರಿಯ ಬಳಿಗೆ ಎಲ್ಲರೂ ಬಂದರು. ಮೊದಲು ಬೀಬೀ ನಾಚ್ಚಿಯಾರಳ ದೇಹವನ್ನು ಗೋರಿಯಲ್ಲಿಟ್ಟು, ಅವಳ ಬಳಿ ಅವಳ ನಚ್ಚಿನ ಪಂಷೀರನ್ನಿಟ್ಟರು. ಮೊದಲ ಹಿಡಿಯ ಮಣ್ಣನ್ನು ಆಚಾರ್ಯರೇ ಕಣ್ಣೀರು ಸುರಿಸುತ್ತಾ ಹೆಣಗಳ ಮೇಲೆ ಎರಚಿದರು.

೭

ಮಾಘಮಾಸದ ಶುಕ್ಲ ಚತುರ್ದಶಿಯ ರಾತ್ರಿ ಸುಮಾರು ಹತ್ತು ಗಂಟೆ ಇರಬಹುದು. ಚಂದ್ರನ ತಂಗದಿರುಗಳಿಂದ ತೊಯ್ದ ಜಗವೆಲ್ಲಾ ಶಾಂತಿ ಸಾಗರದಲ್ಲಿ ಮುಳುಗಿತ್ತು. ಯಾದವಗಿರಿಯ ತಪ್ಪಲಲ್ಲಿ ಯಾವುದೋ ಗೋರಿಯೊಂದನ್ನು ಹುಡುಕುತ್ತಾ ಅಶಾಂತತೆಯಿಂದ ಎರಡು ವ್ಯಕ್ತಿಗಳು ಸುಳಿದಾಡುತ್ತಿದ್ದವು. ಅವುಗಳಲ್ಲಿ ಕಿಂಕಾಬಿನ ಬಟ್ಟೆಯೊಂದರಿಂದ ಮುಚ್ಚಲ್ಪಟ್ಟಿದ್ದ ಚಿನ್ನದ ತಟ್ಟೆಯೊಂದನ್ನು ಹಿಡಿದುಕೊಂಡಿದ್ದ ವ್ಯಕ್ತಿಯು 'ಪಾದಷಹ! ಪಾದಷಹ!! ಇಲ್ಲಿದೆ!!!' ಎಂದು ನಿಧಾನವಾಗಿ ಹೇಳಿತು.

'ಹೂ, ಆಲಂಷಹ!' ಎಂದು ಗದ್ಗದ ಸ್ವರದಿಂದ ಪಾದಷಹನು ಹೇಳಿ, ಮಗಳ— ದೇವಪತ್ನಿಯ— ಗೋರಿಯ ಬಳಿಗೆ ಬಂದು, ಮೊಳಕಾಲೂರಿ ಗೋರಿಗೆ ನಮಸ್ಕಾರ ಮಾಡುತ್ತಾ, 'ಕಂದಾ! ಅಳಿದ ತಂದೆಗಾಗಿ ಮಗನು ದೇವನಲ್ಲಿ ಮೊರೆಯಿಡುವುದನ್ನು ಕೇಳಿದ್ದೇನೆ. ತಾಯಿಯ ಗೋರಿಯ ಬಳಿ ಮಗಳು ಬಂದು ಪೂಜಿಸುವುದನ್ನು ನೋಡಿದ್ದೇನೆ. ಗುರುವಿನ ಬೂದಿಯನ್ನು ಹೂಗಳಿಂದ ನಿತ್ಯವೂ ಅಲಂಕರಿಸಿ ಅದರ ಮೇಲೆ ಕಣ್ಣೀರು ಸುರಿಸುವ ಶಿಷ್ಯರನ್ನು ಅರಿತಿದ್ದೇನೆ. ಇನಿಯನ ಶವದ ಬಳಿ ಹೊರಳಾಡುತ್ತಾ ರೋದನ ಮಾಡುವ ಇನಿಯಳನ್ನು ಕಂಡಿದ್ದೇನೆ. ಆದರೆ—ಆದರೆ– ಮಗಳ ಗೋರಿಯ ಬಳಿ ಮೊಣಕಾಲೂರಿ, ಕಣ್ಣೀರು ಸುರಿಸುವ ತಂದೆಯನ್ನು ಕಂಡಿಲ್ಲ; ಕೇಳಿಲ್ಲ, ಇನ್ನು ಮುಂದೆ ಕೇಳುವುದೂ ಇಲ್ಲ. ಮಗೂ! ನಾನು ಪಾಪಿ. ನಿನ್ನ ಮತ್ತು ನಿನ್ನ ಇನಿಯನ ಗುಣಗಳನ್ನರಿಯದೆ ಹೋದೆ. ಕಾಫರ್ ನಾನು! ನಿನ್ನಿನಿಯನನ್ನು ಹೆರರಿಗೆ ಕೊಟ್ಟೆ. ನಾನು ಪರಮ ಪಾತಕಿ. ಪ್ರಪಂಚದ ಭೋಗಕ್ಕೆ ಆಸೆಪಟ್ಟು, ನಿನ್ನನ್ನು ಸಾರ್ವಭೌಮಳನ್ನಾಗಿ ಮಾಡುವ ಆಸೆಯಿಂದ ಹಾಗೆ ಮಾಡಿದೆ. ಕಂದಾ! ನೀನು ಜಗದ ಸಾರ್ವಭೌಮಳು' ಎಂದು ಕಣ್ಣೀರನ್ನೊರಸಿಕೊಂಡು, ಗೋರಿಯನ್ನು ಚುಂಬಿಸಿ. ತಟ್ಟೆಯಲ್ಲಿದ್ದ ಹೂವಿನ ಹಾರವನ್ನು ತೆಗೆದು, ಅದನ್ನು ಗೋರಿಗೆ ಹಾಕಿ, 'ತಾಜ್! ಇದು ನನ್ನ ಪ್ರೇಮದ ಬಹುಮಾನ. ಕಂದಾ! ದೇವನರಸಿಯಾದ ನಿನಗಿತ್ತ ಉಡುಗರೆ' ಎಂದು ಕಣ್ಣೀರು ಸುರಿಸುತ್ತಾ ಎದ್ದು ನಿಂತನು.

ತನ್ನ ಇನಿಯ ಚೆಲುವ ಸ್ವಾಮಿಗಾಗಿ ಮಡಿದ ಬೀಬೀನಾಚ್ಚಿಯಾರಳ ಗೋರಿಯನ್ನು ನೋಡಿದ ಮಾನವರೆಲ್ಲಾ ಮರುಗುವರು. ಆ ಗೋರಿಯನ್ನು ನೋಡಿ ಮರುಗುವವರು ಮಾನವರೊಬ್ಬರೇ ಅಲ್ಲ. ಆ ಗೋರಿಯ ಸುತ್ತಮುತ್ತಲೂ ಅನೇಕ ಮಾವಿನ ಮರಗಳಿವೆ. ಎಲ್ಲಾ ಕಡೆಯ ಮರಗಳಲ್ಲಿಯೂ ಹಣ್ಣೆಲೆಗಳು ಬೀಳುತ್ತಿದ್ದರೆ ಇವುಗಳಲ್ಲಿ ಚಿಗುರು ಆಗ ತಾನೆ ಬಿಡುತ್ತದೆ. ಶಿಶಿರದಲ್ಲಿಯೇ ಮಾವಿನಕಾಯಿ ಮತ್ತು ಹಣ್ಣುಗಳು ಈ ಮರಗಳಲ್ಲಿ ಸಿಕ್ಕುತ್ತವೆ. ಎಲ್ಲೆಲ್ಲಿಯೂ ವಸಂತನ ಪ್ರಭಾವವಿರುವಲ್ಲಿ ಇಲ್ಲಿ ಶಿಶಿರವು ಬರುತ್ತದೆ! ಹೀಚಿನಲ್ಲಿಯೇ ಹಣ್ಣಾದ, ಹಣ್ಣಾಗುವ ಕಾಲದಲ್ಲಿ ದೇವನಲ್ಲಿ ಐಕ್ಯಳಾದ ತಮ್ಮ ಒಡತಿಯ ಬಾಳಿನಂತೆಯೇ ಅವುಗಳ ಜೀವನವೂ ಆಗಿದೆ!

೮

ಧನುರ್ಮಾಸದ ಒಂದು ಪ್ರಾತಃಕಾಲ, ಅಷ್ಟು

ಹೊತ್ತಿಗೇ ರಾಮಾನುಜಾಚಾರ್ಯರು ಎದ್ದು, 'ದೇವಾ ! ಮೊನ್ನೆ ರಾತ್ರಿ ನೀನು ಆಜ್ಞೆ ಮಾಡಿದ್ದಂತೆಯೇ ಬೀಬೀ ನಾಚ್ಚಿಯಾರಳ ಸ್ವರ್ಣ ಪ್ರತಿಮೆಯನ್ನು ಮಾಡಿಸಿ ತಂದಿದ್ದೇನೆ. ಇದೇ ಸುದಿನ. ಇದನ್ನು ನಿನ್ನ ಅಡಿಯಲ್ಲಿಟ್ಟು, ನಿನ್ನ ಹಿಂದಿನ ಅಪ್ಪಣೆಯಂತೆಯೇ ಮೊದಲ ಪೂಜೆಯನ್ನು ದಾನಾಗ್ರೇಸರ ಸಾರ್ವಭೌಮನಾದ ಬಲಿ-ಚಕ್ರವರ್ತಿಗೂ ಎರಡನೆಯ ಪೂಜೆ ನಿನ್ನರಸಿ ಬೀಬೀ ನಾಚ್ಚಿಯಾರಳಿಗೂ * ಅನಂತರ ನಿನಗೂ ಪೂಜೆಯನ್ನು ಮಾಡಿಸುತ್ತೇನೆ ಮತ್ತು ಮಾಡುತ್ತೇನೆ' ಎಂದು ದೇವನಿಗೆ ಕೈ ಮುಗಿಯುತ್ತಾ ಹೇಳಿ ಬೀಬೀ ನಾಚ್ಚಿಯಾರಳ ಸ್ವರ್ಣಪ್ರತಿಮೆಯನ್ನು ಮೂಲ ಮೂರ್ತಿಯ ಅಡಿಯ ಬಳಿ ಪ್ರತಿಷ್ಠೆ ಮಾಡಿದರು. *

("ಪುಷ್ಪ ಮಾಲೆ" ಕಥಾ ಸಂಗ್ರಹದಿಂದ)

* ಮೇಲುಕೋಟೆಯ ಸ್ಥಳ ಪುರಾಣದ ಆಧಾರದಿಂದ ಬರೆದ ಕತೆಯಿದು. ಮೇಲುಕೋಟೆಯ ಬೆಟ್ಟದ ಬುಡದಲ್ಲಿ ಬೀಬೀ ನಾಚ್ಚಿಯಾರಳ ಗೋರಿ ಇದೆ. ಈಗಲೂ ಆ ದೇವಸ್ಥಾನದಲ್ಲಿ ದೇವನಿಗಾಗಲು ಮುನ್ನವೇ ಆತನ ಪಾದದ ಬಳಿ ಇರುವ ಬೀಬೀನಾಚ್ಚಿಯಾರಳ ವಿಗ್ರಹಕ್ಕೆ ಪೂಜೆಯಾಗುತ್ತದೆ. ವೈರಮುಡಿಯ ಉತ್ಸವ ಕಾಲದಲ್ಲಿ ಆದಿ ಕರ್ನಾಟಕರನ್ನು ರಾಮಾನುಜಾಚಾರ್ಯರ ಮಾತಿನಂತೆಯೇ ಮೂರು ದಿನ ದೇವಸ್ಥಾನದೊಳಕ್ಕೆ ಬಿಡುತ್ತಾರೆ.

ಪೇಯಿಂಗ್ ಗೆಸ್ಟ್

ಸ್ವಾಮಿ ರಾಮತೀರ್ಥರು ಅಮೇರಿಕೆಯಲ್ಲಿದ್ದಾಗ ಪ್ರತಿದಿನ ಡಾ. ಹಿಲ್ಲರ್ ಎಂಬುವರ ಮನೆಗೆ ಊಟ ಉಪಾಹಾರಗಳಿಗಾಗಿ ಹೋಗುತ್ತಿದ್ದರು. ಆದರೆ ಊಟಕ್ಕೆ ಹೋಗುವಾಗ ಸಮೀಪದ ಅಡವಿಯಿಂದ ಒಂದು ಹೊರೆ ಸೌದೆಯನ್ನು ಕಡಿದು ಹೊತ್ತುಕೊಂಡು ಹೋಗಿ ಅವರ ಮನೆಗೆ ಹಾಕಿ ಅನಂತರ ಮಾತ್ರ ತಮ್ಮ ಮಿತಾಹಾರವನ್ನು ಸೇವಿಸುತ್ತಿದ್ದರು.

ಪುಕ್ಕಟೆ ಸಲಹೆ

ಸೀಮೆ ಎಣ್ಣೆಯ ದೀಪವನ್ನು ಉರಿಸುವ ನೀವು ಅದರ ಹೊಗೆಯಿಂದ ಗೋಳಾಡುವಿರಾದರೆ, ದೀಪಕ್ಕೆ ಉಪಯೋಗಿಸಿದ ಬತ್ತಿಯನ್ನು 'ಸ್ಪಿರಿಟ್ ಆಫ್ ವೈನ್' ದ್ರಾವಕದಲ್ಲಿ ಅದ್ದಿ ಉರಿಸಿರಿ. ಹೊಗೆ ಮಾಯವಾಗುವುದು.

ಒಂದು ಬಟ್ಟಲು ನೀರಿಗೆ, ಚಮಚೆಯಷ್ಟು ಆಕ್ಸಾಲಿಕ್ ಆಸಿಡ್‌ನ್ನು ಬೆರಸಿ ಬಟ್ಟೆಗಳ ಮೇಲಾಗಿರುವ ಶಾಯಿ ಕಲೆಯ ಮೇಲೆ ಉಜ್ಜಿ ಕಲೆಯನ್ನು ಹೋಗಲಾಡಿಸಿಕೊಳ್ಳಿ!

ಹಳೆಯದಾದ ಹಲ್ಲುಜ್ಜುವ ಬ್ರಷ್‌ಗಳನ್ನು ಎಸೆಯುತ್ತೀರಾ? ಹಾಗೆ ಮಾಡದಿರಿ. ಆದರಿಂದ, ಮೇಜಿನ, ಕುರ್ಚಿಗಳ, ಉಗುರು ಮೇಲಿನ, ಕೊಳೆಯನ್ನು ಸುಲಭವಾಗಿ ಉಜ್ಜಿ, ತೊಳೆದು ಪ್ರಕಾಶಿಸುವಂತೆ ಮಾಡಬಹುದು.

—"ಪ್ರಿಯದರ್ಶಿ" ಶ್ರವಣಬೆಳಗೊಳ

ಹಳ್ಳಿಯ ಹವೆಯಲ್ಲಿ ಜೀವಸತ್ವವಿದೆ!

ಜೈಸನ್ ಕಾರ್ಟರ್
ಲೇಖದ ಆಧಾರದಿಂದ

ಬೇನೆಯಿಂದ ಬಳಲಿ ನಿತ್ರಾಣರಾಗಿರುವವರಿಗೆ ಔಷಧಿ ಪಥ್ಯಾದಿಗಳನ್ನು ಹೇಳುವುದರ ಜೊತೆಗೆ ಡಾಕ್ಟರರು ಎಷ್ಟೋ ಸಲ "ಹವಾ ಬದಲಾಯಿಸಿ" ಎನ್ನುತ್ತಾರೆ. ಸಾಮಾನ್ಯವಾಗಿ ದಟ್ಟ ಜನವಸತಿಯಿರುವ ಪಟ್ಟಣಗಳಿಗಿಂತ ಹಳ್ಳಿ ಪಳ್ಳಿಗಳಲ್ಲಿ ವಾಸಿಸುವ ಜನ ಹೆಚ್ಚು ಗಟ್ಟಿಮುಟ್ಟಾಗಿ ಇರುತ್ತಾರೆ. ಇದಕ್ಕೆ ಕಾರಣವಿಲ್ಲದಿಲ್ಲ. ಹಳ್ಳಿಯ ಹವೆಯಲ್ಲಿ ಕೇವಲ ಅದು ಶುದ್ಧವಾಗಿರುವುದೊಂದೇ ಗುಣವಲ್ಲ, ಮನುಷ್ಯನ ದೇಹವನ್ನು ಆರೋಗ್ಯವಾಗಿಡುವ ದ್ರವ್ಯಗಳಿದ್ದು ಅದು ಅನೇಕ ರೋಗಗಳನ್ನು ತಡೆಗಟ್ಟುವ ಶಕ್ತಿಯನ್ನು ಮನುಷ್ಯನಿಗೆ ಕೊಡುವ ಸಾಮರ್ಥ್ಯವನ್ನು ಹೊಂದಿರುತ್ತದೆಂಬುದಕ್ಕೆ ಈಗ ವೈಜ್ಞಾನಿಕ ಆಧಾರಗಳು ದೊರೆಯುತ್ತಿವೆ.

ರೋಗಿಗಳು, ಮಾನಸಿಕವೇ ಮೊದಲಾದ ಕಾರಣಗಳಿಂದ ಬಳಲುವವರು, ಸಮುದ್ರತೀರದ ಊರಿನಲ್ಲೊ, ಎತ್ತರದ ತಪ್ಪಲ ಮೇಲಿರುವ ಊರಿನಲ್ಲೊ ಮಂತ್ರಶಕ್ತಿಯಿಂದೆಂಬಂತೆ ಗುಣವಾಗಲು ಕಾರಣವೇನು ? ದಟ್ಟವಾಗಿ ಗಿಡಮರಗಳು ಬೆಳೆದಿರುವ ಪ್ರದೇಶದ ಅಥವಾ ಸಮುದ್ರತೀರದ ಗಾಳಿ ಅಷ್ಟೇಕೆ ಚೈತನ್ಯದಾಯಕವಾಗಿದೆ ?

ಮನುಷ್ಯನ ಶರೀರಕ್ಕೆ ಶೀತೋಷ್ಣಗಳ ಅತಿರೇಕದಿಂದ ಆಗುವ ತ್ರಾಸವನ್ನು ನಿವಾರಿಸಿ ಅವನನ್ನು ಹಿತವಾದ ವಾತಾವರಣದಲ್ಲಿಡಲು ಅನುಕೂಲವಾಗುವಂತೆ ಏರ್‌ಕಂಡಿಶನಿಂಗ್ ವ್ಯವಸ್ಥೆ ಬಂದಿದೆ. ಅನುಕೂಲವಿರುವವರು ಏರ್‌ಕಂಡೀಶನಿಂಗ್ ಉಳ್ಳ ಕೋಣೆಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ಯಾವ ಏರ್‌ಕಂಡೀಶನ್ಡ್ ಕೋಣೆಯ ಹವೆಯಲ್ಲೂ ಹಳ್ಳಿಗಾಡಿನ ಹವೆಯಲ್ಲಿರುವಷ್ಟು ಜೀವನೋತ್ತೇಜಕ ಶಕ್ತಿಯಿಲ್ಲವೆಂದು ವೈದ್ಯರು ಕಂಡುಹಿಡಿದಿದ್ದಾರೆ. ಹೀಗೇಕೆ?

ಸೋವಿಯಟ್ ಅಕಾದಮಿ ಆಫ್ ಸಾಯನ್ಸಿನ ಪ್ರಸಿದ್ಧ ಜೀವರಸಾಯನವಿಜ್ಞಾನಿ ಡಾ. ಎನ್. ಜಿ. ಚೊಲೊಡ್ನಿ ಅದಕ್ಕೆ ಉತ್ತರವನ್ನು ಹೀಗೆ ಹೇಳುತ್ತಾರೆ: "ಯಾವ ಹೊರಗಿನ ದ್ರವ್ಯಗಳಿಂದಲೂ ಅಶುದ್ಧವಾಗದ, ನೈಸರ್ಗಿಕ ಹವೆಯಲ್ಲಿರುವ, ಕೆಲವೊಂದು ದ್ರವ್ಯಗಳು ಮನುಷ್ಯನ ಆರೋಗ್ಯಕ್ಕೆ ಅತ್ಯಗತ್ಯವಾಗಿವೆ. ಬಹುಶಃ ಈ ದ್ರವ್ಯಗಳಲ್ಲಿ ರೋಗಜಂತುಗಳನ್ನು ಕೊಲ್ಲಬಲ್ಲ ಜೀವ ರಸಾಯನಗಳೂ ಉತ್ತೇಜಕವಾದ ವಿಟಾಮಿನ್ಸ್ ಮತ್ತು ಹಾರ್ಮೋನುಗಳೂ ಇರಬೇಕು " ಆದ್ದರಿಂದಲೇ ಇರಬೇಕು, ಎಂಥೆಂಥ ಔಷಧಿ-ಉಪಚಾರಗಳಿಗೂ ಮಣಿಯದ ಎಷ್ಟೋ ರೋಗಗಳು ನಿಜವಾಗಿಯೂ ಶುದ್ಧ ಹವೆ ಲಭ್ಯವಿರುವ ಸ್ಥಳಗಳಲ್ಲಿ ಆಶ್ಚರ್ಯಕರ ರೀತಿಯಲ್ಲಿ ಗುಣವಾಗುತ್ತಿರುವುದು.

ಯುಕ್ರೇನಿನ ಪ್ರಯೋಗಶಾಲೆಯಿಂದ ಜರ್ಮನ್ನರು ಓಡಿಸಿದ ನಂತರ ಆರ್ಮೇನಿಯನ್

ಸೋವಿಯೆಟ್ ರಿಪಬ್ಲಿಕ್ ಒದಗಿಸಿದ ಪ್ರಯೋಗ ಶಾಲೆಯಲ್ಲಿ ಕೆಲಸ ಮಾಡತೊಡಗಿದ ಡಾ. ಚೊಲೊಡ್ನಿಯವರು ೧೯೪೩ ರಲ್ಲಿ ಒಂದು ಶೋಧ ವನ್ನು ಮಾಡಿದರು: ಬೆಳೆಯುತ್ತಿರುವ ಗಿಡಗಳು —ವಿಶೇಷತಃ ಮೊಳಕೆಯೊಡೆಯುತ್ತಿರುವ ಬೀಜ ಗಳು, ಎಲೆಗಳು, ಹೂಗಳು ಮತ್ತು ಹಣ್ಣುಗಳು —ಗಾಳಿಯಲ್ಲಿ ತೀರ ಸ್ವಲ್ಪ—ಆದರೂ ಅಳತೆಗೆ ನಿಲುಕುವಷ್ಟು—ರಾಸಾಯನಿಕ ದ್ರವ್ಯಗಳನ್ನು ಹೊರಬಿಡುತ್ತವೆ. ಈ ದ್ರವ್ಯಗಳಲ್ಲಿ ಜೀವಂತ ವಸ್ತುಗಳನ್ನು ಉತ್ತೇಜಿಸುವ ಶಕ್ತಿಯಿರುತ್ತದೆ. ಕೆಲ ದ್ರವ್ಯಗಳು ಪೆನಿಸಿಲಿನ್‌ನಂತೆ ಕೆಲಸ ಮಾಡಿ ಸೂಕ್ಷ್ಮಾತಿಸೂಕ್ಷ್ಮ ರೋಗಾಣುಗಳ ಬೆಳವಣಿಗೆ ಯನ್ನು ತಡೆಯುತ್ತವೆ.

ಸದೃಢ ದೇಹವನ್ನು ಕಟ್ಟಲು ಅಥವಾ ಶಕ್ತಿ ಯನ್ನು ಉತ್ಪಾದಿಸುವಷ್ಟು ಆಹಾರಾಂಶವನ್ನು ಒದಗಿಸಲು ಸಾಕಷ್ಟು ಪ್ರಮಾಣದಲ್ಲಿ ಈ ರಹಸ್ಯ ಮಯ ಪದಾರ್ಥ ಹವೆಯಲ್ಲಿ ಇಲ್ಲವೆಂಬುದು ನಿಜ. ಆದರೆ ಹವೆಯ ಈ ಪದಾರ್ಥ ಬಹು ಸುಲಭದಲ್ಲಿ ನಮ್ಮ ಪುಪ್ಪುಸದಲ್ಲಿ ವಿಲೀನವಾಗು- ವುದರಿಂದ ಕ್ಷಯದ ಮೇಲೆ ಅದರ ಪರಿಣಾಮ ಪ್ರಭಾವಕಾರಿಯಾಗಬಲ್ಲುದು. ಪುಪ್ಪುಸದ ಕ್ಷಯ ರೋಗ ಹುಟ್ಟಲು ಇರುವ ಇತರ ಕಾರಣಗಳ ಜೊತೆಗೆ ಪುಪ್ಪುಸಗಳಲ್ಲಿ ಯಾವುದೊ ಒಂದು ವಿಶಿಷ್ಟ ವಿಟಾಮಿನ್ನಿನ ಕೊರತೆಯೂ ಒಂದಾಗಿ- ರುತ್ತದೆ ಎಂಬ ಅಂಶವೂ ನಮಗೆ ತಿಳಿದುಬರ ಬಹುದು ಎಂದು ಡಾ. ಚೊಲೊಡ್ನಿಯವರ ಅಭಿ ಪ್ರಾಯವಿದೆ.

ಡಾ. ಚೊಲೊಡ್ನಿಯವರ ಅಭಿಪ್ರಾಯ ಪ್ರಕ- ಟವಾದ ನಂತರದಲ್ಲಿ ಮಿಚಿಗಾನ್ ಸ್ಟೇಟ್ ಕಾಲೇಜ್ ಆಫ್ ಎಗ್ರಿಕಲ್ಚರ್ ಎಂಡ್ ಅಪ್ಲಾಯ್ಡ್ ಸಾಯನ್ಸ್‌ನ ಜೀವರಸಾಯನ ವಿಜ್ಞಾನಿ ಇ. ಎಚ್. ಲ್ಯುಕಾಸ್ ಮತ್ತು ಆರ್. ಡಬ್ಲ್ಯು. ಲುಯಿಸ್‌ರು ಎಲೆ, ಹಣ್ಣು ಮತ್ತು ಸಸ್ಯಗಳ ಇತರ ಅಂಗಗಳಲ್ಲಿ ಪೆನಿಸಿಲಿನ್‌ನಂಥ ಪ್ರಬಲ ರೋಗನಾಶಕ ದ್ರವ್ಯಗಳಿವೆ ಎಂದು ಸಿದ್ಧ ಮಾಡಿದರು.

ಡಾ. ಚೊಲೊಡ್ನಿಯವರ ಇತ್ತೀಚಿನ ಸಂಶೋ ಧನೆಯಿಂದ ಎರಡು ಅಸಾಧಾರಣ ಸಂಗತಿಗಳು ಬೆಳಕಿಗೆ ಬಂದಿವೆ: ಬೆಳೆಯುವ ಸಸ್ಯಾದಿಗಳಲ್ಲಿ ಈ ಪ್ರಬಲ ರಾಸಾಯನಿಕ ದ್ರವ್ಯಗಳು ಇರುವುದು ಮಾತ್ರವಲ್ಲ, ಅವುಗಳಲ್ಲಿ ಕೆಲವಂಶವನ್ನು ಅವು ಗಾಳಿಯಲ್ಲಿ ಬಿಡುತ್ತವೆ ಎಂಬುದೊಂದು. ಮತ್ತು ರೋಗನಾಶಕವಾದ ಈ ದ್ರವ್ಯಗಳು ಗಾಳಿಯಲ್ಲಿ ತೇಲುವಾಗ ಅವುಗಳ ಜೊತೆಯಲ್ಲಿ ವಿಟಾಮಿನ್ ಮತ್ತು ಹಾರ್ಮೋನುಗಳಂಥ ರಸಾಯನಗಳೂ ಕೂಡಿರುತ್ತವೆ ಎಂಬುದು ಎರ ಡನೆಯದು.

ನಮ್ಮ ದೇಹದ ಮೇಲೆ ಪ್ರಭಾವ ಬೀರುವಷ್ಟು ಪ್ರಮಾಣದಲ್ಲಿ ನಾವು ಜೀವರಸಾಯನ ದ್ರವ್ಯ ಗಳನ್ನು ಉಸಿರಾಡಿಸಲಾರೆವು ಎಂಬ ಸಂದೇಹ ಇಲ್ಲಿ ಉಂಟಾಗಬಹುದು. ಆದರೆ ಬಯಲು ಹವೆಯಲ್ಲಿ ಬಹುಶಃ ಒಂದು ದಶಲಕ್ಷಾಂಶದಷ್ಟಾ ದರೂ ಸಕ್ರಿಯ ದ್ರವ್ಯವಿರಬೇಕು ಎನ್ನುತ್ತಾರೆ ಡಾ. ಚೊಲೊಡ್ನಿಯವರು. ವಯಸ್ಕ ಮನುಷ್ಯ ನೊಬ್ಬ ದಿನಕ್ಕೆ ಸುಮಾರು ೧೦೦-೧೪೦ ಔನ್ಸ್ ಗಾಳಿಯನ್ನು ಉಸಿರಾಡಿಸುತ್ತಾನಾದ್ದರಿಂದ-ನಾವು ತೆಗೆದುಕೊಳ್ಳುವ ಆಹಾರದ ತೂಕಕ್ಕಿಂತಲೂ ಇದು ಹೆಚ್ಚಾಗಿರುತ್ತದೆ—ಪುಪ್ಪುಸಗಳಿಗೆ ಮೂರು ನಾಲ್ಕು ಮಿಲಿಗ್ರಾಮುಗಳಷ್ಟಾದರೂ ಹವೆಯ ವಿಟಾಮಿನ್‌ಗಳು ಸಿಗಬಹುದು. ಈ ಅತ್ಯಲ್ಪ ಪ್ರಮಾಣವು ಹೆಚ್ಚು-ಕಡಿಮೆ ನಮಗೆ ದಿನನಿತ್ಯದ ಆಹಾರದಲ್ಲಿ ಸಿಗುವಷ್ಟು ಸಾಮಾನ್ಯ ವಿಟಾಮಿನ್ನು ಗಳ ತೂಕದಷ್ಟೇ ಇರುವುದು.

ಆಹಾರದಲ್ಲಿ ಅಲ್ಪ ಪ್ರಮಾಣದಲ್ಲೇ ಆಗಲಿ ಅಗತ್ಯವಾಗಿ ಇರಬೇಕಾದ ವಿಟಾಮಿನ್ನುಗಳ ಕೊರತೆಯಾದಲ್ಲಿ ಅನೇಕ ರೋಗಗಳು ಉದ್ಭವಿ ಸುತ್ತವೆ. ಮೊದಲು ಅಸಾಧ್ಯವೆನಿಸುತ್ತಿದ್ದ ಸ್ಕರ್ವಿ, ಬೆರಿಬೆರಿ ಮೊದಲಾದ ಇಂಥ ರೋಗ

ಗಳನ್ನು ಇಂದು ವಿಟಾಮಿನ್‌ಗಳನ್ನು ಪೂರೈಸಿ ಬಲುಬೇಗ ಗುಣ ಮಾಡಬಹುದಾಗಿದೆ. ಹೀಗಿರುವಾಗ ನಾವು ಶಹರ-ಪಟ್ಟಣಗಳ ವಿಟಾಮಿನ್ ಕೊರತೆಯಿರುವ ಹವೆಯನ್ನು ಉಸಿರಾಡಿಸುವುದರಿಂದ ಈಗಲೂ ಅಸಾಧ್ಯ ಮಾಲಿಕೆಯಲ್ಲಿರುವ ಎಷ್ಟೋ ಬೇರೆ ರೋಗಗಳು ಹುಟ್ಟುತ್ತಿರಲಿಕ್ಕಿಲ್ಲವೆ? ಎಂಬ ಪ್ರಶ್ನೆಯನ್ನು ವಿಜ್ಞಾನಿಗಳು ಯೋಚಿಸುತ್ತಿದ್ದಾರೆ.

ಇನ್ನು ಬೆಳೆಯುತ್ತಿರುವ ಸಸ್ಯಗಳು ಮನುಷ್ಯ ದೇಹಕ್ಕೆ ಅಗತ್ಯವಿರುವ ಜೀವರಸಾಯನ ದ್ರವಗಳನ್ನು ಪೂರೈಸುವುದಾದರೆ ಸಸ್ಯಸಮೃದ್ಧ ಉಷ್ಣ ವಲಯ ಪ್ರದೇಶಗಳಲ್ಲಿರುವ ಜನರು ಅತಿ ಆರೋಗ್ಯವಂತರಾಗಿರುವುದಿಲ್ಲವೇಕೆ? ಡಾ. ಚೊಲೊಡ್ನಿಯವರು ಒಣ ಹವೆಯಲ್ಲಿ ಆರ್ದ್ರ ಹವೆಗಿಂತಲೂ ಹೆಚ್ಚು ಪ್ರಮಾಣದಲ್ಲಿ ಸಕ್ರಿಯ ದ್ರವ್ಯಗಳಿರುತ್ತವೆಂದು ಕಂಡುಹಿಡಿದಿದ್ದಾರೆ. ಉಷ್ಣವಲಯ ಪ್ರದೇಶದಲ್ಲಿ ಮಳೆ ಮತ್ತು ಹೊಗೆಯ ಮಂಜು ಬಹುಬೇಗ ಈ ದ್ರವ್ಯಗಳನ್ನು ಇಲ್ಲದಂತೆ ಮಾಡುತ್ತವೆ. ಮತ್ತು ವಾತಾವರಣದಲ್ಲಿರುವ ವಿಟಾಮಿನ್ನುಗಳನ್ನು ಅಥವಾ ಅವುಗಳಲ್ಲಿ ಕೆಲವು ಬಗೆಯವನ್ನು ಮಿತಿಮೀರಿದ ಪ್ರಮಾಣದಲ್ಲಿ ಉಸಿರಾಡಿಸಿದರೆ ಅಪಾಯವೊದಗಬಹುದು ಎಂದೂ ಕಂಡುಬಂದಿದೆ. ವಿಟಾಮಿನ್‌ಗಳ ಗುಳಿಗೆಗಳನ್ನು ಪ್ರಮಾಣ ಮೀರಿ ತೆಗೆದುಕೊಂಡಾಗ ಆಗುವಂತೆಯೆ ವಾತಾವರಣದ ವಿಟಾಮಿನ್‌ನ್ನು ಮಿತಿಮೀರಿ ಸೇವಿಸಿದಾಗಲೂ ಅಪಾಯವಾಗುವುದು ಎಂದು ಡಾ ಚೊಲೊಡ್ನಿಯವರು ಹೇಳುತ್ತಾರೆ. ಉಷ್ಣವಲಯದಲ್ಲಿ ಬಹುಶಃ ಹೀಗಾಗುತ್ತಿರಲೂಬಹುದು.

ಆಹಾರ ವಿಟಾಮಿನ್ನುಗಳ ಅಧ್ಯಯನದಿಂದ ಪೌಷ್ಟಿಕ ಆಹಾರ ವಿಚಾರದಲ್ಲಿ ಕ್ರಾಂತಿಯಾಗಿ ಅನೇಕ ಅಸಾಧ್ಯ ರೋಗಗಳ ಉಚ್ಚಾಟನೆಯಾದಂತೆ ಹವೆಯಲ್ಲಿರುವ ವಿಟಾಮಿನ್ ಮತ್ತು ಹಾರ್ಮೋನುಗಳ ಬಗ್ಗೆ ನಡೆಯುವ ಸಂಶೋಧನೆಗಳು ಕ್ಷಯ, ಇನ್‌ಫ್ಲುಯೆಂಝಾ, ಸಾಮಾನ್ಯ ನೆಗಡಿ, ಹೃದಯ ಮತ್ತು ರಕ್ತಾಭಿಸರಣ ರೋಗಗಳ ಮೇಲೆ ವಿಜಯವನ್ನು ತಂದುಕೊಟ್ಟಾವು. ಕ್ಯಾನ್ಸರ್ ಮತ್ತು ಮಾನಸಿಕ ರೋಗಗಳನ್ನು ಕೂಡ ಅದು ಗೆಲ್ಲಬಹುದು ಏಕೆಂದರೆ ಇವಕ್ಕೂ ನಾಗರಿಕ ಜೀವನವೇ ಕಾರಣವೆಂಬ ಸಂದೇಹವಿದೆ.

೨,೦೦೦ ಸಾವಿರ ವರ್ಷಗಳ ಹಿಂದೆಯೆ ಔಷಧಿಗಳ ಜನ್ಮದಾತ ಹಿಪೊಕ್ರೇಟಸ್‌ನು ಬೇರೆ ಬೇರೆ ಬಗೆಯ ಹವೆಗಳ ಪರಿಣಾಮಗಳನ್ನು ಊಹಿಸಲು ಪ್ರಯತ್ನಿಸಿದನು. ಆದರೆ ಆಧುನಿಕ ವಿಜ್ಞಾನಿಗಳು ಈಗೀಗಷ್ಟೇ ವಾತಾವರಣದಲ್ಲಿರುವ ಜೀವರಸಾಯನ ದ್ರವ್ಯಗಳತ್ತ ಗಮನ ವೀಯುತ್ತಿರುವುದು ನಿಜವಾಗಿಯೂ ಆಶ್ಚರ್ಯವೇ ಆಗಿದೆ ನೀರು ಮತ್ತು ಆಹಾರದ ಮೇಲೆ ಅಸಾಧ್ಯ ಅಧ್ಯಯನ ನಡೆದಿದೆ. ಆದರೆ ಅನ್ನ-ನೀರುಗಳ ಅಭಾವಕ್ಕಿಂತಲೂ ಗಾಳಿಯ ಅಭಾವವಾದಾಗ ನಾವು ಬೇಗನೆ ಸಾಯುತ್ತೇವೆ.

ಈಗ ಅಭ್ಯಾಸ-ಸಂಶೋಧನೆಗಳು ನಡೆದಿವೆ. ಹವೆಯಲ್ಲಿರುವ ವಿಟಾಮಿನ್ ಮತ್ತು ಹಾರ್ಮೋನುಗಳನ್ನು ವಿಜ್ಞಾನಿಗಳು ಪೃಥಕ್ಕರಿಸುವ ಕಾಲ ಬೇಗನೆ ಬರಬಹುದಾಗಿದೆ. ಆ ಮೇಲೆ ಅದನ್ನವರು ಕೃತಕ ರೀತಿಯಲ್ಲಿ ತಯಾರಿಸಲೂ ಬಹುದು.

ಈಗ ಸೂರ್ಯಪ್ರಕಾಶ ಲಭ್ಯವಿಲ್ಲದಿರುವ ಮಕ್ಕಳಿಗೆ ವಿಟಾಮಿನ್ 'ಡಿ' ಕೊಟ್ಟು ಅವನ್ನು ಮುಟ್ಟದೋಷ ರೋಗದಿಂದ ಪಾರುಮಾಡಬಹುದಾಗಿದೆ. ಇನ್ನು ಸನಿಹದಲ್ಲೆ ನಾವು ಒಂದು ಸ್ವಿಚ್ ಒತ್ತುವುದರಿಂದ ತಪ್ಪಲು ಪ್ರದೇಶದ ಆರೋಗ್ಯಧಾಮವೊಂದರ ಹವೆಯನ್ನು ನಾವಿದ್ದ ಕೋಣೆಗೇ ತರಿಸಿಕೊಂಡು ಮಲಗುವ ಕಾಲ ಬಂದೀತು.

*

ಪಾನನಿರೋಧದ ವೀರರಮಣಿ ಕ್ಯಾರಿ ನೇಶನ್

ಲಕ್ಷ್ಮೀನಾರಾಯಣ ಎಂ. ಎ.

೧೯೦೧ ರ ಜನವರಿ ಇಪ್ಪತ್ತೊಂದರಂದು ವಿಚಿಟಾ ಪಟ್ಟಣದ ರಸ್ತೆಯಲ್ಲಿ ಮಾರುಗಾಲು ಹಾಕುತ್ತಾ ನಡೆದು ಹೋದ ಆ ಹೆಂಗಸು ನಾಡಾಡಿ ಸ್ತ್ರೀಯಾಗಿರದೆ ಅಮೇರಿಕದ ಕ್ರಾಂತಿಕಾರಿ ಮಹಿಳೆಯೊಬ್ಬಳಿರಬಹುದೆಂದು ಪಟ್ಟಣದ ಜನರಲ್ಲಿ ಯಾರೂ ತಿಳಿದಿರಲಿಲ್ಲ. ಕೈಯಲ್ಲೊಂದು ಕೊಡಲಿ ಹಿಡಿದು "ಸಾಗಿರಿ ಮುಂದಕೆ ಸಂತ-ಯೋಧರೆ" ಎಂದು ಆವೇಶದಿಂದ ಹಾಡುತ್ತಾ ಹೋಗುತ್ತಿದ್ದ ಆ ಹೆಂಗಸು ಡೊಗ್ಲಾಸ್ ಅವೆನ್ಯೂನಲ್ಲಿದ್ದ ಜಿಮ್‌ಬರ್ನ್‌ನ ಹೆಂಡದಂಗಡಿಯನ್ನು ಸಮೀಪಿಸುತ್ತಿದ್ದಂತೆಯೇ ಬಿರುಗಾಳಿಯಂತೆ ಅದರೊಳಕ್ಕೆ ನುಗ್ಗಿದಳು. ಒಳಗೆ ಕುಡುಕರ ಒಂದು ತಂಡವೇ ನೆರೆದಿತ್ತು. ಆಕೆ ಅವರತ್ತ ತಿರುಗಿ ತನ್ನ ಕೈಕೊಡಲಿಯನ್ನು ಬೀಸುತ್ತಾ ಕೂಗಿದಳು: "ಇಗೋ ನೋಡಿ, ಇದು ಭಗವಂತನಿತ್ತ ಆಯುಧ; ಅವನ ಕೃಪಾಹಸ್ತ; ನಿಮ್ಮನ್ನು ಈ ನರಕಕೂಪದಿಂದ ಉದ್ಧರಿಸಲೆಂದೇ ಬಂದಿದ್ದೇನೆ."

ಕುಳಿತ ಜನರೆಲ್ಲಾ ಅರೆ ನಿಮಿಷದಲ್ಲಿ ಕಾಲಿಗೆ ಬುದ್ಧಿ ಹೇಳಿದರು.

ಅಂಗಡಿಯ ಮಾಲೀಕ ಈ ಭೈರವಿಯನ್ನು ಕಂಡು ಬೆದರಿ ಟೇಬಲ್ಲಿನ ಹಿಂದೆ ಅಡಗಿ ಕುಳಿತ. ಆ ಹೆಂಗಸು ಅಲ್ಲಿದ್ದ ಸೀಸೆಗಳನ್ನೆಲ್ಲಾ ಕೈಗೆತ್ತಿಕೊಂಡು ಕಂಡಕಂಡತ್ತ ಬೀರಿದಳು. ಪಡಖಾನೆಯ ಕನ್ನಡಿ, ಕಿಡಿಕಿ ಗಾಜುಗಳೆಲ್ಲಾ ಈ ದಾಳಿಗೆ ಸಿಕ್ಕು ಒಂದಿದ್ದುದು ಹತ್ತಾದುವು. ವ್ಹಿಸ್ಕಿಯ ಪೀಪಾಯಿಗಳ ಮುಚ್ಚಳಗಳು ಕೈಗೊಡಲಿಯ ಹೊಡೆತ ತಾಳಲಾರದೆ ಬಾಯಿ ತೆರೆದುವು. ಹತ್ತು ನಿಮಿಷಗಳಲ್ಲಿ ಹೆಂಡದಂಗಡಿ ಬಿರುಗಾಳಿ ಬಡಿದು ಮುರಿದು ನುಗ್ಗಾದ ಗುಡಿಸಿಲಿನಂತಾಯಿತು.

ಮುಂದೆ 'ಪಾನನಿರೋಧದ ಜೋನ್ ಆಫ್ ಆರ್ಕ್' ಎನಿಸಿಕೊಂಡ 'ಕ್ಯಾರಿ ನೇಶನ್' ಹೀಗೆ ತನ್ನ ಯುದ್ಧವನ್ನು ಪ್ರಾರಂಭಿಸಿದ್ದಳು.

ಅಮೇರಿಕದಲ್ಲಿ ಹದಿನೇಳು ವರುಷಗಳ ನಂತರ ಪಾನನಿರೋಧ ಶಾಸನವನ್ನು ಜಾರಿಗೆ ತಂದ ಧರ್ಮಯುದ್ಧಕ್ಕೆ ಪ್ರಥಮ ಯೋಧಳಾಗಿ ನಿಂತು ಕ್ಯಾರಿ ನೇಶನ್ ರಣಕಹಳೆಯನ್ನೂದಿದ್ದಳು.

ಪಡಖಾನೆಯ ವಿರುದ್ಧ ಅವಳು ಪ್ರಾರಂಭಿಸಿದ್ದ ಇಂಥ ಉಗ್ರಪ್ರತಿಕ್ರಿಯೆಗೆ ಕಾರಣವಿಲ್ಲದಿರಲಿಲ್ಲ. ಹೆಂಡ ಅವಳ ಮನೆ ಮುಳುಗಿಸಿತ್ತು. ಅತಿ ಕುಡಿತದಿಂದಾಗಿ ಸತ್ತ ಗಂಡ ಮನೆಯನ್ನೆಲ್ಲಾ ಗುಡಿಸಿ ಇದ್ದ ಪುಡಿಕಾಸನ್ನೆಲ್ಲಾ ಅದಕ್ಕೆ ಸುರಿದಿದ್ದ. ಅದರ ಫಲವಾಗಿ ಅವನ ತಾಯಿ, ಪ್ರಾಯದ ಪತ್ನಿ, ಚಿಕ್ಕ ಮಗು ಎಲ್ಲರೂ ನಿರ್ಗತಿಕರಾಗಿ ರಸ್ತೆಗೆ ಇಳಿಯುವಂತಾಗಿತ್ತು. ಮೊದಮೊದಲು ಅವಳೂ ಈ ವಿರೋಧವನ್ನು ಸೌಮ್ಯವಾಗಿಯೇ ವ್ಯಕ್ತಪಡಿಸಿದ್ದಳು. ತನ್ನ ಉಪದೇಶಗಳಿಂದ ಕಾನ್ಸಾಸ್ ನಗರದ ಹೆಂಡದಂಗಡಿಗಳನ್ನು ಮುಚ್ಚಲು ಪ್ರಯತ್ನಿಸಿದಳು. ಹೆಂಡದಂಗಡಿಗಳ ಮಾಲೀಕರ ಮನ ಪರಿವರ್ತನೆಯಾಗಲೆಂದು ಭಗವಂತನಲ್ಲಿ ನಿರಂತರ ಪ್ರಾರ್ಥನೆ ನಡೆಸಿದಳು. ಆ ಮಾರ್ಗದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿ

ಒಂದೆರಡು ಅಂಗಡಿಗಳನ್ನು ಮುಚ್ಚಿಸಿಯೂ ಬಿಟ್ಟಿದ್ದಳು.

ಆದರೆ ಇಂಥ ಮಂದಮಾರ್ಗ ಕ್ಯಾರಿ ನೇಶನಳಿಗ ತೃಪ್ತಿಕೊಡಲಿಲ್ಲ. ಅವಳ ಮನಸ್ಸು ಬಿರುಸಾದ ಯುದ್ಧಕ್ಕ ಕುದಿಯುತ್ತಿತ್ತು. ಎಂತೇ ಅವಳೀಗ ಕೈಗೂಡಲಿ ಹಿಡಿದು ಪಡಖಾನೆಗಳಿಗೆ ನುಗ್ಗಲಾರಂಭಿಸಿದ್ದಳು. ಇಂಥ ಕೆಲಸಗಳಿಂದ ತಾನು ಕಾಯದೆಭಂಗ ಮಾಡುತ್ತಿದ್ದೇನೆಂದು ಅವಳಿಗೆ ಚೆನ್ನಾಗಿ ತಿಳಿದಿತ್ತು. ಆದರೇನು, ಪಡಖಾನೆಗಳು ಕಾಯದೆಭಂಗ ಮಾಡಿರಲಿಲ್ಲವೆ? ಕಳೆದ ಇಪ್ಪತ್ತು ವರ್ಷಗಳಿಂದ ಕಾನ್ಸಾಸ್ ನಗರ ಸತ್ವಹೀನವಾಗಿ ಹೋಗಿದ್ದುದು ಸುಳ್ಳೆ?

ಇಂಥ ಕೆಲಸ ಸುಗಮವೇನೂ ಆಗಿರಲಿಲ್ಲ. ಪ್ರಾಣದ ಆಸೆ ಇಟ್ಟುಕೊಂಡವರು ತುಳಿಯಬಹುದಾದ ಮಾರ್ಗವಾಗಿರಲಿಲ್ಲ ಅದು. ಆದರೆ ಕ್ಯಾರಿ ನೇಶನ್‌ಳಲ್ಲಿ ಧೈರ್ಯದ ಭೂತ ಸಂಚಾರವಾಗಿತ್ತು. ಪಡಖಾನೆಯ ಮಾಲಕರೂ ಪಾನಪ್ರಿಯರೂ ಅವಳನ್ನು ಹಿಡಿದು ದನವನ್ನು ಬಡಿಯುವಂತೆ ಒಡಿದರು; ಬೆನ್ನಲುಬು ಮುರಿಯುವಂತೆ ಥಳಿಸಿದರು. ಆದರೆ ಕ್ಯಾರಿ ನೇಶನ್ ಇವಾವುದಕ್ಕೂ ಬಗ್ಗಲಿಲ್ಲ. ತಾನು ಮಾಡುತ್ತಿರುವ ಕೆಲಸಕ್ಕ ಭಗವಂತನೇ ಪ್ರೇರಣೆಯಿತ್ತನವನೆಂಬ ಒಂದು ವಿಚಿತ್ರ ನಂಬಿಕೆ ಅವಳಲ್ಲಿ ದೃಢವಾಗಿ ಬೇರೂರಿತ್ತು. ದೇವರು ತನಗ ಕಾಣಿಸಿಕೊಂಡು ಸಂದೇಶವೊಂದನ್ನಿತ್ತಂತೆ ಅವಳು ಭಾವಿಸಿಕೊಂಡಿದ್ದಳು. ಬೈಬಲ್ ತರೆದಾಗ ಅವಳಿಗ ದೇವತೆಗಳ ಐಕ್ಯದ ಸದ್ದು ಕೇಳುತ್ತಿತ್ತು.

ಸರಕಾರ ಅವಳನ್ನು ಜೈಲಿಗಳೆಯಿತು. ಆದರೆ ಸೆರೆಯುಟ್ಟ ಜೈಲುಗಳೆಲ್ಲ ಅವಳ ಮಧುರ ಪ್ರಾರ್ಥನೆಯಿಂದ ನಿನದಿಸತೊಡಗಿದುವು.

ನ್ಯಾಯಾಲಯದಲ್ಲಿ ವಿಚಾರಣೆಯಾಗುವಾಗ ಕ್ಯಾರಿ ನೇಶನ್ ತಾನೇ ತನ್ನ ಪರವಾಗಿ ವಾದಿಸುವುದಾಗಿ ಹೇಳುತ್ತಿದ್ದಳು. ನ್ಯಾಯಾಧಿಪತಿಯು ಕಾನ್ಸಾಸ್‌ನ ಕಾಯದೆಗಳನ್ನು ಓದಿದ ನಂತರ ಅವರನ್ನು ಕುರಿತು "ನಾವು ಈ ಪ್ರಸಂಗವನ್ನು ಕಾನ್ಸಾಸ್‌ನ ಕಾಯದೆಗಳನ್ನನುಸರಿಸಿ ನಿರ್ಣಯಿಸುವುದಿಲ್ಲ; ಧರ್ಮದ ಕಾಯದೆಗಳನ್ನನುಸರಿಸಿ ನಿರ್ಣಯಿಸುತ್ತೇವೆ" ಎಂದು ಘೋಷಿಸಿ ಎದ್ದು ನಿಂತು ತನ್ನ ಬೈಬಲನ್ನು ತೆಗೆದುಕೊಂಡು ಅದರಿಂದ ಆರಿಸಿದ ಕೆಲವು ಸಾಲುಗಳನ್ನು ಓದತೊಡಗುತ್ತಿದ್ದಳು.

ನ್ಯಾಯಾಧಿಪತಿಯು ಮಧ್ಯೆ ಅವಳನ್ನು ತಡೆದು ಕುಳಿತುಕೊಳ್ಳಲು ಅಪ್ಪಣೆ ಮಾಡಿದರೆ ಆಕೆ ತಾರಸ್ವರದಲ್ಲಿ ಕೂಗುತ್ತಿದ್ದಳು: "ಏನು, ಕುಳಿತುಕೊಳ್ಳಲು ಅಪ್ಪಣೆ ಮಾಡುತ್ತೀರಾ? ಛೆ! ಛೆ! ನನಗೆ ನಿಮ್ಮ ತಾಯಿಯಷ್ಟು ವಯಸ್ಸಾಗಿದೆ ಯೆಂಬುದಾದರೂ ನಿಮಗೆ ತಿಳಿಯಬೇಕಿತ್ತು!"

ತನ್ನ ಮಗುವನ್ನೂ ಅತ್ತೆಯನ್ನೂ ಸಲಹಲು ಕ್ಯಾರಿ ನೇಶನ್ ಸ್ಕೂಲೊಂದರಲ್ಲಿ ಉಪಾಧ್ಯಾಯಿನಿಯಾಗಿ ಕೆಲಸಕ್ಕೆ ಸೇರಿದಳು. ನಾಲ್ಕು ವರ್ಷಗಳ ನಂತರ ಆ ಕೆಲಸ ತಪ್ಪಿದಾಗ ಅವಳು ದೇವರೆದುರು ಮೊಣಕಾಲೂರಿ ಪ್ರಾರ್ಥಿಸಿದಳಂತೆ: "ಭಗವಂತ, ನಾನಿನ್ನು ಅತ್ತೆಯನ್ನೂ ಮಗುವನ್ನೂ ಕಾಪಾಡಲಾರೆ. ನೀನೇ ನನಗೆ ಸಹಾಯ ಮಾಡಬೇಕು ಮತ್ತೆ ವಿವಾಹವಾಗುವುದೇ ಉತ್ತಮವಾದಲ್ಲಿ ಹಾಗೇ ಮಾಡುವೆ. ಆದರೆ ನಾನು ಯಾರನ್ನೂ ವರನನ್ನಾಗಿ ಆರಿಸಿಲ್ಲ ಯಾರು ನನಗೆ ಉತ್ತಮರೋ ಅವರನ್ನು ನೀನೇ ಆರಿಸು"

ಒಂದೆರಡು ತಿಂಗಳು ಕಳೆದವು. ರೈತನಾಗಿ, ಪತ್ರಿಕಾ ಸಂಪಾದಕನಾಗಿ, ಕಡೆಗೆ ಧರ್ಮಬೋಧಕನಾದ ಡೇವಿಡ್ ನೇಶನ್ ಅವಳ ಕೈ ಹಿಡಿದ. ಈ ವಿವಾಹ ತನ್ನ ಪ್ರಾರ್ಥನೆಯ ಫಲವೆಂದೇ ಕ್ಯಾರಿ ನೇಶನ್ನಳ ನಂಬಿಕೆಯಾಗಿತ್ತು. ಡೇವಿಡ್ ನೇಶನ್ ಹೋಲ್ಟನ್‌ನ ಚರ್ಚೊಂದರಲ್ಲಿ ಪಾದ್ರಿಯಾಗಿ ಕೆಲಸ ವಹಿಸಿಕೊಂಡ. ಗಂಡ ಧರ್ಮಬೋಧಕನಾದರೂ ಕ್ಯಾರಿ ನೇಶನ್ ಮಾತ್ರ ಧರ್ಮಬೋಧನೆಯ ಬಗ್ಗೆ ಗಂಡನಿಗಿಂತ ತನಗೇ ಹೆಚ್ಚು ತಿಳಿವಿದೆಯೆಂದು ನಿಸ್ಸಂದೇಹವಾಗಿ ನಂಬಿದ್ದಳು. ಅವನು ಓದಬೇಕಾದ ಭಾಗಗಳನ್ನು ಅವಳೇ ಆರಿಸಿಡುತ್ತಿದ್ದಳು ಅವನ ಪ್ರವಚನಗಳನ್ನು ತಾನೇ ಬರೆಯುತ್ತಿದ್ದಳು. ಚರ್ಚಿನ ವೇದಿಕೆಯ ಮೇಲೆ ನಿಂತು ಡೇವಿಡ್ ತನ್ನೆದುರು ಕುಳಿತ ಪುಟ್ಟ ಸಮೂಹವನ್ನು ಧರ್ಮೋಪದೇಶ

ನಿಮ್ಮ ಮಕ್ಕಳ ನೆಗಡಿ ಮತ್ತು ಕೆಮ್ಮನ್ನು

ನಿಶ್ಚಿತವಾಗಿ ಉಪಶಮನಗೊಳಿಸಲು





ಅವರಿಗೆ **ಸಿರೋಲಿನ್** ‘ರೋಶ್’

ಕೊಡಿರಿ

ನಿಮ್ಮ ಮಕ್ಕಳ ಕೆಮ್ಮು ಅಥವಾ ನೆಗಡಿಯನ್ನು ಎಂದೆಂದಿಗೂ ಅಲಕ್ಷಿಸಬೇಡಿರಿ... ಅವನ್ನು ನಿಶ್ಚಿತವಾಗಿ, ನಿರಪಾಯಕರವಾಗಿ ಮತ್ತು ಶೀಘ್ರವಾಗಿ ಉಪಶಮನಗೊಳಿಸಲು ಮಕ್ಕಳಿಗೆ ಸಿರೋಲಿನ್ ಕೊಡಿರಿ. ಸೌಮ್ಯ ಕ್ರಿಯೆಯುಳ್ಳ, ಸೇವಿಸಲು ಚೆನ್ನಾಗಿರುವ ಸಿರೋಲಿನನ್ನು ನಿಮ್ಮ ಮಕ್ಕಳು ಮೆಚ್ಚುವರು. ನಿಮಗೂ ಕೂಡ ಅದು ಅತ್ಯಂತ ಲಾಭದಾಯಕವಾಗುವುದು. ಅದು ಕೆಮ್ಮನ್ನು ಕೇವಲ ತಾತ್ಕಾಲಿಕವಾಗಿ ನಿಲ್ಲಿಸುವುದಿಲ್ಲ... ಕೆಮ್ಮಿಗೆ ಮೂಲವಾದ ಹಾನಿಕಾರಕ ರೋಗಾಣುಗಳನ್ನೆ ಅದು ಪ್ರತಿಭಟಿಸುತ್ತದೆ. ಸಿರೋಲಿನ್ ಗಂಟಲು ನೋವಿಗೆ ಉಪಶಮನವನ್ನೀಯುತ್ತದೆ, ಕಫನಿವಾರಣೆಗೆ ನೆರವಾಗುತ್ತದೆ ಮತ್ತು ಅತ್ಯಂತ ದುರ್ದಮ ಕೆಮ್ಮನ್ನೂ ಶೀಘ್ರವಾಗಿ, ಸೌಮ್ಯವಾಗಿ ಪರಿಹರಿಸುತ್ತದೆ.



ಕೆಮ್ಮು ಮತ್ತು ನೆಗಡಿಗೆ ಭಾರತದ ಕೌಟುಂಬಿಕ ಔಷಧಿ

ಮನೆಯಲ್ಲಿ ಸಿರೋಲಿನನ್ನು ತಪ್ಪದೆ ಇಟ್ಟುಕೊಳ್ಳಿರಿ

‘ರೋಶ್’ ಉತ್ಪಾದನ ಸೋಲ್ ಡಿಸ್ಟ್ರಿಬ್ಯೂಟರ್ಸ್; ವೋಲ್ಟಾಸ್ ಲಿಮಿಟೆಡ್

ದಿಂದ ಹುರಿದುಂಬಿಸಲೆತ್ನಿಸುತ್ತಿದ್ದಾಗ ಮುಂದಿನ ಸಾಲಿನಲ್ಲಿಯೇ ಕುಳಿತ ಅವನ ಪತ್ನಿ ಅವನು ಎಲ್ಲಿ ದನಿ ಏರಿಸಬೇಕು, ಎಲ್ಲಿ ಇಳಿಸಬೇಕು, ಎಲ್ಲಿ ವೇಗ ಹೆಚ್ಚಿಸಬೇಕು, ಎಲ್ಲಿ ಸಾಭಿನಯವಾಗಿ ಉಪದೇಶಿಸಬೇಕು ಎಂಬುದನ್ನೆಲ್ಲಾ ಎಲ್ಲರೂ ಕೇಳುವಂತೆಯೇ ಅವನಿಗೆ ಉಪದೇಶ ಮಾಡತೊಡಗುತ್ತಿದ್ದಳು.

ಅವನು ಸಾಕಷ್ಟು ಪ್ರವಚನ ಮಾಡಿರುವನೆಂದು ಅವಳಿಗೆನ್ನಿಸಿದರೆ ಎದ್ದು ಮುಂದೆ ಬಂದು "ಹ್ಞೂ. ಇವತ್ತಿಗೆ ಇಷ್ಟು ಸಾಕು ಡೇವಿಡ್" ಎನ್ನುತ್ತಿದ್ದಳು. ಅಲ್ಲಿಗೂ ಪ್ರವಚನ ನಿಲ್ಲದಿದ್ದರೆ ವೇದಿಕೆ ಹತ್ತಿ ಡೇವಿಡ್‌ನ ಕಣ್ಣೆದುರಿಗೇ ಬೈಬಲ್ಲನ್ನು ಮುಚ್ಚಿ, ಹ್ಯಾಟನ್ನು ಕೈಗಿತ್ತು "ಇನ್ನು ಮನೆಗೆ ನಡೆಯಿರಿ" ಎಂದು ಎಳೆದುಕೊಂಡು ಹೊರಟುಬಿಡುತ್ತಿದ್ದಳು.

ಇಂಥ ಪ್ರವಚನ ಎಷ್ಟು ದಿನ ಸಾಗೀತು? ಸ್ವಲ್ಪ ದಿನಗಳಲ್ಲಿಯೇ ಚರ್ಚ್ ಅಧಿಕಾರಮಂಡಲಿ ದಯವಿಟ್ಟು ರಾಜೀನಾಮೆ ಕೊಡಬೇಕೆಂದು ಪಾದ್ರಿಯನ್ನು ಪ್ರಾರ್ಥಿಸಿತು.

ಕೆಲ ವರ್ಷಗಳ ನಂತರ ಡೇವಿಡ್ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಾಗ ಅದಕ್ಕೆ ಕ್ಯಾರಿಯಿತ್ತ ವಿವರ ಇದು: "ಡೇವಿಡ್ ತುಂಬ ಮಂದಗಾಮಿ. ಅವನಿಗೂ ನನಗೂ ಕೂಡಲಿಲ್ಲ."

ಕ್ಯಾರಿ ನೇಶನ್‌ಳಿಗೆ ಯಾರ ಪರಿವೆಯೂ ಇರುತ್ತಿರಲಿಲ್ಲ. ಒಮ್ಮೆ ಅವಳು ಗಂಡಸರ ದೊಡ್ಡ ಗುಂಪೊಂದರ ನಡುವೆ ನಿಂತಿದ್ದ ವ್ಯಕ್ತಿಯ ಬಳಿ ಹೋಗಿ, "ಈ ತಂಬಾಕು ಸೇದಿ ನಿನ್ನ ಮೈ ನಾಯಿವಾಸನೆ ಹೊಡೆಯುತ್ತಿದೆ. ನಾಚಿಕೆಯಾಗುವುದಿಲ್ಲವೆ?" ಎಂದು ಗದರಿಸಿ ಅವನು ಬಾಯಲ್ಲಿ ಕಚ್ಚಿಕೊಂಡಿದ್ದ ಸಿಗಾರನ್ನು ಕಿತ್ತೆಸೆದಳಂತೆ. ಕುದುರೆ ಸವಾರಿಯೊಂದನ್ನು ಬಿಟ್ಟು ಉಳಿದೆಲ್ಲ ಹವ್ಯಾಸಗಳನ್ನೂ ಅವಳು ತೀವ್ರವಾಗಿ ಖಂಡಿಸುತ್ತಿದ್ದಳು. ಆದರೆ ಹರೆಯದ ಹುಡುಗಿಯರಾರಾದರೂ ಎದುರಾದರೆ ಅವರನ್ನು ತಡೆದು ಯುವಕರೊಡನೆ ಕುದುರೆ ಬಂಡಿಯಲ್ಲಿ ತಿರುಗುವ ಪೆದ್ದುತನವನ್ನು ಕುರಿತು ಉಪನ್ಯಾಸ ಬಿಗಿಯುತ್ತಿದ್ದಳು.

ಕ್ಯಾರಿ ನೇಶನ್ನಳು ಹುಚ್ಚಳಾಗಿದ್ದಳೇ? ಅವಳ ಮಗಳೇನೋ ತನ್ನ ಬದುಕನ್ನೆಲ್ಲಾ ಹುಚ್ಚರ ಆಸ್ಪತ್ರೆಯಲ್ಲಿಯೇ ಕಳೆದಳು. ಇದನ್ನು ನೋಡಿದರೆ ಕ್ಯಾರಿಯೂ ಸ್ವಲ್ಪ ಮಟ್ಟಿಗೆ ಹುಚ್ಚಿಯಾಗಿದ್ದಳೇನೋ ಎನಿಸುತ್ತದೆ. ಆದರೆ ಜಗತ್ತಿನಲ್ಲಿ ಸ್ವಲ್ಪವೂ ಹುಚ್ಚರಲ್ಲದವರು ಯಾರು?

ಅವಳು ಜನ ಮೆಚ್ಚುವ ಕಾರ್ಯಗಳನ್ನೂ ಮಾಡದಿರಲಿಲ್ಲ. ತಂದೆ ಸತ್ತಾಗ ಕ್ಯಾರಿಯ ಮೇಲೆ ಸಾಲದ ದೊಡ್ಡ ಹೊರೆಯನ್ನೇ ಹೇರಿಹೋಗಿದ್ದ. ಹದಿನೈದು ವರ್ಷಗಳ ನಂತರ ಆಕೆ ಆ ಸಾಲವನ್ನು ಸಂಪೂರ್ಣವಾಗಿ ಹಿಂತಿರುಗಿಸಿದಳು. ಹಾಗೆ ಮಾಡಲೇಬೇಕಾದ ಅಗತ್ಯವೇನೂ ಇರಲಿಲ್ಲ. ಸಾಲಗಾರರೂ ಅವಳು ತಮ್ಮ ಹಣ ಹಿಂತಿರುಗಿಸಿಯಾಳೆಂದು ನಿರೀಕ್ಷಿಸಿರಲಿಲ್ಲ. ಆದರೇನು? ತಾನು ಮತ್ತೊಬ್ಬರ ಕರುಣೆಯ ವಸ್ತುವಾಗಿ ಬಾಳುವುದು ಆಕೆಗೇ ಸಹಿಸಲಿಲ್ಲ. ವೃದ್ಧಾಪ್ಯದಲ್ಲಿ ತನ್ನ ಉಪನ್ಯಾಸಗಳಿಂದ ಅವಳು ಹೇರಳ ಹಣ ಸಂಪಾದಿಸಿ ಅದನ್ನೆಲ್ಲಾ ಬಡಬಗ್ಗರಿಗೆ ಹಂಚಿದಳು. ಕಾನ್ಸಾಸ್ ನಗರದಲ್ಲಿ ಕುಡುಕರ ಪತ್ನಿಯರು, ಅನಾಥ ಮಕ್ಕಳಿಗಾಗಿ ಒಂದು ಧರ್ಮಶಾಲೆಯನ್ನೇ ತೆರೆದಳು. ಅವಳು ಪಾನನಿರೋಧದ ಚಳುವಳಿಗೆ ಇಳಿದಾಗ ಅದು ತುಂಬ ದುರ್ಬಲವಾಗಿತ್ತು ಆದರೆ ಮುಂದೆ ಅದು ಕಾನ್ಸಾಸ್ ಸಂಸ್ಥಾನದ ರಾಜ್ಯಾಂಗದಲ್ಲಿ ಹೊಸ ಶಾಸನವೊಂದನ್ನು ಸೇರಿಸುವಷ್ಟು ಪ್ರಬಲವಾಗಿ ಬೆಳೆದುದಕ್ಕೆ ಆಕೆಯೇ ಮುಖ್ಯ ಕಾರಣ.

ಇಂದಿಗೂ ಕಾನ್ಸಾಸ್ ನಗರಕ್ಕೆ ಹೋದರೆ ಅದರ ಹೆದ್ದಾರಿಗಳಲ್ಲೊಂದು ಅವಳ ಹೆಸರನ್ನು ಹೊತ್ತಿರುವುದನ್ನು ಕಾಣಬಹುದು.

ಅಲ್ಲೊಂದು ಬೋರ್ಡಿನ ಮೇಲೆ "ಕ್ಯಾರಿ ನೇಶನ್ ಟ್ರಯಲ್" ಎಂದು ಬರೆದಿದೆ. ಅದರ ಮೇಲಿರುವ ಚಿತ್ರಗಳೆಂದರೆ ಕೈಗೊಡಲಿಗಳದು. ✶



'ಅವರನ್ನು ಮೆಚ್ಚಿಸುವುದು ಸುಲಭವೆಂದು ನೀವು ತಿಳಿದಿದ್ದರೆ ಅದು ತಪ್ಪು ಗ್ರಹಿಕೆ' ಎಂದು ಶ್ರೀಮತಿ ಆರ್. ಆರ್. ಪ್ರಭು, ಹೇಳುತ್ತಾರೆ. 'ಬಟ್ಟೆಗಳ ವಿಷಯ ಹೇಳುವುದಾದರೆ... ಈಗ ನಾನು ಅವರ ಎಲ್ಲಾ ಬಟ್ಟೆಗಳನ್ನು ಸನ್‌ಲೈಟ್‌ನಿಂದಲೇ ಒಗೆಯುತ್ತೇನೆ—ಆದರಿಂದ ಅವರಿಗೆ ತೃಪ್ತಿಯಾಗುತ್ತದೆ. ನನಗೂ ತೃಪ್ತಿಯೆ. ಸನ್‌ಲೈಟ್‌ನಿಂದ ಹೇರಳ ನೊರೆಯಾಗುತ್ತದೆ, ನನ್ನ ಕೆಲಸವೂ ಬಹಳ ಸುಲಭವಾಗುತ್ತದೆ! ಬಟ್ಟೆಗಳೆಲ್ಲ ಅತ್ಯಂತ ಬೆಳ್ಳಗೆ ಮತ್ತು ಪ್ರಕಾಶಮಾನವಾಗುತ್ತವೆ. ನನಗೆ ಯಾವಾಗಲೂ ಸನ್‌ಲೈಟೇ ಬೇಕು!'

ಬಟ್ಟೆಗಳ ರಕ್ಷಣೆಗೆ ಶುದ್ಧ ಹಾಗೂ ಸೌಮ್ಯವಾದ ಸನ್‌ಲೈಟ್ ಸೋಪು ಅತ್ಯುತ್ತಮವಾಗಿದೆಯೆಂದೂ, ಅದರಂಥಾದ್ದು ಬೇರೆ ಇಲ್ಲವೆಂದೂ ಗೃಹಿಣಿಯರಿಗೆ ತಿಳಿದಿದೆ. ನಿಮಗೂ ಗೊತ್ತಾಗುವುದು.

ಸನ್‌ಲೈಟ್



ನಿಮ್ಮ ಬಟ್ಟೆಗಳಿಗೆ ಅತ್ಯಂತ ಹಿತಕರ!

S.30-X29 KN

ಹಿಂದುಸ್ತಾನ್ ಲೀವರ್ ಅವರ ತಯಾರಿಕೆ



ಸಮುದ್ರಗುಪ್ತನ ನಾಣ್ಯ

ಭಾರತೀಯ ನಾಣ್ಯಗಳ ಕಥೆ

ಮೂಲ: ಪ್ರೊ. ಯು. ವೆಂಕಟಕೃಷ್ಣರಾವ್

ಅನುವಾದ: ಬಿ. ಎಂ. ಚಂದ್ರಶೇಖರಯ್ಯ

ಹಳೆಯ ಲ್ಯಾಟಿನ್ ಭಾಷೆಯ 'ಪೆಕು' ಎಂಬ ಶಬ್ದವೂ ಸಂಸ್ಕೃತದ 'ಪಶು' ಎಂಬ ಶಬ್ದವೂ ಒಂದೇ ಪ್ರಾಚೀನ ಶಬ್ದದಿಂದ ಹುಟ್ಟಿರಬೇಕು. ಏಕೆಂದರೆ ಇದರಿಂದ ಹುಟ್ಟಿರುವ 'ಪೆಕುನಿಯರಿ' (ಆರ್ಥಿಕ) ಎಂಬ ಶಬ್ದವು ಇದನ್ನು ಸ್ಪಷ್ಟಪಡಿಸುತ್ತದೆ. ಅತಿ ಪ್ರಾಚೀನ ಕಾಲದಲ್ಲಿ ಪಶುಗಳನ್ನೇ ಹಣವನ್ನಾಗಿ ಉಪಯೋಗಿಸುತ್ತಿದ್ದರು.

ಬೃಹದಾರಣ್ಯಕೋಪನಿಷತ್ತಿನಲ್ಲಿ ಜನಕ ಮಹಾರಾಜನು ಯಾಜ್ಞವಲ್ಕ್ಯನಿಗೆ ಸಾವಿರ ದನಗಳನ್ನೇ ಉಡುಗೊರೆಯಾಗಿ ಕೊಟ್ಟನೆಂದು ಹೇಳಿದೆ. ಆ ಕಾಲದಲ್ಲಿ ಬಹಳವಾಗಿ ಬಳಸುತ್ತಿದ್ದ 'ಗೋಧನ' ವೆಂಬ ಪದದಿಂದ, ಆಗ್ಗೆ ಗೋವುಗಳನ್ನೇ ಧನವನ್ನಾಗಿ ಬಳಸುತ್ತಿದ್ದರೆಂದು ಗೊತ್ತಾಗುತ್ತದೆ.

ಇದೇ ರೀತಿಯಲ್ಲಿ ಇಂಗ್ಲೀಷಿನ 'ಶಾಲರಿ' ಎಂಬ ಶಬ್ದವನ್ನು ನೋಡಿದರೆ ಪ್ರಾಚೀನ ಕಾಲಲ್ಲಿದ ವೇತನಗಳನ್ನು ಉಪ್ಪಿನ ರೂಪದಲ್ಲಿ ಕೊಡಲಾಗುತ್ತಿತ್ತೆಂದು ತಿಳಿಯುವುದು.

ಪ್ರಾಚೀನ ಮೆಡಿಟರೇನಿಯನ್ ಪ್ರದೇಶದ ದೇಶಗಳಲ್ಲಿ ವರ್ತಕರು ಸೌಟು, ಮೀನು, ಬಾಣಲಿ, ಕಂಚಿನ ಕೊಡಲಿಗಳು ಇವುಗಳನ್ನು ವಿನಿಮಯ ಸಾಧನಗಳನ್ನಾಗಿ ಉಪಯೋಗಿಸುತ್ತಿದ್ದರು. ಕ್ರಿ. ಪೂ. ೬ ನೇ ಶತಮಾನದಲ್ಲಿ ಕ್ರೀಟ್ ದೇಶದಲ್ಲಿ ಮೂರು ಕಾಲಿನ ಮಣೆಗಳನ್ನು, ದೊಡ್ಡ ಕಡಾಯಿಗಳನ್ನು ಅಪರಾಧಿಗಳು ದಂಡದ ರೂಪದಲ್ಲಿ ಅರ್ಪಿಸುವ ಪರಿಪಾಠವಿತ್ತಂತೆ. ಆಗ ಈಜಿಪ್ಟಿನಲ್ಲಿ ಉಂಗುರಗಳನ್ನು ಹಣದಂತೆ ಉಪಯೋಗಿಸುತ್ತಿದ್ದರಂತೆ.

ಪ್ರಾಚೀನ ಭಾರತದಲ್ಲಿಯಾದರೋ ಬಹಳ ಹಿಂದೆಯೇ ಬಂಗಾರದ ಕೊರಳ ಹಾರದ ಪದಕ ಅಥವಾ 'ನಿಷ್ಕ'ವು ವಿನಿಮಯದ ಸಾಧನವಾಗಿ ಬಳಸಲ್ಪಡುತ್ತಿತ್ತು. ಈ ಪದವು ಋಗ್ವೇದದಲ್ಲಿ ಬಳಸಲ್ಪಟ್ಟಿದೆ. ಅದರಲ್ಲಿನ ಒಬ್ಬ ಅಸುರ ರಾಜನು ಬಂಗಾರದ ನೂರು ಪದಕಗಳನುಳ್ಳ ಕೊರಳ ಹಾರವೊಂದನ್ನು ಉಡುಗೊರೆಯಾಗಿ ಕೊಟ್ಟು ತನ್ನ ಅಮರಕೀರ್ತಿ ದಿಕ್ಕುಗಳಿಗೆಲ್ಲಾ ಹಬ್ಬುವಂತೆ ಮಾಡಿದನಂತೆ. ಹೀಗೆಯೇ ಐತರೇಯಬ್ರಾಹ್ಮಣದಲ್ಲಿಯೂ, ರಾಮಾಯಣದಲ್ಲಿಯೂ ಹೇಳುವಂತೆ, ಶುನಃಶೇಪನನ್ನು ಇಂತಹ ಬಹಳ ನಿಷ್ಕಗಳನ್ನು ಕೊಟ್ಟು ಕೊಂಡುಕೊಂಡರಂತೆ. ಋಗ್ವೇದದಲ್ಲಿ ಬಳಸಲಾಗಿರುವ 'ವಿಶ್ವರೂಪ'ಕ್ಕೆ ಭಾಷ್ಯಕಾರರಾದ ಸಾಯಣಾಚಾರ್ಯರು ಅನೇಕ ಬಣ್ಣಗಳುಳ್ಳದ್ದು ಎಂದು ಅರ್ಥ ಹೇಳಿರುವರು. ಎಂದರೆ ಇದರಿಂದ ೫೦೦೦ ವರ್ಷಗಳಿಗಿಂತ

"ಭವನ್ಸ್ ಜರ್ನಲ್" ನಿಂದ

ಹಿಂದೆಯೇ ಬೇರೆ ಬೇರೆ ಆಕಾರದ, ಬಣ್ಣದ ಲೋಹದ ನಾಣ್ಯಗಳು ಬಳಕೆಯಲ್ಲಿದ್ದುವೆಂಬುದು ವೇದ್ಯವಾಗುತ್ತದೆ.

ಒಂದು ನಿರ್ದಿಷ್ಟ ತೂಕದ ಬಂಗಾರದ ತಗಡಿನ ಮೇಲೆ ಒಂದು ಆಕಾರವನ್ನು ಅಥವಾ ಚಿತ್ರವನ್ನು ಕೆತ್ತಿದ್ದೇ ನಿಷ್ಕ. ಇದನ್ನೇ ವಿನಿಮಯದ ಸಾಧನವನ್ನಾಗಿ ಉಪಯೋಗಿಸುತ್ತಿದ್ದರು. ಆದರೆ ಹಿಂದೆ ಹೇಳಿದಂತೆ ನೂರು ನಿಷ್ಕಗಳನ್ನು ಉಡುಗರೆಯಾಗಿತ್ತವನು ಅಸುರ [ಅಸ್ಸೀರಿಯಾದವನು?]ನಾಗಿದ್ದುದರಿಂದ ಅಸ್ಸೀರಿಯಾ ದೇಶದಿಂದ ಈ ನಾಣ್ಯಗಳ ಉಪಯೋಗಕ್ರಮ ಬಂದಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ನಿಷ್ಕ ಎಂಬ ಶಬ್ದಕ್ಕೆ ಸಂಸ್ಕೃತದಲ್ಲೇ ಸರಿಯಾದ ವ್ಯುತ್ಪತ್ತಿಯನ್ನು ಕಲ್ಪಿಸುವುದು ಕಷ್ಟವಾಗಿದೆ. ಸುಮೇರಿಯಾ ಭಾಷೆಯಲ್ಲಾದರೋ ಈ ಶಬ್ದಕ್ಕೆ 'ಅನರ್ಘ್ಯ' ವೆಂಬ ಅರ್ಥವಿದೆ. 'ಹಿರಣ್ಯ' ಎಂಬ ಸಂಸ್ಕೃತ ಶಬ್ದಕ್ಕೂ ಸಿರಿಯಾ ಭಾಷೆಯ 'ಹರೂವಾ' ಎಂಬ ಶಬ್ದಕ್ಕೂ ಸಾಮ್ಯವನ್ನು ಕಲ್ಪಿಸುತ್ತಾರೆ. ಹೀಗೆಯೇ 'ಹಿರಣ್ಯ' ಶಬ್ದವನ್ನು ಹೀಬ್ರೂ ಭಾಷೆಯ 'ಹರಷ್' ಎಂಬ ಶಬ್ದದೊಡನೆ ಹೋಲಿಸಿ, ಇದು ಆ ಭಾಷೆಯಿಂದ ತೆಗೆದುಕೊಂಡ ಶಬ್ದವೆಂದು ಪ್ರತಿಪಾದಿಸುತ್ತಾರೆ. ಅಮೇರಿಕದ ಪ್ರಾಚ್ಯ ಸಮಿತಿಯ ಪತ್ರಿಕೆಯು ಪ್ರತಿಪಾದಿಸುವಂತೆ, ಹಿರಣ್ಯವೆಂದರೆ ಬೆಟ್ಟಗುಡ್ಡಗಳ ಸಾಲಿನಲ್ಲಿ ಅಗೆದು ತೆಗೆದದ್ದು, ನದಿಯ ಪಾತ್ರಗಳಲ್ಲಿ ಸಿಕ್ಕ ಬಂಗಾರವಲ್ಲ. ನಮ್ಮ ಪ್ರಾಚೀನ ಟೀಕಾಕಾರರೋ ಇದನ್ನು 'ಹೃತ' ಎಂದು ಕರೆದಿದ್ದಾರೆ. ಎಂದರೆ 'ಗಣಿಗಳಲ್ಲಿ ಅಗೆದು ತೆಗೆದದ್ದು' ಎಂದು ಅರ್ಥ. ಶತಪಥ ಬ್ರಾಹ್ಮಣದಿಂದ ಕೃಷ್ಣಾಲ ಮತ್ತು ನಿಷ್ಕಗಳು ಜೊತೆಗೇ ನಾಣ್ಯಗಳಾಗಿ ಬಳಸಲ್ಪಡುತಿದ್ದುವೆಂದು ಗೊತ್ತಾಗುತ್ತದೆ.

ನಾಣ್ಯಗಳು, ಅವುಗಳನ್ನು ಬಳಕೆಗೆ ತಂದ ರಾಜರುಗಳ ಬಿರುದುಗಳನ್ನೂ ಹೆಸರುಗಳನ್ನೂ ಇಂದು ನಮಗೆ ಹೇಳುತ್ತಿವೆ. ಅವುಗಳಿಂದ ಆ ಕಾಲದ ರಾಜರ ವಂಶಾವಳಿ, ಅವರ ಇತಿಹಾಸ, ದೇಶದ ಭೌಗೋಲಿಕ ವಿಸ್ತಾರ ಇತ್ಯಾದಿಗಳನ್ನು ನಾವಿಂದು ಊಹಿಸಬಹುದು. ಭಾರತದಲ್ಲಿ ನಮಗೆ ಸಿಕ್ಕಿರುವ ಅತಿ ಪ್ರಾಚೀನ ನಾಣ್ಯವೆಂದರೆ ಅಲೆಕ್ಸಾಂಡರನ ಸಮಕಾಲೀನನಾದ ಸೌಭೂತಿ ಎಂಬ ರಾಜನು ಹೊರಡಿಸಿರುವ ನಾಣ್ಯ. ಇದಾದ ನಂತರ ಸುಮಾರು ೨೦೦ ವರ್ಷಗಳ ವರೆಗೆ ನಮಗೆ ನಾಣ್ಯಗಳೇ ದೊರೆಯುವುದಿಲ್ಲ. ಕ್ರಿ. ಶ. ೨೦೦ರ ನಂತರ ಭಾರತದ ವಾಯುವ್ಯಭಾಗವನ್ನಾಳುತ್ತಿದ್ದ ಬ್ಯಾಕ್ಟ್ರಿಯನ್ನರು ಎಂಬ ಗ್ರೀಕ್ ರಾಜರು ನಾಣ್ಯದ ಒಂದು ಕಡೆಗೆ ಭಾರತೀಯ ಭಾಷೆಯನ್ನೂ ಇನ್ನೊಂದು ಕಡೆಗೆ ಗ್ರೀಕ್ ಭಾಷೆಯನ್ನೂ ಬಳಸಿಕೊಂಡರು.

ಮೆಗಾಸ್ತನೀಸ್ ಹೇಳುವಂತೆ ಆತನ ಕಾಲದಲ್ಲಿ ಭಾರತದಲ್ಲಿ ವ್ಯವಸ್ಥಿತ ನಾಣ್ಯಗಳ ಕ್ರಮವಿನ್ನೂ ಜಾರಿಯಲ್ಲಿ ಬಂದಿರಲಿಲ್ಲವಂತೆ. ಆದ್ದರಿಂದ ಭಾರತೀಯರು ಹೆಚ್ಚಾಗಿ 'ಔಲ್ಸ್' ಎಂಬ ಭಾರತೀಯ ನಾಣ್ಯಗಳನ್ನೂ 'ಡೋರಿಕ್ಸ್' ಎಂದು ಕರೆಯುತ್ತಿದ್ದ ಪರ್ಶಿಯಾದ ನಾಣ್ಯಗಳನ್ನೂ ಉಪಯೋಗಿಸುತ್ತಿದ್ದರು. ಆದಾಗ್ಯೂ ಭಾರತದಲ್ಲಿ ಚೌಕಾಕಾರದ 'ಪಂಚ್' ಎಂಬ ಮುದ್ರೆಯನ್ನೊತ್ತಿದ ಬೆಳ್ಳಿಯ ನಾಣ್ಯಗಳು ವ್ಯವಹಾರದಲ್ಲಿದ್ದುವು. ಆದರೆ ಇವುಗಳಿಗೆ ಪರದೇಶದ ನಾಣ್ಯಗಳಿಗಿರುವಷ್ಟು ಮಾನ್ಯತೆ ಇರಲಿಲ್ಲ. ಭಾರತದ ವಾಯವ್ಯ ಭಾಗದಲ್ಲಿ ಆಳುತ್ತಿದ್ದ ಗ್ರೀಕ್ ರಾಜರುಗಳು ಮಾತ್ರ ದ್ವಿಭಾಷೆಯ ನಿರ್ದಿಷ್ಟ ತೂಕವುಳ್ಳ ನಾಣ್ಯಗಳನ್ನು ಬಳಸುತ್ತಿದ್ದರು. ಎಂದರೆ ಈ ನಾಣ್ಯಗಳ ತಯಾರಿಕೆಯ ಕ್ರಮವನ್ನು ಪರ್ಶಿಯನ್ನರು ಗ್ರೀಕರಿಂದ ಕಲಿತಿರಬೇಕು. ಮುಂದೆ ಬಹುಶಃ ಭಾರತೀಯರು ಪರ್ಶಿಯನರಿಂದ ಕಲಿತುಕೊಂಡಿರಬೇಕು.

ವೈದಿಕ ಕಾಲದಲ್ಲಿ 'ನಿಷ್ಕ'ವೇ ಬಂಗಾರದ ದೊಡ್ಡ ನಾಣ್ಯವಾಗಿತ್ತೆಂದು ಕಾಣುತ್ತದೆ.

ಕ್ರಮೇಣ ಅದಕ್ಕಿಂತ ಸ್ವಲ್ಪ ಸಣ್ಣದಾದ ಬಂಗಾರದ ನಾಣ್ಯ 'ಸುವರ್ಣ' ಬಳಕೆಯಲ್ಲಿ ಬಂದಿರಬೇಕು. 'ಕಾಕಣಿ' ಮುಂತಾದ ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ಮೌರ್ಯರ ಟಂಕಶಾಲೆಯಲ್ಲಿ ತಯಾರಾಗುತ್ತಿದ್ದುವೆಂದು ಕೌಟಿಲ್ಯನ ಅರ್ಥಶಾಸ್ತ್ರದಿಂದ ಗೊತ್ತಾಗುತ್ತದೆ. ಭಾರತವು ಬೆಳ್ಳಿಯನ್ನು ಪರದೇಶದಿಂದ ಆಯಾತ ಮಾಡಿಕೊಂಡು 'ಕಾರ್ಷಾಪಣ' ಅಥವಾ 'ಪುರಾಣ' ಮುಂತಾದ ನಾಣ್ಯಗಳನ್ನು ತಯಾರಿಸುತ್ತಿದ್ದಿತು.

ಕೌಟಿಲ್ಯನೇ ಹೇಳುವಂತೆ ಹಿಂದಿನ ಕಾಲದಲ್ಲಿ ಸೊನ್ನಗಾರರು ತಮ್ಮ ಇಷ್ಟ ಬಂದ ತೂಕ ಮತ್ತು ಆಕಾರದ ನಾಣ್ಯಗಳನ್ನು ತಾವೇ ನಿರ್ಮಿಸುತ್ತಿದ್ದರು. ಮೌರ್ಯರ ಕಾಲದಲ್ಲಿಯಾದರೋ ಸರಕಾರದಿಂದ ನಿಯಮಿಸಲ್ಪಟ 'ಲಕ್ಷಣಾಧ್ಯಕ್ಷ' ನೆಂಬ ಅಧಿಕಾರಿಯು ನಾಣ್ಯಗಳ ಲಕ್ಷಣ ಮತ್ತು ರೂಪ ಹೀಗೆಯೇ ಇರಬೇಕೆಂದು ಸೂಚಿಸುತಿದ್ದನು. ಹಾಗೆಯೇ 'ರೂಪದರ್ಶಕ' ನು ಆಯಾ ನಾಣ್ಯಗಳಿಗೆ ಇಷ್ಟೇ ಬೆಲೆಯಿರಬೇಕೆಂದು ನಿರ್ಣಯಿಸುತ್ತಿದ್ದನು. ಮತ್ತು ಈ ನಾಣ್ಯಗಳು ಚಲಾವಣೆಗೆ ಬಂದಾಗ ಸರಕಾರಕ್ಕೆ ಎರಡೂ ಕಡೆಯಿಂದಲೂ ೫% ಲಾಭ ಬರುತ್ತಿತ್ತು. ಈ ರೀತಿಯಾಗಿ ಸರಕಾರವು ನಾಣ್ಯಗಳ ತಯಾರಿಕೆಯನ್ನು ಖಾಸಗೀ ವರ್ತಕ ಸಂಘಗಳಿಂದ ತನ್ನ ಕೈಗೆ ತೆಗೆದುಕೊಂಡಿತು. ಮುಂದೆ ಸರಕಾರವೇ ಅಕ್ಷಶಾಲೆ ಅಥವಾ ಟಂಕಶಾಲೆಯನ್ನೇರ್ಪಡಿಸಿ, ನಾಣ್ಯಗಳನ್ನು ತಯಾರಿಸತೊಡಗಿತು.

ಮುಂದೆ ಗುಪ್ತರು— ಅದರಲ್ಲೂ ಮುಖ್ಯವಾಗಿ ಸಮುದ್ರಗುಪ್ತನು— ನಾಣ್ಯಗಳನ್ನು ಸಂಪೂರ್ಣವಾಗಿ ಭಾರತೀಕರಿಸಿ, ಅನ್ಯ ದೇಶೀಯರ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತಮಾಡಿದನು. ನಿಧಾನವಾಗಿ ಈ ರೀತಿಯಲ್ಲಿ ನಮ್ಮ ಪೂರ್ವಜರು ಬೆಳ್ಳಿ, ತಾಮ್ರ, ತೀಕ್ಷ್ಣ (ಕಬ್ಬಿಣ), ತವರು, ಸೀಸ, ಮತ್ತು ಅಂಜನ ಮುಂತಾದ ಲೋಹಗಳಿಂದ ನಾಣ್ಯಗಳನ್ನು ತಯಾರಿಸತೊಡಗಿದರು. ಅತಿ ಬುದ್ಧಿವಂತನಾದ ಮಹಮ್ಮದ್ ಬಿನ್ ತೊಗಲಕನು ಚರ್ಮದ ನಾಣ್ಯಗಳನ್ನು ಜಾರಿಗೆ ತಂದಿದ್ದರೆ, ಈಗ ಕಾಗದದ ನೋಟುಗಳು ಜಾರಿಯಲ್ಲಿವೆ.

ರೂಪ್ಯ ಅಥವಾ ಪಣ, ಅರ್ಧ ಪಣ, ಕಾಲು ಪಣ ಮತ್ತು ಅಷ್ಟಭಾಗಗಳೆಂಬ ಬೆಳ್ಳಿಯ ನಾಣ್ಯಗಳು ಬಳಕೆಯಲ್ಲಿದ್ದವು. ತಾಮ್ರದ ನಾಣ್ಯಗಳನ್ನು ತಯಾರಿಸುವಾಗ ಅವರು ಲೋಹಗಳ ಮಿಶ್ರಣದಿಂದ ನಾಣ್ಯಗಳನ್ನು ತಯಾರಿಸುವ ಕಲೆಯನ್ನರಿತುಕೊಂಡರು. ನಾಲ್ಕು ಭಾಗ ಬೆಳ್ಳಿ, ಹನ್ನೊಂದು ಭಾಗ ತಾಮ್ರ, ಒಂದು ಭಾಗ ಕಬ್ಬಿಣ, ತವರ, ಸೀಸ ಅಥವಾ ಅಂಜನ ಸೇರಿಸಿ ನಾಣ್ಯಗಳನ್ನು ತಯಾರಿಸುತ್ತಿದ್ದರೆಂದು ಕೌಟಿಲ್ಯನ ಟೀಕಾಕಾರನಾದ ಭಟ್ಟಸ್ವಾಮಿಯು ಉಲ್ಲೇಖಿಸಿದ್ದಾನೆ. ತಾಮ್ರದ ನಾಣ್ಯಗಳನ್ನು ಮಾಷಕ, ಅರ್ಧ ಮಾಷಕ, ಕಾಕಣಿ, ಅರ್ಧ ಕಾಕಣಿಗಳೆಂದು ವಿಭಜಿಸಿದ್ದರು. ಹೀಗೆಯೇ ಕಾರ್ಷಾಪಣಗಳನ್ನು ಕಾರ್ಷಾಪಣ, ಅರ್ಧ ಕಾರ್ಷಾಪಣ, ಪಾದಕ, ಚತುರ್ಮಾಷಕಗಳೆಂದು ವಿಭಜಿಸಿದ್ದರು. ಲಕ್ಷಣಾಧ್ಯಕ್ಷನು ಇವುಗಳ ತೂಕ, ಬಣ್ಣ ಆಕಾರ ಮತ್ತು ಮೊಹರುಗಳು ಇವುಗಳು ವ್ಯತ್ಯಾಸವಾಗದಂತೆ ನೋಡಿಕೊಂಡಿರುತ್ತಿದ್ದನು.

ಕ್ರಿಸ್ತನ ಸಮಕಾಲೀನನೋ ಅಥವಾ ಪೂರ್ವಕಾಲೀನನೋ ಆದ ಮನುವು ನಾಲ್ಕು ಸುವರ್ಣಗಳಾದರೆ ಒಂದು ನಿಷ್ಕಕ್ಕೆ ಸಮನಾಗುತ್ತದೆ ಎಂದು ಹೇಳಿದ್ದಾನೆ. ಕ್ರಿ. ಪೂ. ೭ನೆಯ ಶತಮಾನದಲ್ಲಿದ್ದ ಪಾಣಿನಿಯೂ ಕ್ರಿ. ಪೂ. ೧ನೆಯ ಶತಮಾನದಲ್ಲಿದ್ದ ವಾತ್ಸ್ಯಾಯನನು ತನ್ನ ಕಾಮಶಾಸ್ತ್ರದಲ್ಲಿಯೂ ಬಂಗಾರ ಮತ್ತು ತಾಮ್ರ ನಾಣ್ಯಗಳ ಬಗ್ಗೆ ಹೇಳಿದ್ದಾರೆ. ಕ್ರಿ. ಪೂ. ೨ನೆಯ ಶತಮಾನದಲ್ಲಿ ಯಾಜ್ಞವಲ್ಕ್ಯನು ನಾಣಕಗಳೆಂಬ ತಾಮ್ರ ನಾಣ್ಯಗಳ ಬಗ್ಗೆ ಹೇಳಿ, ಆಗಲೇ ಖೋಟಾ ನಾಣ್ಯಗಳನ್ನೂ ತಯಾರಿಸುವುದನ್ನು ಕಲಿತುಕೊಂಡಿದ್ದರೆಂಬುದನ್ನು ತಿಳಿಸಿದ್ದಾನೆ.

ನಿಶ್ಚಯವಾಗಿಯೂ ನಾಣ್ಯಗಳ ತೂಕ ರೂಪಗಳಲ್ಲಿ ನಿಯಮಗಳನ್ನು ಕಲ್ಪಿಸಿದವರೆಂದರೆ ಮೌರ್ಯರೇ. ನಾಣ್ಯಗಳ ಮೇಲೆ ಕಲಾತ್ಮಕ ಚಿತ್ರಗಳನ್ನು ಕೆತ್ತಿಸಿದವರಲ್ಲಿ ಗುಪ್ತರೇ ಮೊದಲಿಗರು. ಇವರಲ್ಲಿ ಪ್ರಸಿದ್ಧನಾದ ಸಮುದ್ರಗುಪ್ತನು ವೀಣೆಯನ್ನು ನುಡಿಸುತ್ತಿರುವ ಚಿತ್ರವು ನಿಜವಾಗಿಯೂ ಬಹಳ ಪ್ರಸಿದ್ಧವಾಗಿದೆ. ಕೌಟಿಲ್ಯನು ಹೇಳುವಂತೆ ದೇಶದಲ್ಲಿ ದೊರೆತ ನಿಧಿಗಳೂ ಗಣಿಗಳೂ ರಾಜನ ಸರ್ವಸ್ವಾಮಿತ್ವಕ್ಕೊಳಪಟ್ಟಿದ್ದವು.


ಇದಿಷ್ಟು ಹಳೆಯ ನಾಣ್ಯಗಳ ಕಥೆಯಾಯಿತು. ಕೆಲವು ಶತಮಾನಗಳು ಗತಿಸಿದನಂತರ, ದೊಡ್ಡ ದೊಡ್ಡ ದಾರಿಗಳ ಎರಡೂ ಬದಿಗಳಲ್ಲಿಯೂ ಮರಗಳನ್ನು ನೆಡಿಸಿ, ಸಾಗುವಳಿಯಾದ ಭೂಮಿಯ ಮೇಲೆ ತೆರಿಗೆ, ಕಂದಾಯಗಳನ್ನು ವಿಧಿಸಿ ಇತಿಹಾಸಪ್ರಸಿದ್ಧನಾದ, ಕ್ರಿ. ಶ. ೧೫೪೦-೪೫ ರ ವರೆಗೆ ದಿಲ್ಲಿಯನ್ನಾಳಿದ ಶೇರ್‌ಶಹನು ಬೆಳ್ಳಿಯ ರೂಪಾಯಿಯು ೧೭೮ ಗ್ರೈನು ಅಥವಾ ೧ ತೊಲೆ ತೂಕವಿರಬೇಕೆಂಬ ನಿಯಮವನ್ನು ಜಾರಿಗೆ ತಂದನು. ಅಲ್ಲದೆ ಇವನು ೩೩೦ ಗ್ರೈನು ಭಾರವುಳ್ಳ 'ದಾಮ್' ಎಂಬ ಅತಿ ಸಣ್ಣ ತಾಮ್ರ ನಾಣ್ಯವನ್ನು ಜಾರಿಗೆ ತಂದನು.

ಶೇರ್‌ಶಹನ ಅನಂತರವೇ ಪಟ್ಟಕ್ಕೆ ಬಂದ ಮಹಾ ಮೊಗಲ ಚಕ್ರವರ್ತಿ ಅಕ್ಬರನು ಕಂದಾಯ ವ್ಯವಸ್ಥೆಗೂ ಅತಿ ಮುಖ್ಯವಾಗಿ ನಾಣ್ಯಗಳ ಕ್ರಮಕ್ಕೂ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟನು. ಐನೀ-ಅಕ್ಬರಿ ಹೇಳುವಂತೆ 'ದಾಮ್' ಎಂಬುದನ್ನು 'ಪೈಸಾ' ಎಂದು ಕೂಡಾ ಕರೆಯುತ್ತಿದ್ದರು. ರೂಪಾಯಿಯ ಅರ್ಧ ಭಾಗವನ್ನು 'ಅಧೇಲಾ' ಎಂದೂ ಇದರ ಕಾಲು ಭಾಗವನ್ನು 'ಪಾವ್ಲಾ' ಎಂದೂ ಎಂಟನೆಯ ಒಂದು ಭಾಗವನ್ನು 'ದಾಮ್ರೀ' ಎಂದೂ ಕರೆಯುತ್ತಿದ್ದರು ಮೊಗಲರ ಮೂಲ ನೆಲೆಯಾದ ಮಧ್ಯ ಏಷ್ಯಾದಿಂದಲೇ 'ಪೈಸಾ' ಎಂಬ ಪದವೂ ಬಂದಿರಬೇಕು. 'ದಾಮ್' ಶಬ್ದಕ್ಕೂ ಗ್ರೀಕರ 'ದ್ರ್ಯಾಕ್ಮೆ' ಎಂಬ ಶಬ್ದಕ್ಕೂ ಸಾಮ್ಯ ಕಾಣುತ್ತದೆ. ಅಲ್ಲದೆ ಇದು 'ತಾಮ್ರ' ಎಂಬ ಶಬ್ದಕ್ಕೂ ಸಂಬಂಧಪಟ್ಟುದಾಗಿ ಕಾಣುತ್ತದೆ.

ಮೊಗಲ ಸಾಮ್ರಾಜ್ಯದ ಕಾಲದಲ್ಲಿ ಕಂದಾಯವನ್ನು 'ದಾಮ'ಗಳ ಲೆಕ್ಕದಲ್ಲಿ ಸಂಗ್ರಹಿಸಲಾಗುತ್ತಿತ್ತು. ಈಗ ಸ್ವಲ್ಪ ದಿವಸಗಳ ಹಿಂದೆಯಿದ್ದ ರೂಪಾಯಿ, ಆಣೆ, ಪೈ ಎಂದು ಮೂರು ವಿಭಾಗ ಮಾಡುತ್ತಿದ್ದ ಕ್ರಮವು, ಮೊಗಲರ ಕಾಲದಲ್ಲಿದ್ದ ರೂಪಾಯ್, ದಾಮ್, ಜಿತೀಲ ಈ ಪದ್ಧತಿಯ ಅನುಕರಣೆಯಾಗಿದೆ. ಹಿಂದಿನ ಆಣೆಯ ಕಾಲುಭಾಗವಾಗಿದ್ದ 'ಬಿಲೆ' (ಕಾಲಾಣೆ) ಮೊಗಲರು ಕರೆಯುತ್ತಿದ್ದ 'ಪೈಸಾ'ದ ರೂಪವೇ ಇರಬೇಕು.

ಕ್ರಿ. ಶ. ೧೭ ಶತಮಾನದಲ್ಲಿದ್ದ ಟವರ್ನಿಯರನು ಹೇಳುವಂತೆ, ರೂಪಾಯಿಯ ಬೆಲೆ ೪೬ ರಿಂದ ೫೬ ಬಿಲ್ಲೆ (ಕಾಲಾಣೆ) ಬೆಲೆಬಾಳುವ ಯಾವ ವಸ್ತುವಿಗಾಗಲೀ ಸಮನಾಗಿತ್ತು. ಇದು ಯಾವಾಗಲೂ ಗಣಿಗಳಿರುವ ದೂರವನ್ನವಲಂಬಿಸಿರುತ್ತಿತ್ತು. ಮುಂದೆ ಪರಿಸ್ಥಿತಿಯ ಪರಿಣಾಮದಿಂದ ಅದರ ಬೆಲೆ ೫೬ ರಿಂದ ೬೪ ಬಿಲ್ಲೆಗಳಿಗೆ ಹೆಚ್ಚಿಸಲ್ಪಟ್ಟಿತು.

ಸ್ವತಂತ್ರ ಭಾರತವು ೧೯೫೭ ರಲ್ಲಿ ದಶಮಾಂಶ ನಾಣ ಪದ್ಧತಿಯನ್ನು ಜಾರಿಗೆ ತಂದಿತು. ಈಗಿನ ನಾಣ್ಯಗಳ ಒಂದು ನಯೆಪೈಸೆ ಮಾತ್ರತಾಮ್ರದ್ದು. ಉಳಿದ ನಾಣ್ಯಗಳೆಲ್ಲಾ ಮಿಶ್ರಲೋಹದವು. ★



ಒಂದು ಮರ್ಮಸ್ಪರ್ಶಿ

ಸತ್ಯಘಟನೆ

ಎರಡಾಣೆ

ಶೀನಾ

"ನಿಮಗೇನು? ಊಟವಾದೊಡನೆ ನೀವು ಆಫೀಸಿಗೆ ಹೋಗಿ ಬಿಡುತ್ತೀರಿ. ಇಲ್ಲಿಯ ಕಷ್ಟ ನಿಮಗೆ ಹೇಗೆ ತಿಳಿಯಬೇಕು? ಆ ಮನೆಯ ಮಕ್ಕಳ ಕೂಗಾಟ, ಗದ್ದಲ ಕೇಳಲಾರದೆ ಎರಡೂ ಕಿವಿಗಳಲ್ಲಿ ಬೊಟ್ಟು ಹಾಕಿಕೊಂಡು ಕುಳಿತಿರುತ್ತೇನೆ. ಸಾಕು. ಈ ಮನೆಯೇ ಸಾಕು. ಐದು ರೂಪಾಯಿ ಬಾಡಿಗೆ ಜಾಸ್ತಿಯಾದರೂ ಸರಿ, ಈ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೋಗಲೇಬೇಕು." ನನ್ನಾಕೆ ನಿತ್ಯವೂ ಹಾಡುತ್ತಿದ್ದ ರಾಗ ಇದು.

ಎರಡು ತಿಂಗಳ ಹಿಂದೆ ನನಗೆ ಮೈಸೂರಿಗೆ ವರ್ಗವಾಗಿತ್ತು. ಬಹು ಕಷ್ಟದಿಂದ, ಅವರಿವರ ಸಹಾಯದಿಂದ ಈ ಮನೆಯನ್ನು ೧೫ ರೂಪಾಯಿ ಬಾಡಿಗೆಗೆ ಹಿಡಿದಿದ್ದೆ.

ನನ್ನ ಮನೆಯ ಪಕ್ಕದಲ್ಲಿ ಒಂದು ಬಡ ಸಂಸಾರವಿತ್ತು. ಆ ಗೂಡಿನಲ್ಲಿ ಏಳು ಜನರಿದ್ದರು. ಗಂಡ-ಹೆಂಡತಿ-ಐದು ಚಿಕ್ಕ ಮಕ್ಕಳು. ಯಜಮಾನ ಮನುಷ್ಯ ಜವಳಿಯಂಗಡಿಯೊಂದರಲ್ಲಿ ಕೆಲಸಕ್ಕಿದ್ದ. ಆ ಮನೆಯಲ್ಲಿ ನಿತ್ಯವೂ ಅನ್ನಕ್ಕಾಗಿ ಕಡಿದಾಟ, ಜಗಳ, ಬೈಗಳು, ಹೊಡೆತ. ನಿತ್ಯವೂ ನನ್ನ ಹೆಂಡತಿಯ ಕರಕರೆ ಕೇಳಲಾರದೆ ಬೇರೆ ಮನೆಯನ್ನು ಹುಡುಕುತ್ತಲೇ ಇದ್ದೆ.

ಒಂದು ದಿನ ನಾನು ಮನೆಗೆ ಬಂದಾಗ ಸಂಜೆ ಆರು ಗಂಟೆಯಾಗಿತ್ತು. ವನಜಾಕ್ಷಿ, ನನ್ನಾಕೆ ಬಾಗಿಲಲ್ಲೆ ನಿಂತಿದ್ದಳು. ಅವಳ ಮುಖ ಚೀಪಿ ಒಗೆದ ಹಣ್ಣಿನಂತಿತ್ತು. ಪಕ್ಕದ ಮನೆಯ ಹತ್ತು ವರ್ಷದ ಪದ್ಮ ಅಳುವುದು ಕೇಳಿಸುತ್ತಿತ್ತು. ಪದ್ಮ ಬಲು ಮುದ್ದಾದ ಹುಡುಗಿ. ಅವಳ ಅಳುವಿನ ಸ್ವರ ನನ್ನ ಹೃದಯವನ್ನು ಕಲಕಿತು. ಹೆಂಡತಿಯ ಮುಖ ನೋಡಿದೆ. ಮಾತನಾಡದೆ ಇಬ್ಬರೂ ಒಳಗೆ ಬಂದು ಕುಳಿತೆವು.

ಪಕ್ಕದ ಮನೆಯಾಕೆ, ಗಂಗಮ್ಮ ಪದ್ಮಳನ್ನು ಹೊಡೆಯುತ್ತಿದ್ದ ಹಾಗೂ ಬಯ್ಯುತ್ತಿದ್ದ ಶಬ್ದ ಕೇಳಿಸುತ್ತಿತ್ತು. ಪೆಟ್ಟು ಬಲವಾಗಿ ಬಿದ್ದಾಗ ಪದ್ಮ ಗಟ್ಟಿಯಾಗಿ ಅಳುತ್ತಿದ್ದಳು. "ಅಮ್ಮ, ಹೊಡೀಬೇಡ, ಕಾಲೀಗೆ ಬೀಳ್ತೀನೆ" ಎಂದು ಗೋಗರೆಯುತ್ತಿದ್ದಳು.

ಗಂಗಮ್ಮ ಬಲವಾದ ಪೆಟ್ಟು ಕೊಟ್ಟಿರಬೇಕು. "ಅಯ್ಯಮ್ಮಾ" ಕರಳನ್ನು ಭೇದಿಸುವ ಕೂಗು ಪದ್ಮಳ ಬಾಯಿಂದ ಹೊರಬಿತ್ತು. ನನ್ನನ್ನು ಯಾರೋ ಚಾಟಿಯಿಂದ ಬಾರಿಸಿದ ಹಾಗಾಯಿತು. "ಎಲ್ಲಿಗ?" ಎಂದು ನನ್ನಾಕೆ ಕೇಳುತ್ತಿರುವುದನ್ನು ಗಮನಿಸದೆ ಒಂದೇ ಉಸಿರಿನಲ್ಲಿ ಪಕ್ಕದ ಮನೆಗೆ ಧಾವಿಸಿದೆ.

ಗಂಗಮ್ಮನ ಕೈಯಲ್ಲಿ ದೊಣ್ಣೆ; ಪದ್ಮಳು ನೆಲದ ಮೇಲೆ; ಮಕ್ಕಳು ಬೆದರಿ ಮೂಲೆ ಸೇರಿದ್ದವು. ನನ್ನ ಆಗಮನದಿಂದ ಗಂಗಮ್ಮನ ಮುಖ ನನ್ನ ಕಡೆ ತಿರುಗುವಂತಾಯಿತು. ನಾನು ಆಕೆಯನ್ನು ನೋಡಿದೆ. ಬಾಯಿಂದ ಮಾತ್ರ ಮಾತು ಹೊರಡಲಿಲ್ಲ.

ಪದ್ಮ ಸಹಾಯ ಕೇಳುವವಳಂತೆ ನನ್ನನ್ನು ನೋಡುತ್ತಿದ್ದಳು. ಅವಳ ದೀನ ಮುಖ ಕಂಡು ನನ್ನ ಕಣ್ಣಿನಲ್ಲಿ ನೀರು ತುಂಬಿತು. ಪದ್ಮಳನ್ನು ಹಿಡಿದು ಮೇಲೆತ್ತಿದೆ. ಅವಳ ಮೈತುಂಬ ಬಾಸಾಳೆಗಳು ಮೂಡಿದ್ದವು. ಅಲ್ಲಲ್ಲಿ ಚರ್ಮ ನೀಲಿ

ಯಾಗಿತ್ತು. ಪದ್ಮ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಉಳಿದ ಒಬ್ಬರ ಬಾಯಲ್ಲೂ ಶಬ್ದವೇ ಇಲ್ಲ.

ಮಳೆ ಹನಿಗಳಂತೆ ನೆಲದ ಮೇಲೆ ಗಂಗಮ್ಮನ ಕಣ್ಣೀರು ಬೀಳುತ್ತಿತ್ತು. ಗುಡುಗು ನಿಂತು ಮಳೆ ಬರತೊಡಗಿತ್ತು. ಅವಳು ದೊಣ್ಣೆಯನ್ನು ಬೀಸಾಕಿ ಪದ್ಮಳನ್ನು ತೊಡೆಯ ಮೇಲೆ ಹಾಕಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ಪದ್ಮಳನ್ನು ಮುದ್ದಿಸಿದಳು. ತಪ್ಪಾಯಿತೆಂದು ಗಲ್ಲಗಲ್ಲ ಬಡಿದುಕೊಂಡಳು.

ಅಷ್ಟರಲ್ಲಿ ಅಲ್ಲಿಗೆ ಬಂದಿದ್ದ ನನ್ನಾಕೆ "ಯಾಕೆ, ಗಂಗಮ್ಮ, ಪದ್ಮಳನ್ನು ಅಷ್ಟು ಬಡಿದಿರಿ?" ಎಂದು ಕೇಳಿದಳು.

ತುಸು ಹೊತ್ತು ಮೌನವಾಗಿದ್ದು ಬಳಿಕ ಗಂಗಮ್ಮ ಹೇಳಿದಳು. "ಏನು ಹೇಳಲಿ? ನಮ್ಮಿಂದ ನಿಮಗೆ ತೊಂದರೆಯಾಗುತ್ತದೆಂದು ತಿಳಿದರೂ ನಾನು ಏನೂ ಮಾಡಲಾರದವಳಾಗಿದ್ದೇನೆ. ನಾವು ಬಡವರು. ಬಡವರಿಗೆ ಮಕ್ಕಳೂ ಜಾಸ್ತಿ. ಪದ್ಮಳನ್ನು ಹೊಡೆದದ್ದನ್ನು ಕಂಡು 'ಇವಳು ಎಂಥ ರಾಕ್ಷಸಿಯಪ್ಪ!' ಎಂದು ನೀವೆಂದುಕೊಳ್ಳುತ್ತಿರಬೇಕು. ಬಡತನದ ತೆರೆ ತಾಯ ಕರುಳ ಮಮತೆಯನ್ನು ಮುಚ್ಚಿ ಬಿಡುತ್ತದೆ. ಇಂದು ಬೇಳೆ, ಉಪ್ಪು, ಯಾವುದೂ ಮನೆಯಲ್ಲಿರಲಿಲ್ಲ. ಗಂಡನಿಗೆ ಬರೀ ಅನ್ನ ಹೇಗೆ ಬಡಿಸುವುದು? ಕಾಡಿ ಬೇಡಿ ಎರಡಾಣೆಯನ್ನು ಎದುರು ಮನೆಯವರಿಂದ ಸಾಲ ತಂದೆ. ಸಾಮಾನು ತರಲು ಹೋದ ಪದ್ಮ ದಾರಿಯಲ್ಲಿ ಅದನ್ನು ಕಳೆದುಕೊಂಡು ಬರಿಗೈಲಿ ಮನೆಗೆ ಬಂದಳು. ನನ್ನ ಮನಸ್ಸು ಎಷ್ಟು ಉದ್ವಿಗ್ನವಾಗಿರಬೇಡ! ತಡೆಯಲಾರದೆ ಹೊಡೆದೆ" ಗಂಗಮ್ಮನ ಕಣ್ಣಲ್ಲಿ ಮತ್ತೆ ನೀರು ಬರತೊಡಗಿತು.

ನನ್ನ ಕೈ ಜೇಬಿಗೆ ಹೋಯಿತು. ಮನೆಗೆ ಬರುವಾಗ ದಾರಿಯಲ್ಲಿ ಸಿಕ್ಕಿದ್ದ ಎರಡಾಣೆಯನ್ನು ಜೇಬಿನಿಂದ ತೆಗೆದು "ಅಮ್ಮ, ಇಲ್ಲಿ ನೋಡಿ, ಯಾವುದಕ್ಕಾಗಿ ನಿಮ್ಮ ಮಗಳನ್ನು ಬಡಿದರೋ ಆ ಎರಡಾಣೆ ದಾರಿಯಲ್ಲಿ ನನಗೆ ಸಿಕ್ಕಿತು" ಎಂದು ಆ ಎರಡಾಣೆಯನ್ನು ಅವರ ಎದುರು ಹಿಡಿದೆ. ತಾಯಿ-ಮಗಳ ಕಣ್ಣುಗಳು ಆನಂದಾಶ್ಚರ್ಯದಿಂದ ಅದನ್ನೇ ನೋಡತೊಡಗಿದವು.

ಆದರೆ ಮುಂದೆರಡು ನಿಮಿಷಗಳಲ್ಲಿ ಆ ನಾಲ್ಕೂ ಕಣ್ಣುಗಳು ಭೂಮುಖವಾದವು. ತಾಯಿ ಮಗಳಲ್ಲಿ ಒಬ್ಬರಾದರೂ ಆ ಎರಡಾಣೆ ತೆಗೆದುಕೊಳ್ಳಲು ಕೈ ಮುಂದೆ ಮಾಡಲಿಲ್ಲ.

"ತೆಗೆದುಕೊಳ್ಳಿ, ಗಂಗಮ್ಮನವರೇ."

"ಅದು ನಮ್ಮದಲ್ಲ" ಗಂಗಮ್ಮ ಮೆಲ್ಲಗೆ ಹೇಳಿದಳು.

"ನಮ್ಮದು ನಿಕ್ಕಲ್ಲಿನದು; ಇದು ಹಿತ್ತಾಳೆಯದು" ಎಂದಳು ಅವಳು ಮತ್ತೆ.

"ಹೌದಮ್ಮ. ನೀನು ಕೊಟ್ಟಿದ್ದ ಎರಡಾಣೆ ಬಿಳಿಯದಿತ್ತು. ಇದು ಹಳದಿಯಾಗಿದೆ" ಎಂದಳು ಪದ್ಮ.

"ಇರಲಿ ಬಿಡಿ. ಯಾವುದಾದರೇನಂತೆ? ಇದು ಇವರಿಗೆ ಸಿಕ್ಕಿದ ಹಣ ತಾನೆ. ನೀವು ತೆಗೆದುಕೊಳ್ಳಿ" ಎಂದು ನನ್ನಾಕೆ ನುಡಿದು ನನ್ನ ಕೈಯಲ್ಲಿದ್ದ ಎರಡಾಣೆಯನ್ನು ಗಂಗಮ್ಮನವರು ಮುಂದಿಟ್ಟಳು.

*

ನಿಮ್ಮ ಶತ್ರುಗಳ ಬಗ್ಗೆ ಯಾವಾಗಲೂ ಒಳ್ಳೆಯ ಮಾತುಗಳನ್ನಾಡಿ— ಯಾಕೆಂದರೆ ಅವರನ್ನು ನಿರ್ಮಿಸಿದವರು ನೀವೇ.

* *

ಒಳ್ಳೆಯ ಪುಸ್ತಕಗಳು ನೀಗಲಾರದಂಥ ಯಾವುದೇ ದುಃಖ ಅಥವಾ ವೇದನೆ ಈ ಜಗತ್ತಿನಲ್ಲಿ ಇಲ್ಲ.

—ಪ್ಲಿನಿ



ದಕ್ಷಿಣ ಅಮೇರಿಕದ ಮೂಲನಿವಾಸಿಗಳ ವಿಚಿತ್ರ ಸಂಪ್ರದಾಯ

ತುಕೂನಾ ಹುಡುಗಿ ಪ್ರಾಯಕ್ಕೆ ಬಂದಾಗ

"ದುಷ್ಯಂತ"

ತುಕೂನಾ ಎಂಬುದು ದಕ್ಷಿಣ ಅಮೇರಿಕೆಯಲ್ಲಿ ವಾಸಿಸುವ ಮೂಲ ಜನಾಂಗವೊಂದರ ಹೆಸರು. ಬ್ರಾಝಿಲ್ ದೇಶದಲ್ಲಿ ಅಮೆಝಾನ್ ನದಿಯ ಆಸುಪಾಸಿನಲ್ಲಿ ಅವರು ನೆಲೆಯೂರಿದವರಾಗಿದ್ದು, ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದಾಗಿ ಕ್ರಮೇಣ 'ಸುಧಾರಿಸಿ'ದವರೆನಿಸಿಕೊಳ್ಳುತ್ತಿದ್ದಾರೆ.

ಅವರಲ್ಲಿ ಹೆಚ್ಚಿನವರೀಗ ಕ್ರೈಸ್ತ ಹೆಸರುಗಳನ್ನು ಸ್ವೀಕರಿಸಿದ್ದಾರೆ: ರೋಸಾ, ಮರಿಯಾ, ಅನಿತಾ, ರೈಮಂಡಾ; ರೊಡ್ರಿಗ್ಸ್, ಪಾಲ್, ಜಾನ್. ಆದರೆ ಸಾವಿರಾರು ವರ್ಷಗಳಿಂದ ಬಂದ ಕೆಲ ಸಂಪ್ರದಾಯಗಳನ್ನು ಮಾತ್ರ ಅವರು ಸ್ವಲ್ಪವೂ ಬಿಡದವರಾಗಿದ್ದಾರೆ. ಅದರಲ್ಲಿ ಕೆಳಗಿನದೊಂದು.

ದೃಶ್ಯ: ಅಮೆಝಾನ್ ತೀರದ ಅರಣ್ಯ. ಕಾಡಿನ ನಂಟರಾದ ಈ ಜನಕ್ಕೆ ಎಳೆ ವಯಸ್ಸಿ

ನಲ್ಲೂ ಅದರ ಅಂಜಿಕೆಯಿಲ್ಲ. ಆಕೆ ಇನ್ನೂ ಹುಡುಗಿ. ಹೆಸರು ರೋಸಾ, ಅಥವಾ ಮರಿಯಾ ಅಥವಾ ಏನಾದರೂ ಅಂದುಕೊಳ್ಳಿ. ಜೊತೆಗೆ ಸಖಿಯೋ ತಂಗಿಯೋ ಇದ್ದಾಳೆ. ಅವಳು ನದಿಯ ಒಂದು ಪರಿಚಿತ ಮಡುವಿನಲ್ಲಿ ಮುಳುಗಿ ಸೆಕೆ ನಿವಾರಿಸಿಕೊಳ್ಳುತ್ತಿರಬಹುದು, ಸಖಿಯ ರೊಡನೆ ಕಟ್ಟಿಗೆ ಆರಿಸುತ್ತಿರಬಹುದು; ಅಥವಾ ಇನ್ನೇನಾದರೂ ಮಾಡುತ್ತಿರಬಹುದು. ಒಮ್ಮಿಂ ದೊಮ್ಮೆ ಅವಳ ಮುಖದಲ್ಲಿ ಬದಲಾವಣೆ ಕಾಣಿ ಸುತ್ತದೆ— ಭಯಮಿಶ್ರಿತ ನಿರೀಕ್ಷೆಯದು. ಮಾಡುತ್ತಿದ್ದ ಕೆಲಸವನ್ನು ಅಲ್ಲೇ ಬಿಟ್ಟು ತನ್ನೊ-ಡನಿದ್ದಾಕೆಗೆ ಗುಟ್ಟಾಗಿ ಏನನ್ನೋ ಹೇಳಿ ಮನೆಯ ಕಡೆ ಸಾಗುತ್ತಾಳೆ.

ಹುಡುಗಿ ಮನೆಗೆ ಬಂದಾಗ, ಅಲ್ಲಿ ಯಾರೂ ಇರುವುದು ಕಡಿಮೆ. ತಂದೆ ತಾಯಿ ಎಲ್ಲರೂ ಕೆಲ ಸಕ್ಕೆ ಹೋಗಿರುವುದೇ ಹೆಚ್ಚು. ಆದರೆ ಏನು ಮಾಡಬೇಕೆಂಬಾಕೆಗೆ ಗೊತ್ತು. ಕಟ್ಟಿಗೆಯ ಮಣಿಗಳಿಂದ ಕೂಡಿದ ತನ್ನ ಬಣ್ಣ ಬಣ್ಣದ ಕೊರಳ ಹಾರವನ್ನು ತೆಗೆದು ಬಾಗಿಲಿನ ಅಡ್ಡಪಟ್ಟಿಗೆ ಸಿಕ್ಕಿಸಿ ಮತ್ತೆ ಹತ್ತಿರದ ಅಡವಿಗೆ ಹೋಗುತ್ತಾಳೆ. ಸಂಜೆ ತಂದೆ ತಾಯಿ ಮರಳುವ ಹೊತ್ತಿಗೆ ಆಕೆ ಎರಡು ಒಣಕಲು ಕಟ್ಟಿಗೆಗಳನ್ನು ತೆಗೆದುಕೊಂಡು ಬಾರಿಸತೊಡಗುತ್ತಾಳೆ.

ತಾಯಿ ಬಂದು ಮಗಳನ್ನು ಕಾಣದೆ ಅತ್ತಿತ್ತ ಕಣ್ಣು ಹಾಯಿಸಿದಾಗ ತೆಗೆದಿಟ್ಟ ಆ ಹಾರ ಕಾಣಿ ಸುತ್ತದೆ. ಕೂಡಲೇ ಆಕೆ ಹೊರಬಿದ್ದು ಕಟ್ಟಿಗೆ ಬಾರಿಸುವ ಸದ್ದು ಬರುವುದನ್ನೇ ಆಲಿಸುತ್ತ ಮುಂದೆ ಸಾಗುತ್ತಾಳೆ. ಮಗಳನ್ನು ಕಂಡು ಅವಳ ಪ್ರೇಮ ಉಕ್ಕುತ್ತದೆ. ಮನೆಗೆ ಕರೆತಂದು ಅಟ್ಟದ ಮೇಲಿನ ಮರೆಯ ಜಾಗದಲ್ಲಿ ಅವಳನ್ನು ಕೂಡ್ರಿಸಿ, ಅಲ್ಲಿಯೇ ಇರಬೇಕೆಂದೂ ಗಟ್ಟಿ ಯಾಗಿ ಮಾತನಾಡಬಾರದೆಂದೂ ಪುರುಷರು ಯಾರೇ ಇರಲಿ ಅವರ ಮುಂದೆ ಬರಕೂಡ ದೆಂದೂ ತಿಳಿಸುತ್ತಾಳೆ. ರಾತ್ರಿ ಅವಳ ತಂದೆ ಮನೆಗೆ ಬಂದು ವಿಷಯ ತಿಳಿದು ಹೆಂಡತಿಗೆ "ಜಾಗ್ರತೆಯಿಂದ ಇರು. ದೆವ್ವಗಳು ಅವಳನ್ನು ಪೀಡಿಸದಂತೆ ನೋಡಿಕೊಳ್ಳಬೇಕಾಯಿತು" ಎಂದು ಎಚ್ಚರವನ್ನು ಹೇಳುತ್ತಾನೆ.

ತುಕೂನಾ ಹುಡುಗಿಯರು ಮೈನೆರೆದಾಗ ಅದನ್ನು ತಿಳಿಯಪಡಿಸುವ ಈ ರೀತಿ ಇದು. ದೊಡ್ಡವಳಾದ ಹುಡುಗಿ ಅಟ್ಟದ ಮೇಲಿನ ಆ ಮೂಲೆಯಲ್ಲಿ ಏಕಾಂತದಲ್ಲಿ, ಮಾತುಕತೆ ಯಿಲ್ಲದೆ ಮೂರು ದಿನಗಳಲ್ಲ, ಮೂರು ತಿಂಗಳ ಕಾಲವನ್ನು ಕಳೆಯಬೇಕು. ಅದಕ್ಕೆ ಕಾರಣ ವೆಂದರೆ ದೆವ್ವ ಭೂತಗಳಿಂದ ಅವಳನ್ನು ದೂರ ವಿಡುವುದು. ಆ ವಿಶಿಷ್ಟ ಅವಧಿಯಲ್ಲಿ ದುಷ್ಟ ಚೇತನಗಳು ತಮ್ಮ ಮಕ್ಕಳನ್ನು ಪೀಡಿಸುವ ವೆಂಬ ಕಲ್ಪನೆ ಅವರಲ್ಲಿ ದೃಢವಾಗಿ ಬೇರೂರಿದೆ. ಪುರುಷರ ದೃಷ್ಟಿಗೂ ಅವಳು ಬೀಳಬಾರದು! ಯಾರಾದರೂ ಗಂಡಸರು ಮನೆಗೆ ಬರುವುದಿದ್ದರೆ ಮನೆಯಲ್ಲಿದ್ದವರನ್ನು ಹೆಸರುಗೊಂಡು ಕರೆದೋ, ಇನ್ನಿತರ ರೀತಿಯಿಂದ ಸದ್ದು ಮಾಡಿಯೊ ಬರು ತ್ತಾರೆ. ಆ ಕೂಡಲೇ ಆ ಹುಡುಗಿ ತನ್ನ ಜಾಗ ವನ್ನು ಸೇರುತ್ತಾಳೆ.

ಮಕ್ಕಳ ಮದುವೆಯ ಸುದ್ದಿಯು ಸ್ನೇಹಿತ-ಸಂಬಂಧಿಕರಿಗೆ ಅಷ್ಟಾಗಿ ತಿಳಿಯಲಿಕ್ಕಿಲ್ಲ. ಅವರು ಮೈನೆರೆದ ಸುದ್ದಿ ಮಾತ್ರ ಸಾರ್ವತ್ರಿಕ ವಾಗಿ ಹಬ್ಬುತ್ತದೆ. ಸುತ್ತಲಿನ ಹಳ್ಳಿಗಳಿಗೆಲ್ಲ ಆಮಂತ್ರಣ ಹೋಗುತ್ತದೆ. ಪರಿಚಯಸ್ಥರೆಲ್ಲರೂ ನೆರೆಯುತ್ತಾರೆ. ಹುಡುಗಿಯರು ದೊಡ್ಡವರಾದ ಮೂರನೆಯ ತಿಂಗಳಿನಲ್ಲಿ ಬರುವ ಹುಣ್ಣಿಮೆಯ ದಿನ ಸಮಾರಂಭ ಜರುಗಬೇಕು.

ಬಂದ ಅತಿಥಿಗಳೆಲ್ಲರೂ ಚಿತ್ರ ವಿಚಿತ್ರವಾದ ಮುಖವಾಡಗಳನ್ನು ಧರಿಸಿರುತ್ತಾರೆ. ಅದನ್ನು ತೆಗೆಯದ ಹೊರತು ಬಂದವರಾರೆಂಬುದು ಗೊತ್ತಾಗುವುದಿಲ್ಲ. ಒಂದೊಂದು ಮುಖವಾಡವೂ ಕಾಣದ, ಕಂಡರಿಯದ ಭೂತದ ಆಕಾರವನ್ನು ಪ್ರತಿನಿಧಿಸುತ್ತದೆ.

'ಮೋಟಾ ನೋವಾ' ಎಂದು ಕರೆಯಲಾಗುವ ಈ ಸಮಾರಂಭದ ಆರಂಭವನ್ನು ನೆರವೇರಿಸುವುದಕ್ಕೆ ದುಡಿಯನ್ನು ಬಾರಿಸಲಾಗುತ್ತದೆ. ಒಂದಲ್ಲ, ಹಲವಾರು. ದುಡಿಯ ಸಪ್ಪಳ ಕೇಳಿ ಊರವರೆಲ್ಲ ನೆರೆಯುತ್ತಾರೆ. ಒಬ್ಬೊಬ್ಬ ದುಡಿ ಬಾರಿಸುವವನ ಸುತ್ತೂ ತಿರುಗುತ್ತ ಕುಣಿಯುತ್ತಾರೆ. ಹಾಡುತ್ತಾರೆ. ದುಡಿಗಳನ್ನು ಜೋರಾಗಿ ಬಾರಿಸುವಲ್ಲಿ ದುಷ್ಟ ಚೇತನಗಳನ್ನು ಹಿಮ್ಮೆಟ್ಟಿಸುವ ಆಶಯವೂ ಇರುತ್ತದೆನ್ನಬಹುದು. ಅಂತೆಯೇ ಒಮ್ಮೆ ಆರಂಭವಾದ ದುಡಿಯ ಸದ್ದು ಮೂರು ದಿನಗಳ ವರೆಗೂ ಮುಂಬರಿಯಬೇಕು! ಆಗ ಬಾರಿಸುತ್ತಿದ್ದವರ ಮುಖದ ಮೇಲಿನ ದಣಿವು ನೋಡಲಾಗದಂತಿರುತ್ತದೆ.

ಇತ್ತ ಹುಡುಗಿಯನ್ನು ಅಟ್ಟದ ಮೇಲಿಂದ ಕೆಳಗಿಳಿಸುತ್ತಾರೆ. ಮನೆಯ ಮುಂದೆ ಕಟ್ಟಿದ ಒಂದು ಚಿಕ್ಕ ಗುಡಿಸಲಿಗೆ ಅವಳನ್ನು ಕರೆತರುತ್ತಾರೆ. ಉತ್ಸವದ ಮೂರು ದಿನವೂ ಅವಳು ಅಲ್ಲಿಯೆ ಇರಬೇಕು. ಯಾರಾದರೂ ಹಿರಿಯರು ರಾತ್ರಿಯ ಕಾಲದಲ್ಲಿ ಆ ಮೂರು ದಿನವೂ ಗುಡಿಸಲಿನ ಹೊರಗೆ ಕಾದಿರುತ್ತಾರೆ. ಅದಕ್ಕೂ ಪುರಾತನವಾದ ಕಾರಣವಿದೆ. ಒಂದು ರಾತ್ರಿ ನೆರೆದವರೆಲ್ಲ ಹಾಡು, ಕುಣಿತಗಳಲ್ಲಿ ಸುಸ್ತಾಗಿ ಮಲಗಿದ್ದಾಗ, ದುಷ್ಟ ಭೂತಗಳು ಸದ್ದಿಲ್ಲದೆ ಅಂಥ ಗುಡಿಸಲಿಗೆ ನುಗ್ಗಿ ಆ ಕನ್ಯೆಯ ರಕ್ತವನ್ನು ಹೀರಿ, ಮಾಂಸವನ್ನೆಲ್ಲ ತಿಂದು, ಬರಿಯ ಎಲುಬುಗಳನ್ನಷ್ಟೆ ಬಿಟ್ಟಿದ್ದವಂತೆ.

ಆ ಗುಡಿಸಲಿನ ಮುಂದೆಯೇ ತೆಂಗಿನ ಗರಿಗಳಿಂದ ಮರೆಮಾಡಿದ ತಟ್ಟಿ ಕಟ್ಟಿದ ಜಾಗವೊಂದಿರುತ್ತದೆ. ನಸುಕಿನಲ್ಲಿ ಕನ್ಯೆಯನ್ನು ಅಲ್ಲಿಗೆ ಕರತರುತ್ತಾರೆ. ಅವಳ ಅರಿವೆಗಳನ್ನು ಕಳಚಿದಾಗ ಆಕೆ ಸಂಕೋಚದಿಂದ ಕಣ್ಣುಗಳನ್ನು ಮುಚ್ಚುತ್ತಾಳೆ. ಹಾಗೆ ಮುಚ್ಚುವುದಕ್ಕೆ ಅವಳು ಸೂರ್ಯನನ್ನು ನೋಡಬಾರದೆಂದು ಕಾರಣವೂ ಇರುತ್ತದೆ. ಆ ತಟ್ಟಿಯ ಜಾಗದಲ್ಲಿ ಹಿರಿಯ ಹೆಂಗಸರು ಸೇರಿ ಆ ಹುಡಿಗೆಯ ಮೈತುಂಬ ಕರಿನೀಲಿ ಬಣ್ಣವೊಂದನ್ನು ಹಚ್ಚುತ್ತಾರೆ. ಅದು ಒಣಗಿತೆಂದರೆ ಯಾವ ಸಾಬೂನಿಗೂ ಹೋಗುವುದಿಲ್ಲ. ಒಂದು ವಾರ ಕಳೆದ ಮೇಲೆ ಹತ್ತಾರು ಸಲ ಮೈ ತಿಕ್ಕಿಕೊಂಡ ಮೇಲೆಯೇ ಅದು ಹೋಗುವಂತಹದಿರುತ್ತದೆ. ಮತ್ತೆ ಅವಳನ್ನು ಗುಡಿಸಲಿಗೆ ತರುತ್ತಾರೆ. ಆ ವೇಳೆಗೆ ಕೆಲವು ಜನರು ಮಂಗಗಳ ವೇಷವನ್ನು ಹಾಕಿಕೊಂಡು, ಕುಣಿಯುತ್ತ ಗುಡಿಸಲನ್ನು ಸುತ್ತುಗಟ್ಟಿ ಒಳಗೆ ಹೋಗುವವರಂತೆ ಧಾವಿಸುತ್ತಾರೆ. ಆಗ ಹುಡುಗಿಯ ಕಡೆಯವರು ಅವುಗಳನ್ನು ಹೊಡೆದಂತೆ ಮಾಡಿ ದೂರ ಅಟ್ಟುವುದುಂಟು.

ಉತ್ಸವದ ಮೂರನೆಯ ದಿನ ಅತ್ಯಂತ ಮಹತ್ವದ್ದು. ಆ ಒಂದು ದಿನ ಕನ್ಯೆಯನ್ನು, ದುಷ್ಟ ಗ್ರಹಗಳಿಂದ ರಕ್ಷಿಸಿಬಿಟ್ಟರೆ ತೀರಿತು. ಅಂದು ಕನ್ಯೆಗೆ ವಿಶೇಷವಾಗಿ ಸಿಂಗರಿಸಿ, ಮೆರವಣಿಗೆಯಲ್ಲಿ ಕರೆದೊಯ್ಯುತ್ತಾರೆ. ಸಂಗೀತ, ಕುಣಿತಗಳು ಅಖಂಡವಾಗಿ ಸಾಗಿಯೆ ಇರುತ್ತವೆ. ಆ ದಿನ ಸಂಜೆಗೆ ಅವರ ಕುಲಪುರೋಹಿತನು ಭೂತ ಚೇಷ್ಟೆಯ ನಿವಾರಣೆಗಾಗಿ ಧೂಪ ಧೂಮಗಳನ್ನು ಹಾಕುವನು. ಹುಡುಗಿಯ ಕೈಯಿಂದ ಬೆಂಕಿಯನ್ನು ಹಾಕಿಸಿ, ಭೂತಗಳ ಕಾಟದ ನಿವೃತ್ತಿಯಾಯಿತೆಂದು ಸಾರುವನು.

ಈ ಸಮಾರಂಭದ ಅತ್ಯಂತ ವಿಚಿತ್ರವಾದ ನಡೆವಳಿಕೆ ಇನ್ನು ಮುಂದೆ ಬರಲಿದೆ. ಉಳಿದವರು ವರ್ತುಲದಲ್ಲಿ ನಿಂತು ನೃತ್ಯವನ್ನು ಮಾಡುತ್ತಲಿದ್ದಾಗ, ಒಂದು ದೊಡ್ಡ ಚಾಪೆಯ ಮೇಲೆ ಹುಡುಗಿಯನ್ನು ಕೂಡ್ರಿಸುತ್ತಾರೆ. ಬೆಳಗಿನಿಂದ ಧರಿಸಿದ್ದ ಅವಳ ಕಿರೀಟವನ್ನು ತಲೆಯ ಮೇಲಿಂದ ತೆಗೆದಾಗ ಅವಳಿಗೆ ಹಿತಾವಹವೆನಿಸಿದರೂ ಮುಂಬರುವ ದಾರುಣ ಹಿಂಸೆಯ ಕಲ್ಪನೆ ಅಷ್ಟಾಗಿ ಇರುವುದಿಲ್ಲವೇನೊ. ಅಲ್ಲಿಂದ ಅವಳ ತಲೆಗೂದಲಿಗೆ ನಿಂಬೆಹಣ್ಣಿನ ರಸವನ್ನು ಹಚ್ಚಿ ಚೆನ್ನಾಗಿ ತಿಕ್ಕುತ್ತಾರೆ, ಕೂದಲು ಮಿದುವಾಗ

ಲೆಂದು. ಕೂಡಲೇ ಹಿರಿಯ ಹೆಂಗಸರು ಸೇರಿ, ಅವಳ ತಲೆಯ ಮೇಲಿನ ಕೂದಲನ್ನು ಕೀಳಲು ಮೊದಲು ಮಾಡುತ್ತಾರೆ. ಹತ್ತಾರು ಕೈಗಳು ಆ ಕೆಲಸ ಮಾಡುತ್ತಿದ್ದಾಗ ಆ ಕನ್ಯೆಯ ಗೋಳು ಹೇಳತೀರದು. ಹುಡುಗಿಯು ಕಣ್ಣಲ್ಲಿ ನೀರು ತಂದು, ನೋವಿನಿಂದ ನರಳಿದರೂ ಯಾರೂ ಆಕೆಯ ವಿಷಯದಲ್ಲಿ ಕರುಣೆ ತೋರುವುದಿಲ್ಲ. ಕನ್ಯೆಯೋ ಶಕ್ಯವಿದ್ದಷ್ಟು ಆ ನೋವನ್ನು ಸಹಿಸಿ ಕೊಳ್ಳಲು ಪ್ರಯತ್ನಪಡುತ್ತಾಳೆ. ಮೂರು ತಿಂಗಳ ಏಕಾಂತವಾಸದಲ್ಲಿ ಮೊದಲೇ ಆ ಹುಡುಗಿ ನಿಶ್ಶಕ್ತಳಾಗಿರುತ್ತಾಳೆ. ಅಂಥದು ಈ ಕೇಶಯಜ್ಞದಿಂದಾಗಿ ಅವಳು ಮೂರ್ಛೆ ಹೋಗುವುದೂ ಇದೆ.

ಹೆಂಗಸರಿಗೆ ಈ ಕೆಲಸದಲ್ಲಿ ಬೇಸರವಿಲ್ಲ. ಹಿಂದಿದ್ದವರು, ಈಗಾಗಲೇ ಈ ಯಜ್ಞದಲ್ಲಿ ತೊಡಗಿದವರನ್ನು ದೂಡಿ ತಾವೂ ಕೈಚಾಚುತ್ತಾರೆ. ಕೂದಲು ಕೀಳುವವರದೇ ದೊಡ್ಡ ಗದ್ದಲ. ಅಂತೂ ಒಂದೇ ಒಂದು ತಾಸಿನಲ್ಲಿ ಆ ಹುಡುಗಿಯ ತಲೆಯ ಮೇಲೆ ಒಂದಾದರೂ ಕೂದಲು ಉಳಿಯದಂತೆ ಕಿತ್ತು ಹಾಕುವರು! ಅಂದ ಹಾಗೆ ಒಂದು ಕೂದಲೆಳೆಯನ್ನು ಮಾತ್ರ ಉಳಿಸಿರುತ್ತಾರಂತೆ. ಅದೂ ಕೈತಪ್ಪಿ ಹೋಗಬಾರದೆಂದು ಒಬ್ಬಾಕೆ ಅದನ್ನು ಮೊದಲಿನಿಂದ ಕೊನೆಯ ವರೆಗೆ ಮೇಲೆತ್ತಿ ಹಿಡಿದಿರುತ್ತಾಳೆ.

ಅಲ್ಲಿಂದ ಹುಡುಗಿಯ ಬೋಳು ತಲೆಗೆ ಒಂದು ಬಗೆಯ ಮಲಾಮನ್ನು ಹಚ್ಚಿ, ಮತ್ತೆ ಕಿರೀಟವನ್ನು ಹಾಕುತ್ತಾರೆ. ಅವಳನ್ನು ನಡುವೆ ಹಿಡಿದುಕೊಂಡು ವತ್ತೆ ನೃತ್ಯವೂ ಸಂಗೀತವೂ ನಡೆಯುತ್ತವೆ.

ರಾತ್ರಿ ಬಲು ಹೊತ್ತಿನ ವರೆಗೆ ಈ ಕಾರ್ಯಕ್ರಮ ಜರುಗಿದ ಮೇಲೆ ಬಂದವರಿಗೆಲ್ಲ ಸುಗ್ರಾಸ ಭೋಜನ, ಮನದಣಿಯೆ ಕುಡಿತ. ಮಲಗುವಾಗ ತಮ್ಮ ಮುಖವಾಡಗಳನ್ನು ಕಳಚಿ ಒಗೆಯುತ್ತಾರೆ.

ಮರುದಿನ ಊರಿಗೆ ಹೊರಡುವಾಗ, ಅಭ್ಯಾಗತರು ಆ ಗುಡಿಸಲು ತಟ್ಟಿಗಳನ್ನು ನೆಲಸಮ ಮಾಡುತ್ತಾರೆ. ಮನೆಯನ್ನೆಲ್ಲ ಸ್ವಚ್ಛ ಮಾಡಿ ಕೊಡುತ್ತಾರೆ. ಹಾಗೆ ಮಾಡದಿದ್ದರೆ ಆಪತ್ತುಗಳಿಗೆ ಗುರಿಯಾಗುವರೆಂಬ ನಂಬಿಕೆ ಪ್ರಚಲಿತವಿದೆ. ಅವರು ಬಿಟ್ಟುಹೋಗಿದ್ದ ಮುಖವಾಡ ಮುಂತಾದವುಗಳನ್ನೆಲ್ಲ ಮನೆಯ ಯಜಮಾನನು ಕಾದಿಟ್ಟು ಅಮಾವಾಸ್ಯೆಯ ದಿವಸ ಅವುಗಳ ಉತ್ತರ ಪೂಜೆಯನ್ನು ಮಾಡುತ್ತಾನೆ. ಅರ್ಥಾತ್ ಸುಟ್ಟುಹಾಕುತ್ತಾನೆ.

ಸಮಾರಂಭವು ಮುಗಿದ ಮರುದಿನಕ್ಕೆ ಹುಡುಗಿಯು ನಡೆಯಲು ಕೂಡಾ ಬಾರದಷ್ಟು ನಿಶ್ಶಕ್ತಳಾಗಿರುತ್ತಾಳೆ. ನೋವಿನಿಂದ ಉರಿಯುತ್ತಿರುವ ತಲೆಗೆ ಪಟ್ಟಿಯನ್ನು ಕಟ್ಟಿಕೊಳ್ಳುತ್ತಾಳೆ. ಏರಿಕೆಯ ವಯಸ್ಸು ತಾನೆ. ಬಲು ಬೇಗ ಚೇತರಿಸಿ ಕೊಳ್ಳುತ್ತಾಳೆ.

ಈ ಸಮಾರಂಭವು ಮುಗಿದ ಮರುದಿನದಿಂದಲೇ ಅವರು ಮದುವೆಗೆ ಅಧಿಕಾರಸ್ಥರಾಗುತ್ತಾರೆ. ಮುಂದೆ ಯಾವಾಗ ಬೇಕಾದರೂ ಲಗ್ನವಾಗಬಹುದು. ಅವರ ಲಗ್ನಕ್ಕೆ ಆಪ್ತೇಷ್ಟರು ಬಂದರೆ ಬಂದರು, ಇಲ್ಲವಾದರೆ ಇಲ್ಲ! *

ಸೌಂದರ್ಯ ನರಕದಲ್ಲಿಯೂ ಇದೆ. ಆದರೆ ಅಲ್ಲಿರುವವರು ಅದನ್ನು ಕಾಣಲಾರರು. ಮತ್ತು ಇದೇ ಅವರಿಗಾಗಿರುವ ಮಹಾ ಶಿಕ್ಷೆ.

—ರವೀಂದ್ರನಾಥ ಠಾಕೂರ

ಮುಂದಿನ ಸಲ

ಜಯತೀರ್ಥ ಕುಲಕರ್ಣಿ

ನಾನು ಬೊಂಬಾಯಿಗೆ ಹೊಸಬ. ಹೋಗಿ ಎಂಟು ದಿನಗಳಾಗಿದ್ದವು. ಕೇವಲ ಒಬ್ಬ ಗೆಳೆಯನ ಹೊರತು ಯಾರ ಪರಿಚಯವಿಲ್ಲದೆ ಮನದಲ್ಲಿ ಮಿಡುಕುತ್ತಿದ್ದೆ; ಆ ಗೆಳೆಯನೂ ಸಮೀಪದಲ್ಲಿರದೆ ದಾದರದಲ್ಲಿ ಫ್ಯಾಕ್ಟರಿ ಒಂದರಲ್ಲಿ ಕೆಲಸ ಮಾಡಿ ಅಲ್ಲಿಯೇ ಇರುತ್ತಿದ್ದನು. ಮೊದಲು ನನಗೆ ಆತನೆ ಭೆಟ್ಟಿ ಕೊಟ್ಟು 'ಸೋಮವಾರ ನೀನು ಆಫೀಸಿಗೆ ರಜೆ ಇಟ್ಟು ನನ್ನೆಡೆಗೆ ಬಾ' ಎಂದು ಹೇಳಿ ಪತ್ತೆ ಹಾಗು ದಾರಿ ಪರಿಚಯ ಕೊಟ್ಟು ಹೋದನು.

ಸೋಮವಾರ ಮಧ್ಯಾಹ್ನ ಊಟ ಮಾಡಿ ಬೋರಿಬಂದರ ಸ್ಟೇಶನಿಗೆ ಹೋದೆ. ಗಾಡಿ ಹೋದ ಮೇಲಾದರೂ ತಿಕೀಟು ಸಿಗಬಹುದೇ ? ಎಂಬ ಶಂಕೆಯಷ್ಟು ದೂರ ನಂಬರು ನನ್ನದು.

ಆಗ ಗೆಳೆಯನ ಮಾತು ಜ್ಞಾಪಕ ಬಂದಿತು. 'ನೋಡು, ತಿಕೀಟು ಏನು ತೆಗೆಯಬೇಡ. ಏಕೆಂದರೆ ದಾದರ ಸ್ಟೇಶನ್ ನಾಲ್ಕನೇ ಪ್ಲಾಟ್‌ಫಾರ್ಮ್ ಮುಂದಿನ ಅಂಚಿನಿಂದ ನೇರವಾಗಿ ರೇಲ್ವೆ ಕಂಬಿಗುಂಟ ಐದು ನಿಮಿಷದ ಕಾಲುದಾರಿ ನಡೆದರೆ ನಮ್ಮದೇ ಫ್ಯಾಕ್ಟರಿ.'

ಸರಿ. ಎಂದುಕೊಂಡು ತಿಕೀಟು ಇಲ್ಲದೆ, ಮುಂದಿನ ಸಲ ತಿಕೀಟು ತೆಗೆದೇ ಹೋದರಾಯಿತು ಎಂದು ಯೋಚಿಸಿ ಗಾಡಿ ಹತ್ತಿದೆ. ದಾದರದಲ್ಲಿ ಗಾಡಿ ಎರಡನೇ ಪ್ಲಾಟ್‌ಫಾರ್ಮಿಗೆ ಹೋಯಿತು. ಇಳಿದೆ, ಹಲವರು ಅದೇ ಪ್ಲಾಟ್‌ಫಾರ್ಮ್ ಅಂಚಿನಿಂದ ಹೊರಟರು. ನಾನೂ ಅವರ ಸಂಗಡ ಹೋದರೆ... ಎಲ್ಲಿ ಹೋಗುವರೋ ಏನೋ, ಬೇಕಾದರೆ ಮುಂದಿನ ಸಲ ತಿಕೀಟು ಇರುತ್ತದೆ. ಈ ದಾರಿ ನೋಡುವಾ ಎಂದುಕೊಂಡು ಗೆಳೆಯ ಹೇಳಿದಂತೆ ನಾಲ್ಕನೇ ಪ್ಲಾಟ್‌ಫಾರ್ಮಿಗೆ ಬ್ರಿಜ್ ಹತ್ತಿ ಇಳಿದು ಮುಂದೆ ನಡೆಯುತ್ತಿದ್ದೆ. 'ಉಸ್-ಉಸ್-ಉಸ್‌ಸ್.' ಯಾರದು ಎಂದು ಹಿಂದೆ ನೋಡಿ ನಿಂತುಕೊಂಡೆ.

ಅವನು ಮತ್ತಾರೂ ಇರದೆ ನನ್ನ ಮಾಮಾ— ತಿಕೀಟ್ ಚೆಕ್ಕರ್. 'ತಿಕೀಟ್' ಎಂದ. ಕಾಕತಾಲೀ ನ್ಯಾಯ. ನಾನೇ ಆತನಿಗೆ ಸಿಗಬೇಕೆ ಎಂದುಕೊಂಡು ಆತನ ಭಯ ಪ್ರದರ್ಶನಕ್ಕೆ ಅಂಜಿ ಹನ್ನೊಂದಾಣೆ (ಮೂರಾಣೆ ತಿಕೀಟು ಬೋರಿಬಂದರದಿಂದ ದಾದರಿಗೆ ಬದಲಾಗಿ) ತುಂಬಿದೆ.

ಆತ ತಿಕೀಟು ರಸೀದಿ ಕೊಡುತ್ತ, 'ನೀನು ಈ ಊರಿಗೆ ಹೊಸಬನೇನು?' ಎಂದ.

'ಹೌದರಿ, ಸಾರ್. ಏಕೆ?' ಎಂದು ಕೇಳಿದೆ.

'ಅಲ್ಲ, ಈ ಮುಂದಿನ ದಾರಿಯಿಂದ ಪ್ಲಾಟ್‌ಫಾರ್ಮ್ ಮೇಲಿಂದ ಮನೆಗೆ ನಡೆದಿದ್ದೆ ಎಂದು ನೀನು ಹೇಳಿದ್ದರೆ ನಾನೂ ನಾಲ್ಕಾಣೆ ತೆಗೆದುಕೊಂಡು ಬಿಡಬಹುದಾಗಿತ್ತಲ್ಲಾ,' ಎಂದ.

ಮನಸ್ಸಿನಲ್ಲಿ ಮುಂದಿನ ಸಲ ಎಂದು ಯೋಚಿಸಿ ಮುಂದೆ ಕಾಲು ದಾರಿ ಐದು ನಿಮಿಷ ನಡೆದು ಹೋದೆ. ಒಂದು ಸಣ್ಣ ಬಾಗಿಲಿನ ಎದುರಿಗೆ

ಒಂದು ದೊಡ್ಡ ಮಾನವರ ತಂಡ ಸಾಲಿನಲ್ಲಿ ನಿಂತಿತ್ತು. ನಾನೂ ಇದೇ ಹೊರಗೆ ಹೋಗುವ ದಾರಿ ಎಂದು ತಿಳಿದು ಸಾಲಿನಲ್ಲಿ ನಿಂತೆ.

ಎಲ್ಲರೂ ಹೊರಗೆ ಹೋಗುವಾಗ ಒಬ್ಬನಿಗೆ ಎರಡಾಣೆ ಕೊಟ್ಟು ಹೋಗುತ್ತಿದ್ದರು. ನನ್ನ ಸರದಿಯೂ ಬಂದಿತು. ಆ ಮನುಷ್ಯ ನನ ಮುಂದೆ ಕೈ ಚಾಚಿದ.

'ಏನು?' ಎಂದೆ.

'ಎರಡಾಣೆ.'

'ಏಕೆ?'

ನಾನೇ ಕೊನೆಯವನಿದ್ದುದರಿಂದ ನನ್ನ ಪ್ರಶ್ನೆಗಳಿಗೆ ಉತ್ತರ ಕೊಟ್ಟ.

'ಇಲ್ಲಿ ತಿಕೀಟು ಇಲ್ಲದೆ ಇದ್ದವರು ಹೋಗುವರು. ನಾನು ಈ ಗೇಟಿನ ವಾಚ್‌ಮನ್. ನನ್ನ ಹಣ ಕೊಟ್ಟು ಹೋಗು ಇಲ್ಲದಿದ್ದರೆ ಮುಂದೆ ನಡೆ.'

ವಾಚ್‌ಮನ್ನನ ಮಾತು ಕೇಳಿ ತಿಕಿಟ್ ರಸೀದಿ ತೋರಿಸಿದೆ. ಆದರೂ ಪ್ರವೇಶಕ್ಕೆ ಅಪ್ಪಣೆ ದೊರೆಯದು. ನಿರುಪಾಯನಾಗಿ ಎರಡಾಣೆ ಕೊಟ್ಟೆ. ಸ್ವೀಕರಿಸುತ್ತ, 'ತಿಕೀಟು ಏಕೆ ತೆಗೆದಿರಿ? ಇಲ್ಲಿಗೆ ದಿನಾಲು ಬಂದರೂ ಎರಡಾಣೆ ಕೊಟ್ಟರೆ ಹೊರಗೆ ಬಿಟ್ಟೇ ಬಿಡುವೆ' ಎಂದನು.

ಮುಂದಿನ ಸಲ ಎಂದು ಯೋಚಿಸಿ ಗೆಳೆಯನ ಫ್ಯಾಕ್ಟರಿಗೆ ಹೋದೆ. ಅಲ್ಲಿಯೂ ವಾಚ್‌ಮನ್ ಬಿಡಲಿಲ್ಲ. ಗೆಳೆಯನ ಹೆಸರು ಕೇಳಿ ಆತನೇ ಫೋನ್ ಮಾಡಿ, 'ಈಗ್ಗೆ ಬರುತ್ತಾರಂತೆ,' ಎಂದ.

ನಿರುಪಾಯನಾಗಿ ಬಿಸಿಲಲ್ಲಿ ಹದಿನೈದು ನಿಮಿಷ ನಿಂತು ಬೇಜಾರಾಗಿ ಸಿಗರೇಟು ತೆಗೆದು ವಾಚ್‌ಮನ್‌ನಿಗೆ ಒಂದು ಕೊಟ್ಟು ನಾನೊಂದು ಹಚ್ಚಿ ಬೆವರು ಒರೆಸುತ್ತ ನಿಂತೆ.

'ನಿಂತಿರುವಿರೇಕೆ? ಕೂಡ್ರಿ. ಈಗ ತಾನೇ ಬರಹತ್ತಿರಬಹುದು' ಎಂದು ವಾಚ್‌ಮನ್ ಕುರ್ಚಿ ಕೂಡಲು ಕೊಟ್ಟ.

ಕುರ್ಚಿ ಮೇಲೆ ಕುಳಿತು ಮುಂದಿನ ಸಲ ಇಲ್ಲಿ ಬಂದೊಡನೆ ಈತನಿಗೆ ಸಿಗರೇಟು ಕೊಟ್ಟು ಕೂಡ್ರುವುದು ಒಳ್ಳೆಯದೆಂದು ಯೋಚನೆ ಮಾಡುತ್ತಿದ್ದಾಗ ಗೆಳೆಯ ಬಂದನು.

'ಹೆಲೋ, ಯಾವಾಗ್ಗೆ ಬಂದೆ?'

'ಈಗ ತಾನೆ.'

'ಇಲ್ಲೇಕೆ ಕುಳಿತಿರುವಿ, ಒಳಗೆ ಬರಬಾರದಾಗಿತ್ತೆ?'

'ವಾಚಮನ್ ಒಳಗೆ ಬಿಡಲಿಲ್ಲ ಮಹಾರಾಯಾ.'

'ಹುಚ್ಚಾ, ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುವವನಂತೆ ನಟಿಸಿ ಒಳಗೆ ಬರಬಾರದಾಗಿತ್ತೇ? ಬಿಸಲಲ್ಲಿ....'

'ಮುಂದಿನ ಸಲ' ಎಂದೆ.

'ನಡೆ, ಹೊಟೇಲಿಗೆ ಹೋಗುವಾ.'

ಹೊಟೇಲಲ್ಲಿ ಪ್ರವೇಶಿಸಿ ಮೇನು ನೋಡಿದೆ. ಮೊದಲು 'ಮೈಸೂರುಪಾಕ ೨೫ ನಯೆಪೈಸೆ' ನೋಡಿ ಎರಡು ಮೈಸೂರುಪಾಕ ಆರ್ಡರು ಕೊಟ್ಟೆ.

ಮೈಸೂರುಪಾಕ ಒಂದೊಂದು ಪ್ಲೇಟಿನಲ್ಲಿ ನಾಲ್ಕು ನಾಲ್ಕು. ಎಷ್ಟೇ ಖರ್ಚಾದರೂ ಆಣೆಗೆ ಒಂದು ಮೈಸೂರುಪಾಕ ದೊರಕಿದ್ದು ಸುದೈವ. ಮುಂದಿನ ಸಲ ಇಲ್ಲಿಗೆ ಬಂದು ಹೊಟ್ಟೆತುಂಬ ಮೈಸೂರುಪಾಕಗಳನ್ನೇ ತಿನ್ನಬೇಕೆಂದುಕೊಂಡೆ.

ಆದ ಸುದ್ದಿ ಒಂದೊಂದೇ ಹೇಳಿದೆ.

'...ತಿಕೀಟ್ ಚಕ್ಕರ್ ರಸೀದಿ ಕೊಟ್ಟು ಹೀಗೆ ಅನ್ನಬೇಕೇ?...'

'ನಾನು ಫಾಸ್ಟ್ ಟ್ರೇನ್ ನಾಲ್ಕನೇ ಹಾಗು ಸ್ಲೋ ಟ್ರೇನ್ ಎರಡನೇ ಪ್ಲಾಟ್‌ಫಾರ್ಮಿಗೆ ಬರುತ್ತದೆ ಎಂದು ಹೇಳಿರಲಿಲ್ಲವೇ?'

'ಸರಿ, ಮುಂದಿನ ಸಲ ಹಾಗೆ ಮಾಡುವೆ. ಆದರೆ... ವಾಚ್‌ಮನ್ನನಿಗೆ ಎರಡಾಣೆ...'

'ನಮ್ಮ ಕಂಪನಿ ಹೆಸರು ಹೇಳಿ, ಇಂಥವನಿಗೆ ಭೆಟ್ಟಿಯಾಗಬೇಕಾಗಿದೆ ಎಂದು ಹೇಳಿದ್ದರೆ ಬಿಡುತ್ತಿದ್ದ. ಆ ಮಾರ್ಗ ನಮ್ಮ ಕಂಪನಿಯವರ ಹೊರತು ತಿಕೀಟು ಇಲ್ಲದವರಿಗೂ ಹೊರಬರುವು

ದಕ್ಕೆ ಸಮೀಪವಿದೆ ನೋಡು. ಅದಕ್ಕೇ ಆತ ಹಣ ಕೇಳುವನು.'

'ಸರಿ, ಮುಂದಿನ ಸಲ ಹಾಗೆ ಹೇಳಿ ಬರುವೆ.' ಎಂದು ನಾಲ್ಕು - ನಾಲ್ಕು ಮೈಸೂರುಪಾಕ ಗಳನ್ನು ತಿಂದು ಟೀ ಬೇಡವೆಂದು ಬಿಲ್ ಚೀಟಿ ಹಿಡಿದು ನೋಡದೆ ಹಾಗೆ ಗಲ್ಲೆ ಬಳಿಗೆ ಹೋಗಿ ನೋಡುವೆ—

Laxmi Kunj
Bill

Persons	Rs. Np.
Two	2 . 00

ನೋಡಿ ಮೈ ಜುಮ್ಮೆಂದಿತು. ನನ್ನ ಹತ್ತರ ಕೇವಲ ಒಂದೂವರೆ ರೂಪಾಯಿ ಮಾತ್ರ ಇತ್ತು. ಗೆಳೆಯನಿಂದ ಎಂಟಾಣೆ ಪಡೆದು ಬಿಲ್ಲು ಕೊಟ್ಟೆ.

ಹೊರಗೆ ಬಂದು, ' ಅಲ್ಲ. ನಾಲ್ಕಾಣೆಗೆ ಮೈಸೂರುಪಾಕೆಂದು ಲಿಸ್ಟಿನಲ್ಲಿ ಇತ್ತಲ್ಲ?' ಬೆವರು ಒರಿಸಿ ಕೇಳಿದೆ.

'ಹೌದೇ ಹೌದು, ನಾಲ್ಕಾಣೆಗೆ ಒಂದು. ಅವರು ನಾವು ಎಷ್ಟು ತಿನ್ನುವೆವೋ ಅಷ್ಟು ಚಾರ್ಜು ಮಾಡುವರು. ಈಗ ನಾವು ಒಂದೊಂದೇ ತಿಂದು ಉಳಿದದ್ದು ಬಿಟ್ಟಿದ್ದರೆ ಎಂಟೇ ಆಣೆ-ಬಿಲ್ಲಾ ಗುತ್ತಿತ್ತಲ್ಲs.' ಬಾಯಿ ಒರೆಸುತ್ತ— ' ನಿನ್ನ ಹತ್ತಿರ ಹಣವಿಲ್ಲದಿದ್ದರೆ ನಾನು ಕೊಡುತಿದ್ದೆ.' ಎಂದು ಉದಾರ ಮಾತನಾಡಿದನು.

'ಸರಿ, ಮುಂದಿನ ಸಲ ನೀನು ಟೀ ಕುಡಿಸು' ಎಂದು ಖಾಲಿ ಪಾಕೀಟು ಕಿಸೆಯಲ್ಲಿ ಹಾಕಿದೆ.

ಮರುದಿನ ಹೋಗಿಬರುವೆ ಎಂದು ಎರಡು ರೂಪಾಯಿ ಅವನಿಂದ ಪಡೆದು ' ಮುಂದಿನ ಸಂಬಳಕ್ಕೆ ಕೊಡುವೆನೆಂದು ' ಹೇಳಿ, ತಿಕೀಟು ತೆಗೆದು ನಾನು ಆಫೀಸಿಗೆ ಹೋಗಿ ನೋಡು ತ್ತೇನೆ, ಪಾಕೀಟೂ ಇರಲಿಲ್ಲ. *


ಪ್ರವರ್ತಕ ವಿಭಾಗ
ಗಂಗಾಧರ
ಶೇಷನಾರಾಯಣ

ಗಂಗಾಧರ

ಢಣ್ ಢಣ್ ಢಣಾ ಢಣ್ ಎಂದು ಕೊರಳ ಗಂಟೆ ತೂಗುಯ್ಯಾಲೆಯಾಡಿತು.

ಗಂಗಾಧರ ಹೆಜ್ಜೆಯನ್ನು ಮೆಲ್ಲಮೆಲ್ಲಗೆ ಎತ್ತಿ ಇಟ್ಟ. ಅವನದು ಭೀಮ ನಡೆ; ಭೀಮಾಕೃತಿ. ಪಿಳಿಪಿಳೀ ಕಣ್ಣುಬಿಟ್ಟು ದೃಷ್ಟಿಯನ್ನು ಮುಂದೆ ಹರಿಸಿದ. ವಾಲಗದವರು ಪಿಪಿ ಪಿಪೀ ಊದುತ್ತಿದ್ದರು. ಇಬ್ಬರು ಕುಂಭ ಹಿಡಿದ ಬ್ರಾಹ್ಮಣರು. ಛತ್ರಿ; ಚಾಮರ.

ಆ ದೇಗುಲದ ದೇವರಿಗೆ ಅಭಿಷೇಕ ಮಾಡಲಿಕ್ಕೆ, ಆ ನದಿಯಿಂದ ನೀರು ತರುವುದಕ್ಕೆ ಹಿಂದಿನಿಂದ ನಡೆದು ಬಂದ ಏರ್ಪಾಡು ಅದು. ಛತ್ರಿ, ಚಾಮರ, ಓಲಗ, ದೇಗುಲದ ಬಾವುಟ- ಜತೆಗೆ ಗಂಗಾಧರ.

ಗಂಗಾಧರ ರಾಜಬೀದಿಯಲ್ಲಿ ಅಡಿಯಿಡುತ್ತಿದ್ದರೆ ಬಾಲಕರಿಗೆ ಎಲ್ಲಿಲ್ಲದ ಹಿಗ್ಗು. ಬಾಲಕರು ಮಾತ್ರವೇನು ? ಹಿರಿಯರಿಗೂ ಸಹಾ. ಕೆಲವರು ಓಡಿಬಂದು ಬಾಳೆಹಣ್ಣನ್ನು ಮುಂದೆ ನೀಡುವರು. ಮತ್ತೆ ಕೆಲವರು ಮತ್ತೇನನ್ನೋ ನೀಡುವರು. ಗಂಗಾಧರ ಆಗ ಸಂತಸದಿಂದ ಕಿವಿಗಳನ್ನು ರಪರಪನೆ ಬಡಿದು ಸೊಂಡಿಲನ್ನು ಮುಂದಕ್ಕೆ ಚಾಚುವನು. ಹೆಬ್ಬಾವಿನಂಥ ಆ ಸೊಂಡಿಲಿನಿಂದ ಹಾಗೆಯೇ ಎತ್ತಿ ಬಾಯೊಳಗೆ ತುರುಕಿಸಿಬಿಡುವನು. ಅಗಿಯುವುದೂ ಕಾಣದು, ನುಂಗುವುದೂ ಕಾಣದು. ಎಷ್ಟು ಕೊಟ್ಟರೂ ಅಷ್ಟೂ ಸ್ವಾಹಾ.

ಗಂಗಾಧರ ಎಲ್ಲರ ಪ್ರೀತಿಗೆ ಪಾತ್ರನಾಗಿರುವವನು; ಎಲ್ಲರ ಮೆಚ್ಚುಗೆಯನ್ನು ಗಳಿಸಿಕೊಂಡಿರುವವನು.

*

ಕಪಿಲಾ ನದಿ ಜಳಜಳನೆ ಚಳಚಳನೆ ಹರಿಯುತ್ತಾ ಇದೆ. ಅಗಲವಾದ ಹಣೆಯಲ್ಲಿ ಅಡ್ಡ ಗಂಧವಿಟ್ಟಂತೆ ನದಿಗೊಂದು ಸೇತುವೆ. ಸೇತುವೆಯ ಅಡಿಯಲ್ಲಿ ಗಂಗಾಧರನಂತೆಯೇ ಒಂದು ದೊಡ್ಡ ಬಂಡೆಗಲ್ಲು. ಆ ಬಂಡೆಗಲ್ಲಿನ ಸುತ್ತ ಜೊಂಡು ಬೆಳೆದು ನಿಂತಿದೆ.

ಗಂಗಾಧರ ಆ ಬಂಡೆಗಲ್ಲಿನ ಬಳಿ ನಿಂತು ತನ್ನ ನೀಳವಾದ ಸೊಂಡಿಲಿನಿಂದ ಜೊಂಡನ್ನು ಹಿಡಿದೆಳೆಯುತ್ತಿದ್ದ. ಬುಡ ಕಿತ್ತ ಹುಲ್ಲು ಕೆಸರು ಸೇರಿ ಬರುತ್ತಿತ್ತು. ಆಗ ಒಂದು ಸಲ ನೀರಿಗೆ ಹಾಕಿ ಅವನು ಝಾಡಿಸುತ್ತಿದ್ದ. ಬಳಿಕ ಹಾಗೆಯೇ ಅನಾಮತ್ತಾಗಿ ಎತ್ತಿ ಬಾಯೊಳಗೆ ಅಷ್ಟನ್ನೂ ತುರುಕಿಸಿಬಿಡುತ್ತಿದ್ದ.

ಏನು ? ರುಚಿಯಿಲ್ಲದ, ಹುಲ್ಲು. ಆದರೆ ಅದೂ ಸಿಗಬೇಕಲ್ಲ. ಮಾನವರು ಕೊಡುವ ಚಿಲ್ಲರೆ ಹುಲ್ಲು, ಪುಡಿಪುಡಿ ಬಾಳೆಹಣ್ಣು ಅವನಿಗೆಂದಿಗೂ ಹೊಟ್ಟೆ ತುಂಬಿಸಿರಲಿಲ್ಲ.

ಆ ಬಂಡೆಗಲ್ಲಿನಲ್ಲಿ ಮೇಲ್ಗಡೆ, ಗಂಗಾಧರನಿಗೆ ಹತ್ತು ಮಾರು ದೂರದಲ್ಲಿ ಮೀನಲೋಚನಿ, ಮೇನಕೆ, ಮೃಣಾಳಿನಿ, ಮನೋಹರಿ ಹುಲ್ಲು ಮೇಯುತ್ತಾ ನಿಂತಿದ್ದರು. ಮಾಲತಿ ಕೆಸರಿನಲ್ಲಿ ಬಿದ್ದುಕೊಂಡು " ರೊಂಯ್.. ರೊಂಯ್.. ಟ್ರೊಂಯ್.... " ಎಂದು ರಾಗವೆಳೆಯುತ್ತಿದ್ದಳು. ಕೆಸರಿನಲ್ಲಿ ಬಿದ್ದುಕೊಂಡಿರುವುದರಿಂದಾಗುವ ಸುಖ ಅವಳಿಗೆ ಹೇಳತೀರದು. ಕಣ್ಣು, ಕಿವಿ, ಮೂಗು, ಬಾಯಿ, ಕೊಂಬು ಎಲ್ಲಕ್ಕೂ ಕೆಸರು ಮೆತ್ತಿಕೊಂಡು ಸುಪ್ಪತ್ತಿಗೆಯಲ್ಲಿ ಹೊರಳಾಡುವಂತೆ ಅವಳು ಹೊರಳಾಡುತ್ತಿದ್ದಳು. ಅವಳ ದೇಹ ಪೂರಾ ಕೆಸರೊಳಗೆ ಮುಳುಗಿ ಹೋಗಿತ್ತು. ತಲೆಯನ್ನು ಮಾತ್ರ ಮೇಲೆತ್ತಿ

ಅವಳು ಕಿವಿಗಳನ್ನು ರಪರಪನೆ ಬಡಿದುಕೊಳ್ಳು ತ್ತಿದ್ದಳು.

ಗಂಗಾಧರನಿಗೆ ಎಲ್ಲಿಲ್ಲದ ನಗು.

ಏನು ಜಾತಿಯಪ್ಪಾ ಈ ಜಾತಿ. ಅದಕ್ಕೇ ಅಷ್ಟು ಹಾಲು ಹಿಂಡಿದರೂ ಈ ಮಾನವರಿಂದ ಬಯಿಸಿಕೊಳ್ಳೋದು. "ಎಮ್ಮೆ ಹಾಗೆ" ಎಂದು ಎಷ್ಟು ತುಚ್ಛವಾಗಿ ಮಾನವರು ಹಳಿದು ಬಿಡು ತ್ತಾರೆ! ಇವುಗಳ ನಡತೆಯೂ ಹಾಗೆಯೇ, ಅಲ್ಲ, ಸ್ವಚ್ಛವಾಗಿರುವ ಸ್ಥಳವನ್ನೆಲ್ಲ ಬಿಟ್ಟು ಆ ಕೆಸರಿಗೇ ಹೋಗಿವೆ ಕೊಳಕು ಮುಂಡೇವು. ಥೂ ಥೂ ಥೂ.

ಗಂಗಾಧರ ಮುಸಿಮುಸಿ ನಕ್ಕ.

ಆಗ, ಆ ಸುಂದರಿಯರೆಲ್ಲ ನಕ್ಕು, ಕೇಕೆಹಾಕಿ, ತನ್ನ ವಿಷಯವಾಗಿ ಅವಹೇಳನದ ಮಾತು ಗಳಾಡುತ್ತಿದ್ದುದನ್ನು ಕೇಳಿ ಗಂಗಾಧರ ತನ್ನ ಅಗಲವಾದ ಕಿವಿಗಳನ್ನು ಅತ್ತ ತಿರುವಿದ.

ಸಣ್ಣದೊಂದು ಬಂಡೆಕಲ್ಲಿಗೆ ಕೊಂಬುಗಳನ್ನು ಉಜ್ಜಿಕೊಳ್ಳುತ್ತಿದ್ದ ಮೇನಕೆ ಕೂಗಿ ಹೇಳಿ ದಳು :

"ಲೇ ಮಾಲತೀ, ನನ್ನನ್ನೂ ಗಂಗಾಧರ ಅಂತ ತಿಳ್ಕೊಂಡ್ಯೇನೇ !"

ಕೆಸರಿನಲ್ಲಿ ಮಲಗಿದ್ದ ಮಾಲತಿ ರೊಂಯ್ ಎಂದು ರಾಗ ಎಳೆದು ಹೇಳಿದಳು :

"ಹೌದ್ಹಾದು. ಆಕಾರ ಮಾತ್ರ ಬೆಟ್ಟದ ಹಾಗೆ. ಧೈರ್ಯ ಇಲಿಗಿಂತಲೂ ಕಡಮೆ."

ಇನ್ನು ಮೃಣಾಳಿನಿ ತಾನೇಕೆ ಸುಮ್ಮನಿರುವು-ದೆಂದು ತನ್ನದೂ ಬಾಯ್ತೆರೆದಳು :

"ನಿಜ ಕಣೆ ಮಾಲಿ, ಅಲ್ಲ ಆ ಮಾವಟಿಗ ನನ್ನು ನೋಡಿದ್ದೀಯಾ ? ಗಾಳಿ ಬಲವಾಗಿ ಬೀಸಿ ದರೆ ನಾಲ್ಕು ಮಾರು ಹಾರಿ ಹೋಗಿ ಬೀಳು ತ್ತಾನೆ. ಅಂಥ ಜಣಕಲು ಮನುಷ್ಯ. ಆ ಸಣ ಕಲು ವ್ಯಕ್ತಿ ಈ ಬೆಟ್ಟದಂಥಾ ಪ್ರಾಣೀನ ಹೇಳಿದ ಹಾಗೆ ಕೇಳಿಸ್ತಾನಲ್ಲೇ . . ."

"ಕೂತ್ಕೊ ಅಂದ್ರೆ ಕೂತ್ಕೋಬೇಕು ; ನಿಂತ್ಕೊ ಅಂದ್ರೆ ನಿಂತ್ಕೋಬೇಕು. ನಮಗೆ ಇವ ನಷ್ಟು ಬಲ ಇದ್ದಿದ್ರೆ ಈ ಮಾನವರನ್ನೆಲ್ಲ ತುಳಿದು ಅವರ ಸೊಕ್ಕು ಅಡಗಿಸಿಬಿಡುತ್ತಿದ್ದೆವು ಕಣ್ರೆ. ."

ಮತ್ತೆ ಅವರೆಲ್ಲ ಏನೇನೊ ಮಾತನಾಡಿ ಕೊಂಡು ಇನ್ನೂ ಮೇಲಮೇಲಕ್ಕೆ ಹೊರಟು ಹೋದರು.

ಗಂಗಾಧರನಿಗೆ ಭಯಂಕರ ಸಿಟ್ಟು ಬಂತು. ಓಡಿ ಹೋಗಿ ಅವರನ್ನು ಝಾಡಿಸಿ ಒದೆಯೋ-ಣವೇ ಎಂದು ಅವನ ಮನಸ್ಸು ಥಕಥಕಾ ಎಂದಿತು. ಆದರೆ ಹೆಂಗಸರ ಮೇಲೆ ಕೈಮಾಡು ವುದು ಸರಿಯಲ್ಲ ಎಂದು ವಿವೇಕ ಬುದ್ಧಿ ಹೇಳಿತು. ಎಲ್ಲಕ್ಕಿಂತ ಮಿಗಿಲಾಗಿ ಅವರು ಅಣಕ ವಾಡಿದ ಆ ಸೊಲ್ಲು, ಅವನ ಕರ್ಣಗಳಲ್ಲಿ ಗುಂಯಾರವಗುಡುತ್ತಿತ್ತು :

"ಬೆಟ್ಟದಂಥ ಪ್ರಾಣಿ, ಸಣಕಲು ವ್ಯಕ್ತಿಗೆ ಅಧೀನ."

*

ಗಂಗಾಧರನ ಸ್ಮೃತಿಯಲ್ಲಿ ಬಾಲ್ಯದ ನೆನಪು ಹಾಗೆಹಾಗೆಯೇ ಸುತ್ತಿ ಬಂತು.

ಒಂದು ದಿನ.

ಅವನು ದೇಗುಲದ ಮುಂಭಾಗದಲ್ಲಿ ತಾಯಿ ಯೊಂದಿಗೆ ಹುಲ್ಲು ತಿನ್ನುತ್ತಾ ನಿಂತಿದ್ದ. ಅವನ ತಾಯಿ ಗೌರಮ್ಮ ಯಾಕೋ ಕಣ್ಣೀರು ಸುರಿಸು-ತ್ತಿದ್ದಳು ; ನಿಟ್ಟುಸಿರು ಬಿಡುತ್ತಿದ್ದಳು.

ತಾಯಿಯ ಕಣ್ಣಿನಿಂದ ನೀರು ಪ್ರವಹಿಸುತ್ತಿ-ರುವುದನ್ನು ಗಂಗಾಧರನಿಂದ ನೋಡಿ ಸಹಿಸ ಲಾಗಲಿಲ್ಲ. ಅವನು ತನ್ನ ಪುಟ್ಟ ಸೊಂಡಿಲನ್ನು ತಾಯಿಯ ಸೊಂಡಿಲಿನೊಂದಿಗೆ ಹೆಣೆದು ಕೇಳಿದ :

"ಅಮ್ಮಾ, ಯಾಕಮ್ಮಾ ಅಳ್ತಾ ಇದೀಯಾ?"

ನೆನಪಿನ ಕಣಿಯೊಳಗೆ ಇಳಿದಿದ್ದ ಗೌರಮ್ಮ ಧಿಗ್ಗನೆ ಮೇಲೆದ್ದು ಬಂದು "ಏನೂ ಇಲ್ಲ, ಮಗೂ ಏನೂ ಇಲ್ಲ" ಎಂದಳು.

ಆದರೆ ಗಂಗಾಧರ ಬಿಡಲಿಲ್ಲ. ಏನು ಕಾರಣ

ಹೇಳಲೇ ಬೇಕು! ಕಣ್ಣೀರು ಮಿಡಿವುದರ ಹಿಂದೆ ಏನೋ ನಡೆದಿದೆ. ಅದು ನನಗೆ ತಿಳಿಯಲೇ ಬೇಕು ಎಂದ. "ಶ್ರೀಕಂಠೇಶ್ವರನಾಣೆ, ಹೇಳಮ್ಮಾ" ಎಂದು ಗೋಗರೆದ.

ಗೌರಮ್ಮ ಬಿಸಿಯಾದ ನಿಟ್ಟುಸಿರು ಬಿಟ್ಟು, ಸೊಂಡಿಲನ್ನು ಹಾಗೂ ಹೀಗೂ ಆಡಿಸಿ ತನ್ನ ಕಥೆಯನ್ನು ಹೇಳತೊಡಗಿದಳು:

"ಅವರದು ಮಧುರವಾದ ಸಂಸಾರ. ಕಪಿಲಾ ನದಿಯ ಉಗಮದ. ಬೆಟ್ಟಗಳ ಸಾಲಿನ ಬಿದಿರು ಮೆಳೆಯ ವನ ಅವರ ನಿವಾಸ. ಗೌರಮ್ಮನ ಪತಿ ಸೂರ್ಯನಾರಾಯಣ ತುಂಬ ರಸಿಕ; ನಗೆ ಮೊಗದ ಚೆಲುವ. ಅವನೊಬ್ಬನಿದ್ದರೆ ಹತ್ತು ಮಂದಿ ಇದ್ದ ಹಾಗೆ. ಅಷ್ಟು ಲಲ್ಲೆ; ಕೇಕೆ; ನಗು.

ಅಲ್ಲಿ ತಮ್ಮವರ ದೊಡ್ಡ ಬಳಗವೇ ಬೆಳೆದಿತ್ತು. ನೂರಕ್ಕೂ ಮಿಗಿಲಾಗಿ ಅವರ ಸಂಖ್ಯೆ ಅಲ್ಲಿದ್ದಿತು. ಯಾವುದಕ್ಕೂ ಅವರಿಗಲ್ಲಿ ಕೊರತೆಯಿರಲಿಲ್ಲ. ತಿನ್ನಲು ವಿಪುಲವಾದ ಹಸುರು ರಾಶಿ; ಕುಡಿಯಲು ಪಾವನವಾದ ಕಪಿಲೆಯ ನೀರು. ಬಾನುದ್ದ ಬೆಳೆದು ನಿಂತಿರುವ ಬಿದಿರು ವನ; ಕೋಟೆ ಕಟ್ಟಿದಂತೆ ಸುತ್ತಲೂ ಬೆಟ್ಟಗಳ ಸಾಲು.

ಸುಖಕ್ಕೆ ಕೊರತೆಯಿಲ್ಲದ ಸೌಮ್ಯ ವಾತಾವರಣದಲ್ಲಿ ಸುಂದರವಾಗಿ ಅವರು ಜೀವನ ನಡೆಸುತ್ತಿದ್ದರು.

ಸೂರ್ಯನಾರಾಯಣ ಗೌರಮ್ಮನ ಕರ ಹಿಡಿದ ದಿನ, ಆ ಸಂಭ್ರಮ ಹೇಳಿ ತೀರಿಸುವುದು ಹೇಗೆ? ಅಂದು ಆ ವನವೆಲ್ಲ ಹರ್ಷ ಹೊನಲಾಗಿ ಹರಿಯಿತು; ಕಪಿಲಾ ನದಿಯೊಂದಿಗೆ ಸ್ಪರ್ಧೆ ಕಟ್ಟಿ ಓಡಿಯಾಡಿತು.

ಅವರ ಸಂಸಾರದಲ್ಲಿ ಹಾಲ್ಜೇನು ತುಂಬಿ ಹರಿಯುತ್ತಿತ್ತು; ದಿನಗಳು ಕಳೆಯುತ್ತಿದ್ದುವು.

ಒಂದು ದಿನ ಇದ್ದಕ್ಕಿದ್ದಂತೆ ಅತ್ತ ತೇಲುತ್ತಿದ್ದ ಕಾರ್ಮುಗಿಲು ಇತ್ತ ಬರಬೇಕೆ? ಆ ಕಡೆ ಸುಳಿದಾಡುತ್ತಿದ್ದ ಮೂದೇವಿ ಈ ಕಡೆ ಸುಳಿದಾಡಬೇಕೆ?

ಬೆಳುದಿಂಗಳ ಒಂದು ರಾತ್ರಿಯಲ್ಲಿ ಅವರು ವಿಹಾರಾರ್ಥ ಹೊರಟರು. ಅವರು ಎಂದರೆ ನೂರು ಮಂದಿಯೂ. ಬೆಟ್ಟಗಳನ್ನು ಇಳಿದು, ವನವನ್ನು ದಾಟಿ, ಬಯಲಿಗೆ ಬಂದ ಅವರು ಕಪಿಲಾ ನದೀ ತೀರದಲ್ಲಿ ಉದ್ದಕ್ಕೂ ಸೊಂಪಾಗಿ ಬೆಳೆದು ನಿಂತಿದ್ದ ಬಾಳೆ ತೋಟಗಳಿಗೆ ನುಗ್ಗಿ ಕಾಯಿ-ಹಣ್ಣು-ಎಲೆ ಒಂದೂ ಬಿಡದ ಹಾಗೆ ಧ್ವಂಸ ಮಾಡಿದರು.

ಬೆಳಗಿನ ಜಾವದಲ್ಲಿ ತಮ್ಮ ನಿವಾಸಕ್ಕೆ ಹಿಂದಿರುಗುವಾಗ ಲಕಲಕನೆ ಬೆಳೆದು ನಿಂತಿರುವ ಒಂದು ಕಬ್ಬಿನ ತೋಟ ಅವರ ದೃಷ್ಟಿಗೆ ಬಿತ್ತು. ಇನ್ನು ಸಂತಸಕ್ಕೆ ಮೇರೆ ಎಲ್ಲಿಂದ ಬರಬೇಕು! ಧುಮುಧುಮುಯೆಂದು ಅವರೆಲ್ಲ ಆ ತೋಟದೊಳಗೆ ನುಗ್ಗಿದರು.

ಬೆಟ್ಟದಿಂದ ಇಳಿದು ಬಂದ ಮೇಲೆ ಅವರ ಗುಂಪು ಎರಡು ಭಾಗವಾಗಿತ್ತು. ಒಂದು ಗುಂಪು ಕಬ್ಬಿನ ತೋಟದೊಳಗೆ ನುಗ್ಗಿತು; ಮತ್ತೊಂದು ಗುಂಪು ಬಾಳೆಯ ತೋಟಗಳಲ್ಲಿಯೆ ಉಳಿದಿದ್ದು ಅದನ್ನು ನಿರ್ಮೂಲ ಮಾಡಿಯೇ ಬಿಡಬೇಕು ಎನ್ನುವ ಪಂಥದಲ್ಲಿದ್ದುವು.

ಕಬ್ಬಿನ ತೋಟದೊಳಗೆ ನುಗ್ಗಿದ ಗುಂಪಿಗೆ ರಾಹು ಬಡಿಯಿತು. ಒಂದೇ ಕ್ಷಣ, ಅಷ್ಟೆ. ಹಿಂದಿನಿಂದ ಏನೋ ಧಡಾರ್ ಎಂದು ಶಬ್ದವಾಯಿತು. ಅವರು ಪ್ರವೇಶಿಸಿದುದು ಕಬ್ಬಿನ ತೋಟವಲ್ಲ, ಉಕ್ಕಿನ ಪರದೆ. ಮಾನವರು ಅವರನ್ನು ಹಿಡಿಯಲೆಂದು ಭವ್ಯವಾಗಿ, ಬಹು ಚತುರತೆಯಿಂದ ಹೆಣೆದಿದ್ದ ಕಬ್ಬಿಣದ ಕೋಟೆ.

ಆ ಎರಡು ಗುಂಪುಗಳಲ್ಲಿ ಒಂದರಲ್ಲಿ ಸೂರ್ಯನಾರಾಯಣ ಮತ್ತೊಂದರಲ್ಲಿ ಗೌರಮ್ಮ ಇದ್ದರು.

ಆ ಮೇಲೆ ನಡೆದುದು ಹೃದಯ ವಿದ್ರಾವಕವಾದ ಕಥೆ.

ಮಾನವರ ಕೈಗೊಂಬೆಯಾದ ಪಳಗಿದ ಆನೆಗಳು ಸ್ವಜಾತಿಗೆ ವಿರೋಧವಾಗಿದ್ದುವು. ಅವು

ಗಳ ಕಾಲಿಗೆ ಕಬ್ಬಿಣದ ಸರಪಳಿಯನ್ನು ಬಿಗಿಯಲು ಸ್ವಜಾತಿಯವೇ ಸಹಾಯ ಮಾಡಿದುವು. ಬೆಟ್ಟ ಬಿರಿಯುವಂತೆ ಅಂದು ಅವುಗಳೆಲ್ಲ ಗೋಳಿಟ್ಟುವು. ಆದರೆ ಚತುರನಾದ ಮಾನವ ತನ್ನ ಕುಶಲತೆಯಿಂದ ಆ ಬೆಟ್ಟದಾಕಾರದ ಪ್ರಾಣಿಯನ್ನು ದಾರಿಗೆ ತರುವ ಬಗೆಯನ್ನು ಒಂದೊಂದೇ ಘಟ್ಟವಾಗಿ ಯಶಸ್ವಿಯಾಗಿ ನೆರವೇರಿಸಲು ಅದೆಷ್ಟೋ ದಿನಗಳ ಹಿಂದೆಯೇ ಅಂದಾಜು ಹಾಕಿ ಕಾರ್ಯರಂಗಕ್ಕಿಳಿದಿದ್ದ.

ಮತ್ತೊಂದು ಗುಂಪು ಇನ್ನು ತಾವಲ್ಲಿದ್ದರೆ ಅಪಾಯವೆಂದು ಬಗೆದು ಓಡಿಯೇಹೋಯಿತು.

ಸಿಕ್ಕಿ ಬಿದ್ದ ಗುಂಪು ಹಲವು ದಿನಗಳ ವರೆಗೆ ಮುಷ್ಕರ ಹೂಡಿತು; ಮೊಂಡುತನ ಮಾಡಿತು. ಹುಲ್ಲು ತಿನ್ನಲಿಲ್ಲ; ನೀರು ಕುಡಿಯಲಿಲ್ಲ.

ಆದರೆ ಬುದ್ಧಿವಂತ ಮಾನವ ಅವುಗಳನ್ನೆಲ್ಲ ಒಂದು ದಾರಿಗೆ ತಂದ.

ಹಲವು ವರ್ಷಗಳು ಕಳೆದ ಮೇಲೆ ಅವು ಮಾನವರು ಹೇಳಿದಂತೆ ಕೇಳಿ ನಡೆವ ಪ್ರಾಣಿಗಳಾಗಿ ಹೋದುವು. ನಾಡೇ ಅವುಗಳ ಪಾಲಿಗೆ ಕಾಡಾಯಿತು.

ಗೌರಮ್ಮ ಮಾನವರ ಕೈಗೆ ಸಿಕ್ಕಿ ಬಿದ್ದಾಗ ತುಂಬುಗರ್ಭಿಣಿಯಾಗಿದ್ದಳು. ಅನಂತರ ಮುದ್ದಾದ ಗಂಡು ಮಗುವೊಂದನ್ನು ಹಡೆದಳು. ಅವನೇ ಗಂಗಾಧರ.

ಪತಿಯನ್ನು ನೆನೆನೆನೆದು ಗೌರಮ್ಮ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದಳು. ಮುದ್ದಾದ ಕಂದಮ್ಮನನ್ನು ನೋಡುವ ಸೌಭಾಗ್ಯ ಅವರಿಗಿಲ್ಲವಾಯಿತೇ ಎಂದು ಕೊರಗುತ್ತಿದ್ದಳು; ಕಣ್ಣೀರು ಮಿಡಿಯುತ್ತಿದ್ದಳು.

ಗಂಗಾಧರ ಹಟ ಮಾಡಿ ಕೇಳಿದ ಮೇಲೆ, ಅಂದು, ಗೌರಮ್ಮ ಆ ಕಥೆಯನ್ನೆಲ್ಲ ಹೇಳಿದಳು. ಅವನೂ ಸಹ ಅಂದು ಕಾಣದ ತಂದೆಗಾಗಿ ಕಣ್ಣೀರು ಮಿಡಿದ; ತಾಯಿಯ ದುಃಖದಲ್ಲಿ ಭಾಗಿಯಾದ. ಮಾನವರನ್ನೆಲ್ಲ ತುಳಿದು ಹಾಕಿಬಿಡಬೇಕು ಎನ್ನುವ ಭಯಂಕರ ಸಿಟ್ಟು ಅವನಿಗೆ ಬಂದಿತ್ತು. ಆದರೆ ತನ್ನಂಥ ಮರಿಗಳನ್ನು ಈ ಮಾನವರು ನೂರಾರು ನೋಡಿ ದಾರಿಗೆ ತಂದು ಬಿಟ್ಟಿದ್ದಾರೆ ಎನ್ನುವುದನ್ನು ಅವನೇನು ಬಲ್ಲ!

ಇಂದು ಮಾಲತಿ ನುಡಿದ ಕುಹಕ ನುಡಿ "ಬೆಟ್ಟದಂಥ ಪ್ರಾಣಿ, ಸಣಕಲು ವ್ಯಕ್ತಿಗೆ ಅಧೀನ" ಅವನ ತಲೆಯಲ್ಲಿ ಸುತ್ತಿ ಬಂದು, ತಾಯ ನೆನಪು ಇದ್ದಕ್ಕಿದ್ದಂತೆ ಮರುಕಳಿಸಿ, ಅವಳು ಕಣ್ಣೀರು ಮಿಡಿಯುತ್ತಾ ಹಾಗೆಯೇ ನಿಂತಿರುವ ದೃಶ್ಯ ಕಟ್ಟಿ ಬಂದು ಇದ್ದಕ್ಕಿದ್ದಂತೆ ಗಂಗಾಧರ ಬಾಯ್ದೆರೆದ ಬೆಟ್ಟದಂತಾದ.

ತಾಯಿ ಸತ್ತು ಅದೆಷ್ಟೋ ವರ್ಷಗಳು ಸಂದು ಹೋಗಿವೆ.

ಅವನು ಮರಿಯಾಗಿದ್ದವನು ದೊಡ್ಡವನಾಗಿದ್ದಾನೆ. ಆದರೆ ಹೇಗೊ ಎಲ್ಲಿಂದಲೋ ಒಂದು ದ್ವೇಷದ ಕಿಡಿ ಹಾರಿ ಬಂದು ಥಕ್ಕನೆ ಅವನ ತಲೆಯೊಳಗೆ ಹೊಕ್ಕಿದೆ.

ಗಂಗಾಧರ ಸಿಡಿಮಿಡಿಯಾದ; ಕಣ್ಣುಗಳನ್ನು ಗಿರಗಿರನೆ ತಿರುಗಿಸಿದ; ಚೋಟುದ್ದ ಬಾಲವನ್ನು ರಪರಪನೆ ಬಡಿದ; ಸೊಂಡಿಲನ್ನು ಮೇಲೆ ಕೆಳಗೆ ಎತ್ತಿ ಎತ್ತಿ ಬಿಟ್ಟ; ಬೋದಿಗೆಯಂತಹ ಪಾದಗಳನ್ನು ಹಾಗೆ ಹೀಗೆ ಎತ್ತಿಹಾಕಿ ಭುಸುಗುಟ್ಟುತ್ತಾ ದೇಗುಲದತ್ತ ನಡೆದ.

*

ದೇಗುಲದ ಮುಂಭಾಗದಲ್ಲಿ ಅಂಗಡಿಗಳ ಸಾಲು. ಬಾಳೆಹಣ್ಣು, ತೆಂಗಿನಕಾಯಿ; ಕುಂಕುಮ, ಊದುಬತ್ತಿ ಮುಂತಾದ ಸಾಮಾನುಗಳೊಂದಿಗೆ; ಜಬ್ಬರ್, ಗಫಾರ್‌ಖಾನ್, ರಹಮದುಲ್ಲಾ ಬೀಡಿಗಳೂ ಅಲ್ಲಿ ದೊರೆಯುತ್ತವೆ.

ದೇಗುಲದ ಬಲಭಾಗದಲ್ಲಿ ಎರಡನೆಯ ಸಾಲಿಗೆ ಇರುವುದೇ ಮಹಾಂತದೇವರ ಅಂಗಡಿ. ಉಸ್ಮಾನ್ ಸಾಬಿ ಮೂರು ಹೊತ್ತೂ ಅಲ್ಲೇ ಇರುತ್ತಿದ್ದ.

ಉಸ್ಮಾನ್ ಸಾಬಿ ನುರಿತ ಮಾವಟಿಗ. ಅವನ

ತಾತ ಮುತ್ತಾತಂದಿರೆಲ್ಲ ಇದೇ ಕಸುಬಿನವರು. ಉಸ್ಮಾನ್ ಸಾಬಿಯ ತಾತನಿಗೆ ಮಹಾರಾಜರಿಂದ ಶಾಲು ಪದಕ ಎಲ್ಲ ದೊರೆತಿತ್ತಂತೆ. ಅವರ ಜೀವಮಾನವೆಲ್ಲ ಆನೆಗಳೊಂದಿಗೇ ಹೊಡೆದಾಟ. ಅವುಗಳನ್ನು ಪಳಗಿಸಿ ರಕ್ಷಣೆ ಮಾಡುವುದೇ ಅವರ ಕರ್ತವ್ಯ.

ಗಂಗಾಧರ ಚಿಕ್ಕವನಾಗಿದ್ದಾಗಿನಿಂದ ಹಿಡಿದು ದೊಡ್ಡವನನ್ನಾಗಿ ಮಾಡಿದವನೇ ಉಸ್ಮಾನ್ ಸಾಬಿ. ಗಂಗಾಧರನನ್ನು ದೇಗುಲಕ್ಕೆಂದೇ ಮೀಸಲಾಗಿ ಬಿಟ್ಟಿದ್ದರು. ಉಸ್ಮಾನ್ ಸಾಬಿಯೂ ದೇಗುಲದ ಪರಿವಾರದಲ್ಲಿ ಒಬ್ಬನಾಗಿಬಿಟ್ಟಿದ್ದ. ಗಂಗಾಧರನನ್ನು ನದಿಗೆ ಕರೆದೊಯ್ದು ಮೈತೊಳೆಯುವುದು, ಉತ್ಸವಾದಿಗಳಲ್ಲಿ ಅವನಿಗೆ ಅಲಂಕಾರ ಮಾಡುವುದು ಎಲ್ಲ ಉಸ್ಮಾನ್ ಸಾಬಿಗೆ ಸೇರಿದ್ದು.

ಬಾಳೆಹಣ್ಣಿನ ಅಂಗಡಿಯ ಮುಂದೆ ಬೀಡಿ ಸೇದುತ್ತಾ ನಿಂತಿದ್ದ ಉಸ್ಮಾನ್ ಸಾಬಿ ದೂರದಲ್ಲಿ ತನ್ನ ಸಂಗಾತಿ ಗಂಗಾಧರ ಬರುತ್ತಿರುವುದನು ಗಮನಿಸಿದ. ಗಂಗಾಧರನದು ಯಾವಾಗಲೂ ಗಂಭೀರ ನಡೆ; ನಿಧಾನವಾದ ಹೆಜ್ಜೆ. ಆದರೆ ಇಂದು ಅವನು ಬಿರುಬಿರನೆ ಹೆಜ್ಜೆಯಿಕ್ಕಿ ಇತ್ತ ಬರುತ್ತಿದ್ದ.

"ರಾಜಾಸಾಬ್ ಜೋರಾಗಿ ಬರ್ತಾ ಅವ್ನೆ."

ಗಂಗಾಧರನನ್ನು ಉಸ್ಮಾನ್ ಸಾಬಿ 'ರಾಜಾಸಾಬ್' ಎಂದೇ ಕರೆಯುತ್ತಿದ್ದ. ಬೆಳಗ್ಗೆ ದೇವರಿಗೆ ನದಿಯಿಂದ ನೀರು ತಂದು ಅಭಿಷೇಕವಾದ ಮೇಲೆ ಗಂಗಾಧರನಿಗೆ ದೇಗುಲದಲ್ಲಿ ಕೆಲಸವಿಲ್ಲ. ಅವನು ಹಾಗೆಯೇ ನದಿಯ ದಂಡೆಯಲ್ಲಿ ಅಡ್ಡಾಡಿ, ಒಂದಿಷ್ಟು ಬಾಯಾಡಿಸಿ, ಮಧ್ಯಾಹ್ನ ಹಿಂದಿರುಗುವನು. ಅವನ ಬರುವಿಕೆಯನ್ನೇ ಉಸ್ಮಾನ್

ಸಾಬಿ ಇದಿರುನೋಡುತ್ತಾ ನಿಲ್ಲುವನು. ಗಂಗಾಧರ ಬಂದವನೇ ಸೊಂಡಿಲನ್ನು ಮುಂದೆ ನೀಡುವನು. ಒಂದೇ ಕ್ಷಣ ಅಷ್ಟೆ, ಅಳಿಲು ಮರವೇರುವಂತೆ ಉಸ್ಮಾನ್ ಸಾಬಿ ಛಂಗನೆ ಹಾರಿ, ಎರಡು ಕೈಗಳಿಂದಲೂ ಸೊಂಡಿಲನ್ನು ಬಾಚಿ ತಬ್ಬಿ ನಿಮಿಷಾರ್ಧದಲ್ಲಿ ಸರಸರನೆ ಮೇಲೇರಿಬಿಡುವನು. ತನ್ನ ಮೇಲೆ ಕುಳಿತು ಉಸ್ಮಾನ್ ಸಾಬಿ ಸವಾರಿ ಮಾಡುತ್ತಿದ್ದರೆ ಗಂಗಾಧರನಿಗೆ ಎಲ್ಲಿಲ್ಲದ ಹಿಗ್ಗು.

ಅನಂತರ ಅವರೀರ್ವರೂ ನದಿಗೆ ತೆರಳುವರು. ಎರಡು ಆನೆ ಆಳವಿರುವ ಮಡುವಿನೊಳಗೆ ಗಂಗಾಧರ ಪ್ರವೇಶಿಸುವನು. ಗಂಗಾಧರ ಈಜುವುದರಲ್ಲಿ ನಿಪುಣ; ಉಸ್ಮಾನ್ ಸಾಬಿ ಅವನಿಗಿಂತ ಚತುರ. ಇನ್ನು ಕೇಳಬೇಕೆ? ಗಂಗಾಧರ ದೊಡ್ಡ ಬಂಡೆಗಲ್ಲು ನೀರಿನಲ್ಲಿ ತೇಲಾಡುವಂತೆ ತೇಲಾಡುವನು. ಉಸ್ಮಾನ್ ಸಾಬಿ ಟಪಟಪನೆ ಬಡಿದು ನೀರಿನೊಂದಿಗೆ ಸರಸವಾಡುವನು. ಅದೆಷ್ಟೋ ಸಮಯ ಕಳೆದ ಮೇಲೆ ಅವರೀರ್ವರು ಊರಿಗೆ ಹಿಂದಿರುಗುವರು.

ಇದು ಅವರ ದೈನಂದಿನ ಕಾರ್ಯಕ್ರಮ.

ಇಂದು ತುಂಬಾ ಹೊತ್ತಾದರೂ ಗಂಗಾಧರ ಬಾರದಿರುವುದನ್ನು ಕಂಡು ಉಸ್ಮಾನ್ ಸಾಬಿ ದಾರಿ ಕಾಯುತ್ತಾ ನಿಂತಿದ್ದ. ಈಗ ದೂರದಲ್ಲಿ ಅವನು ಬರುತ್ತಿರುವುದು ಗೋಚರವಾದೊಡನೆ ಮುಖವೆಲ್ಲ ಮಲ್ಲಿಗೆಯಾಗಿ ಒಂದು ಕೂಗು ಹಾಕಿದ.

“ಆವೋ, ಆವೋ, ರಾಜಾಸಾಬ್, ಆವೋ ಆವೋೋೋೋ.”

ಕೆರಳಿದ ಫಣಿಯಂತೆ ಗಂಗಾಧರ ಭುಸುಗುಟ್ಟುತ್ತಾ ಇಂದು ಬಂದ. ಬಂದವನೇ ರೋಷದಿಂದ ಸೊಂಡಿಲನ್ನು ಬೀಸಿದ. ಅವನ ಕಣ್ಣುಗಳು ಗರಗರನೆ ಸುತ್ತಿದವು; ಮೈಯ ರಕ್ತ ಕುದಿಯುತ್ತಿತ್ತು.

ಎಂದಿನಂತೆ ಎಂದು ಭಾವಿಸಿ ಉಸ್ಮಾನ್ ಸಾಬಿ ಸೊಂಡಿಲನ್ನು ಬಾಚಿ ತಬ್ಬಿಕೊಂಡ. ಆದರೆ ಮೇಲೆರುವುದು ಮಾತ್ರ ಅವನಿಂದ ಸಾಧ್ಯವಾಗಲಿಲ್ಲ.

ಕೊಂರ್ರ್ರೋ ಎಂದು ಗಂಗಾಧರ ಭಯಂಕರವಾಗಿ ಕೂಗು ಹಾಕಿದವನೇ ರೊಂಯ್ ಎಂದು ಉಸ್ಮಾನ್ ಸಾಬಿಯನ್ನು ತೂರಿ ಎಸೆದ. ಚೆಂಡು ಪುಟಿದೇಳುವಂತೆ ಉಸ್ಮಾನ್ ಸಾಬಿ ಹಾರಿ, ಎರಡು ಮಾರು ದೂರದಲ್ಲಿ ದೊಪ್ಪನೆ ಕೆಳಗೆ ಬಿದ್ದ. ಅವನ ತಲೆಯೊಡೆದು ಮೂಗು-ಬಾಯಿಂದೆಲ್ಲ ರಕ್ತ ಕಾರುತ್ತ ಉಸ್ಮಾನ್ ಸಾಬಿ ಕೆಂಪುಮಯವಾದ.

ನಡೆಯಬಾರದುದು ನಡೆದು ಹಾಹಾಕಾರವೆದ್ದಿತು. ಭೀತಿಗ್ರಸ್ತರಾದ ಜನ ಹೋ ಎಂದು ಕೂಗು ಹಾಕಿದರು. ಗಂಗಾಧರ ಹಿಡಿಮಿಡಿಗುಟ್ಟುತ್ತಾ ಧಾವಿಸಿ ಒಬ್ಬ ಅಂಗಡಿಯವನನ್ನು ಸೊಂಡಿಲಿನಿಂದ ಈಚೆಗೆಳೆದುಕೊಂಡು ಕಾಲಿನಿಂದ ತುಳಿದು ಹಾಕಿದ. ಒಂದು ಸುತ್ತು ಹೀಗೆ ಸುತ್ತಿದವನೇ ಮುದುಕಿಯೊಬ್ಬಳನ್ನು ತೂರಿ ಎಸೆದ. ಒಂದು ಸುತ್ತು ಹಾಗೆ ಸುತ್ತಿದವನೇ ಅರ್ಚಕನೊಬ್ಬನನ್ನು ಮುದ್ದೆ ಮಾಡಿದ.

ಯಾರೋ ಒಬ್ಬರು ಕೂಗು ಹಾಕಿದರು :

“ಆನೆಗೆ ಮದ ಹತ್ತಿಬಿಟ್ಟಿದೆ; ಹುಚ್ಚು ಹಿಡಿದುಬಿಟ್ಟಿದೆ. ಪೋಲೀಸ್ನೋರ್ನ ಕರೀರಿ. ಸುಟು ಕೊಂದು ಹಾಕಲಿ.”

ತನ್ನನ್ನು ಕೊಂದು ಹಾಕುವ ಸಲಹೆ ಕೇಳಿದೊಡನೆ ಗಂಗಾಧರ ಮತ್ತಷ್ಟು ಉಗ್ರನಾದ. ಅವನು ರಾಜಬೀದಿಯಲ್ಲಿ ಉದ್ದಕ್ಕೆ ಓಡಿದ. ಎದುರಿಗೆ ಸಿಕ್ಕಿದವರನ್ನೆಲ್ಲ ತುಳಿದು, ಎಸೆದು, ಹುಚ್ಚೆದ್ದು ಕುಣಿದ.

ಅಷ್ಟರಲ್ಲಿ ಸಿಡಿಲು ಕೆಳಗೆ ಬಿದ್ದಂತೆ ಢಮಾರ್ ಎನ್ನುವ ಶಬ್ದ ಭಯಂಕರವಾಗಿ ಮೊಳಗಿತು. ಪೋಲೀಸಿನವರು ಗುಂಡು ಹಾರಿಸಿದ್ದರು. ಆದರೆ ಅದೃಷ್ಟವಶಾತ್ ಗುರಿ ತಪ್ಪಿತ್ತು. ಗಲ್ಲಿಯೊಂದರೊಳಗೆ ಗಂಗಾಧರ ನುಗ್ಗಿದ. ಪಶ್ಚಿಮಾಭಿಮುಖವಾಗಿ ಓಡಿ ನದಿಯ ದಂಡೆ ಸೇರಿದ. ಪೋಲೀಸ್

ವ್ಯಾನ್ ರಸ್ತೆಯಲ್ಲಿ ಹಾಗೆ ಸುತ್ತಿ ಬಂತು. ಗಂಗಾಧರ ನೀರೊಳಗೆ ಮುಳುಗಿದವನು ತಲೆಯೆತ್ತಲೇ ಇಲ್ಲ. ಪೋಲೀಸಿನವರು ನಾಲ್ಕಾರು ಗುಂಡುಗಳನ್ನು ನೀರಿನಲ್ಲಿ ಹಾರಿಸಿದರು. ಢಮಾರ್ ಢಮಾರ್ ಎನ್ನುವ ಶಬ್ದವಾಯಿತೇ ಹೊರತು ಗಂಗಾಧರನಿಗೆ ಏನೂ ಆಗಲಿಲ್ಲ. ಆತ ನೀರಿನೊಳಗೇ ಈಜುತ್ತಾ, ಮೇಲೆ ತಲೆಯೆತ್ತದೆ, ಆಚೆದಡ ಸೇರಿದ. ಪಶ್ಚಿಮದ ಸಾಲು ಬೆಟ್ಟಗಳನ್ನು ಗುರಿಯಿಟ್ಟುಕೊಂಡು ಮರಣದಿಂದ ಪಾರಾಗಿ ಧಾವಿಸಿದ.

*

ಸಂಜೆಯಾಗತೊಡಗಿತ್ತು. ಹೊಂಬಣ್ಣದ ಹಕ್ಕಿಗಳು ಹೊಂಬಣ್ಣದಾಗಸದಿಂದ ಕೆಳಗಿಳಿದು ಹೊಂಗೆಮರಗಳ ತಮ್ಮ ಗೂಡುಗಳಲ್ಲಿ ಸೇರಿಕೊಳ್ಳಲು ಹಿಂದಿರುಗುತ್ತಿದ್ದುವು.

ಅವು ಅಮಾವಾಸ್ಯೆಗೆ ಸಮೀಪದ ದಿನಗಳಾದುದರಿಂದ ತುಸು ಸಮಯದಲ್ಲೆ ಕಾರ್ಗತ್ತಲೆ ದಿಕ್ಕುದಿಕ್ಕುಗಳಲ್ಲಿ ಪಸರಿಸಿತು. ಕೋಟ್ಯಂತರ ನಕ್ಷತ್ರಗಳು ಬಾನಿನಲ್ಲಿ ಮಿನುಗತೊಡಗಿದ್ದವು.

ಕಪಿಲಾ ನದಿಯ ದಂಡೆಯಲ್ಲೇ ಗಂಗಾಧರ ಉದ್ದಕ್ಕೆ ನಡೆದ. ತೀವ್ರವಾದ ನಡೆಯನ್ನು ಮುಂದಗೊಳಿಸಿದ. ಮುಂದೇನು ಎನ್ನುವ ಪ್ರಶ್ನೆ ಬೃಹದಾಕಾರವಾಗಿ ಅವನ ತಲೆ ತಿನ್ನತೊಡಗಿತ್ತು.

ಹೆಜ್ಜೆ ಹಾಕುತ್ತಿದ್ದಂತೆ ಅವನು ಅರಣ್ಯಕ್ಕೆ ಪ್ರವೇಶಿಸಿದ. ಅವನ ಎದೆ ಧಿಕ್ಕೆಂದಿತು.

ಬಾನುದ್ದ ಬೆಳೆದು ನಿಂತಿರುವ ಬಿದಿರು ಮೆಳೆಗಳು ಒಂದಕ್ಕೊಂದು ತೀಡಿಕೊಂಡು ವಿಲಕ್ಷಣವಾದ ಸ್ವರವನ್ನೆಬ್ಬಿಸುತಿದ್ದುವು. ಯಾವು ಯಾವುವೋ ಪ್ರಾಣಿಗಳು ವಿವಿಧ ರಾಗಗಳಲ್ಲಿ, ತಾನ

ಗಳಲ್ಲಿ ವನದ ಪಾರುಪತ್ಯವನ್ನು ನಡೆಸುತ್ತಿದ್ದುವು. ರಾತ್ರಿ ಪಕ್ಷಿಗಳು ಸಂತಸದಿಂದ ಮರದಿಂದ ಮರಕ್ಕೆ ಕೊಂಬೆಯಿಂದ ಕೊಂಬೆಗೆ ಹಾರಾಡುತ್ತಿದ್ದುವು.

ಊರಲ್ಲಿದ್ದಾಗ ಪಶ್ಚಿಮದ ಸಾಲು ಬೆಟ್ಟಗ ಗಳನ್ನು ಗಂಗಾಧರ ಗಮನಿಸಿದ್ದ. ನಕ್ಷೆಯಲ್ಲಿ ಬರೆದಂತೆ ನೀಲಿ ವರ್ಣದ ಒಂದು ಸಾಲು ಅವನ ಕಣ್ಣಿಗೆ ಆಗ ಕಾಣುತ್ತಿತ್ತು. ಅಲ್ಲಿ ದಟ್ಟ ವಾದ ಅರಣ್ಯವಿದೆ, ನಮ್ಮವರು ವಾಸಿಸುತ್ತಿದ್ದಾರೆ ಎನ್ನುವುದನ್ನು ಅವನು ಕೇಳಿಯೇನೊ ತಿಳಿದಿದ್ದ. ಆದರೆ ಮಲೆನಾಡನ್ನು ನೋಡದ ಬಯಲು ಸೀಮೆಯ ಮಾನವನಂತೆಯೇ ಭಯಂಕರವಾದ ಆ ವನವನ್ನು ನೋಡಿ ಗಂಗಾ-ಧರ ದಿಗ್ಭ್ರಮೆಯಿಂದ ದಂಗುಬಡಿದುಹೋದ.

ಏನು ಮಾಡುವುದು ಎನ್ನುವ ಪ್ರಶ್ನೆ ಗಂಗಾಧರನ ಮಿದುಳನ್ನು ಕೊರೆಯಹತ್ತಿತು. ಕಾಡಾನೆಗಳು ನಾಡಾನೆಗಳನ್ನು ಕಂಡರೆ ಸಿಗಿದುಹಾಕಿ ಬಿಡುತ್ತವೆ ಎನ್ನುವುದನ್ನು ಅವನು ಕೇಳಿ ತಿಳಿದಿದ್ದ. ನಾಡಾನೆಗಳು ಮಾನವನ ಕೈಗೊಂಬೆ ಗಳಷ್ಟೆ! ಮಾನವರಿಗಿಂತಲೂ ಅವು ತಮಗೆ ಭಯಂಕರ ವಿರೋಧಿಗಳು ಎಂದು ಕಾಡಾನೆ ಗಳು ಭಾವಿಸಿರುತ್ತವೆ ಎನ್ನುವ ಸುದ್ದಿ ಗಾಳಿ ಮಾತಾಗಿರಲಿಲ್ಲ. ಹಾಗಾದರೆ ತನ್ನ ಭವಿಷ್ಯ ವೇನು? ಈ ವನದಲ್ಲಿ ತಾನು ಯಾರ ಕಣ್ಣಿಗೂ ಬೀಳದೆ ಇರಬೇಕಾದರೆ ತಾನೇನು ಪುಟ್ಟ ಹಕ್ಕಿಯೆ? ಎಲ್ಲೊ ಅಡಗಿರುವುದಕ್ಕಾಗುತ್ತದೆಯೆ?

ಏನು ಮಾಡುವುದು? ಹೇಗೆ ಮಾಡುವುದು?

ಮರಣ ಅಲ್ಲಿ ಬೆನ್ನಟ್ಟಿ ಬಂದಿತ್ತು. ಪೋಲೀಸಿನವರು ಗುಂಡು ಹಾರಿಸಿದ್ದರು. ಅದೃಷ್ಟವಶಾತ್ ತಪ್ಪಿಸಿಕೊಂಡುದಾಗಿತ್ತು. ಆದರೆ ಇಲ್ಲಿನ ಭೇತಾಳದ ಬಾಯನ್ನು ಕಟ್ಟುವವರಾರು?

ಯಾರು? ಹೇಗೆ? ಸಾಧ್ಯವೆ? ಬದುಕು ಇನ್ನು ತನ್ನ ಪಾಲಿಗಿಲ್ಲವೆ?

ತನ್ನಷ್ಟೇ ಎತ್ತರ ಬೆಳೆದು ನಿಂತಿರುವ ಹಸುರು ಹುಲ್ಲಿನ ರಾಶಿಯ ನಡುವೆ ಗಂಗಾಧರ ನಿಂತಿದ್ದ. ನಾಲ್ಕು ನಾಲ್ಕು ಬಳಸು ಸೊಂಡಿಲನ್ನು ಬೀಸಿ ಎಳೆದರೆ, ಮಾನವರು ಜನ್ಮಜನ್ಮಕ್ಕೂ ನೀಡಲು ಸಾಧ್ಯವಿಲ್ಲದಂಥ ಹಸುರು ರಾಶಿ; ಸಮೃದ್ಧಿಯಾದ ಆಹಾರ. ಆ ದೊಡ್ಡ ಬಂಡೆಗಲ್ಲಿನ ಮೇಲಿಂದ ಭೋರೆಂದು ದನಿಗೈದು ಅಟ್ಟಹಾಸ ಗೈಯುತ್ತ ಕಪಿಲಾ ನದಿ ಧುಮ್ಮಿಕ್ಕುತ್ತಿದೆ.

ಆದರೆ ಆ ನೀರು, ಆ ಹಸುರು ಯಾವುದೂ ಬೇಡವಾಗಿ ಗಂಗಾಧರ ನಿಂತಲ್ಲೇ ನಿಂತ. ನಿಂತಿದ್ದ ಹಾಗೆ ಸರಕ್ಕನೆ ಏನೋ ಶಬ್ದವಾದಂತಾಗಿ ಬೆಚ್ಚಿ ಹಿಂದಿರುಗಿದ.

*

ಮರಣವೇ ರಮಣಿಯ ರೂಪದಲ್ಲಿ ತನ್ನೆದುರು ಬಂದು ನಿಂತಿರುವಂತೆ ಭಾಸವಾಗಿ ಗಂಗಾಧರ ಗಡಗಡನೆ ನಡುಗಿಹೋದ. ಅವನ ಇದಿರು ಚೆಲುವೆಯೊಬ್ಬಳು ಒಯ್ಯಾರವಾಗಿ ಬಂದು ನಿಂತಿದ್ದಳು. ಸುಂದರವಾದ ಸೊಂಡಿಲನ್ನು ಅವಳು ಹಾಗೆ ಹೀಗೆ ಆಡಿಸಿದಳು. ಅಪರಿಚಿತ ಯುವಕನೆದುರು ಒಬ್ಬಳೇ ನಿಂತಿರುವುದು ಬಹುಶಃ ಅವಳಿಗೆ ಲಜ್ಜೆಯಾಯಿತೇನೊ? ಆದುದರಿಂದ ತಲೆಬಾಗಿಸಿ "ನೀವು ಯಾರು?" ಎಂದಳು ಮೃದು ಮಧುರವಾಗಿ.

ಗಂಗಾಧರನಿಗೆ ಹೋದ ಜೀವ ಬಂದಂತಾಯಿತು. ತರುಣಿಯ ಹಿತನುಡಿ, ಧಗಧಗಿಸುವ ಬಿಸಿಲಲ್ಲಿ ನಡೆದು ಬಂದಾಗ ಷರಬತ್ ಕುಡಿದರೆ ಆಗುವ ಶೀತಲ ಸುಖದಂತೆ ಅವನ ಮನಸ್ಸು ಜಿಲ್‌ಜಿಲ್ ಎಂದಿತು. ಒಮ್ಮೆ ಭಯ; ಮತ್ತೊಮ್ಮೆ ಏನೋ ವಿವರಿಸಲಾಗದ ಒಂದು ವಿಧದ ಆನಂದ.

"ನಾನು....ನಾನು....ಬಬ್ಬ ನಿರ್ಭಾಗ್ಯ."

"ಹಾಗಂದರೆ?"

"ಅದರ ಅರ್ಥ ನೀನು ತಿಳಿದುಕೊಳ್ಳುವುದು ಬೇಡ."

"ನಿಮ್ಮ ಹೆಸರು?"

"ಗಂಗಾಧರ. ನಿನ್ನ ಹೆಸರೊ?"

"ವನಮಾಲಾ."

ಇಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿದರು. ಕ್ಷಣಕಾಲ ಮಾತನಾಡದೆ ಹಾಗೆಯೇ ನಿಂತರು. ಬಳಿಕ ವನಮಾಲಾ ಮೆಲ್ಲಗೆ ಬಾಲ ಬೀಸಿ ಕೇಳಿದಳು:

"ನೀವು ಈ ಸ್ಥಳಕ್ಕೆ ಅಪರಿಚಿತರು ಎಂದು ಕಾಣುತ್ತದೆ!"

"ಹೌದು."

"ಯಾವಾಗ ಬಂದಿರಿ?"

"ಇದೇ, ಈಗ ತಾನೆ."

"ಎಲ್ಲಿಂದ ಬರುತ್ತಿದ್ದೀರಿ?"

"ಮಾನವರ ಊರಿನಿಂದ."

"ಹಾಂ?"

ವಿದ್ಯುತ್ತು ಮೈಗೆ ತಾಕಿದಂತೆ, ಚೇಳು ಕುಟುಕಿದಂತೆ ಭಾಸವಾಗಿ ವನಮಾಲಾ ಬೆದರಿ, ಬೆಚ್ಚಿ, ತನ್ನವರನ್ನು ಕೂಗಿ ಕರೆಯಲು ಬಾಯ್ದೆರೆದಳು.

ಆಗ ಗಂಗಾಧರ ಸೊಂಡಿಲನ್ನು ಮೇಲಕ್ಕೆತ್ತಿದ, ವಿನಯವಾಗಿ ಹೇಳಿದ:

"ಮಾಲಾ, ನಾನು ದಿಕ್ಕುಗೆಟ್ಟು ಬಂದಿದ್ದೇನೆ. ನನಗೆ ಅಭಯ ನೀಡು. ನೀನೇ ಈಗ ನನಗೆ ದಿಕ್ಕು. ನನ್ನ ಕಥೆಯನ್ನು ಕೇಳಿದ ಮೇಲೆ ನಿಮ್ಮವರನ್ನು ನೀನು ಕೂಗಿ ಕರೆವೆಯಂತೆ."

ವನಮಾಲಾ ಒಂದೂ ತೋಚದೆ ಹಾಗೆಯೇ ನಿಂತು ಬಿಟ್ಟಳು. ಗಂಗಾಧರನನ್ನು ಅವಳು ದಿಟ್ಟಿಸಿ ನೋಡಿದಳು. ಅವನ ಮುಖದಲ್ಲಿ ಪಾಪ ಕಳಂಕದ ಯಾವ ರೇಖೆಯೂ ಇದ್ದಂತೆ ಕಂಡು ಬರಲಿಲ್ಲ. ಅವನ ಸುಂದರ ಕಣ್ಣುಗಳು ನಿಷ್ಕಾಪಟ್ಯವನ್ನು ಸಾರುವಂತಿದ್ದುವು. ದೈನ್ಯವೇ ಮೂರ್ತಿವೆತ್ತಂತೆ ನಿಂತಿರುವ ಆತನನ್ನು ನೋಡಿ

ಒಂದು ಆಶ್ಚರ್ಯಕರವಾದ ದೃಷ್ಟಾಂತ

● ನಿಮ್ಮ ಭವಿಷ್ಯತ್ಕಾಲದ ಅವಶ್ಯಕತೆಗಳನ್ನು ಪೂರೈಸಿಕೊಡಲು ಬ್ಯಾಂಕುಗಳು ಹೇಗೆ ಸಹಕರಿಸುತ್ತವೆ? ಮಿತವ್ಯಯವನ್ನು ಸಾಧಿಸುವುದರ ಮೂಲಕ ನೀವೊಂದು ಸೇವಿಂಗ್ಸ್ ಖಾತೆಯನ್ನು ತೆರೆದು ಈ ಖಾತೆಯಲ್ಲಿ ನೀವು ಚಕ್ರ ಬಡ್ಡಿಯ ದರದಲ್ಲಿ ಬಡ್ಡಿಯನ್ನು ಗಳಿಸುವಂತೆ ಅವು ನಿಮಗೆ ಪ್ರೋತ್ಸಾಹವನ್ನೀಯುತ್ತವೆ. ಬೆಂಜಮಿನ್ ಫ್ರಾಂಕ್ಲಿನನು ಮಿತವ್ಯಯದ ಪ್ರತಿಪಾದಕರಲ್ಲೊಬ್ಬನು. ಮೂಲಧನವು ಬಡ್ಡಿಗೆ ಬಡ್ಡಿ ಕೂಡಿ ಹೇಗೆ ವೃದ್ಧಿಯಾಗುತ್ತಿದೆ ಎಂಬುದಕ್ಕೆ ಒಂದು ಆದರ್ಶಕರವಾದ ನಿದರ್ಶನವನ್ನು ಆತನು ಜಗತ್ತಿನ ಮುಂದೆ ಇಟ್ಟಿರುವನು.

● ೧೭೯೧ ರಲ್ಲಿ ಫ್ರಾಂಕ್ಲಿನ್ನನು ೫ ಸಾವಿರ ಡಾಲರುಗಳನ್ನು ಬೋಸ್ಟನ್ ನಗರದ ಜನರ ಉಪಯೋಗಕ್ಕೆಂದು ಮೀಸಲಾಗಿರಿಸಿದನು. ೧೦೦ ವರುಷಗಳ ನಂತರ ಅದು ಬಡ್ಡಿ ಕೂಡಿ ವೃದ್ಧಿಯಾದ ಬಳಿಕವೇ ಅದನ್ನುಪಯೋಗಿಸಬೇಕೆಂದೂ ಆತನು ವಿಧಿಸಿದ್ದನು. ೧೦೦ ವರುಷಗಳ ನಂತರ ಅದು ೪೦೦,೦೦೦ ಡಾಲರುಗಳಷ್ಟು ಬೆಳೆದಿತ್ತು. ಈ ಮೊತ್ತದಿಂದ ಫ್ರಾಂಕ್ಲಿನನ ಹೆಸರಿನಲ್ಲಿ ಒಂದು ಟೆಕ್ನಿಕಲ್ ಶಾಲಾ ಕಟ್ಟಡವನ್ನು ಕಟ್ಟಿಸಿದ ನಂತರ ಅದರಲ್ಲಿನ ೯೨,೦೦೦ ಡಾಲರುಗಳನ್ನು ಪುನಃ ವೃದ್ಧಿಯಾಗಲು ಬಿಡಲಾಯಿತು. ಅದೀಗ ಒಂದು ಮಿಲಿಯ ಡಾಲರುಗಳಷ್ಟಾಗಿದೆ.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ

ನಿಮಗೆ ಸಮೀಪವಿರುವ ನಮ್ಮ ೧೪೧ ಶಾಖೆಗಳೊಂದರಲ್ಲಿ
ದಯಮಾಡಿ ವಿಚಾರಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಉಡುಪಿ, ಮೈಸೂರ ರಾಜ್ಯ ಸ್ಥಾಪನೆ: ೧೯೨೫

ವನಮಾಲೆಗೆ ಏಕೋ ಸಂಕಟವಾದ ಹಾಗಾಯಿತು.

ಆದರೆ ಮರುಕ್ಷಣವೇ ಸಂದೇಹದ ಹುಳುವೊಂದು ಛಕ್ಕನೆ ಹಾರಿ ಬಂದು ಜೀಮ್ ಎಂದು ಅವಳ ಸುತ್ತ ಸುತ್ತತೊಡಗಿತು. ತಮ್ಮವರೇ ಆದ, ಸ್ವಜಾತಿಯವರಾದ ಕೆಲವರು ಮಾನವರಲ್ಲೇ ಆಶ್ರಯ ಪಡೆದು, ಮಾನವರ ಕೈಗೊಂಬೆಗಳಾಗಿರುವುದಲ್ಲದೆ, ಚತುರೋಪಾಯಗಳನ್ನು ಅನುಸರಿಸಿ ಕಾಡಿನಲ್ಲಿ ವಾಸಿಸುವ ತಮ್ಮನ್ನು ಬಂಧಿಸಿ ಎಳೆದೊಯ್ಯುವ ಹೀನವೃತ್ತಿಗೆ ಇಳಿದಿರುತ್ತಾರೆ ಎನ್ನುವುದನ್ನು ಬಗೆಬಗೆಯಾಗಿ ಕಥೆಕಥೆಯಾಗಿ ವನಮಾಲಾ ಕೇಳಿ ತಿಳಿದಿದ್ದಳು. ಕೇಳಿ ತಿಳಿವುದೇನು? ಅವಳ ಕಣ್ಣೆದುರೇ ಇಂಥ ಮೋಸ ಕೃತ್ಯಗಳು ಎಷ್ಟೋ ನಡೆದುಹೋಗಿದ್ದವು. ಈತನೂ ಹಾಗೆ ಸೋಗು ಹಾಕಿ ಬಂದಿರುವ ವಂಚಕನೆ? ಕೃತಘ್ನನೆ? ನಿಷ್ಕಾಪಟ್ಯದ ನಟನೆಯನ್ನು ಯಶಸ್ವಿಯಾಗಿ ನೆರವೇರಿಸುತ್ತಿರುವ ಆಷಾಢಭೂತಿಯೆ?

ಈತ ಯಾರು? ಯಾರು ಈತ? ವೇಷಧಾರಿಯೊ? ವಿಶ್ವಾಸದ್ರೋಹಿಯೊ?

"ನೀವು ಏನು ಹೇಳುತ್ತಿದ್ದೀರಿ?"

"ವನಮಾಲಾ, ನಿನ್ನನ್ನು ನೋಡಿದ ಮೇಲೆ ನನಗೆ ಏನೋ ಒಂದು ಬಗೆಯ ಧೈರ್ಯ ಮೂಡಿದೆ. ನಿರಾಸೆಯ ಆಳಕ್ಕಿಳಿದಿದ್ದವನು ಬೆಳಕಿನ ಶಿಖರವನ್ನು ಕಾಣುತ್ತಿದ್ದೇನೆ. ನಾನು ಖಂಡಿತವಾಗಿಯೂ ಬೆಣ್ಣೆ ಮಾತು ಆಡುವ ನಯವಂಚಕನಲ್ಲ...."

"ನೀವು ಮಾನವರ ಕಡೆಯಿಂದ ಬರುತ್ತಿದ್ದೀರಿ ಅಲ್ಲವೆ?"

"ಹೌದು."

"ಹಾಗಾದರೆ ನೀವು, ನಿಮ್ಮಂಥವರನ್ನು ನಾವು ನಂಬುವುದು ಹೇಗೆ?"

"ಮಾನವರ ಆಶ್ರಯದಲ್ಲಿದ್ದುದು ನನ್ನ ತಪ್ಪೆ?"

"ಅಲ್ಲವೆ?"


"ಅದು ಹೇಗೆ ಮಾಲಾ?"

"ನಿರ್ಭಯರಾಗಿ ವನದಲ್ಲಿ ನಾವು ವಿಹರಿಸುತ್ತಿರುವಾಗ, ಯಾವುದೋ ವಿಷಮ ಘಳಿಗೆಯಲ್ಲಿ ಮಾನವರ ಅಧೀನವಾದುದು ನಿಮ್ಮ ದುರದೃಷ್ಟವಾದರೆ, ಅಷ್ಟಕ್ಕೇ ಸುಮ್ಮನಿರಬೇಡವೆ? ನಿಮ್ಮಂತೆ ಎಲ್ಲರನ್ನೂ ಭಾಗ್ಯಹೀನರನ್ನಾಗಿ ಮಾಡಬೇಕು ಎನ್ನುವ ದುಷ್ಟವೃತ್ತಿ ನಿಮ್ಮ ತಲೆಯೊಳಗೆ ಹೋಗುವುದು ಯಾಕೆ? ಮಾನವರಿಗಿಂತಲೂ ನೀವು ನಮ್ಮವರ ವಿಷಯದಲ್ಲಿ, ಸ್ವಜಾತಿಯವರಲ್ಲಿ, ವಿಶ್ವಾಸದ್ರೋಹ ಬಗೆವುದು ಯಾಕೆ?"

"ಮಾಲಾ, ಇದೆಲ್ಲ ನನಗೊಂದೂ ಗೊತ್ತಿಲ್ಲ. ನಾನು ಯಾರಿಗೂ ಮೋಸ ಮಾಡಿಲ್ಲ; ದ್ರೋಹ ಬಗೆದಿಲ್ಲ. ನಾನು ಈಗ ಕೇಳಿಕೊಳ್ಳುವುದಿಷ್ಟು. ಇದೀಗ ನಾನು ದಿಕ್ಕುಗೆಟ್ಟು ಬಂದಿದ್ದೇನೆ. ನಿಮ್ಮವರು ಇಲ್ಲಿ ನನ್ನನ್ನು ನೋಡಿದಾಕ್ಷಣ ತೀರಿಸಿಬಿಡುತ್ತಾರಂತೆ. ನನಗೆ ನೀನು ಆಶ್ರಯಕೊಡು."

ಗಂಗಾಧರ ತನ್ನ ಕಥೆಯೆಲ್ಲವನ್ನೂ ವನಮಾಲೆಗೆ ವಿವರಿಸಿದ. ತನ್ನ ಜನ್ಮ, ಕಾಡನ್ನು ನೆನೆದು ತನ್ನ ತಾಯಿ ಆಗಾಗ್ಗೆ ಕಣ್ಣೀರು ಸುರಿಸುತ್ತಿದ್ದುದು, ತಂದೆಯ ದರ್ಶನವನ್ನೇ ತಾನು ಪಡೆಯದಿದ್ದುದು ಎಲ್ಲವನ್ನೂ ವಿವರಿಸಿದ. ಕಣ್ಣೀರು ಕೋಡಿಯಾಗಿ ಹರಿದು ತನ್ನನ್ನೇ ಮರೆತು ಗಂಗಾಧರ, ತನ್ನ ದುಃಖಕಥೆಯನು ಹೇಳುತ್ತಿದ್ದಾಗ, ವನಮಾಲಾ ಅವನನ್ನೇ ಎವೆಯಿಕ್ಕದೆ ನೋಡತೊಡಗಿದಳು. ಅವನು ಕಳಂಕರಹಿತ;ನಯವಂಚಕನಲ್ಲ ಎಂದು ಅವಳ ಹೃದಯದೊಳಗಿನಿಂದ ಒಂದು ಧ್ವನಿ ಪ್ರತಿಧ್ವನಿಸಿತು. ಈ ಸುಂದರ ತರುಣನ ನಯವಿನಯ ಸೌಜನ್ಯ ಆ ಬಾಲೆಯಲ್ಲಿ ಮರಕುವನ್ನುಂಟುಮಾಡಿದುದಲ್ಲದೆ ಅವನಲ್ಲಿ ಅವಳಿಗೆ ಅನುರಾಗವುಕ್ಕುವಂತೆ ಮಾಡಿತು.

ಕತೆಯೆಲ್ಲವನ್ನೂ ಕೇಳಿದ ವನಮಾಲಾ ತುಸು ಸಮಯ ಹಾಗೆಯೇ ತಲೆ ಬಾಗಿಸಿ ನಿಂತಿದ್ದು



"ಹಾಗಾದರೆ ನಿಮ್ಮನ್ನು ನಂಬಬಹುದೆ?" ಎಂದು ಕೇಳಿದಳು. ಈಗ ಅವಳ ಕಣ್ಣಲ್ಲಿ ತುಂಟತನ ತುಂಬಿ ತುಳುಕಿತ್ತು. ಅವಳ ತುಟಿಗಳಲ್ಲಿ ಮಂದ ಹಾಸ ಮಿಂಚತೊಡಗಿತ್ತು.

"ಈ ಬಂಡೆಗಲ್ಲಿಗೆ ನನ್ನ ದೊಡ್ಡ ಈ ದೇಹವನ್ನು ಬಡಿದು, ಸೀಳಿ, ಹೃದಯ ಬಿಚ್ಚಿತೋರಿಸಲೇ?"

ವನಮಾಲಾ ಘಳಕ್ ಎಂದು ನಕ್ಕಳು.

"ಬೇಡಿ, ನನ್ನ ರಾಜಾ, ನಿಮ್ಮನ್ನು ನಾನು ನಂಬುತ್ತೇನೆ."

ವನಮಾಲಾ ತನಗರಿವಿಲ್ಲದಂತೇ ತನ್ನ ಸೊಂಡಿಲನ್ನು ಅವನ ಸೊಂಡಿಲಿಗೆ ಹೆಣೆದುಬಿಟ್ಟಿದ್ದಳು. ಮಾತಿಗಿಂತ ಹೆಚ್ಚು ಸುಖ ಮೌನದಲ್ಲಿದ್ದುದರಿಂದ ಅದೆಷ್ಟೋ ಸಮಯ ಅವರು ಹಾಗೆಯೇ ನಿಂತಿದ್ದರು. ಬಳಿಕ ವನಮಾಲಾ ಹೇಳಿದಳು:

"ನೀವು ಸ್ವಲ್ಪ ದಿನಗಳು ನಮ್ಮವರ ಕಣ್ಣಿಗೆ ಬೀಳುವುದು ಬೇಡ. ನಿಮಗೆ ತಕ್ಕ ನೆಲೆಯೊಂದನ್ನು ನಾನು ತೋರಿಸಿಕೊಡುತ್ತೇನೆ. ನೀವು ಅಲ್ಲೇ ಇರುವಿರಂತೆ. ಬಳಿಕ ನಮ್ಮ ತಂದೆಗೆ ತಿಳಿಸಿ, ನಮ್ಮವರನ್ನೆಲ್ಲ ಸಮಾಧಾನಗೊಳಿಸಿದ ಮೇಲೆ...."

"ನಾನು ರಾಜ, ನೀನು ರಾಣಿ ಆಗೋಣ."

"ಥೂ, ನೀವು ತುಂಬ ಕೆಟ್ಟೋರು."

ಬಳಿಕ ವನಮಾಲಾ ಕಪಿಲಾ ನದಿಯೊಳಗೆ ಇಳಿದಳು. ಗಂಗಾಧರ ಅವಳನ್ನು ಹಿಂಬಾಲಿಸಿದ. ಇಬ್ಬರೂ ಈಜಿ ಆಚೆ ದಡ ಸೇರಿದ ಮೇಲೆ ಎರಡು ಫರ್ಲಾಂಗ್ ಮುಂದೆ ನಡೆದು ಹೋದರು. ಅಲ್ಲಿ ಆನೆಯಾಕಾರದ ನಾಲ್ಕು ದೊಡ್ಡ ಬಂಡೆಗಲ್ಲುಗಳು ಯಾರೋ ಎತ್ತಿ ಇರಿಸಿದಂತೆ ಭೂಮಿಯಿಂದ ಮೇಲೆದ್ದು ನಿಂತಿದ್ದುವು. ಎರಡು ಬಂಡೆಗಲ್ಲುಗಳ ನಡುವೆ ಒಂದಾನೆ ಪ್ರವೇಶಿಸುವಷ್ಟು ಮಾರ್ಗವಿತ್ತು. ಸುತ್ತಲೂ ಗಿಡಬಳ್ಳಿಗಳು ದಟ್ಟವಾಗಿ ಹೆಣೆದಿದ್ದುದರಿಂದ ಅಲ್ಲಿ ಅಡಗಿದರೆ ಸಾಮಾನ್ಯವಾಗಿ ಇತರರು ಕಂಡುಹಿಡಿಯಲು ಸಾಧ್ಯವಿಲ್ಲ ಎನ್ನುವುದು ವನರಾಣಿಯಾದ

ವನಮಾಲೆಗೆ ತಿಳಿದಿತ್ತು.

ಗಂಗಾಧರನನ್ನು ಅಲ್ಲಿ ಇರುವಂತೆ ತಿಳಿಸಿ, ತಾನು ಆಗಾಗ್ಗೆ ಬಂದು ಯೋಗಕ್ಷೇಮ ವಿಚಾರಿಸಿಕೊಳ್ಳುವುದಾಗಿ ಭರವಸೆಯಿತ್ತು ಮನಸ್ಸಿಲ್ಲದ ಮನಸ್ಸಿನಿಂದ ಗಂಗಾಧರನನ್ನಗಲಿ, ಅವನ ಒಪ್ಪಿಗೆ ಪಡೆದು, ಮತ್ತೆ ಅವಳು ನದಿಯನ್ನು ದಾಟಿ ಈಚೆ ದಡ ಸೇರಿದಳು.

*

ದಿನಗಳು ಕಳೆಯುತ್ತಿದ್ದವು. ಗಂಗಾಧರ ಕೈದಿಯಂತೆ ಅಲ್ಲೆ ಇದ್ದ. ವನಮಾಲಾ ಆಗಾಗ್ಗೆ ಬಂದು ಅವನನ್ನು ವಿಚಾರಿಸಿಕೊಳ್ಳುತ್ತಿದ್ದಳು.

ಒಂದು ಸುಂದರ ರಾತ್ರಿ ಅವರೆಲ್ಲ ಕೇಕೆ ಲಹರಿಯ ಉನ್ಮಾದದಲ್ಲಿ ಮುಳುಗಿದ್ದಾಗ ವನಮಾಲಾ, ಗಂಗಾಧರನ ವಿಷಯವನ್ನು ಹೇಗೆ ತಿಳಿಸುವುದು ಎಂದು ಹಿಂದೆಮುಂದೆ ನೋಡುತ್ತಾ ತಂದೆಯ ಬಳಿ ಸುಳಿದಾಡಹತ್ತಿದಳು.

ಮಗಳು ಎಂದಿನಂತೆ ಇಲ್ಲದೆ ಏನೋ ವ್ಯಾಕುಲಗ್ರಸ್ತಳಾಗಿರುವುದನ್ನು ಭೀಮರಾಯ ಗಮನಿಸಿದ. ಒಬ್ಬಳೇ ಮಗಳಾದ, ಪ್ರೇಮದ ಪುತ್ಥಳಿಯಾದ ವನಮಾಲೆಯಲ್ಲಿ ಅವನಿಗೆ ಅತ್ಯಧಿಕ ಪ್ರೇಮ. ಇಂದು ಅವಳು ಯಾಕೋ ಅತ್ಯಂತ ಖಿನ್ನಳಾಗಿರುವುದನ್ನು ಕಂಡು ಅವನು ಪ್ರಶ್ನಿಸಿದ :

"ಮಾಲಾ, ಯಾಕಮ್ಮಾ ಇಂದು ಹೀಗಿದ್ದೀಯಾ ?"

"ಏನಣ್ಣಾ !

"ಏನೋ ಒಂದು ಥರಾ ಇದ್ದೀ !"

"ಏನೂ ಇಲ್ಲಣ್ಣಾ."

"ತಲೆ ಏನಾದರೂ ನೋಯುತ್ತಾ ಮಗೂ ?"

ಭೀಮರಾಯ ಮಗಳ ಹಣೆಯ ಮೇಲೆ ತನ್ನ ಸೊಂಡಿಲನ್ನೆತ್ತಿಟ್ಟ; ಮೈದಡವಿದ. ಬಳಿಕ ಮೃದುವಾಗಿ ಕೇಳಿದ:

"ನನ್ನೊಂದಿಗೂ ಹೇಳಬಾರದೇ ಚಿನ್ನಾ? ಕಣ್ಣಿನಲ್ಲಿ ನೀರು ತುಳುಕಿದೆ. ಹೊಟ್ಟೆ ನೋಯುತ್ತಾ ತಾಯೀ ?"

"ಅದೆಲ್ಲ ಏನೂ ಇಲ್ಲಣ್ಣ. ದೊಡ್ಡದೊಂದು ತೊಡಕಿಗೆ ನಾನು ಸಿಕ್ಕಿಕೊಂಡಿದ್ದೇನೆ. ಅದನ್ನು ಬಿಡಿಸಬೇಕಾದವರು ನೀವು. ಆದರೆ ನೀವು ದುಡುಕಿದಿರೊ ಅನರ್ಥ ನಡೆದು ಹೋಗುತ್ತೆ. ನನ್ನ ಬಾಳು ಕಮರಿಹೋಗುತ್ತೆ. ನೀವು ಭರವಸೆ ಕೊಟ್ಟರೆ ಹೇಳ್ತೀನಣ್ಣಾ !"

ತಂದೆಯಿಂದ ವಾಗ್ದಾನ ಪಡೆದ ಮೇಲೆ ವನಮಾಲಾ ಗಂಗಾಧರನ ಕಥೆಯೆಲ್ಲವನ್ನೂ ತಿಳಿಸಿ ಅವನನ್ನು ತಾನು ಅಡಗಿಸಿರುವ ರಹಸ್ಯವೆಲ್ಲವನ್ನೂ ಬಯಲಿಗೆ ತಂದಳು.

ವನಮಾಲಾ ಹೇಳಿದ ಸುದ್ದಿಯನ್ನು ಕೇಳಿ ಭೀಮರಾಯನ ಸುತ್ತ ನೆರೆದಿದ್ದ ಚೆನ್ನಬಸಪ್ಪ, ಮುದ್ದು ವೀರಪ್ಪ, ಶಾಂತಮಲ್ಲಪ್ಪ, ರಂಗರಾಯ, ಅನಂತರಾಯ, ಗೋವಿಂದರಾಯ, ಸಿಂಗೇಗೌಡ, ಕಾಟೇಗೌಡ, ಮಾರೇಗೌಡ, ಲಕ್ಷಮ್ಮ, ಹೊನ್ನಮ್ಮ, ತಿಮ್ಮಮ್ಮ ಎಲ್ಲರೂ ತಮ್ಮ ತಮ್ಮ ಸೊಂಡಿಲನ್ನು ಹಾಗೆ ಹೀಗೆ ಬೀಸಿ ರೋಷಭೀಷಣರಾಗಿ ಕೂಗು ಹಾಕಿದರು :

"ಶುದ್ಧ ಹಂಬಗ್. ಮಾನವರ ಕಡೆಯಿಂದ ಬಂದವರನ್ನು ನಂಬೋದೂ ಬೆಂಕಿಗೆ ಬೀಳೋದೂ ಎರಡೂ ಒಂದೇ. ನಡೀರಿ, ಆ ಗಂಗಾಧರನನ್ನು ಈಚೆಗೆ ಎಳೆತಂದು ಹತ ಮಾಡಿಬಿಡೋಣ."

ವನಮಾಲೆ ಹೌಹಾರಿದಳು. ಎಲ್ಲ ಸೇರಿ ಅವನನ್ನು ಏನು ಮಾಡಿ ಬಿಡುತ್ತಾರೊ ಎಂದು ಅಳುಕಿದಳು. ಆದರೆ ಭೀಮರಾಯ ಕಣ್ಮುಚ್ಚಿ, ಏನೋ ಯೋಚಿಸಿಕೊಂಡು ಅವರೆಲ್ಲರನ್ನೂ ಸಮಾಧಾನಗೊಳಿಸುವ ರೀತಿಯಲ್ಲಿ ಹೇಳಿದ:

"ದುಡುಕೋದು ಬೇಡ. ಸ್ವಲ್ಪ ದಿನಗಳು ಅವನ ಚಲನವಲನಗಳ ಬಗ್ಗೆ ಪರೀಕ್ಷಿಸೋಣ. ಆಮೇಲೆ ಯಾವುದೇ ನಿರ್ಧಾರ ಕೈಗೊಳ್ಳುವರಂತೆ."

ರಂಗ ಮತ್ತು ಸಿದ್ಧ, ಭೀಮರಾಯನ ಆಣತಿ

ಯಂತೆ ಗಂಗಾಧರನನ್ನು ಕರೆತರಲು ವನಮಾಲೆಯೊಂದಿಗೆ ನದಿಯತ್ತ ಧಾವಿಸಿದರು.

*

ವಂಚಕತನವನ್ನು ಯಶಸ್ವಿಯಾಗಿ ನೆರವೇರಿಸುವ ವಿಶ್ವಾಸಘಾತುಕನಂತಿಲ್ಲದೆ, ಗಂಗಾಧರ ನಿಷ್ಕಾಪಟ್ಯಮೂರ್ತಿಯಾಗಿ ಕಳಂಕರಹಿತನಾಗಿ ಸಚ್ಚರಿತ್ರನಾಗಿ ಸಜ್ಜನನಾಗಿ ನಯವಿನಯ ಸೌಜನ್ಯವೇ ರೂಪುಗೊಂಡೆಂಬಂತಿರುವ ಸುಂದರ ತರುಣನಾಗಿ ಅವರೆಲ್ಲರ ಪ್ರೀತಿ ವಿಶ್ವಾಸಗಳನ್ನು ಬಹು ಬೇಗನೇ ಗಳಿಸಿಕೊಂಡ; ಕಾಡಾನೆಯಾದ.

ಯಾವ ಕಾಡಾನೆಗಳಿಂದ ನಾಡಾನೆಗಳು ವಿರೋಧಿಗಳೆಂದು ಪರಿಗಣಿಸಲ್ಪಟ್ಟಿರುವುವೋ, ಅದು, ಆ ನಾಡಾನೆ, ಗಂಗಾಧರ, ವನಮಾಲೆಯಿಂದ ರಕ್ಷಿಸಲ್ಪಟ್ಟು, ಆಕೆಯ ಪ್ರೇಮಕ್ಕೆ ಪಾತ್ರನಾಗಿ, ಆ ಬಳಗದ ಮುಖಂಡನಾದ ಭೀಮರಾಯನ ದಕ್ಷ, ಬಲಿಷ್ಠ ಗುಂಪಿನಲ್ಲಿ ಅವನೂ ಒಬ್ಬನಾದ.

ವನಮಾಲೆಯ ಕರವನ್ನು ಗಂಗಾಧರನಿಗೊಪ್ಪಿಸಿದ ದಿನ ವನವೆಲ್ಲ ಹರ್ಷದಿಂದ ಬಿರಿಯಿತು. ಅಂದು ಅವರು ಬೆಟ್ಟವೇ ಬಿರಿಯುವಂತೆ ಬೊಬ್ಬೆ ಹಾಕಿ ಹರ್ಷೋದ್ಗಾರದೊಂದಿಗೆ ನಲಿದರು. ವನ್ಯ ಪ್ರಾಣಿಗಳು ಆ ಸುಂದರ ಜೋಡಿಯ ಸಮ್ಮಿಳನವನ್ನು ಕಂಡು ಸಂತಸಗೈದವು; ಆಶೀರ್ವಾದ ಮಾಡಿದವು.

ಆಗ ವನದಲ್ಲಿ—

ಹೆಬ್ಬಾವು ಭುಸ್ ಎಂದಿತು. ಜಿಂಕೆ ಜಿಗಿದು ಹಾರಿತು. ಮುಳ್ಳು ಹಂದಿ ತಟಪಟನೆ ತನ್ನ ಮೈಯ ಮುಳ್ಳುಗಳನ್ನು ಕೆಳಗೆ ಉದುರಿಸಿತು. ಹುಲಿರಾಯ ಆಓ ಎಂದು ಗರ್ಜಿಸಿದ. ಕಾಡು ಬೆಕ್ಕು ಮಿಂಯಾಂವ್ ಎಂದಿತು. ಕಾಡುಕೋಳಿ ಕೊಕ್ಕೊಕ್ ಎಂದಿತು. ನರಿರಾಯ ಬಾಲ ಬಡಿದ. ತೋಳರಾಯ ಮೀಸೆ ತಿರುವಿದ. ಹಕ್ಕಿಪಕ್ಷಿಗಳು "ಸರಸ ಸಾಮದಾನ...." ಎಂದು ಸಂಗೀತ

ವನ್ನು ಹಾಡಿದವು.

ಅಂದು ಆ ಬೆಳುದಿಂಗಳ ರಾತ್ರಿಯಲ್ಲಿ ಆ ದಂಪತಿಯರು ವಿಹಾರಾರ್ಥ ಹೊರಟರು; ಈರ್ವರೇ ಹೊರಟರು. ಆ ರಾತ್ರಿ ಅವರು ವನವೆಲ್ಲ ಸುತ್ತಾಡಿದರು, ಅಂದು ಅವರಿಗೆ ಹುಲ್ಲೂ ಬೇಕಿರಲಿಲ್ಲ; ನೀರೂ ಬೇಕಿರಲಿಲ್ಲ. ಒಬ್ಬರ ಸೊಂಡಿಲಿಗೆ ಮತ್ತೊಬ್ಬರು ಸೊಂಡಿಲು ಸೇರಿಸಿ, ಆಲಿಂಗಿಸಿಕೊಂಡು ವನವೆಲ್ಲ ಸುತ್ತಿಸುತ್ತಿ ಸಂತಸಗೈಯುವುದರೊಳಗೇ ಅಂದಿನ ಆ ರಾತ್ರಿ ಕಳೆಯಿತು.

ಬೆಳಕು ಹರಿಯುವುದಕ್ಕೆ ಮೊದಲು ವನಮಾಲಾ ಪತಿಯ ವಕ್ಷಸ್ಥಳದ ಮೇಲೆ ತನ್ನ ತಲೆಯಿಟ್ಟು ಹೇಳಿದಳು:

"ರಾಜಾ, ನನ್ನದೊಂದು ಬಯಕೆ ಇದೆ!"

"ಬಯಕೆಯೆ? ಅಪ್ಪಣೆ ಎಂದು ಹೇಳು."

"ಥೂ, ನೀವು ಹಾಗೆಲ್ಲ ಮಾತಾಡಿದರೆ ನಿಮ್ಮ ಹತ್ತಿರವೆ ನಾನು ಸುಳಿಯೋಲ್ಲ."

"ಹಾಗೆ ಮಾಡಿದರೆ ನಾನು ಬದುಕೋಲ್ಲ."

"ಅಬ್ಬಬ್ಬಾ, ನೀವು ತುಂಬ ಕೆಟ್ಟೋರು."

"ನೀನು ಅದಕ್ಕಿಂತಲೂ,"

"ಹೋಗಿ ರಾಜಾ, ನೀವು ನನ್ನ ಮಾತು ಕೇಳೋದೇ ಇಲ್ಲ."

ಗಂಗಾಧರ ಅವಳನ್ನು ಆಲಂಗಿಸಿಕೊಂಡು "ಹೇಳಬಾರದೆ ಚಿನ್ನಾ?" ಎಂದ.

ವನಮಾಲೆ ಹೇಳಿದಳು:

"ನನಗೆ ನಿಮ್ಮ ಹುಟ್ಟಿದ ಊರು, ಆ ದೇಗುಲ ಎಲ್ಲ ನೋಡಿ ಬರಬೇಕೆಂಬ ಆಸೆಯಿದೆ. ಯಾರಿಗೂ ತಿಳಿಸಕೂಡದು. ನಾವಿಬ್ಬರೇ ಹೋಗಿ ಬರೋಣ."

ಗಂಗಾಧರ ಹೌಹಾರಿದ. ಏನು ಮತ್ತೆ ತನ್ನ ಊರಿಗೆ ಅಡಿಯಿಡುವುದೆ? ಥತ್, ಈ ಹೆಂಗಸರಿಗೆ ಏನು ಚಪಲ ಬಯಕೆಗಳಪ್ಪ. ಇಲ್ಲದ

ಸಲ್ಲದ ಅನರ್ಥ ಅನಿಷ್ಟ ಅಪಾಯಕಾರೀ ಬಯಕೆಗಳು.

ಆ ಕಾಲದಲ್ಲಿ ನಾಡಿನಲ್ಲಿದ್ದ ಸೀತಾದೇವಿ ಕಾಡು ನೋಡಬೇಕು ಎಂದು ಅಪೇಕ್ಷೆಪಟ್ಟಳು. ವಿನಾಶ ತಂದುಕೊಂಡಳು. ಈ ಕಾಲದಲ್ಲಿ ಈ ಸೀತೆ ಅಲ್ಲ ವನಮಾಲೆ ಕಾಡಿನಲ್ಲಿರುವವಳು ನಾಡು ನೋಡಬೇಕು ಎಂದು ಅಪೇಕ್ಷೆಪಡುತ್ತಿದ್ದಾಳೆ.

ಇದೇನು ಅನರ್ಥಕ್ಕೊ? ಅನಿಷ್ಟ ಪರಂಪರೆಗೊ?

"ಬೇಡ ಮಾಲಾ. ಆ ದರಿದ್ರದ ಮಾನವರಿರುವ ಕಡೆ ನಾವು ಸುಳಿದಾಡುವುದೇ ಬೇಡ. ಇಷ್ಟಕ್ಕೂ ನಾಡಿನಲ್ಲಿ ಏನಿದೆ, ಅಂತೀಯಾ? ಬಣ ಬಣ್ಣದ ಬಂದಿಷ್ಟು ಕಟ್ಟಡಗಳು ಅಷ್ಟೆ.."

"ನೋಡಿದಿರಾ! ನೀವು ಯಾಕೆ ಭಯಪಡ್ತೀರಿ? ರಾತಿ ಎಲ್ಲ ಮಲಗಿದ್ದಾಗ ಊರೊಳಗೆ ಪ್ರವೇಶಿಸೋಣ. ಒಂದು ಸುತ್ತು ನೀವು ವರ್ಣಿಸಿರುವ ದೇವಾಲಯವನ್ನು ಪ್ರದಕ್ಷಿಣೆ ಹಾಕಿಕೊಂಡು ಬೆಳ್ಳಿ ಮೂಡುವ ಮೊದಲೇ ಊರು ಬಿಟ್ಟುಬಿಡೋಣ; ಬೆಳಗಾಗುವುದರೊಳಗೇ ನಾವು ಬಂದು ವನ ಸೇರಿಕೊಂಡರಾಯಿತು."

ಪುಟ್ಟ ಹೆಂಡತಿಯ ಕೋರಿಕೆಯನ್ನು ಗಂಗಾಧರನಿಂದ ಅಲ್ಲಗಳೆಯಲಾಗಲಿಲ್ಲ. ಅವನು ಆಗಲೆಂದು ಒಪ್ಪಿಕೊಂಡ.

"ಆಗಲಿ ಚಿನ್ನಾ, ನಾಳೆ ರಾತ್ರಿ ನಾವು ಹೊರಡೋಣ. ಹೊತ್ತಿಗೆ ಮುಂಚೆ ಹೊರಟು ಬೇಗ ಹಿಂದಿರುಗಿ ಬಿಡೋಣ."

*

ಪಶ್ಚಿಮದ ವನ-ಬೆಟ್ಟ-ಗುಡ್ಡಗಳ ಮೇಲೆ ಮಾರನೆಯ ದಿನ ಕತ್ತಲು ಕವಿದೊಡನೆ ವನಮಾಲೆಯೊಂದಿಗೆ ಗಂಗಾಧರ ವನದಿಂದ ಹೊರಬಿದ್ದ.

ಅವರು ಕೆಲವೇ ದೂರ ಬಂದಿರುವುದರೊಳಗೆ ಗೋಲಿಕಣ್ಣಿನ ಕಪ್ಪು ಬೆಕ್ಕೊಂದು ಮಿಂಯಾಂವ್ ಎಂದುಕೊಂಡು ಇದಿರು ಬಂದಿತು. ಮತ್ತೆ ನಾಲ್ಕು ಹೆಜ್ಜೆ ಮುಂದೆ ಹಾಕುವುದರಲ್ಲೇ ಆಗಸದಿಂದ ಥಳಥಳಾ ಎಂದು ಒಂದು ಮೂಗುತಿ ಕೆಳಗೆ ಬಿದ್ದಹಾಗಾಯಿತು.

ಗಂಗಾಧರನ ಎಡಗಣ್ಣು ತಟವಟ ಎಂದಿತು; ಯಾಕೋ ಏನೊ ನೀರು ತುಳುಕಿತು. ಅವನ ಭುಜ ಕಂಪಿಸಿತು. ಬಲಿಷ್ಠವಾದ ಆ ಕಾಲುಗಳು ಇದ್ದಕ್ಕಿದ್ದಂತೆ ಥರಥರನೆ ನಡುಗಿದುವು. ಅವನ ಎದೆ ಧಸಕ್ಕೆಂದಿತು.

ಕಪಿಲಾ ನದಿ ಅಲ್ಲಿ ಸುತ್ತುಗಟ್ಟಿ ಹರಿದಿತ್ತು. ನದಿಯ ದಂಡೆಯಲ್ಲೇ ಹೋದರೆ ಬಳಸಬೇಕಾಗುತ್ತದೆಂದು ಅವರು ನೀರೊಳಗೆ ಇಳಿದರು; ನದಿಯನ್ನು ದಾಟಿದರು.

ಬಾನಿನಲ್ಲಿದ್ದ ಸಪ್ತರ್ಷಿಮಂಡಲ ಇನ್ನೂ ನಡುಮಧ್ಯದಲ್ಲೇ ಇತ್ತು. ಅದು ಅವರಿಗೆ ಕಾಲವನ್ನು ಗುರುತಿಸುವ ಗಡಿಯಾರ. ಇನ್ನೂ ಮಧ್ಯ

ರಾತ್ರಿಯಾಗಿಲ್ಲ ಎಂದವರು ಮಾತಾಡಿಕೊಂಡರು. ಇಷ್ಟರಲ್ಲಿ ಅವರು ವನವನ್ನು ದಾಟಿ ಊರಿನ ಸಮೀಪಕ್ಕೆ ಬಂದುದಾಗಿತ್ತು.

ಕಪಿಲಾ ನದಿಯ ಉದ್ದಕ್ಕೂ ಬಾಳೆ ತೋಟಗಳಿದ್ದರೂ ಬರುವಾಗ ನೋಡಿಕೊಳ್ಳೋಣವೆಂದು ಎಲ್ಲಿಗೂ ಪ್ರವೇಶಿಸದೆ ಊರತ್ತ ಬಿರುಬಿರನೆ ಧಾವಿಸಿದರು. ಅವರೀಗ ನಡೆಯನ್ನು ಮಂದಗೊಳಿಸಿದರು ; ನಿಧಾನವಾಗಿ ಹೆಜ್ಜೆಯಿಟ್ಟರು; ಊರೊಳಗೆ ಪ್ರವೇಶಿಸಿದರು.

ರಾಜಬೀದಿಯಲ್ಲಿ ನಡೆದರೆ ಅಲ್ಲಿ ಉದ್ದಕ್ಕೂ ಮಾನವರು ಹೊರಗಡೆಯೆಲ್ಲ ಸಾಲುಸಾಲಾಗಿ ಮಲಗಿರುತ್ತಾರೆಂದು ಅರಿತಿದ್ದ ಗಂಗಾಧರ, ದೇಗುಲಕ್ಕೆ ಸಮೀಪವಾದ ನದಿಯ ದಂಡೆಯಲ್ಲಿನ ದಾರಿ ಹಿಡಿದು ವನಮಾಲೆಯನ್ನು ದೇಗುಲದ ಬಳಿ ಕರೆದೊಯ್ದ.

ಗಂಗಾಧರನಿಗೆ ಹಳೆಯ ನೆನಪು ಮರುಕಳಿಸಿ ಬಂದಿತು. ತಾನು ಆಟವಾಡಿ ಬೆಳೆದಿದ್ದ ತಾಯ್ನೆಲವನ್ನು ತನ್ನ ಚಿತ್ತಭಿತ್ತಿಯಿಂದ ತೆಗೆಯಲು ಅವನೆಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಉಸ್ಮಾನ್ ಸಾಬಿಯ ರೂಪ ನಗುನಗುತ್ತಾ ಮುಂದೆ ಮುಂದೆ ಬಂದ ಹಾಗಾಯಿತು. ಗಂಗಾಧರನ ಕಣ್ಣಲ್ಲಿ ನೀರು ತುಳುಕಿತು.

ಆ ಊರು ಪ್ರಶಾಂತವಾಗಿ ನಿದ್ರಿಸುತ್ತಿತ್ತು. ಎಲ್ಲರೂ ಎಲ್ಲಿ ಅಂದರೆ ಅಲ್ಲೆ ಮುದುಡಿಕೊಂಡು ಬಿಟ್ಟಿದ್ದರು. ಬೀದಿ ದೀಪಗಳು ಲಕಲಕನೆ ಕಣ್ಣು ಮಿಟುಕಿಸುತ್ತಿದ್ದವು. ದೇಗುಲದ ಎತ್ತರವಾದ ಗೋಪುರದ ಮೇಲೆ ಚೇಳಿನ ಕೊಂಡಿಯಂತೆ ಬಾಗಿರುವ ವಿಮಾನದ ನಡುವೆ ತೂಗಾಡುತ್ತಿದ್ದ ಕೆಂಪುದೀಪ ನೂರೆನೂರೆಯಾಗಿ ಅಲೆಯಲೆಯಾಗಿ ಕೆಂಪು ಬೆಳಕನ್ನು ಚೆಲ್ಲಿ, ಆ ಕೆಂಪು ಬೆಳಕಿನಿಂದ ವಿಮಾನಕ್ಕೆ ಬಡಿದಿದ್ದ ಚಿನ್ನದ ತಗಡಿನ ಮೇಲೆ ಹಾಯ್ದು, ಮಿಂಚುತ್ತ, ಬಹು ದೂರದ ವರೆಗೂ ಆ ಗೋಪುರ, ಆ ವಿದ್ಯುದ್ದೀಪ ಕಣ್‌ಕೋರೈಸುತ್ತ ಕಾಂತಿಯನ್ನು ಬೆಳಗಿತ್ತು.

ವನಮಾಲೆ ಪತಿಯೊಂದಿಗೆ ದೇಗುಲವನ್ನು ಒಂದು ಸುತ್ತು ಪ್ರದಕ್ಷಿಣೆ ಹಾಕಿದಳು. ಕಲಾಕೌಶಲದ ಆ ದೇಗುಲವನ್ನು ನೋಡಿ ವನಮಾಲೆಗಾದ ಸಂತಸ ಅಷ್ಟಿಷ್ಟಲ್ಲ. ಎಂಥ ಭವ್ಯವಾದ ದೇವಾಲಯ! ನಿಜಕ್ಕೂ ಈ ಮಾನವ ವಿಧಾತನಿಂದ ಸೃಷ್ಟಿಸಲ್ಪಟ್ಟ ಒಂದು ವಿಚಿತ್ರ ಪ್ರಾಣಿಯೇ ಆಗಿರಬೇಕು! ಮಾನವ ಬುದ್ಧಿವಂತ ಎನ್ನುವುದನ್ನು ಅಲ್ಲಗಳೆಯುವುದು ಯಾರಿಂದಲೂ ಸಾಧ್ಯವಿಲ್ಲ. ಸೊಂಡಿಲನ್ನು ಮೇಲೆತ್ತಿ ವಾಹವ್ವಾ ಎಂದು ತನ್ನಷ್ಟಕ್ಕೆ ತಾನೇ ತಲೆದೂಗಿದಳು ವನಮಾಲಾ.

ವನಮಾಲೆಯ ಕಾಲುಗಳಿಗಿಂತ ಎರಡರಷ್ಟು ದಪ್ಪವಿರುವ, ದೇಗುಲದ ಸುತ್ತಲೂ ಚತುರನಾದ ಮಾನವನಿಂದ ಕುಸುರಿ ಕೆಲಸ ಮಾಡಿ ನಿಲ್ಲಿಸಿರುವ ಪ್ರಾಕಾರದ ಕಂಭಗಳು ಆಹಾ! ಈ ಮಾನವ ಕಗ್ಗಲ್ಲನ್ನು ಮೈದಾಹಿಟ್ಟು ಹಿಚುಕುವಂತೆ ಹಿಚಿಕಿ ಬಹುಶಃ ಆಮೇಲೆ ಚಿತ್ರವಿಚಿತ್ರವಾದ ಈ ಬೆಡಗಿನ ಕೆಲಸವನ್ನು ಕೈಗೊಂಡನೊ ಏನೋ? ಒಂದೊಂದು ಕಂಭದಲ್ಲೂ ಬಗೆ ಬಗೆಯ ಪುಷ್ಪಗಳು ಅರಳಿವೆ. ಬಳ್ಳಿ ಹಾಗೆ ಸುತ್ತಿ ಹೀಗೆ ನೇತಾಡುತ್ತಿವೆ.

ಅಲ್ಲಿ ಒಂದು ಸಾಲಿನಲ್ಲಿ ಉದ್ದಕ್ಕೂ ತಮ್ಮವರು ಚಿತ್ರಿಸಲ್ಪಟ್ಟಿದ್ದಾರೆ. ಮಾನವರು ತಮ್ಮನ್ನು ಎಷ್ಟು ಸೊಗಸಾಗಿ ಎಷ್ಟೊಂದು ಭಂಗಿಗಳಲ್ಲಿ ರಮ್ಯವಾಗಿ ಕಡೆದಿದ್ದಾರೆ. ಒಂದು ಆನೆ ಪಾದವೆತ್ತಿ ನಿಂತಿದೆ. ಮತ್ತೊಂದು ಸೊಂಡಿಲನ್ನು ಮುಂದೆ ಚಾಚಿದೆ. ಅಲ್ಲೆರಡು ಮೈಗೆ ಮೈ ತಾಗಿಸಿ ನಿಂತಿವೆ: ಅಲ್ಲಿ ಉದ್ದಕ್ಕೂ ಒಂಟೆಗಳ ಸಾಲು, ಕುದುರೆ, ಸೇನೆ, ಕತ್ತಿ, ಕಠಾರಿ, ಭರ್ಜಿ ಎಲ್ಲ. ಮತ್ತೊಂದು ಸಾಲಿನಲ್ಲಿ ಸೀತೆ ಅಶೋಕವನದಲ್ಲಿ ಕುಳಿತಿದ್ದಾಳೆ. ಹನುಮಂತ ಮರದ ಮೇಲೆ ಕುಳಿತು ರಾಮ ರಾಮ ಎನ್ನುತ್ತಿದ್ದಾನೆ. ಅಲ್ಲೊಂದು ಸಾಲಿನಲ್ಲಿ ಶ್ರೀಕೃಷ್ಣ ಅರ್ಜುನನಿಗೆ ವಿಶ್ವರೂಪದರ್ಶನ ನೀಡುತ್ತಿದ್ದಾನೆ.

ಏನು ಕಲಾಕೌಶಲ ಈ ಮಾನವನದು! ಎಂಥ ಅದ್ಭುತ ಪವಾಡ ಈತನದು!

ವಹವ್ವಾ ಎಂದು ತಲೆದೂಗಿದಳು ವನಮಾಲಾ.

ಗಂಗಾಧರ ಈಗ ಪಿಸುಪಿಸನೆ ನುಡಿದ:

"ಮಾಲಾ, ಇಷ್ಟು ನೋಡಿದುದು ಸಾಕು. ಇನ್ನು ಹೊರಟುಬಿಡೋಣ."

"ಹೂಂ."

"ನಿನಗೆ ತೃಪ್ತಿಯಾಯಿತೆ ಮಾಲಾ?"

"ಇದನ್ನೆಲ್ಲ ನೋಡಿದ ಮೇಲೆ ಕಾಡಿಗಿಂತ ನಾಡೇ ವಾಸಿ, ಇಲ್ಲೇ ಇದ್ದುಬಿಡೋಣ ಎನ್ನಿಸುತ್ತೆ."

"ಸರಿಯಾಗಿಹೋಯ್ತು ಬಿಡು."

"ಅದೇನೊಂದ್ರೆ, ಅಲ್ಲಿ ಎತ್ತರಕ್ಕೆ ನಿಲ್ಲಿಸಿರೋದು?"

"ತೇರು."

"ಹಾಗಂದರೆ?"

"ರಥ."

"ಥೂ ನೀವು ತುಂಬ ಕೆಟ್ಟೋರು, ಸರಿಯಾಗಿ ವಿವರಿಸಿ ಹೇಳೋದೇ ಇಲ್ಲ."

"ಹೇಳ್ತೀನಿ ಮಾಲಾ, ಕೋಪಿಸ್ಕೊಬೇಡ. ಈ ದೇಗುಲದಲ್ಲಿರುವುದು ಪ್ರತಿಷ್ಠಾಪನ ಮೂರ್ತಿ. ಯಾವುದೋ ಕಾಲದಲ್ಲಿ, ಯಾರೋ ಪುಣ್ಯಾತ್ಮರಿಂದ ಅದೆಷ್ಟು ನೂರೋ ಸಹಸ್ರವೋ ವರ್ಷಗಳ ಹಿಂದೆ ಈ ಮೂರ್ತಿ ಇಲ್ಲಿ ಕಡೆದು ನಿಲ್ಲಿಸಲ್ಪಟ್ಟಿತಂತೆ. ಅಗೋ, ನೋಡು, ಆ ಸಾಲಿನ ಹಿಂಭಾಗದ ಕೊಟಡಿಯಲ್ಲಿ 'ಉತ್ಸವ ಮೂರ್ತಿ' ಇಟ್ಟಿದ್ದಾರೆ. ಅದು ಭಂಗಾರದ್ದು. ಅದೆಷ್ಟು ಲಕ್ಷವೋ ಏನೋ ಬೆಲೆ ಬಾಳುತ್ತಂತೆ. ಆ ಉತ್ಸವಮೂರ್ತಿಗೆ ಅಲಂಕಾರ ಮಾಡಿದಾಗ ನೋಡಬೇಕು ಮಾಲಾ. ಅವೆಲ್ಲವೂ ವಜ್ರ, ವೈಡೂರ್ಯ ಮುಂತಾದ್ದರಿಂದ ಅಣಿಗೊಳಿಸಲ್ಪಟ್ಟ ಬಹು ಬೆಲೆ ಬಾಳುವ ಆಭರಣಗಳು. ಎಲ್ಲ ಕಣ್ಣು ಕೋರೈಸುವ ಹಾಗೆ ಇರುತ್ತೆ."

"ಅಹಾ!"

"ವರ್ಷಕ್ಕೊಂದು ಸಲ ಮಾನವರು ರಥೋತ್ಸವ ಎಂದು ಆಚರಿಸುತ್ತಾರೆ. ಆಗ ಈ ಉತವ ಮೂರ್ತಿಯನ್ನು ಅಲಂಕರಿಸಿ ಆ ರಥದಲ್ಲಿ ಇಡುತ್ತಾರೆ. ಆರು ದಿನಗಳು ಕೋಲಾಹಲವಾಗಿ ಉತ್ಸವವನ್ನು ಆಚರಿಸುತ್ತಾರೆ. ಆಗ ಇಲ್ಲಿ ಲಕ್ಷ ಲಕ್ಷ ಜನ ಸೇರುತ್ತಾರೆ."

"ಹೌದಾ?"

"ಹೂಂ. ವಿವಿಧ ಕಾರ್ಯಕ್ರಮಗಳಿಗೆ ಒಂದು ಸಮಿತಿ ನಿಯಮಿಸಲ್ಪಟ್ಟು ಅದರಂತೆ ಎಲ್ಲ ನಡೆಸಲ್ಪಡುತ್ತೆ. ಸಂಗೀತ, ನಾಟಕ, ಭಾಷಣ,

ಹರಿಕಥೆ ಎಲ್ಲ !"

"ಹೂಂ."

"ಪ್ರತಿವರ್ಷವೂ ಆ ರಥವನ್ನು ನಾನೇ ಎಳೆಯುತ್ತಿದ್ದವನು ಮಾಲಾ."

"ಹೌದಾಂದ್ರೆ ?"

"ಹೌದು, ಮಾಲಾ."

"ಈಗ ಯಾರು ಎಳೆಯುತ್ತಾರೆ ?"

"ಯಾರೋಪ್ಪ ನಂಗೊತ್ತಿಲ್ಲ."

"ಹಾಗಾದರೆ ಇಲ್ಲಿನ ಜೀವನವೂ ನಿಮಗೆ ಸುಖಮಯವಾಗಿ ಹರ್ಷಪ್ರದವಾಗಿಯೇ ಇತ್ತು ಎನ್ನಿ."

"ಕಾಡಿನ ಸುಖ ಬೇರೆಯದು; ನಾಡಿನ ಸುಖ ಬೇರೆಯದು. ಎರಡಕ್ಕೂ ತಾಳೆ ನೋಡುವುದಕ್ಕಾಗುವುದಿಲ್ಲ ಮಾಲಾ. ಆದರೆ ಒಂದು ಮಾತು ಮಾತ್ರ ನಿಜ. ಇಲ್ಲಿ ನಾನು ಸುಖವಾಗಿಯೇ ಇದ್ದೆ. ಉಸ್ಮಾನ್ ಸಾಬಿ ನನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದ. ಆದರೆ ನಾನು ಪಾಪಿ, ಆತ ನನ್ನ ಕೊಂದು ಪಾಪ ಕಟ್ಟಿಕೊಂಡ . . ."

"ಬಿಡಿ ರಾಜಾ, ಈಗ ಹಳೆಯದನ್ನೆಲ್ಲ ನೆನಸಿಕೊಳ್ಳಬೇಡಿ."

"ಹೌದು, ಈಗದನ್ನು ನೆನಸಿಕೊಂಡು ಫಲವಿಲ್ಲ."

"ಆ ರಥವನ್ನು ನೋಡಿಕೊಂಡು ಹೊರಟುಬಿಡೋಣ ರಾಜಾ, ಹೊತ್ತಾಗಿದೆ ಅಲ್ಲವೆ ?"

"ಹೌದು, ಮಾಲೀ. ದೇಗುಲದ ಗಡಿಯಾರ ಎರಡು ಘಂಟೆ ಹೊಡೆದುದನ್ನು ನಾನು ಆಗಲೇ ಕೇಳಿದೆ. ನಡೆ, ಆ ರಥವನ್ನು ನೋಡಿಕೊಂಡು ಹಾಗೆ ಹೊರಟುಬಿಡೋಣ."

ಇಬ್ಬರೂ ಮೆಲ್ಲಮೆಲ್ಲನೆ ನಡೆದು ಆ ತೇರಿನ ಬಳಿ ಬಂದರು.

ಅದು ದಪ್ಪ ಹಲಗೆಗಳಿಂದ ನಿರ್ಮಿಸಿದ ಎತ್ತರದ ತೇರು. ಅದರ ನಾಲ್ಕೂ ಚಕ್ರಗಳು ಭಾರೀ ದಪ್ಪವಾಗಿದ್ದುವು. ಆ ತೇರು ಗಂಗಾಧರ ಮತ್ತು ವನಮಾಲೆಗಿಂತಲೂ ಎತ್ತರವಾಗಿತ್ತು.

ವನಮಾಲೆ ಮೆಲ್ಲಗೆ ತನ್ನ ಸೊಂಡಿಲನ್ನೆತ್ತಿ ಆ ತೇರಿನ ಮೇಲೆ ಹಾಕಿದಳು. ಅದರ ಪೂರ್ವ ಭಾಗದಲ್ಲಿ ಗಂಗಾಧರನೂ ಪಶ್ಚಿಮ ಭಾಗದಲ್ಲಿ ವನಮಾಲೆಯೂ ನಿಂತಿದ್ದರು.

ವನಮಾಲೆ ನಿಂತಿದ್ದ ದಿಕ್ಕಿನಲ್ಲಿ, ಅಷ್ಟು ದೂರದಾಚೆ, ಪೋಲೀಸ್ ಠಾಣೆ. ಅಲ್ಲೊಂದು ಕಿರುದೀಪ ಮಿನುಗುತ್ತಿತ್ತು.

ಕಾವಲು ಕಾಯುತ್ತಿದ್ದ ಪೋಲೀಸಪ್ಪನ ದೃಷ್ಟಿ ಈಗ ದೇಗುಲದತ್ತ ಹರಿಯಿತು. ಅವನು ನಿಂತಲ್ಲೇ ತೇರಿನತ್ತ ಗಮನಿಸಿದ; ಕಣ್ಣಿಟ್ಟು ನೋಡಿದ. ಬಳಿಕ ಮೆಲ್ಲಗೆ "ಧಪೇದಾರ್ರೇ, ಧಪೇದಾರ್ರೇ" ಎಂದು ಕೂಗಿದ.

ದಫೇದಾರ ಎದ್ದು ಬಂದ. ಇಬ್ಬರೂ ಗುಸುಗುಸು ಮಾತಾಡಿಕೊಂಡರು. ಅವರೊಂದಿಗೆ ಇನ್ನೊಬ್ಬ ಎದ್ದ. ಮತ್ತೊಬ್ಬ ಸಹಾ. ಸರಸರನೆ ಬಂದೂಕುಗಳಿಗೆ ಗುಂಡು ತುಂಬಿದರು. ಗುರಿಯಿಟ್ಟರು.

ಗೋಪುರದ ಮೇಲ್ಗಡೆ ತೂಗಾಡುತ್ತಿದ್ದ ಕೆಂಪು ವಿದ್ಯುದ್ದೀಪ ಹಹ್ಹಹಾ ಎಂದು ಅಟ್ಟಹಾಸ ಗೈದಿತು. ನೂರೆನೂರೆಯಾಗಿ ಕೆಂಪು ಉಗುಳನ್ನು ಉಗುಳಿತು.

ಬಾನು ಬಿರಿಯಿತು. ನೆಲ ಬಾಯ್ದೆರೆಯಿತು.

ಸಾಗರದೊಳಗೆ ಬಾನು ಕಳಚಿ ಬಿದ್ದಂತೆ ಭೂಮಿ ನಡುಗುವಂತೆ, ನೆಲ ಬಿರಿಯುವಂತೆ, ಇರುಳಿನ ಪ್ರಶಾಂತತೆಯನ್ನೂ ನೀರವತೆಯನ್ನೂ ಕದಡಿ ಬಗ್ಗಡ ಮಾಡುವಂತೆ, ಭಯಂಕರವಾದ ಮೃತ್ಯುರೂಪ ತಾಳಿದ ಒಂದು ವಿಚಿತ್ರ ಶಬ್ದ ಕಣ್ಮುಚ್ಚಿ ಬಿಡುವುದರೊಳಗಾಗಿ ಅಲ್ಲಿ ಮೊಳಗಿಯೇ ಮೊಳಗಿತು.

"ಢಮಾರ್, ಢಮಾರ್."

*

ಗಂಗಾಧರ ಓಡಿದ. ಉದ್ದಕ್ಕೆ ಓಡಿದ. ಹುಚ್ಚು ತಗಲಿದವನಂತೆ ಓಡಿದ.

ದಾರಿಯಲ್ಲಿ ಅಡ್ಡಗಟ್ಟಿದ ಕಪಿಲಾ ನದಿ



ಮನೋರಂಜನೆಯ ಜಗತ್ತಿನಲ್ಲಿ ಎರಡು ನವೋದಿತ ತಾರೆಗಳು...


ನ್ಯಾಷನಲ್ **ಎಕ್ಕೋ** ರವರ

2 ಹೊಸ ರೇಡಿಯೋಗಳು

ಅಧಿಕ ಶ್ರವಣಸುಖದ ಸುಗ್ಗಿ !

ನಿಮಗೆ ಅಧಿಕ ಶ್ರವಣಸುಖವನ್ನು ನೀಡಲು ನ್ಯಾಷನಲ್-ಎಕ್ಕ್ಯೋರವರು ನಿರ್ಮಿಸಿರುವ ಈ ಸುಂದರವಾದ ಎರಡು ಹೊಸ ರೇಡಿಯೋಗಳನ್ನು ನೋಡಿರಿ. ಅವುಗಳಲ್ಲಿ ಒಂದು ಎಸಿ/ಡಿಸಿ ಕರೆಂಟಿನಿಂದ ನಡೆಯುತ್ತದೆ, ಇನ್ನೊಂದು ಬ್ಯಾಟರಿಯಿಂದ ನಡೆಯುತ್ತದೆ. ಸುಂದರ ವಿನಿಯರ್ಡ್ ಕ್ಯಾಬಿನೆಟ್, ಉತ್ತಮವಾದ 'ಹೈ-ಫೈ' ಲೌಡ್‌ಸ್ಪೀಕರ್, ಆಕರ್ಷಕವಾದ ಡಾಯಲ್, ಅತ್ಯಂತ ಸ್ಪಷ್ಟವಾದ ಸ್ವಾಭಾವಿಕ ಧ್ವನಿ... ಇವು ಈ ರೇಡಿಯೋಗಳ ಕೆಲವು ವಿಶಿಷ್ಟತೆಗಳು! ಮಾತ್ರವಲ್ಲದೆ ಅವು ಸಂಪೂರ್ಣವಾಗಿ 'ಮಾನ್ಸೂನ್‌ಪ್ರೂಫ್' ಕೂಡ ಮಾಡಲ್ಪಡುತ್ತವೆ!

ಈ ರೇಡಿಯೋಗಳನ್ನು ಉಚಿತವಾಗಿ ಹಾಕಿ ತೋರಿಸುವಂತೆ ನಿಮ್ಮ ಹತ್ತಿರದ ನ್ಯಾಷನಲ್-ಎಕ್ಕ್ಯೋ ವ್ಯಾಪಾರಿಗೆ ಇಂದೇ ಹೇಳಿರಿ!



JWT-GRA. 2259

ಮಾಡೆಲ್ ಯು-755 :
ಎಸಿ/ಡಿಸಿ ಸೆಟ್. 6 ವಾಲ್ವ್‌ಗಳು.
3 ಬ್ಯಾಂಡ್‌ಗಳು, ಟೋನ್ ಕಂಟ್ರೋಲ್.
ರೂ. 351.00. ಎಕ್ಸೈಸ್ ಡ್ಯೂಟಿ
ಸಹಿತ; ತೆರಿಗೆಗಳು ಪ್ರತ್ಯೇಕ

ಮಾಡೆಲ್ ಬಿ-755 :
ಡ್ರೈ ಬ್ಯಾಟರಿ ಸೆಟ್. 5 ವಾಲ್ವ್‌ಗಳು,
3 ಬ್ಯಾಂಡ್‌ಗಳು, ಟೋನ್ ಕಂಟ್ರೋಲ್.
ಬ್ಯಾಟರಿ ಬಹಳ ಕಡಿಮೆ ಖರ್ಚಾಗುತ್ತದೆ.
ರೂ. 351.00. ಎಕ್ಸೈಸ್ ಡ್ಯೂಟಿ
ಸಹಿತ; ತೆರಿಗೆಗಳು ಪ್ರತ್ಯೇಕ

ನ್ಯಾಷನಲ್-ಎಕ್ಕ್ಯೋ ರೇಡಿಯೋಗಳು ಉತ್ತಮತರ...

ಅವು ಮಾನ್ಸೂನ್‌ಪ್ರೂಫ್ ಮಾಡಲ್ಪಡುತ್ತವೆ!

ಜನರಲ್ ರೇಡಿಯೋ ಅಂಡ್ ಅಪ್ಲಯನ್ಸಸ್ ಲಿ.

ಬೊಂಬಾಯಿ • ಕಲ್ಕತ್ತ • ಮದರಾಸು • ದೆಹಲಿ • ಪಾಟ್ನ
ಬೆಂಗಳೂರು • ಸಿಕಂದರಾಬಾದು

JWT-GRA. 2259/II

ಕೇಳಿತು:

"ಯಾಕಣ್ಣಾ, ಗಂಗಾಧರಣ್ಣಾ, ಯಾಕೆ ಹಾಗೆ ಓಡ್ತೀಯಾ ?"

"ಮಾಲೀ, ನನ್ನ ಮಾಲೀ, ನನ್ನ ಮಾಲಾ" ಎಂದು ಕೂಗಿಕೊಳ್ಳುತ್ತಾ ಗಂಗಾಧರ ಉದ್ದಕ್ಕೂ ಓಡಿದ.

ಓಡಿದವನೇ ವನವನ್ನು ತಲಪಿದ. ಒಂದು ಬಂಡೆಗಲ್ಲಿಗೆ ತನ್ನ ಅಗಲವಾದ ಹಣೆಯನ್ನು ಗಟ್ಟಿಸಿಕೊಂಡ. ಅವನ 'ಬಲಗಡೆ ದಂತ ಮುರಿದು ಹೋಯಿತು. ರಕ್ತ ಜಿಲ್ ಎಂದು ಚಿಮ್ಮಿ ಬಂತು.

ಗಂಗಾಧರ ತುಮುತುಮನೆ ಕುಣಿದ. ಕೆಳಗೆ ಬಿದ್ದ. ಹೊರಳಾಡಿದ. ಮೇಲೆ ಎದ್ದ. ಅವನ ಭಾರಿ ದೇಹದೊಳಗೆ ಯಾರೋ ಕೆಂಡವನ್ನು ಸುರಿದ ಹಾಗಾಗಿತ್ತು. ಅವನ ಪುಟ್ಟ ಕಣ್ಣುಗಳಲ್ಲಿ ಯಾರೋ ಸಹಸ್ರ ಸಹಸ್ರ ಸೂಜಿಗಳನ್ನು ಚುಚ್ಚಿದ ಹಾಗಿತ್ತು.

ವನ ಕಂಪಿಸುವಂತೆ, ಬೆಟ್ಟಗಳ ಸಾಲು ಇಬ್ಭಾಗವಾಗುವಂತೆ ಗಂಗಾಧರ ಓ ಎಂದು ದೀರ್ಘವಾಗಿ ರೋದಿಸಿದ.

ಮೂಡಣ ಬಾನಿನಲ್ಲಿ ಬೆಳ್ಳಿಯ ಉದಯ ವಾಯಿತು. ಅಚ್ಚ ಬಿಳುಪು, ತುಸು ಕೆಂಪು, ಸ್ವಲ್ಪವೇ ಹಳದಿ ಸೇರಿದ ಲಕಲಕನೆ ಮಿನುಗುವ ಬೆಳ್ಳಿ.

ತೇರಿನ ಆ ಬದಿ ಈ ಬದಿಯಲ್ಲಿ ಎರಡು ಆನೆ ಗಳು ನಿಂತಿದ್ದುದು ಪೋಲೀಸರ ದೃಷ್ಟಿಗೆ ಬೀಳ ಲಿಲ್ಲ. ಅಲ್ಲದೆ ವನಮಾಲೆಯಿಂದಾಗಿ, ತೇರಿ ನಿಂದಾಗಿ, ಗಂಗಾಧರ ಮರೆಯಾಗಿದ್ದ. ಮರಣ ತನ್ನ ಸೆರಗನ್ನು ವನಮಾಲೆಯ ಮೇಲೆ ಮಾತ್ರ ಹಾಸಿತ್ತು. ಪೋಲೀಸಿನವರು ವನಮಾಲೆಯನ್ನು ಗಂಗಾಧರ ಎಂದು ಭಾವಿಸಿಕೊಂಡರು. ಹಾಗ ಲ್ಲದೆ ಕಾಡಾನೆಗಳು ಊರೊಳಗೆ ಬರುವುದೂ ಇಲ್ಲವಲ್ಲ.

ಗಂಗಾಧರನಿಗೆ ಹುಚ್ಚು ತಗಲಿದೆಯೆಂದು ಮಾನವರು ತೀರ್ಮಾನಿಸಿದ ಆ ದುರ್ದಿನದಲ್ಲಿ, ಅವನ ಉಗ್ರವಾದ ಶಿಕ್ಷೆಗೆ ಆಹುತಿಯಾದವರು ಹದಿಮೂರು ಮಂದಿ. ಅಷ್ಟು ಜನರೂ ತಲೆ ಯೊಡೆದು ರಕ್ತಕಾರಿ ಸತ್ತಿದ್ದರು. ಅಂಥ ಹೇಯಕೃತ್ಯ ಅವನು ಯಾಕೆ ಮಾಡಿದನೋ ಅವನಿಗೇ ತಿಳಿಯದು.

ಆ ದುರ್ಘಟನೆ ನಡೆದೊಡನೆ ಅವನನ್ನು ಸುಟ್ಟು ಕೊಂದುಹಾಕಬೇಕೆಂದು ಪೋಲೀಸ್ ಆಜ್ಞೆ ಹೊರಟಿತ್ತು. ಪೋಲೀಸರು ಮಾತ್ರವಲ್ಲ, ಲೈಸೆನ್ಸ್ ಪಡೆದ ಬಂದೂಕು ಧಾರಿಗಳು ಯಾರು ಅವನನ್ನು ಕೆಳಗೆ ಬೀಳಿಸಿದರೂ ಐನೂರು ರೂಪಾಯಿ ಬಹುಮಾನ ಕೊಡುವುದಾಗಿ ಸರಕಾರ ಸಾರಿತ್ತು.

ಆದರೆ ಮೃತ್ಯು ನಾಟಕವಾಡಿದಾಗ ಎರಡು ಸಲ ಸಹ ಗಂಗಾಧರ ತಪ್ಪಿಸಿಕೊಂಡ. ಮರಣ ಕಡೆಗಣ್ಣು ಹಾಯಿಸದಿದ್ದರೆ ಬಾನು ಕಳಚಿ ತಲೆಯ ಮೇಲೆ ಬಿದ್ದರೂ ಅಪ್ಪಚ್ಚಿಯಾಗುವು ದಿಲ್ಲವೇನೊ ?

ಗಂಗಾಧರನ ಮುಂದಿನ ಭವಿತವ್ಯವೇನು ? ಅವನಿಗೆ ನಿಲ್ಲಲು ಕಾಡಿನಲ್ಲೂ ನೆಲೆಯಿಲ್ಲ; ನಾಡಿ ನಲ್ಲೂ ನೆಲೆಯಿಲ್ಲ.

ಇನ್ನು ಆ ಗುಂಪಿನವರೊಂದಿಗೆ ಅವನು ಕಲೆ ಯುವುದು ಅಸಾಧ್ಯದ ಮಾತೇ ಆಗಿತ್ತು. ಅವ ನನ್ನು ನಂಬುವವರಾರು ? ಕಲ್ಲು ನೀರಿನ ಮೇಲೆ ತೇಲುತ್ತಿತ್ತು ಎಂದು ಕವಿ ಹೇಳಿದಾಗ ಅರಸ ನಕ್ಕ. ವನಮಾಲೆಯನ್ನು ಮಾನವರು ಗುಂಡಿಕ್ಕಿ ಕೊಂದರು ಎಂದರೆ ಅವರು ಒಪ್ಪುತ್ತಾರೆಯೆ ? ಈ ದ್ರೋಹಿ ಏನೋ ಮಾಡಿರಬೇಕೆಂದು ಪಗಿವು ಹಾಕಿಬಿಡುತ್ತಾರೆ ಅಷ್ಟೆ.

ಅವರು ಏನಾದರೂ ಮಾಡುವುದಿರಲಿ. ವನ ಮಾಲೆಯಿಲ್ಲದ ಬಾಳು ಪ್ರಾಣವಿಲ್ಲದ ದೇಹ ದಂತೆ. ಇನ್ನು ಬದುಕಿ ಏನು ಫಲ ? ಇದ್ದು ಏನು ಸಾರ್ಥಕ ?

ಗಂಗಾಧರ ಓಡಿದ. ಉದ್ದಕ್ಕೂ ಓಡಿದ

ಲಕಲಕನೆ ಮಿನುಗುತ್ತಿದ್ದ ಬೆಳ್ಳಿಯ ಬಣ್ಣ ಕಾಂತಿಹೀನವಾಗತೊಡಗಿತ್ತು. ಬಾನಿಗೆ ಯಾರೋ ಬೆಳಕು ಚಿಮುಕಿಸುತ್ತಿದ್ದರು. ಹಕ್ಕಿ-ಪಕ್ಷಿಗಳು ಸಡಗರದಿಂದ ಏಳುತ್ತಿದ್ದುವು. ವನದ ಮೇಲೂ ಸಾಲು ಬೆಟ್ಟಗಳ ಮೇಲೂ ಕವಿದಿದ್ದ ಇರುಳ ಸೆರಗು ಸ್ವಲ್ಪಸ್ವಲ್ಪವಾಗಿ ಜಾರಿ ಕೆಳಗೆ ಬೀಳುತ್ತಿತ್ತು. ಹರೆಯದ ಹದಿನೆಂಟರ ಹೆಣ್ಣಿನ ತುಂಬುಗೆನ್ನೆಯಂತೆ ಮೂಡಣ ಬಾನು ಮಿನುಗಿತು.

ಗಂಗಾಧರ ಓಡಿದ. ಉದ್ದಕ್ಕೂ ಓಡಿದ. ಕಪಿಲಾ ನದಿಯೊಳಗೆ ದುಘುಂ ಎಂದು ಬಿದ್ದ. ಆವನ ದೇಹದ ಉರಿ ಕಡಿಮೆಯಾಗಲಿಲ್ಲ. ನದಿಯ ನೀರೇ ಕಾದು ಕುದಿಯುತ್ತಿತ್ತು. ನೀರಿನೊಳಗೇ ಜೋರ್ ಎಂದು ಉಚ್ಚೆ ಬಿಟ್ಟ. ತೊಪ್ ತೊಪ್ ತೊಪ್ಪ ಎಂದು ಲದ್ದಿ ಹಾಕಿದ. ಭರ್ರ್ ಎಂದು ನುಗ್ಗಿದವನೇ ಮಳಲಿಗೆ ಸೊಂಡಿಲು ಚಾಚಿದ. ಮಳಲನ್ನೆತ್ತಿ ಜೋರ್ ಎಂದು ದೇಹದ ಮೇಲೆ ಚೆಲ್ಲಿಕೊಂಡ. ದೇಹದ ಮೇಲೆ ಬಿದ್ದ ಮಳಲ ಕಣ ಅರಳಿನಂತೆ ಪಟಪಟನೆ ಕುಣಿಯಿತು. ಹಾಗೆ ಹೋದವನೇ ಒಂದು ಸಣ್ಣ ಮರಕ್ಕೆ ತಲೆಯನ್ನು ಗುದ್ದಿದ. ಮರ ಬುಡ ಕಿತ್ತು ಕೆಳಗೆ ಬಿತ್ತು. ಮುಂದೆ ಓಡಿದ. ಕೆಸರು ಅಲ್ಲಿ ಹೆಪ್ಪುಗಟ್ಟಿ ನಿಂತಿತ್ತು. ಅದರಲ್ಲಿ ಹೋಗಿ ಮುಳುಗಿದ. ಕಾಯಿಸಿದ ಮೈದಾ ಹಿಟ್ಟಿನಂತೆ ಕೆಸರು ಭುಸ್ ಎಂದು ಹೊಗೆಯಾಡುತ್ತಿತ್ತು. ಅಲ್ಲಿಂದ ಮೇಲೆದ್ದ. ಗರಗರನೆ ತಿರುಗಿದ. ಕೆಳಗೆ ಬಿದ್ದ. ಮತ್ತೆ ಮೇಲೆದ್ದ.

ಗಂಗಾಧರ ಓಡಿದ. ಉದ್ದಕ್ಕೂ ಓಡಿದ ಹುಚ್ಚು ತಗಲಿದವನಂತೆ ಓಡಿದ.

*

ಖೆಡ್ಡ ಕಾರ್ಯಕ್ರಮವನ್ನು ವೀಕ್ಷಿಸಲು ಲಕ್ಷಗಟ್ಟಲೆ ಜನ ಸೇರಿದ್ದರು. ವಿಶೇಷ ಆಹ್ವಾನಿತ

ರಾಗಿ ಭಾರತದ ರಾಷ್ಟ್ರಪತಿಗಳೂ ಅಲ್ಲಿ ಬಂದಿದ್ದರು. ಬಂಡೀಪುರದ ಕಾಡಿನ ಹೆಸರು ಎಲ್ಲರ ಮನೆಮಾತಾಗಿತ್ತು.

ಕಾಡಿನಲ್ಲಿ ಬೆಳೆದು, ಆಟವಾಡಿ, ಹುಯ್ಲೋ ಹುಯ್ಲೆಬ್ಬಿಸುತ್ತಿದ್ದ ಆ ಮೇರು ಪ್ರಾಣಿಗಳು ಬುದ್ಧಿವಂತನಾದ ಮಾನವನು ಒಡ್ಡಿದ ಬಲೆಗೆ ಬಿದ್ದು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಾಗ, ಹಾಗೆ ಅಪಾಯ ಸ್ಥಿತಿಗೀಡಾದಾಗ ಬೊಬ್ಬೆಯಿಕ್ಕುವ, ನಾಡಾನೆಗಳು ಅವುಗಳ ಭಾರೀ ಕಾಲುಗಳಿಗೆ ಸರಪಳಿ ಬಿಗಿಯಲು ಸಹಾಯ ಮಾಡುವ ದೃಶ್ಯವನ್ನು ನೋಡಲು ಜನ ಹುಚ್ಚು-ಹುಚ್ಚಾಗಿ ನೆರೆದಿದ್ದರು.

ತಮ್ಮೆಲ್ಲ ಬಲವನ್ನೂ ಕೇಂದ್ರೀಕರಿಸಿ ಎಲ್ಲರ ಸೊಕ್ಕನ್ನೂ ಮುರಿದುಬಿಡುತ್ತೇವೆ ಎನ್ನುವ, ಮೊಂಡತನ ಮಾಡುವ, ರಗಳೆಯೋ ರಗಳೆ ಎಬ್ಬಿಸುವ ಆ ಕಾಡು ಪ್ರಾಣಿಗಳನ್ನು ನಾಡಾನೆಗಳು ಒಂದಕ್ಕೆ ಎರಡು ಮೂರು ಸೇರಿಕೊಂಡು ಮಾನವನ ಅಂಕಿತಕ್ಕೆ ಒಳಪಡಿಸಲು ಸಹಾಯವೆಸಗುವ ಆ ದೃಶ್ಯ, ಖೆಡ್ಡ ಕಾರ್ಯಕ್ರಮ, ಕಣ್ಣಿರುವವರು ನೋಡಿ ತಣಿಯಲೇ ಬೇಕಾದ ಒಂದು ಅಪೂರ್ವ ರಸಮಯ, ಅಷ್ಟೇ ಹೃದಯವಿದ್ರಾವಕವಾದ ಚಿತ್ರ.

ಮಾನವರ ಬಂಧನಕ್ಕೊಳಗಾದ ಆ ಬಲಿಷ್ಠ ಪ್ರಾಣಿಗಳು ಕಾಡೇ ಅಮಳಿ ಧುಮಳಿಯೇಳುವಂತೆ ಆಕ್ರೋಶ ಮಾಡುತ್ತಿದ್ದರೆ, ಒಂದಾನೆ ಮಾತ್ರ ಕಣ್ಣೀರು ಸುರಿಸುತ್ತ, ಕಿವಿಗಳನ್ನು ಬಡಿದುಕೊಳ್ಳುತ್ತ ಹಾಗೆಯೇ ನಿಂತಿತ್ತು.

ಆ ಆನೆಯ ಬಲದ ದಂತ ಮುರಿದು ಹೋಗಿತ್ತು. ವಿಶಾಲವಾದ ಅದರ ಹಣೆ ಸೀಳಿ ಹೋಗಿ ರಕ್ತ ತೊಟ್ಟಿಕ್ಕುತ್ತಿತ್ತು. ಅದರ ಸೊಂಡಿಲೆಲ್ಲ ಗೀರುಗೀರಾಗಿತ್ತು. ಅದರ ಭಾರೀ ದೇಹದ ಮೇಲೆ ಮಳಲು ಕೆಸರು ಎಲ್ಲವನ್ನೂ ಯಾರೋ ಪ್ರೋಕ್ಷಣೆ ಮಾಡಿದಂತಿತ್ತು. ಅದರ ತುಂಡು ಬಾಲದಲ್ಲಿ ಒಂದು ದಪ್ಪ ಮುಳ್ಳು ಚುಚ್ಚಿಕೊಂಡಿತ್ತು. ಆದರೆ ಅದೊಂದರ ಪರಿವೆಯೂ ಇಲ್ಲ ಆ ಗಜರಾಜನಿಗೆ.

ರಾಮಭದ್ರನ ಭಾರೀ ದೇಹದ ಮೇಲೆ ಎರಡು ಸರಪಳಿಗಳನ್ನು ಅಡ್ಡ ಹಾಕಲಾಗಿತ್ತು. ಅವನ ನಾಲ್ಕೂ ಪಾದಗಳ ನಡುವೆ, ಹೊಟ್ಟೆಯ ತಳದಲ್ಲಿ, ಸರಪಳಿಯ ಕೊಂಡಿಯನ್ನು ಬಿಗಿದ ಒಂದು ತೊಟ್ಟಿಲು ತೂಗಾಡುತ್ತಿತ್ತು. ಆ ತೊಟ್ಟಿಲೊಳಗೆ ಒಬ್ಬ ಮಾವಟಿಗ ಕೊಕ್ಕರಿಸಿ ಮಲಗಿದ್ದ. ಹೆಬ್ಬಾವಿನಂತೆ ಒಂದು ಸರಪಳಿ ತೊಟ್ಟಿಲೊಳಗೆ ಬಿದ್ದಿತ್ತು. ಮಾವಟಿಗ ಮೈಯೆಲ್ಲ ಕಣ್ಣಾಗಿದ್ದ.

ದಂತ ಮುರಿದ ಆನೆಯನ್ನು ಬಂಧಿಸಲು ಅದರ ಎರಡು ಪಾರ್ಶ್ವದಲ್ಲೂ ರಾಮಭದ್ರ ಮತ್ತು ಸಮಂತಭದ್ರ ಸೇರಿಕೊಂಡರು. ರಾಮಭದ್ರ ಬಲಗಡೆ; ಸಮಂತಭದ್ರ ಎಡಗಡೆ ದಂತ ಮುರಿದ ಆನೆ ಅವರೀರ್ವರ ನಡುವೆ ಸಿಕ್ಕಿಹಾಕಿಕೊಂಡಿತ್ತು.

ರಾಮಭದ್ರನ ದೇಹದ ಕೆಳಗಡೆ ತೊಟ್ಟಿಲಲ್ಲಿ ತೂಗಾಡುತ್ತಿದ್ದ ಮಾವಟಿಗ ಸರಪಳಿಯನ್ನು ಹೊರತೆಗೆದು ದಂತ ಮುರಿದ ಆ ಆನೆಯ ಕಾಲಿಗೆ ತೊಡಿಸಿದ.

ಆದರೆ ಏನಾಶ್ಚರ್ಯ!

ಯಾರು ಏನು ಮಾಡಿದರೂ ಆ ದಂತ ಮುರಿದ ಆನೆ ಯಾವ ಭಾವ ವಿಕಾರವನ್ನೂ ಪ್ರದರ್ಶಿಸದೆ ಬೆಟ್ಟದಂತೆ ಹಾಗೆಯೆ ನಿಂತುಕೊಂಡಿತ್ತು.

ಆದರೆ ಅದರ ಕಣ್ಣಿನಿಂದ ಮಾತ್ರ ಧಾರಾಕಾರವಾಗಿ ನೀರು ಪ್ರವಹಿಸುತ್ತಿತ್ತು; ಹಣೆಯ ಮೇಲಿಂದ ರಕ್ತ ಚಿಮ್ಮಿ ಬರುತ್ತಿತ್ತು.

ಅತ್ತ ನೂರು ನೂರು ಆನೆಗಳು ಬೆಟ್ಟ ಬಿರಿಯುವಂತೆ ಗೋಳುಗರೆಯುತ್ತಿದ್ದುವು. ಒಂದು ಕಾಡಾನೆಗೆ ಸರಪಳಿ ಬಿಗಿದು ಬಂಧಿಸಲು ಎರಡು ನಾಡಾನೆಗಳು ಸಹಾಯ ಮಾಡುತ್ತಿದ್ದುವು. ಎರಡು ನಾಡಾನೆಗಳ ನಡುವೆ ಸಿಕ್ಕಿ ಹಾಕಿ

ಎಷ್ಟು ರುಚಿಕರ!



ಮನೆಗಳಿಗೆ—ಹೋಟೆಲುಗಳಿಗೆ

ಬ್ರೂಕ್ ಬಾಂಡ್
ಸ್ಪೆಷಲ್ ಹೋಟೆಲ್ ಬ್ಲೆಂಡ್

ಡಸ್ಟ್ ಟೀ

- ★ ಪ್ರತಿ ಪೊಟ್ಟಣ ನಿಮಗೆ ಹೆಚ್ಚು ಬಟ್ಟಲು ಉತ್ತಮ ಚಹವನ್ನು ನೀಡುವುದು
- ★ ತೇವ ತಗಲದಂತೆ ಪೊಟ್ಟಣ ಕಟ್ಟುವಿಕೆಯ ನಿಮಿತ್ತ ಅತ್ಯಂತ ಪರಿಶುದ್ಧವಾಗಿರುವುದು
- ★ ಮಿಲಿಯಗಟ್ಟಲೆ ಮನೆಗಳಲ್ಲಿ ಇದನ್ನು ಕುಡಿದು ಆನಂದ ಪಡೆಯುತ್ತಿದ್ದಾರೆ

3 ಗಾತ್ರಗಳಲ್ಲಿ ದೊರೆಯುತ್ತದೆ

500 ಗ್ರ್ಯಾಮ್, 100 ಗ್ರ್ಯಾಮ್, 50 ಗ್ರಾಮ್

JWT BB 386

ಕೊಂಡ ಕಾಡಾನೆ ಬಿಟ್ಟ ಭುಸುಗುಟ್ಟುವಂತೆ ವರ್ತಿಸುತ್ತಿತ್ತು. ತಿಮಿರಾಡುತ್ತಿತ್ತು; ಒದರಾಡುತ್ತಿತ್ತು. ಆಕ್ರೋಶದಿಂದ ಸೊಂಡಿಲನ್ನು ಮೇಲೆ ಎತ್ತಿದ್ದೂ ಎತ್ತಿದ್ದೇ, ಕೆಳಗೆ ಬಿಟ್ಟದ್ದೂ ಬಿಟ್ಟದ್ದೇ. ಒಂದು ಕಡೆ ಸಂಕಟ; ಮತ್ತೊಂದೆಡೆ ರೋಷ ಭೀಷಣ. ಎಲ್ಲರನ್ನೂ ಮಾನವ ಕುಲವೆಲ್ಲವನ್ನೂ ತುಳಿದು ಹತ ಮಾಡಿಬಿಡಬೇಕು ಎನ್ನುವಷ್ಟು ಭೈರವ; ಚಂಡಪ್ರಚಂಡ.

ಆದರೆ.... ಆದರೆ...? ಏನು ಮಾಡುವುದಕ್ಕೂ ಸಾಧ್ಯವಿಲ್ಲವಾಗಿ, ಸ್ವಜಾತಿಯವೇ ವಿರೋಧಿಗಳಾಗಿ ಅವುಗಳ ಸೊಕ್ಕನ್ನು ಅಡಗಿಸುತ್ತಿದ್ದವು.

ಹೀಗೆ ಆ ವನ ಧೂಳಿಮಯವಾಗಿ ಅಲ್ಲೋಲ ಕಲ್ಲೋಲವಾಗಿದ್ದರೆ, ಇಲ್ಲೊಂದು ದಂತ ಮುರಿದ ಆನೆ ಮಾತ್ರ ಏನು ಸದ್ದುಗೊದ್ದೂ ಇಲ್ಲದೆ ನಾಯಿಮರಿಯಂತೆ ಬಾಲ ವಲ್ಲಾಡಿಸುತ್ತ, ಕಣ್ಣೀರು ಮಿಡಿಯುತ್ತ ಹಾಗೆಯೇ ನಿಂತಿತ್ತು.

ರಾಮಭದ್ರ ಮತ್ತು ಸಮಂತಭದ್ರರಿಗೆ ಆಶ್ಚರ್ಯ; ಇದೇನು ಈ ಗಜರಾಯ ಹೀಗೆ ನಿಂತು ಬಿಟ್ಟಿದ್ದಾನೆ? ಒಂದು ವೇಳೆ ಮಾರ್ಜಾಲ ಸಂನ್ಯಾಸಿಯಂತೆ ಸೋಗು ಹಾಕಿ ತಪ್ಪಿಸಿಕೊಂಡು ಹೋಗಲು ಈ ವೇಷವನ್ನು ತಾಳಿದ್ದಾನೋ ಏನೋ? ಎಲಾ ಇವನ!

ರಾಮಭದ್ರ ಸೊಕ್ಕಿನಿಂದ ಕೇಳಿದ:

"ಏನಯ್ಯಾ ತಮ್ಮಾ?"

"ಊಂ."

"ಏನು ಮೌನವಾಗಿಬಿಟ್ಟಿದ್ದೀಯಾ?"

"ಊಂ."

"ತಪ್ಪಿಸಿಕೊಂಡು ಹೋಗೋಕೆ 'ಸ್ಟಂಟ್' ಮಾಡುತ್ತಾ ಇದ್ದೀಯೊ ಹೇಗೆ? ಅದೆಲ್ಲ ನಮ್ಮ ಬಳಿ ನಡೆಯೋಲ್ಲ."

"ಊಂ."

ತಾವು ಏನೋ ಮಹತ್ಕಾರ್ಯ ಸಾಧಿಸಿದವರಂತೆ, ವಿಜಯವೀರರಂತೆ ಅವರೀರ್ವರೂ ಬಲು ದೀರ್ಘವಾಗಿ ಕೂಗು ಹಾಕಿದರು.

"ಕೊಂರಂರ್ರ್ರೋ."

ಆದರೆ ದಂತ ಮುರಿದ ಆನೆ ಮಾತ್ರ ಹಾಗೆಯೇ ನಿಂತುಕೊಂಡಿತ್ತು. ಅದಕ್ಕೆ ಬಾಹ್ಯಪ್ರಜ್ಞೆ ಇದ್ದಂತೆ ಕಂಡುಬರಲಿಲ್ಲ. ಅದು ಈಗ ಪೂರಾ ಕಣ್ಣು ಮುಚ್ಚಿಬಿಟ್ಟಿತ್ತು. ಕಣ್ಣೀರು ಮಾತ್ರ ಮೊದಲಿಗಿಂತಲೂ ಈಗ ಜಾಸ್ತಿಯಾಗಿ ಧುಮ್ಮಿಕ್ಕಲಾರಂಭಿಸಿತು. ಬಹುಶಃ ಅದರ ಭಾರೀ ದೇಹದೊಳಗಿನಿಂದ ಒಂದು ಸಣ್ಣ ನದಿಯೇ ಉಗಮವಾಗಿಹೋಯಿತೋ ಏನೋ?

ರಾಮಭದ್ರ ಮತ್ತು ಸಮಂತಭದ್ರರಿಗೆ ಈ ಗಜರಾಜನ ವಿಚಿತ್ರ ವರ್ತನೆ ಅರ್ಥವಾಗದೆ ಬೆಪ್ಪುತಕ್ಕಡಿಗಳಂತೆ, ಗರ ಬಡಿದವರಂತೆ ಹಾಗೆಯೇ ನಿಂತುಬಿಟ್ಟರು.

ಆದರೆ ಅವನೇ ಗಂಗಾಧರ ಎನ್ನುವುದು ಅವರಿಗೆ ಹೇಗೆ ತಿಳಿಯಬೇಕು? ✶

ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್, ಒಂದು ಸಾರಿ ಪ್ರಯಾಣ ಮಾಡುತ್ತಿದ್ದಾಗ ಊಟದ ಕೋಣೆಗೆ ತಮ್ಮ ಕನ್ನಡಕವನ್ನು ತೆಗೆದುಕೊಂಡು ಹೋಗುವುದನ್ನೇ ಮರೆತುಬಿಟ್ಟದ್ದರು. ಮಾಣಿಯು ಅಂದಿನ 'ಮೆನು ಕಾರ್ಡ'ನ್ನು ತಂದು ಕೊಡಲು, ಅವರು ಆ ಮಾಣಿಯನ್ನೇ ಕುರಿತು, "ದಯವಿಟ್ಟು ಇದನ್ನು ನನಗೆ ಸ್ವಲ್ಪ ಓದಿ ಹೇಳುತ್ತೀಯಾಪ್ಪಾ?" ಎಂದು ಕೇಳಿದರು. ನಗುತ್ತಾ ಆ ಮಾಣಿ ಹೇಳಿದ, "ನಾನೂ ನಿಮ್ಮಂತೆಯೇ! . . . ನನಗೂ ಓದಲು ಬರುವುದಿಲ್ಲ! . ."

— ಶ್ರೀಮತಿ ಸಿ. ಮಾಲಿನಿ ವಾಮನರಾವ್

"ಕಸ್ತೂರಿ ಬಳಗ"ದ ಯೋಜನೆ

೬೦ ಸಂಚಿಕೆಗಳು ಪುಕ್ಕಟೆ!

ಪ್ರತಿತಿಂಗಳ ೧ನೇ ದಿನಾಂಕ
ಪ್ರಕಟವಾಗುವದು

ಲೋಕಶಿಕ್ಷಣ ಟ್ರಸ್ಟಿನ
ಪ್ರಕಾಶನ

* "ಕಸ್ತೂರಿ" ಇಂದು ನಮ್ಮ ಸರ್ವಶ್ರೇಷ್ಠ ಡೈಜೆಸ್ಟ್-ಸಾರಸಾಹಿತ್ಯ.
* ಪ್ರತಿ ತಿಂಗಳೂ ಎಷ್ಟೋ ಓದುಗರು ಪ್ರತಿಗಳ ಬಗ್ಗೆ ನಿರಾಶೆಯಾಗುತ್ತಿದ್ದಾರೆ. ಅದಕ್ಕಾಗಿ ಈ ಯೋಜನೆ. ಇಂದಿನಿಂದಲೇ "ಕಸ್ತೂರಿ"ಯು ಮುಂದಿನ ೬೦ ಸಂಚಿಕೆಗಳನ್ನು ಕಾಯ್ದಿರಿಸಿ. ಅದು ಪ್ರತಿ ತಿಂಗಳೂ ನೀವಿದ್ದಲ್ಲಿ ಕೈಸೇರುವದು.
* ನೀವು ಪ್ರತ್ಯೇಕ ಚಂದಾ ಹಣ ಕಳಿಸಬೇಕಾಗಿಲ್ಲ!
* ಕೇವಲ ರೂಪಾಯಿ ಒಂದುನೂರಾ ಇಪ್ಪತ್ತು (ರೂ. ೧೨೦) ಠೇವು ಇಟ್ಟರೆ ಸಾಕು.
* ಐದು ವರ್ಷಗಳಲ್ಲಿ ೬೦ ಸಂಚಿಕೆಗಳನ್ನೂ ಪಡೆದುದಲ್ಲದೆ ನಿಮ್ಮ ೧೨೦ ರೂ. ಗಳ ಠೇವನ್ನು ಮರಳಿ ಪಡೆಯುವಿರಿ.
* ಈ ಯೋಜನೆ ಸೆಪ್ಟೆಂಬರ್ ೩೦, ೧೯೬೧ರ ವರೆಗೆ ಮಾತ್ರ ಊರ್ಜಿತದಲ್ಲಿರುವದು.
* ಕೂಡಲೇ "ಕಸ್ತೂರಿ ಬಳಗ" ಕ್ಕೆ ಸೇರಿರಿ.

ಕೆಳಗಿನ ಫಾರ್ಮನ್ನು ತುಂಬಿ ಹಣ ಸಹಿತ ಇಂದೇ ಕಳಿಸಿರಿ.

ವ್ಯವಸ್ಥಾಪಕರು "ಕಸ್ತೂರಿ ಬಳಗ," ಪೋ. ಬಾ. ನಂ. ೩೦, ಹುಬ್ಬಳ್ಳಿ.


ಮಿತ್ರರೆ, ನಿಮ್ಮ "ಕಸ್ತೂರಿ ಬಳಗ"ದ ಯೋಜನೆಯಲ್ಲಿ ಭಾಗ ವಹಿಸಲು ನಾನು ಅಪೇಕ್ಷಿಸುತ್ತೇನೆ. ಅದಕ್ಕಾಗಿ ರೂ. ೧೨೦ ನ್ನು ಇಂದು ಮ. ಆ./ಚೆಕ್ಕು, ಡ್ರಾಫ್ಟ ಮೂಲಕ ಕಳಿಸಿದ್ದೇನೆ. ಈ ಯೋಜನೆಯಂತೆ ......೧೯೬೧ ರಿಂದ ೫ ವರ್ಷ ಕಾಲ ಕಸ್ತೂರಿ ಸಂಚಿಕೆಗಳನ್ನೂ ಆ ಅವಧಿಯ ಕೊನೆಗೆ ರೂ. ೧೨೦ ನ್ನೂ ಪಡೆಯಲು ಹಕ್ಕು ನನಗಿದೆ. ಕೂಡಲೆ "ಕಸ್ತೂರಿ ಬಳಗದ ಠೇವಿನ ರಶೀದಿ"ಯನು, ಕಳಿಸಿರಿ.

ಹೆಸರು (ಪೂರ್ಣ) ____________________

ವಿಳಾಸ ____________________

ಪೋಸ್ಟ್ ____________ (ಜಿಲ್ಲಾ) ____________

ಕಸ್ತೂರಿ


Regd. No. E
KASTU
A KANNA
MONTHLY D
Circulates thro
the Mysore
and outside wh
Kannada is sp
Command
the highest nu
of reade
Caters to all
75nP.
A Loka Shik
Trust Public